ಜನಶಕ್ತಿ

ಕನ್ನಡ ವಾರಪತ್ರಿಕೆ

ವಿಶೇಷ ಸಂಚಿಕೆ

www.janashakthi.co.in e-mail : js_weekly@yahoo.com

ಸಂಪುಟ 11 | ಸಂಚಿಕೆ 03-04 | ಜನವರಿ 09-22, 2017 | ರೂ. 20/-



ಸರ್ವ ಜನಾಂಗದ ಶಾಂತಿಯ ತೋಟ







ಸೌಹಾರ್ದ ಕರ್ನಾಟಕ 60



TVS
ಹೊಸ ವರ್ಷ ಹಾಗೂ ಸಂಕ್ರಾಂತಿಯ ಶುಭಾಶಯಗಳೊಂದಿಗೆ
ಬಂಪರ್ ಆಫರ್
ಜ್ಯೂಪಿಟರ್ ಮಾಡಲ್‌ನ ಎಲ್ಲಾ ವಾಹನಗಳ ರೂ. 3,600 ಬೆಲೆಯ ಬಿಡಿಭಾಗಗಳು ರೂ. 1,800ಗೆ ಲಭ್ಯ*
ಯಾವುದೇ ಬೈಕ್ ಕೊಂಡಲ್ಲಿ ಉಚಿತ ಬಿಡಿ ಭಾಗಗಳು*
ಸರ್ಕಾರಿ ನೌಕರರಿಗೆ ಶೇ. 100 ರಷ್ಟು ಫೈನಾನ್ಸ್ ಸೌಲಭ್ಯ*
ಸ್ಥಳದಲ್ಲೇ ಸಾಲ ಮಂಜೂರಾತಿ*
ಆಕರ್ಷಕ ಎಕ್ಸ್‌ಚೇಂಜ್ ಸೌಲಭ್ಯಗಳು*
ಅಜಯ್ ಮೋಟಾರ್ಸ್ ಟಿ.ವಿ.ಎಸ್. ಮೋಟಾರ್ ಕಂಪನಿಯ ಅಧಿಕೃತ ಮಾರಾಟಗಾರರು
ನಂ. 319/1, ಬಿಹೆಚ್‌ಇಎಲ್ ಎದುರು, ಮೆಟ್ರೊ ಪಿಲ್ಲರ್ ನಂ. 393, ಮೈಸೂರು ರಸ್ತೆ, ಬೆಂಗಳೂರು-26
ದೂರವಾಣಿ: 080-26741145, 26740765, 9066327118, 9972412655, 9845002176
ಅಜಯ್ ಬೈಕ್ ಪಾಯಿಂಟ್ ಟಿ.ವಿ.ಎಸ್. ಎಕ್ಸ್‌ಕ್ಲೂಸಿವ್ ಶೋ ರೂಂ
ನಂ. 20/193, 60 ಅಡಿ ರಸ್ತೆ, ಬಿಮೆಲ್ ಲೇಔಟ್, 5ನೇ ಹಂತ, ಕರ್ನಾಟಕ ಬ್ಯಾಂಕ್ ಹಾಗೂ ಬಸ್ ಡಿಪೋ ಹತ್ತಿರ
ಬೆಂಗಳೂರು-560 098 ದೂರವಾಣಿ: 9206308705, 9206308706, 9538694966
ಅಜಯ್ ಮೊಬೈಕ್ಸ್ ಅಧಿಕೃತ ಟಿ.ವಿ.ಎಸ್. ಮೋಟಾರ್ ಕಂಪನಿ ಮಾರಾಟಗಾರರು
ಕೆಂಚನಗುಪ್ಪೆ ಗೇಟ್, ಮೈಸೂರು, ರಸ್ತೆ, ಬಿಡದಿ, ರಾಮನಗರ ತಾಲ್ಲೂಕು ಮತ್ತು ಜಿಲ್ಲೆ.
ದೂರವಾಣಿ: 9591467002, 9535707089, 9845002176, 9980592592
ಎ.ಎಮ್. ಮೋಟಾರ್ಸ್ ಟಿ.ವಿ.ಎಸ್. ಮೋಟಾರ್ ಕಂಪನಿಯ ಅಧಿಕೃತ ಮಾರಾಟಗಾರರು
ಎಸ್.ವಿ. ಎನ್‌ಕ್ಲೇವ್, ಹಾರೋಹಳ್ಳಿ, ಬೆಂಗಳೂರು-ಕನಕಪುರ ಮುಖ್ಯರಸ್ತೆ, ಕನಕಪುರ ತಾಲ್ಲೂಕು, ರಾಮನಗರ
ದೂರವಾಣಿ: 9900747472, 7259469330, 9538448287, 9845002176

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪುಟ 11, ಸಂಚಿಕೆ 03-04
ಜನವರಿ 09-22, 2017
ಬೆಲೆ ರೂ.20

ಕರ್ನಾಟಕ ರಾಜ್ಯೋತ್ಸವ

ವಿಶೇಷ ಸಂಚಿಕೆ-2016

ಸಂಪಾದಕೀಯ ಕಚೇರಿ:
ಇ.ಎಂ.ಎಸ್.ಭವನ
ನಂ.37/ಎ, 8ನೇ ಅಡ್ಡ ರಸ್ತೆ
ಮಹಾಲಕ್ಷ್ಮಿ ಲೇ ಔಟ್
ಬೆಂಗಳೂರು-560086

ದೂರವಾಣಿ:
080-23491114

ಇ-ಮೇಲ್: janashakthi2007@gmail.com
ಬ್ಲಾಗ್: janashakthi.wordperss.com
ವೆಬ್‌ಸೈಟ್: www.janashakthi.co.in

ಸೌಹಾರ್ದ ಕರ್ನಾಟಕ 60

ಭಾಷೆ, ಆಹಾರ, ಉಡುಪು, ಧರ್ಮ, ಸಂಸ್ಕೃತಿ, ಸಾಹಿತ್ಯ, ಕಲಾಪ್ರಕಾರಗಳಲ್ಲಿ ಅಗಾಧ ವೈವಿಧ್ಯತೆ ಭಾರತ ಮತ್ತು ಕರ್ನಾಟಕದ ವಾಸ್ತವ. ಹಿಂದೆ ಮಾತ್ರವಲ್ಲ ಇಂದು ಕೂಡಾ. ಹಲವು ಆಯಾಮಗಳ ಬಹುತ್ವ ಈ ನಾಡಿನ ವಿಶಿಷ್ಟತೆ ಮಾತ್ರವಲ್ಲ. ಅದರ ಮೂಲಸತ್ವ ಹಾಗೂ ಬಲ ಕೂಡಾ. ಇಂತಹ ಬಹುತ್ವದಿಂದಾಗಿಯೇ ಸಹಿಷ್ಣುತೆ, ಸೌಹಾರ್ದತೆ ಸಹ ಈ ನಾಡಿನ ಬದುಕಿನ ಸಹಜ ಜೀವನ ವಿಧಾನ ಕೂಡಾ ಆಗಿದೆ. ಆದ್ದರಿಂದಲೇ ಕರ್ನಾಟಕ 'ಸರ್ವಜನಾಂಗದ ಶಾಂತಿಯ ತೋಟ'ವೆಂಬ ಕವಿವಾಣಿಯ ಬಗ್ಗೆ ನಾವು ಹೆಮ್ಮೆ ಪಡುತ್ತಿದ್ದೆವು. ನಮ್ಮ ನಾಡು ಏಕೀಕರಣದ ಅರವತ್ತು ವರ್ಷಗಳನ್ನು ಪೂರೈಸುವ ವೇಳೆಗೆ ನಮ್ಮ ಸೌಹಾರ್ದ ಕರ್ನಾಟಕ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಹೊರಳಿ ನೋಡುವ ಅಗತ್ಯವಿದೆ. ಕಳೆದ ವರ್ಷದ ಜನಶಕ್ತಿ ವಿಶೇಷಾಂಕ ಏಕೀಕರಣದ ಸಮಯದಲ್ಲಿ ಕರ್ನಾಟಕದ ಜನ ಕಂಡ 'ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು' ಎಂಬ ಕನಸು 60ನೇ ವರ್ಷಕ್ಕೆ ಕಾಲಿಡುವಾಗ ನನಸಾಗಿದೆಯೇ ಎಂಬುದರತ್ತ ಹೊರಳಿ ನೋಡಿದ್ದೆವು.

ಕಳೆದ ಎರಡು ದಶಕಗಳಲ್ಲಿ ನಮ್ಮ ನಾಡಿನ ಶಕ್ತಿಯಾದ ಬಹುತ್ವಕ್ಕೆ, ಸೌಹಾರ್ದಕ್ಕೆ ದೊಡ್ಡ ಸವಾಲಾಗಿ ಬೆಳೆದಿರುವ ಕೋಮುವಾದದ ಪ್ರಕ್ರಿಯೆ ಬಗ್ಗೆ ಇಂದು ಚರ್ಚಿಸುವ ತುರ್ತು ಅಗತ್ಯ ಇದೆ. ಕರ್ನಾಟಕದಲ್ಲಿ ಕೋಮುವಾದದ ಕುಪ್ರಸಿದ್ಧ ಪ್ರಯೋಗಶಾಲೆಯಾಗಿರುವ ಕರಾವಳಿ ಕರ್ನಾಟಕದ ಬಗ್ಗೆ ವಿವರವಾಗಿ ನೋಡುವುದು ಇದಕ್ಕೆ ಸಹಾಯಕವಾಗಬಹುದು. ಪ್ರಯೋಗಶಾಲೆಯ ಪ್ರಯೋಗಗಳನ್ನು ವಿಶ್ಲೇಷಿಸಿದರೆ ಅದರ ವ್ಯಾಪಕ ಅನ್ವಯದ ಪ್ರತಿರೋಧಕ್ಕೆ ಅನುವಾಗಬಹುದು ಎಂಬ ಆಶಯ ಇಲ್ಲಿದೆ. ಈ ಬಗ್ಗೆ ನಾಡಿನ ಚಿಂತಕರ, ಚಳುವಳಿಗಾರರ ಲೇಖನಗಳಲ್ಲದೆ, ವಿವಿಧ ಅನುಭವಗಳನ್ನು, ಅಭಿವ್ಯಕ್ತಿಗಳನ್ನು ಆಹ್ವಾನಿಸಿದ್ದೆವು. ಅದರ ಪರಿಣಾಮವಾಗಿ 'ಸೌಹಾರ್ದ ಕರ್ನಾಟಕ 60' ನಿಮ್ಮ ಕೈಯಲ್ಲಿದೆ.

ಇಲ್ಲಿ ಮೂರು ಬಗೆಯ ಬರಹಗಳಿವೆ. ಈ ಪ್ರದೇಶದ ಸೌಹಾರ್ದ ಪರಂಪರೆಗಳು ಯಾವುವು? ಅವುಗಳ ಮಹತ್ವ, ಪ್ರಸ್ತುತತೆ ಏನು? ಅವು ಏಕೆ ಕೋಮುವಾದದ ಪ್ರಕ್ರಿಯೆಗೆ ಪ್ರತಿರೋಧ ಒಡ್ಡಲು ಸಾಧ್ಯವಾಗಲಿಲ್ಲ? ಕೋಮುವಾದದ ಪ್ರಕ್ರಿಯೆಯ ವಿರುದ್ಧ ಪ್ರತಿರೋಧ ಇವನ್ನು ಸೃಜನಶೀಲವಾಗಿ ಈಗಲೂ ಬಳಸಬಹುದೆ? ಎಂಬ ಪ್ರಶ್ನೆಗಳನ್ನು ಉತ್ತರಿಸಲು ಮೊದಲ ಬಗೆಯ ಬರಹಗಳು ಪ್ರಯತ್ನಿಸುತ್ತವೆ. ಈ ದೃಷ್ಟಿಕೋಣದಿಂದ ವಾಸುದೇವ ಉಚ್ಚಿಲ

ಮುಂದಿನ ಪುಟಕ್ಕೆ.....

ಅವರು ಈ ಪ್ರದೇಶದ ಒಟ್ಟು ಸೌಹಾರ್ದ ಪರಂಪರೆಯತ್ತ ಸ್ಥೂಲ ದೃಷ್ಟಿ ಹರಿಸುತ್ತಾ, ನಾರಾಯಣ ಗುರು ಪಂಥದ ಪರಂಪರೆ ಮತ್ತು ಪಾತ್ರವನ್ನು ಜ್ಯೋತಿ ಚೆಳ್ಯಾರು ವಿಶ್ಲೇಷಿಸುತ್ತಾ, ಕೊರಗಜ್ಜ ಮತ್ತು ಇತರ ಪಂಥಗಳತ್ತ ವಾಸುದೇವ ಬೆಳ್ಳೆ ಗಮನ ಸೆಳೆಯುತ್ತಾ, ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

ಕೋಮುವಾದ ಕರಾವಳಿ ಕರ್ನಾಟಕದಲ್ಲಿ ಪ್ರಕಟಗೊಳ್ಳುತ್ತಿರುವ ಇಂದಿನ ಹಲವು ನಿರ್ದಿಷ್ಟ ರೂಪಗಳ ನಿರೂಪಣೆ ಮತ್ತು ವಿಶ್ಲೇಷಣೆಯಲ್ಲಿ ಎರಡನೇ ಬಗೆಯ ಬರಹಗಳು ತೊಡಗಿಸಿಕೊಂಡಿವೆ. ನವೀನ್ ಸೂರಿಂಜೆ ಕರಾವಳಿ ಕರ್ನಾಟಕವನ್ನು ಕಾಡಿಸುತ್ತಿರುವ ಅನೈತಿಕ ಪೋಲಿಸ್ ಗಿರಿಗಳ ಹಿಂದಿರುವ ಹುನ್ನಾರ ಮತ್ತು ಅವುಗಳಿಗೆ ಯಾವುದೇ ಪ್ರತಿರೋಧ ಬರದೆ ಸಹ್ಯವಾಗುವುದಕ್ಕೆ ಇರುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಇಸ್ಮತ್ ಫಜೀರ್ ಗೋರಕ್ಷಣೆಯ ನೆಪದಲ್ಲಿ ಹಿಂಸಾಚಾರದ ಗೋ-ರಾಜಕೀಯ ನಡೆಸುವವರ ಹಿಂದಿರುವವರ ಮಸಲತ್ತುಗಳನ್ನು ವಿಶ್ಲೇಷಿಸುತ್ತಾರೆ. ಕರಾವಳಿ ಕರ್ನಾಟಕಕ್ಕೆ ವಿಶಿಷ್ಟವಾದ ಮುಸ್ಲಿಂ ಕೋಮುವಾದದ ಹುಟ್ಟು, ಬೆಳವಣಿಗೆ, ಇಂದಿನ ಸ್ಥಿತಿಗಳನ್ನು ಮುನೀರ್ ಕಾಟಿಪಳ್ಳ ಸ್ಥೂಲವಾಗಿ ಚರ್ಚಿಸುತ್ತಾರೆ. ಹಿಂದೂ ಕೋಮುವಾದಕ್ಕೆ ಪ್ರತಿರೋಧದ ಘಟ್ಟ ದಾಟಿ ಹಿಂದೂ ಕೋಮುವಾದದ ಕರಾಳ ರೂಪವನ್ನು ಪಡೆದುಕೊಳ್ಳುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ.

ಕರಾವಳಿ ಕರ್ನಾಟಕವೇ ಕೋಮುವಾದದ ಪ್ರಯೋಗಶಾಲೆ ಏಕಾಯಿತು ಎಂಬ ಸಂಕೀರ್ಣ ಪ್ರಶ್ನೆಯ ಹಲವು ಮಗ್ಗುಲುಗಳನ್ನು ಹಲವು ದೃಷ್ಟಿಕೋಣಗಳಿಂದ ಮೂರನೇ ಬಗೆಯ ಬರಹಗಳು ವಿಶ್ಲೇಷಿಸುತ್ತವೆ. ಕರಾವಳಿ ಕರ್ನಾಟಕದ ವಿಶಿಷ್ಟತೆಗಳಾದ ಬಹು-ಧರ್ಮಿಯ, ಬಹುಭಾಷಿಕ, ಬಹುಸ್ಮೃತಿಗಳ ಸೌಹಾರ್ದ ಪರಂಪರೆ; ಪ್ರಗತಿಪರ ಭುಸುಧಾರಣೆಗಳು, ಶಿಕ್ಷಣ-ಆರೋಗ್ಯ ಮುಂತಾದ ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಉನ್ನತ ಮಟ್ಟ - ಕೋಮುವಾದೀಕರಣವನ್ನು ತಡೆಯಲು ಯಾಕೆ ಸಾಧ್ಯವಾಗಲಿಲ್ಲ? 'ಅನಿವಾಸಿ'(ಮನಿ-ಆರ್ಡರ್) ಆರ್ಥಿಕತೆ, ಕೈಗಾರೀಕರಣದ ಅಭಾವ, ಹೆಚ್ಚಿನ ಮಟ್ಟದ ವಿದ್ಯಾವಂತರ ನಿರುದ್ಯೋಗ, ಹಣಕಾಸು ಬಂಡವಾಳದ, ಹೊಸ ಸೇವಾ ವಿಭಾಗದ ಪ್ರಧಾನ ಕೇಂದ್ರವಾಗಿರುವುದು ಎಷ್ಟರ ಮಟ್ಟಿಗೆ ಯಾವ ಪಾತ್ರ ವಹಿಸಿವೆ? ಇಂತಹ ಹಲವು ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರಿಸಲು ಯತ್ನಿಸುತ್ತವೆ.

ಕರಾವಳಿಯಲ್ಲಿ ಕೋಮುವಾದದ ಬೆಳವಣಿಗೆ ಬಗ್ಗೆ ಬೀಸು ಹೇಳಿಕೆಗಳು ಮತ್ತು ಅವಸರದ ಪತ್ರಿಕಾ ಲೇಖನಗಳ ಹೊರತಾಗಿ ಅಧ್ಯಯನಗಳು ಬಹಳ ಕಡಿಮೆ. ಕರಾವಳಿಯಲ್ಲಿ ಕೋಮುವಾದ ವಿವಿಧ ಕಾಲಘಟ್ಟದಲ್ಲಿ ಹಾಕಿದ ಹೆಜ್ಜೆಗಳು, ಕರಾವಳಿಯ ಸಾಮಾಜಿಕ - ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಕೋಮುವಾದ ಪಡೆದುಕೊಂಡ ಪ್ರತಿಸ್ಪಂದನ ಮತ್ತು ವಿರೋಧಗಳು, ಅವುಗಳ ತುಲನಾತ್ಮಕ ಬಲಾಬಲಗಳು, ಮತ್ತು ಅವುಗಳ ಸಾಮಾಜಿಕ ಆಧಾರಗಳು; ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಾಮಾಜಿಕ ಶಕ್ತಿಗಳು ಮತ್ತು ಸಂಘಟನೆಗಳ ಪ್ರತಿಕ್ರಿಯೆ ಇತ್ಯಾದಿಗಳ ಬಗ್ಗೆ ಅಧ್ಯಯನ ಬೇಕಾಗಿದೆ ಎಂದು ಜಿ.ಎನ್. ನಾಗರಾಜ್ ಪ್ರತಿಪಾದಿಸುತ್ತಾರೆ. ಅಲ್ಪಸಂಖ್ಯಾತರ ಗಮನಾರ್ಹ ಸಂಖ್ಯೆ, ಭೂಸುಧಾರಣೆಯ ಪರಿಣಾಮಗಳು ಮುಂತಾದ ಕೆಲವು ನಿರ್ದಿಷ್ಟ ಸಾಮಾಜಿಕ ವೈಶಿಷ್ಟ್ಯತೆಗಳ ಪಾತ್ರವನ್ನು ಅವರು ವಿಶ್ಲೇಷಿಸುತ್ತಾರೆ. ಕರಾವಳಿಯ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಿ ಕರಾವಳಿ ಕರ್ನಾಟಕದಲ್ಲಿ ಕೋಮುವಾದ ನೆಲೆ ಪಡೆದುಕೊಳ್ಳಲು ಕಾರಣವಾದ ಆರ್ಥಿಕ-ಸಾಮಾಜಿಕ ಪ್ರಕ್ರಿಯೆಗಳನ್ನು ಚಂದ್ರ ಪೂಜಾರಿಯವರು ತಮ್ಮ ಲೇಖನದಲ್ಲಿ ದೀರ್ಘವಾಗಿ ವಿವರವಾಗಿ ವಿಶ್ಲೇಷಿಸುತ್ತಾರೆ. ಬಿಲ್ಲವ ಮತ್ತು ಬೆಸ್ತ ಸಮುದಾಯಗಳ ಉದಾಹರಣೆಗಳೊಂದಿಗೆ ಅವನ್ನು ನಿರ್ದಿಷ್ಟವಾಗಿ ನಿರೂಪಿಸುತ್ತಾರೆ. ಜಾತೀಯವಾಗಿಯೂ, ಆರ್ಥಿಕವಾಗಿಯೂ, ಪರಸ್ಪರ ವೈರುಧ್ಯಗಳಲ್ಲಿ ಒಡೆದು ಹೋಗಿರುವ ಹಿಂದುಗಳನ್ನು, 'ಹಿಂದುತ್ವ'ದ ಅಸ್ಮಿತೆಯಡಿ ಒಗ್ಗೂಡಿಸಿ ಸಾಮಾಜಿಕ ಅಧಿಕಾರ ಹೊಂದುವ ರಾಜಕಾರಣವನ್ನು ಆರೆಸ್ಸೆಸ್ 1950ರಿಂದಲ್ಲೂ ರೂಢಿಸಿಕೊಂಡು ಬಂದಿತ್ತು. 1985ರ ಉತ್ತರಾರ್ಧ 'ರಾಮಜನ್ಮಭೂಮಿ ಚಳುವಳಿ' ಆ ರಾಜಕೀಯವನ್ನು ಆಕ್ರಮಣಶೀಲವಾಗಿ ಮುಂದೊತ್ತುವ ಸಾಮಾಜಿಕ ಕಾರ್ಯಾಚರಣೆ-ಯಾಗಿತ್ತು. ದಮನಿತರ ಹಕ್ಕಿನ ಸಾಮಾಜಿಕ ಮನೋಭಾವ ಮರುನಿರೂಪಿಸದೇ, ಒಂದು ಚಾರಿತ್ರಿಕ 'ಪ್ರತಿಕ್ರಾಂತಿ'ಯಾದ 'ರಾಮಜನ್ಮಭೂಮಿ ಚಳುವಳಿ'ಯ ರಾಜಕೀಯವನ್ನು ನಿಶ್ಶಸ್ತ್ರಗೊಳಿಸಲಾಗದು ಎಂದು ಫಣಿರಾಜ್ ವಿಶ್ಲೇಷಿಸುತ್ತಾರೆ

ಅವಿಭಜಿತ ದ.ಕ. ಜಿಲ್ಲೆಯ ಕೋಮುವಾದದ ಹಿನ್ನೆಲೆಯನ್ನು ಕಳೆದ ಏಳೆಂಟು ದಶಕಗಳ ಬೆಳವಣಿಗೆಯ ಹಿನ್ನೆಲೆಯಿಂದ ವಿಮರ್ಶಿಸುವಂತಹ ವಿಧಾನವನ್ನು ಬದಲಾಯಿಸಬೇಕಾಗಿದೆ. 1498ರಿಂದ ಒಮ್ಮೆ ಬಹಿರಂಗವಾಗಿ ಮತ್ತೊಮ್ಮೆ ಗುಪ್ತವಾಗಿ ಕಾರ್ಯಾಚರಿಸುತ್ತಿದ್ದ ಮತೀಯತೆಯ ದ್ವೇಷ, ವೈಷಮ್ಯ ಮತ್ತು ಅಪಪ್ರಚಾರಗಳ ಒಟ್ಟು ಹಿನ್ನೆಲೆಯಲ್ಲಿ ವಿಮರ್ಶೆ ನಡೆಸಬೇಕಾಗಿದೆ ಎಂದು ಕೃಷ್ಣಪ್ಪ ಕೊಂಚಾಡಿ ಅವರು ತಮ್ಮ ಲೇಖನದಲ್ಲಿ ಅಗತ್ಯ ಚಾರಿತ್ರಿಕ ನೋಟಗಳ ಮೂಲಕ ವಾದಿಸುತ್ತಾರೆ. ಹೆಪ್ಪುಗಟ್ಟಿದ ಕೈಗಾರೀಕರಣ, ಇದಕ್ಕೆ ಪ್ರತಿಯಾಗಿ ಬೆಳೆದ ಮೂರನೇ ಘಟ್ಟದ ಸೇವಾ ಉದ್ಯಮ, ಇದರಿಂದ ಬಂದ ಲೂಂಪನೀಕರಣ ಮತ್ತು ಮಾಫಿಯಾಕರಣ, ಭೂಮಸೂದೆಯೊಂದಿಗೆ ಬರಬೇಕಿದ್ದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯ ಗೈರು ಹಾಜರು ಇವೇ ಸಂಕೀರ್ಣಗೊಂಡು ಕರಾಳ ಕೋಮುವಾದ ಉಚ್ಛ್ರಾಯ ಸ್ಥಿತಿಗೆ ಬರುವಂತಾಯಿತು ಎಂದು ರಾಜೇಂದ್ರ ಉಡುಪ ವಾದಿಸುತ್ತಾರೆ.

ಇವಲ್ಲದೆ ಒಂದು ಕತೆ ಮತ್ತು ಹಲವು ಕವನಗಳು ಇವೆ ಇಲ್ಲಿ. ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಬೊಳುವಾರು ಮಹಮ್ಮದ್ ಕುಂಞ ಅವರ ಮಹಾಕಾದಂಬರಿ 'ಸ್ವಾತಂತ್ರ್ಯದ ಓಟ'ದ ಆಯ್ದ ಎರಡು ಭಾಗಗಳು ಇಲ್ಲಿವೆ. ಎಲ್ಲರಿಗೂ ತಿಳಿದಿರುವಂತೆ 'ಸ್ವಾತಂತ್ರ್ಯದ ಓಟ'ದಲ್ಲಿ ಸ್ವಾತಂತ್ರ್ಯದ ಮೊದಲ 50 ವರ್ಷಗಳಲ್ಲಿ ಕರಾವಳಿ ಕರ್ನಾಟಕದ ಹಳ್ಳಿಯೊಂದರಲ್ಲಿ ಮುಸ್ಲಿಮರ ಬದುಕಿನ ಕೂಡುಬಾಳುವೆಯ ಸಂತಸಗಳ ತಲ್ಲಣಗಳ ಆಳವಾದ ಚಿತ್ರಣವಿದೆ.

ಇವೆಲ್ಲ ಸೇರಿ ಇಲ್ಲಿ 'ಸೌಹಾರ್ದ ಕರ್ನಾಟಕ 60'ರ ಒಂದು ನೈಜ ಚಿತ್ರಣ ಸಿಗುತ್ತದೆ ಎಂಬುದು ನಮ್ಮ ನಂಬಿಕೆ. ಇದನ್ನು ಮನನಮಾಡಿಕೊಂಡು ಸೌಹಾರ್ದ ಕರ್ನಾಟಕವನ್ನು ಸ್ಥಾಪಿಸುವ ಹೋರಾಟಕ್ಕೆ ಮುಂದಾಗೋಣ!

ಪರಿವಿಡಿ

ಕವನಗಳು



ಕರಾವಳಿಯಲ್ಲಿ ಕೋಮುವಾದದ ಬೆಳವಣಿಗೆ ಏಕೆ?

ಜಿ.ಎನ್.ನಾಗರಾಜ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

ಕರಾವಳಿಯಲ್ಲಿನ ಕೋಮುವಾದದ ಬೆಳವಣಿಗೆ ಬಗ್ಗೆ ಒಂದು ಸಮಗ್ರ ಅಧ್ಯಯನ ಅವಶ್ಯವಾಗಿದೆ. ಕರಾವಳಿಯಲ್ಲಿ ಕೋಮುವಾದ ವಿವಿಧ ಕಾಲಘಟ್ಟದಲ್ಲಿ ಹಾಕಿದ ಹೆಜ್ಜೆಗಳು, ಕೋಮುವಾದದ ವಿವಿಧ ಬಗೆಗಳು, ಕರಾವಳಿಯ ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಕೋಮುವಾದ ಪಡೆದುಕೊಂಡ ಪ್ರತಿಸ್ಪಂದನ ಮತ್ತು ವಿರೋಧಗಳು, ಅವುಗಳ ತುಲನಾತ್ಮಕ ಬಲಾಬಲಗಳು, ಮತ್ತು ಅವುಗಳ ಸಾಮಾಜಿಕ ಆಧಾರಗಳು; ವಿವಿಧ ಕೋಮುವಾದಗಳು ಅನುಸರಿಸಿದ ಮತ್ತು ಅನುಸರಿಸುತ್ತಿರುವ ವಿಧಾನಗಳು, ಅವರ ಪ್ರಕಟ ಮತ್ತು ಗುಪ್ತ ಸಂಘಟನೆಗಳು, ಮಾಡುತ್ತಿರುವ ಪ್ರಚಾರಗಳು, ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಾಮಾಜಿಕ ಶಕ್ತಿಗಳು ಮತ್ತು ಸಂಘಟನೆಗಳ ಪ್ರತಿಕ್ರಿಯೆ ಇತ್ಯಾದಿಗಳ ಬಗ್ಗೆ ಅಧ್ಯಯನ ಬೇಕಾಗಿದೆ.

ಒಂದೆರಡು ದಿನಗಳ ಹಿಂದೆಯಷ್ಟೇ ದಕ್ಷಿಣ ಕನ್ನಡದ ಸಂಸತ್ ಸದಸ್ಯರು ಇಡೀ ಜಿಲ್ಲೆಗೆ ಬೆಂಕಿ ಹಚ್ಚುತ್ತೇವೆ ಎಂಬ ಮಾತನ್ನಾಡಿದ್ದಾರೆ. ಒಬ್ಬ ಜನ ಪ್ರತಿನಿಧಿ-ಜನರು ಶಾಂತಿ, ನೆಮ್ಮದಿಯಿಂದ ಬದುಕುವಂತೆ ಪ್ರೇರೇಪಣೆ ನೀಡಬೇಕಾದವನು, ಅವರ ಶಾಂತಿ ನೆಮ್ಮದಿಗೆ ಭಂಗ ಬರದಂತೆ ಕಾಪಾಡಬೇಕಾದವನು – ಇಂತಹ ಹೇಳಿಕೆ ನೀಡುವುದೆಂದರೆ ಆ ಪ್ರದೇಶದಲ್ಲಿ ಪರಿಸ್ಥಿತಿ ಎಂತಹ ಪ್ರಕೋಪಕ್ಕೆ ಹೋಗಿದೆ ಎಂಬುದರ ಸೂಚಕವಾಗಿದೆ. ಈ ಹೇಳಿಕೆಗೆ ಮೂಲ ಕಾರಣ, ಎದುರು ಕೋಮುವಾದದಿಂದ ಆಗಿದೆ ಎಂದು ಆರೋಪಿಸಲ್ಪಡುತ್ತಿರುವ ಒಂದು ಕೊಲೆ. ಕರಾವಳಿ ಪ್ರದೇಶದ ಶಾಸಕರು, ಸಂಸದರುಗಳಿಂದ ಇಂತಹ ಹೇಳಿಕೆಗಳು ಸಾಮಾನ್ಯವೆಂಬಂತಾಗಿದೆ. ಆಗಿಂದಾಗ್ಗೆ ಉಡುಪಿ ಮತ್ತು ಉತ್ತರ ಕನ್ನಡದ ಲೋಕಸಭಾ ಸದಸ್ಯರಿಂದಲೂ ಕೋಮು ದ್ವೇಷ ಪ್ರಚೋದಕ ಹೇಳಿಕೆಗಳು ಉದುರುತ್ತಿರುತ್ತವೆ. ಕೋಮುವಾದಕ್ಕೆ ನೇರ ಸಂಬಂಧವಿಲ್ಲದ ಪ್ರಕರಣದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಂಸದನ ಗೂಂಡಾ ವರ್ತನೆಯ ವಿರುದ್ಧ ಜಿಲ್ಲೆಯ ವೈದ್ಯರು ಪ್ರತಿಭಟನೆ ಮಾಡಿದರೆಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಈ ಘಟನೆಗಳು ಈ ಸಂಸದರ ಗುಣ, ಸ್ವಭಾವದ ಸೂಚಕಗಳೂ ಆಗಿವೆ. ಇಂತಹ ಸಂಸದರನ್ನು ಮತ್ತೆ ಮತ್ತೆ ಆಯ್ಕೆ ಮಾಡುವ ಜನರಲ್ಲಿ ಕೋಮುವಾದಿ ಮನೋಭಾವ ತಲುಪಿದ ಗರಿಷ್ಠ ಮಟ್ಟವನ್ನೂ ಸೂಚಿಸುತ್ತವೆ. ಕರ್ನಾಟಕದ ಇತರ ಕೆಲ ಪ್ರದೇಶಗಳಲ್ಲಿಯೂ ಬಿಜೆಪಿ ಸಂಸದರು ಆಯ್ಕೆಯಾಗಿರುವಲ್ಲಿ ಇಂತಹ ಹೇಳಿಕೆಗಳನ್ನು ನೀಡುವ ದಾರ್ಷ್ಟ್ಯವನ್ನು ಕಾಣುವುದಿಲ್ಲ. ಈ ಜಿಲ್ಲೆಗಳು ಕೋಮು ದ್ವೇಷದ ಈ ಹಂತವನ್ನು ತಲುಪಿದ್ದು ಹೇಗೆ ? ಈ ಪ್ರಶ್ನೆ ಕೇವಲ ಕರಾವಳಿಯ ಪ್ರಜ್ಞಾವಂತರನ್ನು ಮಾತ್ರವೇ ಅಲ್ಲ ಇಡೀ ಕರ್ನಾಟಕವನ್ನು ಕಾಡ ತೊಡ ಗಿದೆ.

ಕರಾವಳಿ ಕೋಮುವಾದೀಕರಣ ಪ್ರಜಾಪ್ರಭುತ್ವದ ಪ್ರಶ್ನೆ

ಕರಾವಳಿ ಪ್ರದೇಶ ಕರ್ನಾಟಕದಲ್ಲಿ ಕೋಮುವಾದದ

ಸಂಪುಟ ೧೧ ಸಂಚಿಕೆ ೦೯

ಪ್ರಯೋಗಶಾಲೆಯಾಗಿದೆ. ಅಲ್ಲಿ ಕೋಮುವಾದ ಪ್ರೇರಿತ ಘಟನೆಗಳು–ಜಗಳಗಳು, ದೌರ್ಜನ್ಯಗಳು ನಡೆಯದ ದಿನವೇ ಇಲ್ಲ. ಮಾತ್ರವಲ್ಲ ಆ ಪ್ರದೇಶದ ಉದ್ದಗಲದಲ್ಲಿ ಪ್ರತಿದಿನವೂ ಹಲವು ಘಟನೆಗಳು ನಡೆಯುತ್ತಿರುತ್ತಲೇ ಇರುತ್ತವೆ. ಅವುಗಳಲ್ಲಿ ಮಾಧ್ಯಮ, ಪತ್ರಿಕೆಗಳ ಮೂಲಕ ಜನರ ಗಮನಕ್ಕೆ ಬರುವುದು ಕೇವಲ ಕೆಲವೇ. ಇಂತಹ ದಿನನಿತ್ಯದ ಘಟನೆಗಳ ಕಾರಣವಾಗಿ ಕೋಮು ದ್ವೇಷವೆಂಬುದು ಎಂದೂ ಆರದೆ ಉರಿಯುತ್ತಿರುವ ನಿಗಿ ನಿಗಿ ಕೆಂಡವಾಗಿದೆ. ಯಾವಾಗ ಬೇಕಾದರೂ ಈ ಕೆಂಡದುಂಡೆಗಳಿಂದ ಬೆಂಕಿ ಹೊತ್ತಿಸಿಕೊಂಡು ಇಡೀ ಪ್ರದೇಶವನ್ನೇ ಸುಡಬಹುದು ಎಂಬ ವಾತಾವರಣ ಇದೆ. ಬಿರುಗಾಳಿ ಬೀಸಿದರೆ ಈ ಬೆಂಕಿಯ ಜ್ವಾಲೆಗಳು ಈ ಪ್ರದೇಶಕ್ಕೆ ಮಾತ್ರ ಸೀಮಿತವಾಗದೇ ನೆರೆಯ ಜಿಲ್ಲೆಗಳನ್ನು, ಕೆಲವೊಮ್ಮೆ ಇಡೀ ಕರ್ನಾಟಕವನ್ನೇ ವ್ಯಾಪಿಸುವಂತೆ ಹಬ್ಬಿಬಿಡುವ ಸಾಧ್ಯತೆಗಳು ಸದಾ ಜೀವಂತವಾಗಿವೆ.

ಉತ್ತರ ಮತ್ತು ಪಶ್ಚಿಮ ಭಾರತದ ರಾಜ್ಯಗಳಲ್ಲಿ ಪ್ರಬಲ ನೆಲೆಗಳನ್ನು ಬೆಳೆಸಿಕೊಂಡಿದ್ದ ಬಿಜೆಪಿಗೆ ಬಹುಕಾಲ ದಕ್ಷಿಣ ಭಾರತದಲ್ಲಿ ಹೆಜ್ಜೆಯೂರಲು ಅವಕಾಶವೇ ಇಲ್ಲ ಎಂಬ ಪರಿಸ್ಥಿತಿ ಇತ್ತು.. ದೇಶದ ಪತ್ರಿಕೆಗಳು ಮತ್ತು ರಾಜಕಾರಣಿಗಳು ಇದೊಂದು ಬಿಮಾರು ರಾಜ್ಯಗಳ ಪಕ್ಷ ಅಥವಾ ಹಿಂದುಳಿದ ಅನಾರೋಗ್ಯ ಪೀಡಿತ ರಾಜ್ಯಗಳ ಪಕ್ಷ ಎಂದು ಹಂಗಿಸುತ್ತಿದ್ದರು. ಆದರೆ ಗುಜರಾತ್ ಮತ್ತು ಮಹಾರಾಷ್ಟ್ರಗಳಿಗೆ ವ್ಯಾಪಿಸಿದ ಈ ವ್ಯಾಧಿ ಇಂದು ಕರ್ನಾಟಕದಲ್ಲಿ ಹೆಜ್ಜೆಯೂರಿದೆ. ಕರ್ನಾಟಕವನ್ನು ದಕ್ಷಿಣ ಭಾರತದ ಹೆಬ್ಬಾಗಿಲು ಎಂದು ಬಿಜೆಪಿಯ ಧುರೀಣರು ಘೋಷಿಸಿದ್ದಾರೆ. ಕರಾವಳಿಯನ್ನು ಕೋಮುವಾದದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದ್ದಾರೆ ಎನ್ನುವುದರ ಅರ್ಥವೇ ಇಲ್ಲಿಯ ಪರಿಸ್ಥಿತಿಯಲ್ಲಿ ಕೋಮು ವಿಭಜನೆಯನ್ನು ತರುವುದು ಹೇಗೆ ಎಂಬ ಅನುಭವ ಗಳಿಸಿ ಅದನ್ನು ಇಡೀ ರಾಜ್ಯಕ್ಕೆ, ಇಡೀ ದಕ್ಷಿಣ ಭಾರತಕ್ಕೆ ಹಬ್ಬಿಸುವ ಗುರಿ ಹೊಂದಿದೆ ಎಂದು. ಇಡೀ ದಕ್ಷಿಣ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಉಡುಪಿ ನಗರ ಸಭೆಯ ಅಧಿಕಾರವನ್ನು 1969 ರಲ್ಲಿ ಪಡೆಯಿತು. ಇದೇ ಊರಿನಲ್ಲಿಯೇ 1964ರಲ್ಲಿ ವಿಶ್ವ ಹಿಂದೂ ಪರಿಷತ್ತಿನ ಮೊದಲ ಅಧಿವೇಶನ ನಡೆಯಿತು ಎಂಬುದು ಗಮನಾರ್ಹ. ಹೀಗೆ ಕರಾವಳಿ ಪ್ರದೇಶ ಕರ್ನಾಟಕದಲ್ಲಿ ಕೋಮು ದ್ವೇಷದ ರಾಜಕೀಯಕ್ಕೆ ಮಾತ್ರವಲ್ಲ ಇಡೀ ದಕ್ಷಿಣ ಭಾರತದಲ್ಲಿ ಈ ವ್ಯಾಧಿಯ ಹಬ್ಬುವಿಕೆಯ ಹೊಣೆ ಹೊರಬೇಕಾದ ಪರಿಸ್ಥಿತಿ ಬಂದೊದಗಿದೆ. ಆದ್ದರಿಂದ ಕರಾವಳಿ ಹೇಗೆ ಕೋಮು ವಶೀಕರಣಕ್ಕೊಳಗಾಯಿತು ಎಂಬುದು ಭಾರತದ ರಾಜಕಾರಣ ಮತ್ತು ಪ್ರಜಾಪ್ರಭುತ್ವದ ಪ್ರಶ್ನೆಯಾಗಿದೆ.

ಸಮಗ್ರ ಅಧ್ಯಯನ ಅವಶ್ಯ

ಕರಾವಳಿಯಲ್ಲಿ ಕೋಮುವಾದದ ಬೆಳವಣಿಗೆ ಒಂದು ಮುಖ್ಯ ಪ್ರಶ್ನೆಯಾಗಿದ್ದರೂ ಕೂಡ ಅದರ ಬಗ್ಗೆ ಬೀಸು ಹೇಳಿಕೆಗಳು ಮತ್ತು ಅವಸರದ ಪತ್ರಿಕಾ ಲೇಖನಗಳ ಹೊರತಾಗಿ ಅಧ್ಯಯನಗಳೆಂಬ ಸ್ವರೂಪ ಪಡೆದವು ಬಹಳ ಕಡಿಮೆ. ಚಂದ್ರ ಪೂಜಾರಿ ಮತ್ತು ನಿತ್ಯಾನಂದ ಶೆಟ್ಟಿಯವರ "ಕರಾವಳಿ ಕರ್ನಾಟಕದ ಕೋಮುವಾದ" ಎಂಬ ಹಿಂದಿನ ದಕ್ಷಿನ ಕನ್ನಡ ಜಿಲ್ಲೆಗೆ ಸೀಮಿತವಾದ ಒಂದು ಪುಟ್ಟ ಪ್ರಬಂಧ ಮತ್ತು ಕರಾವಳಿಯ ತಲ್ಲಣಗಳು ಎಂಬ ಸಂಕಲನದಲ್ಲಿ ನಾಗವೇಣಿಯವರಂತಹ ಕೆಲವರ ಬರಹಗಳು ಮಾತ್ರವೇ ನನ್ನ ಗಮನಕ್ಕೆ ಬಂದುದರಲ್ಲಿ ಗಮನಾರ್ಹವಾದವುಗಳು. (ಈ ಬಗ್ಗೆ ಇರುವ ಇತರ ಅಧ್ಯಯನಗಳ ಬಗ್ಗೆ ನನ್ನ ಗಮನಕ್ಕೆ ತರಬೇಕೆಂದು ಓದುಗರಲ್ಲಿ ಮನವಿ.) ಜಿ.ರಾಜಶೇಖರ್, ಫಣಿರಾಜ್ ಮೊದಲಾದ ಕೆಲ ಗೆಳೆಯರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಘಟಿಸಿದ ಕೋಮು ದಂಗೆಗಳ ಬಗ್ಗೆ ಆಗಾಗ್ಗೆ ಅಧ್ಯಯನಗಳ ಬಗ್ಗೆ ಬರೆದಿದ್ದಾರೆ . ಉತ್ತರ ಕನ್ನಡದ ಬಗ್ಗೆ ಇಂತಹ ಬರಹಗಳೂ ಕೂಡ ಅಪರೂಪವಾಗಿದೆ.

ಕರಾವಳಿಯಲ್ಲಿನ ಕೋಮುವಾದದ ಬೆಳವಣಿಗೆ ಬಗ್ಗೆ ಒಂದು ಸಮಗ್ರ ಅಧ್ಯಯನ ಅವಶ್ಯವಾಗಿದೆ. ಕರಾವಳಿಯಲ್ಲಿ ಕೋಮುವಾದ ವಿವಿಧ ಕಾಲಘಟ್ಟದಲ್ಲಿ ಹಾಕಿದ ಹೆಜ್ಜೆಗಳು, ಕೋಮುವಾದದ ವಿವಿಧ ಬಗೆಗಳು, ಕರಾವಳಿಯ ಸಾಮಾಜಿಕ–ಆರ್ಥಿಕ , ಸಾಸ್ಕೃತಿಕ ಹಾಗೂ ರಾಜಕೀಯ ಪರಿಸ್ಥಿತಿಯಲ್ಲಿ ಕೋಮುವಾದ ಪಡೆದುಕೊಂಡ ಪ್ರತಿಸ್ಪಂದನ ಮತ್ತು ವಿರೋಧಗಳು, ಅವುಗಳ ತುಲನಾತ್ಮಕ ಬಲಾಬಲಗಳು, ಮತ್ತು ಅವುಗಳ ಸಾಮಾಜಿಕ ಆಧಾರಗಳು; ವಿವಿಧ ಕೋಮುವಾದಗಳು ಅನುಸರಿಸಿದ ಮತ್ತು ಅನುಸರಿಸುತ್ತಿರುವ ವಿಧಾನಗಳು, ಅವರ ಪ್ರಕಟ ಮತ್ತು ಗುಪ್ತ ಸಂಘಟನೆಗಳು, ಮಾಡುತ್ತಿರುವ ಪ್ರಚಾರಗಳು, ವಿವಿಧ ರಾಜಕೀಯ ಪಕ್ಷಗಳ ಹಾಗೂ ಸಾಮಾಜಿಕ ಶಕ್ತಿಗಳು ಮತ್ತು ಸಂಘಟನೆಗಳ ಪ್ರತಿಕ್ರಿಯೆ ಇತ್ಯಾದಿಗಳ ಬಗ್ಗೆ ಅಧ್ಯಯನ ಬೇಕಾಗಿದೆ. ಜೊತೆಗೆ ಕರಾವಳಿಯಲ್ಲಿ ಈಗ್ಗೆ ನಾಲ್ಕೈದು ದಶಕಗಳಿಂದ ನಡೆಯುತ್ತಿರುವ ಕೋಮು ಗಲಭೆಗಳು, ಧಾಳಿಗಳು ಮತ್ತು ಘಟನೆಗಳ ಬಗ್ಗೆ ಆದಷ್ಟು ನಿಖರ ಮಾಹಿತಿ ಪಡೆದು ವಿಶ್ಲೇಷಣೆ ನಡೆಸಬೇಕಾಗಿದೆ. ಜೊತೆಗೆ ಕೋಮುವಾದದ ಬಗ್ಗೆ ಆಳವಾಗಿ ತಿಳಿದುಕೊಳ್ಳಬೇಕೆಂದರೆ ಕರಾವಳಿ ಪ್ರದೇಶದ ನಿರ್ದಿಷ್ಟ ಸ್ವರೂಪದ ಬಗ್ಗೆ ಮತ್ತು ಕರ್ನಾಟಕದ ಇತರ ಪ್ರದೇಶಗಳ ಸ್ವರೂಪ ಮತ್ತು ಅವುಗಳಲ್ಲಿ ಕೋಮುವಾದ ಬೆಳೆಯುತ್ತಿರುವ ನಿರ್ದಿಷ್ಟ ರೀತಿಗಳ ಬಗ್ಗೆ ತುಲನಾತ್ಮಕ ಅಧ್ಯಯನ ಕೂಡ ಅವಶ್ಯ. ಇದೇ ರೀತಿಯ ಪರಿಸರ ಮತ್ತು ಸಾಮಾಜಿಕ ಪರಿಸ್ಥಿತಿಯಿರುವ ನೆರೆಯ ಮಹಾರಾಷ್ಟದ ಕರಾವಳಿಯಲ್ಲಿ ಕೋಮುವಾದ ಬೆಳೆದ ಬಗ್ಗೆ ಮತ್ತು ಕೇರಳದಲ್ಲಿ ಕೋಮುವಾದ ಬೆಳೆಯಲು ಪ್ರಯತ್ನಿಸುತ್ತಿರುವ ಬಗ್ಗೆ ಮತ್ತು ಅದನ್ನು ನಿಗ್ರಹಿಸಿದ ಮತ್ತು ನಿಗ್ರಹಿಸುತ್ತಿರುವ ವಿಧಾನಗಳ ಬಗ್ಗೆ ಕೂಡ ಇಂತಹ ಅಧ್ಯಯನ ಅಗತ್ಯ. ಭಾರತ ದೇಶದ ಹಾಗೂ ಕರ್ನಾಟಕ ರಾಜ್ಯದ ಭಾಗವಾಗಿ ಇವುಗಳಲ್ಲಿ ನಡೆಯುತ್ತಿರುವ ವಿವಿಧ ಸಾಮಾನ್ಯ ಪ್ರಕ್ರಿಯೆಗಳು ಕರಾವಳಿಯ ನಿರ್ದಿಷ್ಟ ಸ್ವರೂಪದಲ್ಲಿ ವಿಭಿನ್ನ ಪರಿಣಾಮಗಳನ್ನು ಬೀರುತ್ತವೆ. ಸಾಮಾನ್ಯತೆ ಮತ್ತು ವಿಶಿಷ್ಟತೆಗಳು ಪರಸ್ಪರ ತಳುಕು ಹಾಕಿಕೊಂಡು ಕರಾವಳಿಯಲ್ಲಿನ ಕೋಮುವಾದದ ಬೆಳವಣಿಗೆಗೆ ಕಾರಣವಾಗಿದೆ. ಹಾಗೆಂದು ಇದು ತನ್ನಿಂದ ತಾನೆ ಸ್ವಯಂ ಆಗಿ ಆದ ಬೆಳವಣಿಗೆಯಲ್ಲ. ಆಸಕ್ತ ಪಟ್ಟಭದ್ರ ಹಿತಗಳು ಕರಾವಳಿಯ ನಿರ್ದಿಷ್ಟ ಸ್ವರೂಪ ನೀಡುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕೋಮುವಾದಗಳು ಬೆಳೆದಿವೆ ಎಂಬುದನ್ನು ಗುರುತಿಸಬೇಕು. ನಮ್ಮ ನಮ್ಮ ಅನುಭವಕ್ಕೆ ದೊರಕುವ

ಆಂಶಿಕ ಮಾಹಿತಿಗಳಿಂದ ಪ್ರಭಾವಿತರಾಗಿ ಒಮ್ಮಗ್ಗಲಿನ ತೀರ್ಮಾನಕ್ಕೆ ಬರುವ ಬದಲಾಗಿ ವಿವಿಧ ಆಯಾಮಗಳಿಂದ ಈ ಪ್ರಶ್ನೆಯನ್ನು ಪರಿಶೀಲಿಸುತ್ತಲೇ ಕರಾವಳಿಯನ್ನು ಕೋಮುವಾದ ಮುಕ್ತಗೊಳಿಸುವ ದಿಸೆಯಲ್ಲಿ ಮುಂದಾಗಬೇಕಾಗಿದೆ.

ಕರಾವಳಿಯ ಸಾಮಾಜಿಕ ವೈಶಿಷ್ಟ್ಯತೆಗಳು

ಕರಾವಳಿ ಕರ್ನಾಟಕದಲ್ಲಿಯೇ ಅತ್ಯಂತ ವೈಶಿಷ್ಟ್ಯತೆಗಳುಳ್ಳ ಪ್ರದೇಶ ಎಂಬುದು ಎಲ್ಲರ ಅನುಭವಕ್ಕೆ ಬಂದ ಸಂಗತಿ. ಕರ್ನಾಟಕವನ್ನು ಮುಖ್ಯವಾಗಿ ಕರಾವಳಿ, ಮಲೆನಾಡು, ಉತ್ತರ ಮೈದಾನ, ದಕ್ಷಿಣ ಮೈದಾನ, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ, ಹಳೆಯ ಮೈಸೂರು ಸಂಸ್ಥಾನ ಎಂದೆಲ್ಲಾ ವಿವಿಧ ರೀತಿಯಲ್ಲಿ ಹಿಂದಿನ ಆಡಳಿತ ವಿಭಾಗಗಳು, ಪ್ರಾಕೃತಿಕ ಲಕ್ಷಣಗಳ ಆಧಾರದ ಮೇಲೆ ವಿಂಗಡಿಸಲಾಗುತ್ತದೆ. ನಮ್ಮ ಅಧ್ಯಯನದ ವಿಷಯಕ್ಕೆ ಸೂಕ್ತವಾಗಿ ಸಾಮಾಜಿಕ–ಆರ್ಥಿಕ ರಚನೆಯ ಆಧಾರದ ಮೇಲೆ ಕರಾವಳಿ ಮತ್ತು ಮಲೆನಾಡು, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಎಂದು ಮೂರು ಭಾಗ ಮಾಡಬೇಕೆಂದು ನನ್ನ ಅನುಭವ.

ಕರಾವಳಿಯ ಮುಖ್ಯ ಭೌಗೋಳಿಕ ವೈಶಿಷ್ಟ್ಯವೆಂದರೆ ಅದರ ಹೆಸರೇ ಸೂಚಿಸುವಂತೆ ಅರಬ್ಬೀ ಸಮುದ್ರದ ಕಡಲ ತೀರ, ಆದರೆ ಅಷ್ಟೇ ಮುಖ್ಯವಾಗಿರುವುದು ಪಶ್ಚಿಮ ಘಟ್ಟಗಳೆಂಬ ಹಿಮಾಲಯ ಪರ್ವತ ಶ್ರೇಣಿಯನ್ನು ಹೊರತುಪಡಿಸಿದರೆ ಅತ್ಯಂತ ಎತ್ತರವಾದ ಪರ್ವತ ಶ್ರೇಣಿ. ಈ ಶ್ರೇಣಿಗಳಿಂದ ಪಶ್ಚಿಮಕ್ಕೆ ಹರಿಯುವ ಹಲವು ನದಿಗಳು. ಇತರನೇಕ ಭೌಗೋಳಿಕ ವೈಶಿಷ್ಟ್ಯಗಳಲ್ಲಿ ಇವು ನಮ್ಮ ಅಧ್ಯಯನಕ್ಕೆ ಅತ್ಯವಶ್ಯವಾಗಿ ಗುರುತಿಸಬೇಕಾದವು. ಈ ಲಕ್ಷಣಗಳು ಈ ಭಾಗದ ಮಳೆ, ಬೆಳೆ, ಜನತೆಯ ಬದುಕು, ಅವರ ಸಂಪರ್ಕ, ಸಂವಹನಗಳನ್ನು ನಿರ್ದೇಶಿಸುತ್ತವೆ. ಆ ಮೂಲಕ ಇಲ್ಲಿಯ ಜನರ ಆರ್ಥಿಕ, ಸಾಮಾಜಿಕ ರಚನೆ, ಧಾರ್ಮಿಕ ,ಭಾಷಿಕ, ಸಾಂಸ್ಕೃತಿಕ ಪರಿಸರ ರೂಪುಗೊಂಡಿವೆ. ಕರ್ನಾಟಕದ ಇತರ ಭಾಗಗಳಿಂದ ಪ್ರತ್ಯೇಕವಾಗಿರುವುದು ವಿವಿಧ ಭಾಷೆಗಳ ಮತ್ತು ಕನ್ನಡದ ಪ್ರಬೇಧಗಳ ಬೆಳವಣಿಗೆಗೆ ಕಾರಣವಾಯಿತು. ಮತ್ತು ಇತರ ಭಾಗಗಳ ಸಾಹಿತ್ಯಕ, ಧಾರ್ಮಿಕ, ವೈಚಾರಿಕ ಬೆಳವಣಿಗೆಗಳಿಂದ ಗಣನೀಯವಾಗಿ ದೂರ ಇಟ್ಟಿತು. ಉದಾಹರಣೆಗೆ ವಚನ ಚಳುವಳಿಯ ವೈಚಾರಿಕತೆ ಇತ್ಯಾದಿ. ಇಲ್ಲಿಯ ಜಾತಿ ಪದ್ಧತಿಯ ರಚನೆ, ದೈವಾರಾಧನೆಗಳು ಇತರ ಭಾಗಗಳಿಗಿಂತ ವಿಶಿಷ್ಟವಾಗಿವೆ. ಇವೆಲ್ಲವೂ ಇಲ್ಲಿಯ ಜನರ ಚಿಂತನೆ ಮತ್ತು ವೈಚಾರಿಕತೆಯ ಮೇಲೆ ಪರಿಣಾಮ ಬೀರಿವೆ. ಇನ್ನು ಪಶ್ಚಿಮ ಕಡಲ ತೀರವೆಂಬುದು ಒಂದು ಕಡೆ ಬೆಳೆಯುತ್ತಿದ್ದ ಮುಂಬಯಿ ಮತ್ತೊಂದು ಕಡೆ ಗಲ್ಫ್ ರಾಷ್ಟ್ರಗಳೊಂದಿಗೆ ಹೆಚ್ಚಿನ ಸಂಪರ್ಕಗಳಿಗೆ ಕಾರಣವಾಯಿತು. ಇವು ಇಲ್ಲಿ ಕೋಮುವಾದದ ಬೆಳವಣಿಗೆಗೆ ತಮ್ಮ ಕೊಡುಗೆ ನೀಡಿವೆ. ಈ ಅಂಶಗಳ ಅನೇಕ ಆಯಾಮಗಳ ಬಗ್ಗೆ ವಿಶ್ಲೇಷಣೆ ಮುಂದುವರೆಸಬಹುದು. ಆದರೆ ಸ್ಥಳಾಭಾವದಿಂದ ಅದನ್ನು ಮುಂದುವರೆಸಲಾಗುತ್ತಿಲ್ಲ.

ಆದರೆ ಈ ಕಾರಣಗಳಿಂದ ಮಂಗಳೂರಿನಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಜನಸಂಖ್ಯೆಯ ಸಾಂದ್ರತೆ ಕರ್ನಾಟಕದ ಬೇರೆಲ್ಲ ಜಿಲ್ಲೆಗಳಿಗಿಂತ ಹೆಚ್ಚು. ಮುಸ್ಲಿಂ ಜನತೆ ಶೇ. 22.07 ರಷ್ಟು, ಕ್ರಿಶ್ಚಿಯನ್ ಜನತೆ ಶೇ. 8.69 ರಷ್ಟು. ಈ ಎರಡೂ ಜನವಿಭಾಗಗಳು ಒಟ್ಟು ಸೇರಿ ಶೇ. 31 ರಷ್ಟು. ಸಂಪನ್ಮೂಲಗಳ ಉಪಯೋಗದಲ್ಲಿ ಈ ಅಂಶವೇ ಬಹು ಸಂಖ್ಯಾತರಲ್ಲಿ ಕೋಮು ವಿಚಾರಗಳನ್ನು ಬಿತ್ತಲು ಸಾಕಷ್ಟು ಅವಕಾಶವನ್ನೊದಗಿಸುತ್ತದೆ. ಆದರೆ ಇದರ ಜೊತೆಗೇ ಹೆಣೆದುಕೊಂಡಿರುವ ಹಲವು ಸಂಗತಿಗಳು ಮತ್ತಷ್ಟು ಅವಕಾಶವನ್ನೊದಗಿಸಿವೆ. ಚಂದ್ರು ಪೂಜಾರಿ ಮತ್ತು ನಿತ್ಯಾನಂದ ಶೆಟ್ಟಿಯವರು ಗುರುತಿಸಿದಂತೆ ಕರ್ನಾಟಕದ ಬೇರೆಲ್ಲೂ ಕಾಣದ ಮತ್ತೊಂದು ಅಂಶ ಇಲ್ಲಿ ವ್ಯಾಪಾರ ವಾಣಿಜ್ಯದಲ್ಲಿ ತೊಡಗಿರುವವರಲ್ಲಿ ಬ್ರಾಹ್ಮಣರೆಂದು ಪರಿಗಣಿತವಾದ ಗೌಡ ಸಾರಸ್ವತರು ಮತ್ತು ಮುಸ್ಲಿಮರೇ ಪ್ರಧಾನ. ಅವರ ನಡುವೆ ವೃತ್ತಿ ಸಹಜ ಸ್ಪರ್ಧೆ ಮತ್ತು ಮತ್ಸರ. ಗೌಡ ಸಾರಸ್ವತರಲ್ಲಿ ಬಹುಭಾಗ ಕೆಲ ಕಾಲದ ಹಿಂದೆ ಗೋವಾದಲ್ಲಿ ಮತ್ತೊಂದು ಅಲ್ಪಸಂಖ್ಯಾತ ವಿಭಾಗವಾದ ಕ್ರಿಶ್ಚಿಯನ್ನರಿಂದ ಬಾಧಿತರಾದವರೆಂಬ ತಪ್ಪು ಭಾವನೆಗೊಳಗಾಗಿರುವವರು. ಮುಸ್ಲಿಂ ವ್ಯಾಪಾರಿಗಳು ಕರ್ನಾಟಕದ ಬೇರೆ ಭಾಗಗಳಲ್ಲಿಯೂ ಕೆಲ ಕೃಷಿ ಉತ್ಪನ್ನಗಳನ್ನು ಕೊಳ್ಳುವ ಮೂಲಕ ರೈತರೊಡನೆ ವ್ಯಾಪಾರ ಮತ್ತು ಅದರೊಡನೆ ಬರುವ ವೈರುಧ್ಯದ ಸಂಬಂಧ ಇದೆ. ಆದರೆ ಈ ಪ್ರದೇಶದಲ್ಲಿ ಮೀನು ವ್ಯಾಪಾರ ಮತ್ತು ಬೀಡಿ ಕೈಗಾರಿಕೆಗಳಲ್ಲಿ ಕೂಡ ಮುಸ್ಲಿಂ ಮತ್ತು ಹಿಂದೂ ಜನರ ನಡುವೆ ವ್ಯಾಪಾರದ ಸಂಬಂಧ. ಹೀಗೆ ಹಲವು ವೃತ್ತಿ ರಂಗಗಳಲ್ಲಿ ಸಂಬಂಧ ಎನ್ನುವುದು ಮಾತ್ರವೇ ಅಲ್ಲದೆ ಭಾರತದಲ್ಲಿ ಬಹು ಸೂಕ್ಷ್ಮವಾದ ಒಂದು ಸಂಗತಿ ಅಡಗಿದೆ. ಅದೆಂದರೆ ಬೇರೆ ಬೇರೆ ಧರ್ಮಗಳ ನಡುವಣ ಗಂಡು ಮತ್ತು ಹೆಣ್ಣುಗಳ ನಡುವಣ ಸಂಪರ್ಕಗಳು. ಅದರಿಂದ ಉಂಟಾಗುವ ಗುಮಾನಿ ಮತ್ತು ಗುಲ್ಲುಗಳು. ಇದು ಕೂಡ ಕರ್ನಾಟಕದ ಬೇರೆಡೆ ಕಾಣದ ಒಂದು ಪರಿಸ್ಥಿತಿ.

ಈ ಪ್ರದೇಶದ ಮತ್ತೊಂದು ವೈಶಿಷ್ಟ್ಯ ಬ್ಯಾಂಕುಗಳು ಮತ್ತು ವಿಮಾ ಹಣಕಾಸು ವ್ಯವಹಾರದ ಉಗಮ. ದೇಶದ ಐದು ಮುಖ್ಯ ಬ್ಯಾಂಕುಗಳು ಹುಟ್ಟಿದ್ದು ಇಲ್ಲಿಯೇ. ವಿವಿಧ ಜಾತಿ ಜನ ವಿಭಾಗಗಳ ಖಾಸಗಿ ಬ್ಯಾಂಕುಗಳಾಗಿ. ಆದ್ದರಿಂದ ಬ್ಯಾಂಕುಗಳ ರಾಷ್ಟ್ರೀಕರಣ ಬೇರೆಡೆಗಳಲ್ಲಿ ಜನ ಸಾಮಾನ್ಯರಿಗೆ ಒಂದು ಆಧುನಿಕ ವ್ಯವಹಾರಗಳ ಅನುಕೂಲಕರ ಸಾಧನವಾದರೆ ಇಲ್ಲಿ ಅದೇ ಇಲ್ಲಿಯ ಮೇಲ್ ಸ್ತರಗಳಿಗೆ ಬಹು ದೊಡ್ಡ ನಷ್ಟವೆಂಬ ಭಾವನೆ. ಈ ಸಮುದಾಯಗಳ ಸಾಮಾನ್ಯರಿಗೆ ಉದ್ಯೋಗಾವಕಾಶಗಳು ಮತ್ತು ಬಂಡವಾಳಶಾಹಿಗಳಿಗೆ ಸುಲಭ ಲಭ್ಯ ಬಂಡವಾಳದ ನಷ್ಟ. ಇಲ್ಲಿಯ ಬಂಡವಾಳಶಾಹಿ ಕುಟುಂಬಗಳಿಗೆ ಅದರಲ್ಲಿಯೂ ವಿವಿಧ ಉದ್ಯಮಗಳ ಒಡೆಯರಾದ ಪೈ ಕುಟುಂಬಕ್ಕೆ ಬಹು ದೊಡ್ಡ ನಷ್ಟ.

ಭೂಸುಧಾರಣೆಗಳ ಪರಿಣಾಮಗಳು

ಇಲ್ಲಿ ಬಹು ವ್ಯಾಪಕ ಪರಿಣಾಮ ಬೀರಿದ ಭೂಸುಧಾರಣೆಗಳು ಕೂಡ ಕರ್ನಾಟಕದ ಬೇರೆಡೆಯಲ್ಲಿ ಬೀರಿದ ಪರಿಣಾಮಕ್ಕಿಂತ ಬಹಳ ಭಿನ್ನ. ಭೂಸುಧಾರಣಾ ಕಾನೂನುಗಳ ಮಾತು ಆರಂಭವಾಗುವ

ವೇಳೆಗೆ ದಕ್ಷಿಣ ಕರ್ನಾಟಕದಲ್ಲಿ ಬಹು ಮಟ್ಟಿಗೆ ಗೇಣಿ ನೀಡುವಂತಹ ಭೂ ಮಾಲಕ ಧಣಿಗಳ ಭೂಮಿ ರೈತರದಾಗಿಬಿಟ್ಟಿತ್ತು. ಹೈದರಾಬಾದ್ ಕರ್ನಾಟಕವೂ ಸೇರಿದಂತೆ ಉತ್ತರ ಕರ್ನಾಟಕದಲ್ಲಿ 1946 ರಲ್ಲಿ ತೆಲಂಗಾಣ ರೈತ ಹೋರಾಟದ ಪ್ರಭಾವ ಮತ್ತು ಅದರ ಪರಿಣಾಮವಾಗಿ ವಿವಿಧ ಪ್ರಾಂತ್ಯಗಳು 1948ರಿಂದ ಜಾರಿಗೆ ತಂದ ಗೇಣಿ ನಿಯಂತ್ರಣ ಕಾನೂನುಗಳು ಗೇಣಿದಾರರನ್ನು ಲಕ್ಷಗಟ್ಟಲೆ ಒಕ್ಕಲೆಬ್ಬಿಸುವುದರಲ್ಲಿ ಪರ್ಯವಸಾನವಾಗಿದ್ದುವು. ಇದರಿಂದಾಗಿ 1974ರ ಭೂಸುಧಾರಣಾ ಕಾನೂನಿನ ವೇಳೆಗೆ ಭೂಮಿಯೆಲ್ಲಾ ಪ್ರಬಲರಾಗಿದ್ದ ಭೂ ಒಡೆಯರ ಕೈಗೆ ಸೇರಿದ್ದವು. ಕೆಲವರ ಬಳಿ ಐದು ನೂರರಿಂದ ಸಾವಿರಾರು ಎಕರೆಯವರೆಗೆ ಭೂಮಿ. ಹಳ್ಳಿಗಳಲ್ಲಿ ಶೇ. 80 ರಿಂದ 95 ರವರೆಗೆ ಇದ್ದ ಗೇಣಿದಾರರಲ್ಲಿ ಬಹಳಷ್ಟು ಕೃಷಿ ಕೂಲಿಕಾರರಾಗಿದ್ದರು. ಹೀಗೆ ಈ ಪ್ರದೇಶದ ಹಳ್ಳಿಗಳಲ್ಲಿ ಶೇ. 40 ರಿಂದ 55 ರವರೆಗೂ ಕೂಲಿಕಾರರು. ಆದ್ದರಿಂದ ಅಲ್ಲಿಯ ಆಳುವ ವರ್ಗಕ್ಕೆ ಹೆಚ್ಚಿನ ಹಾನಿಯೇನೂ ಅಗಲಿಲ್ಲ. ಆದರೆ ಕರಾವಳಿಯ ಮೂರೂ ಜಿಲ್ಲೆಗಳಲ್ಲಿ ಇದ್ದ ಮೂಲಗೇಣಿ ಮತ್ತು ಚಾಲಗೇಣಿ ಎಂಬ ಗೇಣಿ ಪದ್ಧತಿಯ ವಿಧಾನವೇ ಬೇರೆ. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರೂ ಕೂಡ ಗೇಣಿಗೆ ನೀಡುವ ಪದ್ಧತಿಯೂ, ಮಲಬಾರ್ ಮತ್ತು ಮಂಗಳೂರು ವಿಭಾಗದಲ್ಲಿ ಬೆಳೆದ ರೈತ ಚಳುವಳಿಯ ಪರಿಣಾಮವಾಗಿ ಲಿಖಿತ ದಾಖಲೆಗಳನ್ನು ಹೊಂದಿದ್ದ ಗೇಣಿದಾರರು ಹೆಚ್ಚು.


ಈ ರೀತಿಯ ಹಿಡುವಳಿದಾರರಲ್ಲಿ ದೊಡ್ಡ ಭಾಗ ಬ್ರಾಹ್ಮಣ ರೈತರು ಎಂಬುದೂ ಕೂಡ ಕರ್ನಾಟಕದಲ್ಲಿಯೇ ಬೇರೆಡೆಗಳಲ್ಲಿ ಕಾಣದ ಪದ್ಧತಿ. ಗೇಣಿಗೆ ಭೂಮಿ ನೀಡಿರುವ ಈ ಬ್ರಾಹ್ಮಣ ಸಣ್ಣ, ಮಧ್ಯಮ ರೈತರಲ್ಲಿ ಗಣನೀಯ ಭಾಗ ವಿಧವೆಯರು ಮತ್ತು ಮಕ್ಕಳು. ಕರ್ನಾಟಕದ ಬೇರೆಡೆಗಳಲ್ಲಿ ಬ್ರಾಹ್ಮಣ ಭೂ ಒಡೆಯರೆಂದರೆ ಹೆಚ್ಚು ಭೂಮಿ ಹೊಂದಿದ್ದ ದೇಸಾಯಿಗಳು, ದೇಶಪಾಂಡೆಗಳು, ಜೋಡಿದಾರರು. ಸಣ್ಣ ಹಿಡುವಳಿದಾರರು ಬಹಳ ಕಡಿಮೆ. ಸ್ವತಃ ರೈತರಾಗಿದ್ದವರಂತೂ ಇಲ್ಲವೇ ಇಲ್ಲ. ಆದರೆ ಕರಾವಳಿಯ ಭತ್ತದ ಬೆಳೆಗಾರರಲ್ಲಿ ಬ್ರಾಹ್ಮಣರೇ ಹೆಚ್ಚು. ಈ ಎಲ್ಲ ಅಂಶಗಳ ಕಾರಣವಾಗಿ ಈ ಮೂರು ಜಿಲ್ಲೆಗಳಲ್ಲಿ ಇಡೀ ರಾಜ್ಯದಲ್ಲಿಯೆ ಅತಿ ಹೆಚ್ಚು ಗೇಣಿದಾರರು ಫಾರಂ 7ರಲ್ಲಿ ಹೊಲದೊಡೆಯರಾಗಲು ಅರ್ಜಿ ಸಲ್ಲಿಸಿದರು. ಅತಿ ಹೆಚ್ಚು ಗೇಣಿದಾರರು ಭೂಮಿ ಪಡೆದುಕೊಂಡರು. ಈ ಭೂಮಿ ಕಳೆದುಕೊಂಡವರಲ್ಲಿ ಸಣ್ಣ, ಮಧ್ಯಮ ರೈತರು ಹೆಚ್ಚು. ಈ ಎಲ್ಲ ಅಂಶಗಳಿಂದಾಗಿ ಕೇವಲ ಸಣ್ಣ ಸಂಖ್ಯೆಯ ಭೂ ಒಡೆಯರು ಮತ್ತು ಬಂಡವಾಳಶಾಹಿಗಳು ಮಾತ್ರವೆ ಅಲ್ಲದೆ ಸಣ್ಣ ರೈತರು, ಮಹಿಳೆಯರು ಮತ್ತು ಬ್ಯಾಂಕ್ ಉದ್ಯೋಗ ಕಳೆದುಕೊಂಡೆವೆಂಬ ಭಾವನೆಗೆ ಒಳಗಾದ ಮಧ್ಯಮ ವರ್ಗದವರು ಕೂಡ ಅಂದು ಆಳುತ್ತಿದ್ದ ಪಕ್ಷದ ನೀತಿಗಳಿಂದ ತೀವ್ರ ಅತೃಪ್ತಿಗೊಳಗಾದರು. ಇದು ನಮ್ಮ ರಾಜ್ಯದಲ್ಲಿ ಜಾರಿಗೆ ಬಂದ ಭೂಸುಧಾರಣಾ ಕಾನೂನು ಸಣ್ಣ ಮತ್ತು ಮಧ್ಯಮ ರೈತರಿಗಾದ ಅನ್ಯಾಯದ ಫಲ. ಇವರುಗಳು ಯಾವುದೇ ಪ್ರಗತಿಪರ ಚಿಂತನೆಗೂ ವಿಮುಖರಾದರು. ಕೋಮುವಾದಿಗಳು ಈ ಎಲ್ಲ ನೀತಿಗಳ ವಿರುದ್ಧ ನಡೆಸಿದ ಪ್ರಚಾರಕ್ಕೆ ಇವರುಗಳು ಸುಲಭ ತುತ್ತಾದರು.

ಭೂ ಸುಧಾರಣೆಗಳು ಈ ಜಿಲ್ಲೆಗಳಲ್ಲಿ ಅಷ್ಟು ವೇಳೆಗಾಗಲೇ ಹೆಚ್ಚಿದ್ದ ವಿದ್ಯಾ ಕಾತರತೆಯ ಜೊತೆಗೆ ವಿದ್ಯೆಯನ್ನು ಪಡೆಯುವ ಸಾಧ್ಯತೆಯನ್ನು ಮತ್ತಷ್ಟು ಹೆಚ್ಚಿಸಿದವು. ಸಾಕ್ಷರತೆ ಶೇ 80 ಅನ್ನು ಮೀರಿತು. ಇದು ಉದ್ಯೋಗಾಕಾಂಕ್ಷಿ ಯುವಜನರ ಸಂಖ್ಯೆಯನ್ನು ಕರ್ನಾಟಕದ ಬೇರೆಡೆಗಳಿಗಿಂತ ವಿಪರೀತ ಹೆಚ್ಚಿಸಿತು. ಆದರೆ ಕರಾವಳಿ ಪ್ರದೇಶದ ಪರಿಸರದ ಮಿತಿಗಳಿಂದಾಗಿ ಬೆಂಗಳೂರು, ಬೆಳಗಾಂ, ಹುಬ್ಬಳ್ಳಿಗಳಂತಹ ಉದ್ದಿಮೆ ಕೇಂದ್ರಗಳು ಬೆಳೆಯಲು ತೊಡಕಾಯಿತು. ಇಡೀ ದೇಶದಲ್ಲಿ ವ್ಯಾಪಕವಾಗಿರುವ ನಿರುದ್ಯೋಗ ಇಲ್ಲಿ ಮತ್ತಷ್ಟು ಪ್ರಖರವಾಯಿತು. ಅದೇ ಸಮಯದಲ್ಲಿ ಪೆಟ್ರೋಲ್ ಬೆಲೆಗಳ ವಿಪರೀತ ಏರಿಕೆಯಾದ ಎಪ್ಪತ್ತರ ದಶಕದ ನಂತರ ಅರಬ್ ದೇಶಗಳಲ್ಲಿ ಉದ್ಯೋಗದ ಅವಕಾಶಗಳು ತೆರೆದವು. ಅಲ್ಲಿಗೆ ಕರಾವಳಿಯ ಬಹಳಷ್ಟು ಯುವಜನರು ಸಾಗಿದರು. ಈ ದೇಶಗಳು ಮುಸ್ಲಿಂ ಬಹು ಸಂಖ್ಯಾಕರ ಪಾಳೆಯಗಾರಿ ಪ್ರಭುತ್ವಗಳು. ಇದು ಮುಸ್ಲಿಂ ಯುವಕರಿಗೆ ಹೆಚ್ಚು ಅನುಕೂಲಕರವಾದರೆ ಇತರ ಯುವಜನರಿಗೆ ಅವಕಾಶಗಳು ದೊರೆತರೂ ಕೂಡ ತಾರತಮ್ಯ. ಅಲ್ಲಿಂದ ಬರುವ ಹಣದಿಂದ ಅವರ ಕುಟುಂಬಗಳ ಹೆಚ್ಚಿದ ಶ್ರೀಮಂತಿಕೆ ಕಣ್ಣಿಗೆ ಹೊಡೆಯುತ್ತಿತ್ತು. ಮತ್ತೊಂದು ಕಡೆ ಕ್ರಿಶ್ಚಿಯನ್ನರಿಗೆ ಒಳ್ಳೆಯ ಇಂಗ್ಲಿಷ್ ವಿದ್ಯಾಭ್ಯಾಸ. ಅದರಿಂದಾಗಿ ವಿಶ್ವದ ಮುಂದುವರೆದ ರಾಷ್ಟ್ರಗಳಲ್ಲಿ ಉದ್ಯೋಗಾವಕಾಶಗಳು. ಹೀಗೆ ಎರಡು ಅಲ್ಪ ಸಂಖ್ಯಾತ ಸಮುದಾಯಗಳ ಯುವಕರಿಗೆ ಹೆಚ್ಚು ಉದ್ಯೋಗಾವಕಾಶ ಉಳಿದವರಿಗೆ ಕೊರತೆ. ಇದು ತಮ್ಮ ದೇಶದ ಆಳುವ ಪ್ರಭುಗಳ ವಿರುದ್ಧ ಅತೃಪ್ತಿಯಾಗುವ ಬದಲಾಗಿ ಈ ಸಮುದಾಯಗಳ ವಿರುದ್ಧ ಬಳಸಿಕೊಳ್ಳಲು ಕೋಮುವಾದಿಗಳು ಭಜರಂಗ ದಳದಂತಹ ಹಲವು ಸಂಘಟನೆಗಳನ್ನು ಬೆಳಸಿದರು.

ಕರಾವಳಿ ಪ್ರದೇಶಕ್ಕೆ ಮುಂಬಯಿಯೊಂದಿಗೆ ಸ್ವಾತಂತ್ರ್ಯ ಪೂರ್ವದಿಂದಲೂ ಇರುವ ಸಂಬಂಧ ಮತ್ತು ನಗರದಲ್ಲಿ ಬೆಳೆದ ಕೋಮುವಾದವು ಕೂಡ ಪ್ರಭಾವ ಬೀರಿದೆ.

ಈ ದೇಶಗಳ ಮೂಲಕ ಸಾಮ್ರಾಜ್ಯಶಾಹಿಗಳು ಅತ್ಯಂತ ಮೂಲಭೂತವಾದಿ ಮುಸ್ಲಿಂ ಪಂಥಗಳ ಪ್ರಚಾರ, ಮಸೀದಿಗಳ ನಿರ್ಮಾಣಕ್ಕೆ ಹಣ ಇತ್ಯಾದಿಗಳ ಮೂಲಕ ಮುಸ್ಲಿಂ ಕೋಮುವಾದದ ಬೆಳವಣಿಗೆಗೆ ಸಹಾಯ ಮಾಡತೊಡಗಿದರು. ಮುಂಬಯಿಗೆ ಹೋದ ಜನರಿಂದ ಪಾರಂಪರಿಕ ಭೂತಾರಾಧನೆಗಳ ಬ್ರಾಹ್ಮಣೀಕರಣ ಇವೆಲ್ಲವೂ ಒಂದಕ್ಕೊಂದು ವಿರುದ್ಧವಾಗಿ ಈ ಪ್ರದೇಶದಲ್ಲಿ ಕೋಮುವಾದವನ್ನು ಬೆಳೆಸಲು ಕಾರಣವಾಗಿದೆ.

ಒಂದು ಪ್ರದೇಶದಲ್ಲಿ ಕೋಮುವಾದ ನೆಲೆಯೂರುವುದೆಂದರೆ ಸಮಾಜದ ವಿವಿಧ ಸ್ತರಗಳು ವಿಭಾಗಗಳು ಮತ್ತು ವರ್ಗಗಳಲ್ಲಿ ಗಣನೀಯವಾಗಿ ಅದನ್ನು ನೆಚ್ಚಿದ್ದಾರೆಂದು ಅರ್ಥ . ಈ ಪ್ರದೇಶದಲ್ಲಿ ಒಂದು ಕಡೆ ಆಳುವ ವರ್ಗ ಮತ್ತೊಂದು ಕಡೆ ದುಡಿವ ಜನ ಸಮೂಹ ಬೇರೆ ಬೇರೆ ಕಾರಣಗಳಿಗಾಗಿ ಕೋಮುವಾದದ ಕಡೆಗೆ ಆಕರ್ಷಿತರಾಗಿದ್ದಾರೆ. ಇದು ಮುಖ್ಯವಾದ ಎರಡೂ ಧರ್ಮಗಳ ಹಿಂಬಾಲಕರಲ್ಲಿಯೂ ಸಂಭವಿಸಿದೆ.



ಕೆಳವರ್ಗದ ಜನರ ಮೇಲೆ ಯಜಮಾನಿಕೆ ಹೇರಲು ಮೇಲ್‌ವರ್ಗದ ಜನರು ಕಂಡುಕೊಂಡ ಸುಲಭ ದಾರಿಯೆಂದರೆ 'ಸ್ವ' ಮತ್ತು 'ಅನ್ಯ'ವನ್ನು ಕಟ್ಟಿಕೊಳ್ಳುವುದು. ಹಿಂದೆ ಜಾತಿ ನೆಲೆಯಲ್ಲಿ ಸ್ಥಳೀಯ ಕೆಳಜಾತಿಗಳು 'ಅನ್ಯ'ದ ಸ್ಥಾನದಲ್ಲಿದ್ದವು. ಈಗ 'ಅನ್ಯ'ರ ಸ್ಥಾನದಲ್ಲಿ ಬೇರೊಂದು ಧರ್ಮದ (ಮುಸ್ಲಿಮರು/ಕ್ರಿಶ್ಚಿಯನ್ನರನ್ನು) ಜನರನ್ನು ಕೂರಿಸಲಾಗಿದೆ, ಅವರನ್ನು ಖಳನಾಯಕರನ್ನಾಗಿ ಚಿತ್ರಿಸಿ ನಮ್ಮಲ್ಲಿಯ ಕುಂದು ಕೊರತೆಗಳಿಗೆ ಈ ಖಳನಾಯಕರೇ ಕಾರಣ ಎಂದು ಕೋಮುವಾದ ಹೇಳುತ್ತದೆ ಮತ್ತು ಈ ಕೋಮುವಾದ ಕಟ್ಟಿಕೊಡುವ ಚಿತ್ರಣವನ್ನು ನಂಬುವಂತೆ ಮಾಡಲು ಹಲವು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ.

ಕರಾವಳಿ ಕರ್ನಾಟಕದ ಕೋಮುವಾದ



- ಪ್ರೊ. ಎಂ. ಚಂದ್ರ ಪೂಜಾರಿ

ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೋಮುವಾದ ಬಲಗೊಳ್ಳಬೇಕಾದರೆ ಒಂದು ಕೋಮಿಗೆ ಸೇರಿದವರು ನಾವೆಲ್ಲ ಒಂದೇ ಎನ್ನುವ ಭಾವನೆ ಸದಾ ಜಾಗೃತವಿರಬೇಕು. ಕೋಮು ಭಾವನೆಯನ್ನು ಸದಾ ಎಚ್ಚರ ಇಡಬೇಕಾದರೆ ದಿನನಿತ್ಯದ ಬದುಕಿನಲ್ಲಿ ಅನುಭವಕ್ಕೆ ಬರುವ ಆರ್ಥಿಕ ಮತ್ತು ಸಾಮಾಜಿಕ ಏಣಿಶ್ರೇಣಿಗಳನ್ನು ಕಡೆಗಣಿಸಿ ವ್ಯವಹರಿಸುವ ಸ್ಥಿತಿ ನಿರ್ಮಾಣವಾಗಬೇಕು. ಸಾಮಾಜಿಕ/ಆರ್ಥಿಕ ಏಣಿಶ್ರೇಣಿಗಳನ್ನು ಕಡೆಗಣಿಸಿ ವ್ಯವಹರಿಸಬೇಕಾದರೆ ಸಾಮಾಜಿಕ ವಿಂಗಡನೆಗಳನ್ನು (ಹಿಂದೆ ಮೇಲ್ಜಾತಿ ಮತ್ತು ಕೆಳಜಾತಿ ಎನ್ನುವ ವಿಂಗಡನೆ ಈಗ ಹಿಂದೂ ಮತ್ತು ಮುಸ್ಲಿಂ ವಿಂಗಡನೆ) ಹಲವಾರು ಸಂಕೇತಗಳ, ಆಚರಣೆಗಳ, ಕಾರ್ಯಕ್ರಮಗಳ, ಮೌಲ್ಯಗಳ ಮೂಲಕ ಜನಸಾಮಾನ್ಯರ ಪ್ರಜ್ಞೆಯ ಭಾಗವಾಗಿಸಬೇಕಾಗುತ್ತದೆ.

ಕರಾವಳಿ ಕರ್ನಾಟಕದ ಕೋಮುವಾದದ ಬೆಳವಣಿಗೆ ಕೂಡ ಹೆಚ್ಚು ಕಡಿಮೆ ಇದೇ ಮಾರ್ಗವನ್ನು ಅನುಸರಿಸಿದೆ. ಆಂತರಿಕವಾಗಿ ವಿರೋಧಾಭಾಸಗಳಿಂದ ತುಂಬಿರುವ ಹಲವಾರು ಜಾತಿಗಳನ್ನು 'ನಾವೆಲ್ಲ ಒಂದೇ ಎನ್ನುವ ಅಖಂಡತೆಯೊಳಗೆ' ತುರುಕಿಸಲಾಗಿದೆ. ಇದಕ್ಕಾಗಿ ಅಖಂಡವಾದ 'ಅನ್ಯ'ವನ್ನು (ಮುಸ್ಲಿಮರನ್ನು) ಸೃಷ್ಟಿಸಲಾಗಿದೆ. ಅನ್ಯರನ್ನು ಅಖಂಡವಾಗಿ ಪರಿಗಣಿಸುವಾಗ 'ಸ್ವ'ದ ಕಲ್ಪನೆಯೂ ಅಖಂಡ (ಹಿಂದೂಗಳು ನಾವೆಲ್ಲ ಒಂದೇ) ಎನ್ನುವ ಸಂದೇಶ ರವಾನೆಯಾಗುತ್ತದೆ. ಅಷ್ಟು ಮಾತ್ರವಲ್ಲ ಕಲ್ಪಿತ ಅಖಂಡತೆಯನ್ನು ಜನ ಸಾಮಾನ್ಯರ ಪ್ರಜ್ಞೆಯ ಭಾಗವಾಗಿಸಲು ಹಲವಾರು ಸಂಕೇತಗಳ, ಆಚರಣೆಗಳ, ಮೌಲ್ಯಗಳ ಅನ್ವಯಿಕೆಯ ಪರಿಧಿಯನ್ನು ಹಿಗ್ಗಿಸಲಾಗುವುದು. ವೈದಿಕ ಗುಡಿಗೋಪುರಗಳಿಗೆ ಸೀಮಿತವಾಗಿದ್ದ 'ಓಂ' ಸಂಕೇತ ಇಂದು ಭೂತಸ್ಥಾನಗಳಲ್ಲೂ ರಾರಾಜಿಸುತ್ತಿದೆ. ಸಾಂಸ್ಕೃತಿಕರಣಗೊಂಡ ಕುಟುಂಬಗಳ ಕೌಟುಂಬಿಕ ಆಚರಣೆಯಾಗಿದ್ದ ಸತ್ಯನಾರಾಯಣ ಪೂಜೆ ಇಂದು ಸಾರ್ವಜನಿಕ ಆಚರಣೆಯಾಗಿದೆ. ಹಿಂದೆ ಶೇಂದಿ ಕುಡಿಯುವ, ಮೀನು, ಮಾಂಸ ತಿನ್ನುವುದರ ಬಗೆಗಿದ್ದ ಹೀನತಾ ಭಾವನೆಯನ್ನು ಇಂದು ದನದ ಮಾಂಸ ಮಾರಾಟ ಮತ್ತು ಬಳಕೆಗೆ ವರ್ಗಾಯಿಸಲಾಗಿದೆ. ಮೇಲಿನ ಸಂಕೇತಗಳು ಜತೆಗೆ ಹಿಂದುತ್ವದ ಶಾಖೆಗಳಲ್ಲಿ, ಸತ್ಯನಾರಾಯಣ ಪೂಜೆಗಳಲ್ಲಿ, ಹಿಂದುತ್ವಕ್ಕೆ ಸಂಬಂಧಿಸಿದ ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗೆ ತಮ್ಮ ಆರ್ಥಿಕ ಏಣಿಶ್ರೇಣಿಗಳು ಸೃಷ್ಟಿಸುವ ಭಿನ್ನತೆಗಳು ತಾತ್ಕಾಲಿಕವಾಗಿ ಮರೆಯಾಗಿ ಹಿಂದುಗಳು ನಾವೆಲ್ಲ ಒಂದೇ ಎನ್ನುವ ಭಾವನೆ ಜಾಗ್ರತೆಗೊಳ್ಳುವುದು.

ಆರ್ಥಿಕ ಏಣಿಶ್ರೇಣಿಗಳನ್ನು ಅಲ್ಲಗಳೆಯಲು ಸಾಂಪ್ರದಾಯಿಕ ಗುರುತನ್ನು (ಧರ್ಮವನ್ನು) ಬಳಸುವುದರಿಂದ ಸಹಜವಾಗಿಯೇ ಆ ಸಾಂಪ್ರದಾಯಿಕ ಗುರುತಿನೊಂದಿಗೆ ಸಂಬಂಧ ಹೊಂದಿರುವ ಇತರ ಗುರುತುಗಳು (ಮುಖ್ಯವಾಗಿ ಜಾತಿ) ಕೂಡ ಬಲಗೊಳ್ಳುತ್ತವೆ. ಮೇಲ್ನೋಟಕ್ಕೆ ನಾವೆಲ್ಲ ಒಂದೇ ಎನ್ನುವ ಸಂದರ್ಭದಲ್ಲಿಯೇ ಆಳದಲ್ಲಿ ಜಾತಿಗಳ ನಡುವಿನ ಗೆರೆಗಳು ಇನ್ನೂ ಬಲಿಷ್ಠಗೊಳ್ಳುತ್ತಿವೆ. ಪಬ್ಲಿಕ್ ಡೊಮೈನ್‌ನಲ್ಲಿ ಇರುವವರು, ಸಾಮಾಜಿಕ ನಾಯಕತ್ವ, ಆರ್ಥಿಕ ನಾಯಕತ್ವ, ಸಾಂಸ್ಕೃತಿಕ ನಾಯಕತ್ವ, ಉನ್ನತ ಶಿಕ್ಷಣ, ಉನ್ನತ ಉದ್ಯೋಗಗಳು ಇತ್ಯಾದಿ ಸೂಚ್ಯಾಂಕಗಳ ಮೂಲಕ ಸಾಂಪ್ರದಾಯಿಕ ಏಣಿಶ್ರೇಣಿಗಳ ಜೀವಂತಿಕೆಯನ್ನು ಅರ್ಥಮಾಡಿಕೊಳ್ಳಬಹುದು. ಸ್ಥಳೀಯ ಸಾಂಪ್ರದಾಯಿಕ ಮೇಲ್ವರ್ಗ ಈಗಲೂ ಮೇಲಿನ ಎಲ್ಲ ಸೂಚ್ಯಂಕಗಳಲ್ಲೂ ಮುಂದಿದ್ದು ತಳಸ್ತರದ ಸಮುದಾಯಗಳು ಹಿಂದಿವೆ. ತಳಸ್ತರದ ಸಮುದಾಯಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದಾರಿತಪ್ಪುವುದರ ಜತೆಗೆ ಈ ಬಗೆಯ ಅಖಂಡತೆಯ ಸೃಷ್ಟಿ ಎರಡೂ ಸಮುದಾಯಗಳ ('ಅನ್ಯ' ಮತ್ತು 'ಸ್ವ'ಕ್ಕೆ ಸೇರಿದ) ತಳಸ್ತರದ ಜನರ ಬದುಕನ್ನು ಅಸಹನೀಯಗೊಳಿಸಬಹುದು. ಕೋಮುಗಲಭೆಯಂತಹ ಹಿಂಸಾತ್ಮಕವಾಗಿ ವ್ಯವಹರಿಸಲು ಜನರ ಮನಸ್ಸನ್ನು ಹದಗೊಳಿಸಲು ಸೃಷ್ಟಿಸುವ ಚಿಂತನೆಗಳ ಮತ್ತು ಆಚರಣೆಗಳ ಪ್ರಭಾವ ಒಂದು ಗಳಿಗೆ ಬಂದು ಹೋಗುವ ಸಂಗತಿಗಳಲ್ಲ. ಅದು ಜನ ಸಾಮಾನ್ಯರ ಬದುಕನ್ನು ನಿರಂತರವಾಗಿ ಕಾಡುವ ಸಂಗತಿಗಳಾಗುತ್ತವೆ. ಇವುಗಳಿಂದಾಗಿ ಎರಡೂ ಸಮುದಾಯಗಳ ತಳಸ್ತರದ ಜನರು ತಮ್ಮದೇ ಬೇರುಗಳ ಬಗ್ಗೆ (ಊಟ, ಪಾನೀಯ, ಕಸುಬು, ಭಾಷೆ, ಉಡುಗೆ ತೊಡುಗೆ ಇತ್ಯಾದಿಗಳ ಬಗ್ಗೆ) ಒಂದು ಬಗೆಯ ಕೀಳರಿಮೆಯನ್ನು ರೂಢಿಸಿಕೊಂಡು ಇಬ್ಬಂದಿತನದಿಂದ ಬದುಕಬೇಕಾದ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆನೂ ಇದೆ. ಇದಕ್ಕಿಂತಲೂ ಹೆಚ್ಚಾಗಿ ಮೇಲ್ವರ್ಗಗಳ ಅಧಿಕಾರದ ಹೋರಾಟಗಳಲ್ಲಿ

ಎರಡೂ ಸಮುದಾಯಗಳ ಯುವಕರು ಗನ್‌ಪೌಡರ್ ತರಹ ಬಳಕೆಯಾಗುತ್ತಾರೆ. ಇದರಿಂದಾಗಿ ಈ ಜನರು ಅನುಭವಿಸಬೇಕಾದ ಇಬ್ಬಂದಿತನ ಮತ್ತು ಖಾಯಂ ಆಗಿ ಮೇಲ್ವರ್ಗ ಸೃಷ್ಟಿಸಿದ ಟ್ರ್ಯಾಪ್ ಒಳಗೆ ಬಂಧಿಯಾಗುವುದರ ಚಿತ್ರವನ್ನು ಈ ಭಾಗದಲ್ಲಿ ನೋಡಬಹುದು.

ಐವತ್ತರ ದಶಕದಲ್ಲಿ ಆರಂಭವಾದ ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಡಿಪಾಯ ಹೊಂದಿರುವ ಅಭಿವೃದ್ಧಿ ಪ್ರಕ್ರಿಯೆಯನ್ನು ಜೀರ್ಣಿಸಿಕೊಳ್ಳಬೇಕಾದರೆ, ಒಂದೋ ಸಾಕಷ್ಟು ಬಂಡವಾಳದ ಒಡೆತನ ಬೇಕು; ಇಲ್ಲವೇ ಆಧುನಿಕ ತಂತ್ರಜ್ಞಾನವನ್ನು ಜೀರ್ಣಿಸಿಕೊಳ್ಳಬೇಕು. ತಳಸ್ತರದ ಸಮುದಾಯಗಳಿಗೆ ಬಂಡವಾಳದ ಒಡೆತನ ಇಲ್ಲ. ಜಿಲ್ಲೆಯ ಬಹುತೇಕ ತಾಂತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳು ಖಾಸಗಿ ಒಡೆತನದಲ್ಲಿದ್ದು ಕ್ಯಾಪಿಟೇಶನ್ ಕೊಡಲು ಶಕ್ತವಾಗಿದ್ದವರಿಗೆ ಮಾತ್ರ ಲಭ್ಯವಾಗಿತ್ತು. ಆದುದರಿಂದ ಆಧುನಿಕ ತಂತ್ರಜ್ಞಾನವನ್ನು ಜೀರ್ಣಿಸಿಕೊಳ್ಳಲು ತಳಸ್ತರದ ಸಮುದಾಯಗಳಿಗೆ ಸಾಧ್ಯವಾಗಿಲ್ಲ. ಇದರಿಂದಾಗಿ ಅವರು ತಮ್ಮ ಸಾಂಪ್ರದಾಯಿಕ ಕಸುಬುಗಳಿಗೆ ಅಂಟಿಕೊಳ್ಳುವುದು ಅನಿವಾರ್ಯವಾಯಿತು. ಕೆಲವೊಂದು ಸಾಂಪ್ರದಾಯಿಕ ಕಸುಬುಗಳು ಫ್ಯಾಕ್ಟರಿ ಉತ್ಪಾದನೆಯಿಂದ ಮೂಲೆಗುಂಪಾದರೆ (ಕುಂಬಾರಿಕೆ, ಕಮ್ಮಾರಿಕೆ ಇತ್ಯಾದಿಗಳು) ಇನ್ನು ಕೆಲವು ಸಾಂಪ್ರದಾಯಿಕ ಕಸುಬುಗಳು ಆಧುನಿಕ ತಂತ್ರಜ್ಞಾನದ ನಡುವೆಯೂ ಉಸಿರಾಡುತ್ತಿದ್ದವು. ಆದರೆ ಕೋಮುವಾದ, ಮುಖ್ಯವಾಗಿ ಕರಾವಳಿ ಕರ್ನಾಟಕದ ಕೋಮುವಾದಿ ಚಿಂತನೆಗಳು, ಆಚರಣೆಗಳು ತಳಸ್ತರದ ಜನರಿಗಿದ್ದ ಈ ಸಣ್ಣಪುಟ್ಟ ಜೀವನಾವಕಾಶವನ್ನು ಇಲ್ಲವಾಗಿಸಿವೆ. ಇದು ಹೇಗೆಂದು ಕರಾವಳಿ ಕರ್ನಾಟಕದ ಎರಡು ಸಮುದಾಯಗಳ (ಬಿಲ್ಲವರು ಮತ್ತು ಬೆಸ್ತರು) ಉದಾಹರಣೆಯೊಂದಿಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.


ದಕ್ಷಿಣ ಕನ್ನಡದ ಜನಸಂಖ್ಯೆಯಲ್ಲಿ ಶೇ. 19 ರಷ್ಟು ಬಿಲ್ಲವರು, ಶೇ. 4 ರಷ್ಟು ಬೆಸ್ತರಿದ್ದಾರೆ. ಕೃಷಿ, ವೈದ್ಯಕೀಯ, ಪೂಜಾರಿ ವೃತ್ತಿಗಳೊಂದಿಗೆ ಶೇಂದಿ ಇಳಿಸುವುದು ಬಿಲ್ಲವರ ಸಾಂಪ್ರದಾಯಿಕ ಕಸುಬು. ಅದೇ ರೀತಿಯಲ್ಲಿ ಕೃಷಿ, ವ್ಯಾಪಾರಗಳೊಂದಿಗೆ ಮೀನು ಹಿಡಿಯುವುದು ಬೆಸ್ತರ ಸಾಂಪ್ರದಾಯಿಕ ಕಸುಬು. ಸಾಂಪ್ರದಾಯಿಕ ಸಮಾಜ ಈ ಎರಡೂ ಕಸುಬುಗಳನ್ನು ಗೌರವಾನ್ವಿತ ಕಸುಬುಗಳೆಂದು ಪರಿಗಣಿಸಿಲ್ಲ ಎನ್ನುವುದು ಹಿಂದಿನ ಪುಟಗಳಲ್ಲಿ ನೋಡಿದ್ದೇವೆ. ಕಸುಬಿನ ಕಾರಣಕ್ಕಾಗಿ ಎರಡೂ ಸಮುದಾಯಗಳು ಹಲವಾರು ಬಗೆಯ ಬಹಿಷ್ಕಾರಗಳನ್ನು ಸಾಂಪ್ರದಾಯಿಕ ಸಮಾಜದಲ್ಲಿ ಅನುಭವಿಸಬೇಕಿತ್ತು.[1] ಸ್ಥಳೀಯ ಮೇಲ್ಜಾತಿಗಳು ಆರಂಭಿಸಿದ ಮೆಡಿಕಲ್, ಎಂಜಿನೀಯರಿಂಗ್ ಇತ್ಯಾದಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕ್ಯಾಪಿಟೇಶನ್‌ನಿಂದಾಗಿ ಜಿಲ್ಲೆಯ ಕೆಳವರ್ಗ ಅವಕಾಶ ಪಡೆದಿಲ್ಲ.[2] ಸುಮಾರು ಎಪ್ಪತ್ತರ ದಶಕದವರೆಗೆ ಹಲವಾರು ಕಾರಣಗಳಿಂದಾಗಿ ಬಿಎ. ಬಿಕಾಂಗಳಂತ ಸಾಮಾನ್ಯ ಡಿಗ್ರಿ ಕೂಡ ತಳಸಮುದಾಯಗಳಿಗೆ ಎಟುಕುವಂತಿರಲಿಲ್ಲ. ಹೀಗೆ ಶಿಕ್ಷಣದ ಮೂಲಕ ಆಧುನಿಕ ತಂತ್ರಜ್ಞಾನ ಪಡೆಯುವ ಸಾಧ್ಯತೆಯಿಂದ ತಳಸಮುದಾಯಗಳು ವಂಚಿತವಾದುವು.

ಎರಡನೇ ಸಾಧ್ಯತೆ ಬಂಡವಾಳ ವಿನಿಯೋಜಿಸಿ ಆಧುನಿಕ ತಂತ್ರಜ್ಞಾನಗಳನ್ನು ಖರೀದಿಸುವುದು. ಇದಕ್ಕೆ ಸಾಕಷ್ಟು ಬಂಡವಾಳದ ಒಡೆತನ ಬೇಕು. ಎರಡು ಮೂಲಗಳಿಂದ ಬಂಡವಾಳ ಶೇಖರಣ ಸಾಧ್ಯವಾಗಿತ್ತು. ಒಂದು, ವ್ಯಾಪಾರ ಮತ್ತೊಂದು ದೊಡ್ಡ ಪ್ರಮಾಣದ ಕೃಷಿ. ಆಧುನೀಕರಣದ ಆರಂಭದ ದಿನಗಳಲ್ಲಿ ವ್ಯಾಪಾರ ಮಾತ್ರ ಬಂಡವಾಳ ಶೇಖರಣೆಯ ಮುಖ್ಯ ಮೂಲ. ನಂತರದ ದಿನಗಳಲ್ಲಿ ಅದರಲ್ಲೂ ವಾಣಿಜ್ಯ ಬೆಳೆಗಳು ಪ್ರಾಮುಖ್ಯತೆ ಪಡೆಯುವುದರೊಂದಿಗೆ ದೊಡ್ಡ ಕೃಷಿಕರು ಕೂಡ ಬಂಡವಾಳ ಶೇಖರಣೆ ಮಾಡಿ ಆಧುನಿಕ ತಂತ್ರಜ್ಞಾನಗಳ ಮಾಲಿಕರಾಗಲು ಸಾಧ್ಯವಾಯಿತು.[3] ಈ ಎರಡು ಮೂಲಗಳಿಲ್ಲದ ತಳಸಮುದಾಯಕ್ಕೆ ತಮ್ಮ ಸಾಂಪ್ರದಾಯಿಕ ಕಸುಬುಗಳೇ ಜೀವನಾಧಾರ.

ಆದರೆ ಕೋಮುವಾದದ ಆಳದಲ್ಲಿ ಜೀವಂತವಾಗಿದ್ದ ಸಾಂಪ್ರದಾಯಿಕ ಸಮಾಜದ ಕೆಲವೊಂದು ಮೌಲ್ಯಗಳು ತಳಸಮುದಾಯದ ಸಣ್ಣಪುಟ್ಟ ಜೀವನಾವಕಾಶವನ್ನು ಕಿತ್ತುಕೊಳ್ಳುತ್ತಿವೆ. ಕೆಲವೊಂದು ಉದಾಹರಣೆಯ ಮೂಲಕ ಇದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ.

ಬಿಲ್ಲವ ಸಮುದಾಯಕ್ಕೆ ಸೇರಿದ ಪ್ರಮುಖ ನಾಯಕರೊಬ್ಬರು ತಮ್ಮ ಸಾಂಪ್ರದಾಯಿಕ ಕಸುಬಿನ ಬಗ್ಗೆ ಹೊಂದಿರುವ ಅಭಿಪ್ರಾಯ ಇಂತಿದೆ. ಅವರು ಶಿಕ್ಷಣ ಮುಗಿಸಿ ಕೆಲಸಕ್ಕೆ ಹೋಗುವ ಬದಲು ವ್ಯಾಪಾರ ಆರಂಭಿಸಬೇಕೆಂದು ತಿರ್ಮಾನಿಸಿದರು. ವ್ಯಾಪಾರ ಮಾಡುವ ಆಲೋಚನೆಯನ್ನು ತಮ್ಮ ತಂದೆಯೊಂದಿಗೆ ಹಂಚಿಕೊಂಡರು. ಅವರ ತಂದೆ, 'ನೀನು ಏನು ವ್ಯಾಪಾರ ಮಾಡಿದರೂ ನನ್ನ ಅಭ್ಯಂತರವೇನಿಲ್ಲ. ಆದರೆ ಸಾರಾಯಿ ಶೇಂದಿ ವ್ಯಾಪಾರ ಮಾಡಿ ನೂರಾರು ಸಂಸಾರಗಳನ್ನು ಹಾಳುಮಾಡಬೇಡ' ಎಂದು ಹೇಳಿದರಂತೆ. ಅದರಂತೆ ಅವರು ಬೇರೆ ವ್ಯಾಪಾರ ಮಾಡಿದರು. ಬಿಲ್ಲವ ಸಂಘಗಳ ಬಹುತೇಕ ಸಭೆಗಳಲ್ಲಿ ಬಿಲ್ಲವ ನಾಯಕರು ಶೇಂದಿ ತೆಗೆಯುವ ಕಸುಬಿನಿಂದ ಆದಷ್ಟು ಬೇಗ ಬಿಲ್ಲವರು ಕಳಚಿಕೊಳ್ಳಬೇಕೆನ್ನುವ ಸಲಹೆ ನೀಡುತ್ತಿದ್ದರು. ತಮ್ಮ ಸಾಂಪ್ರಾದಾಯಿಕ ಕಸುಬಿನೊಂದಿಗೆ ಗುರುತಿಸಿಕೊಳ್ಳುವುದು ಬಿಲ್ಲವರಿಗೆ ಕೀಳರಿಮೆಯಾಗಿದೆ. ಅದೇ ರೀತಿಯಲ್ಲಿ ಬೆಸ್ತರಿಗೆ ತಮ್ಮ ಸಾಂಪ್ರದಾಯಿಕ ಕಸುಬಿನೊಂದಿಗೆ ಗುರುತಿಸಿಕೊಳ್ಳುವುದು ಸಮಸ್ಯೆಯಾಗಿದೆ. ಹಾಗೆಂದು ಮೀನು ತಿನ್ನುವವರು ಮತ್ತು ಶೇಂದಿ ಅಥವಾ ಇತರ ಪಾನೀಯಗಳನ್ನು ಕುಡಿಯುವವರ ಸಂಖ್ಯೆ ಕಡಿಮೆಯಾಗಿಲ್ಲ; ಜಾಸ್ತಿಯಾಗಿದೆ. ಕೆಲವು ನೂರು ಮೀಟರಿಗೊಂದು ಬಾರ್ ಮತ್ತು ಮೀನಿನ ಊಟದ ಹೋಟೇಲುಗಳಿವೆ. ಬಾರ್‌ನಲ್ಲಿ ಬೀರ್, ಬ್ರಾಂಡಿ, ವಿಸ್ಕಿಗಳು ದೊರೆಯುತ್ತವೆ. ಇವುಗಳು ಶೇಂದಿಗೆ ಹೋಲಿಸಿದರೆ ಹೆಚ್ಚು ಅಮಲು ಪಾನೀಯ ಮತ್ತು ಆರೋಗ್ಯಕ್ಕೆ ಹಾನಿಕಾರಕ. ಬಾರ್ ಒಂದನ್ನು ಆರಂಭಿಸಲು ಕೆಲವು ಲಕ್ಷ ರೂಪಾಯಿಗಳು ಬೇಕು. ಜತೆಗೆ ಬಾರ್ ಮಾಲಿಕ ಶೇಂದಿ ವ್ಯಾಪಾರಿಯ ನಿಕೃಷ್ಟತೆಯನ್ನು ಸಮಾಜದಲ್ಲಿ ಎದುರಿಸಬೇಕಾಗಿಲ್ಲ. ಆದರೆ ಕೆಲವೇ ಕೆಲವು ನೂರು ರೂಪಾಯಿಗಳ ವಿನಿಯೋಜನೆಯಲ್ಲಿ ಮಾಡಬಹುದಾದ ಕುಲಕಸುಬನ್ನು ಮಾಡಲಾರದ ಸ್ಥಿತಿಯಲ್ಲಿ ಸ್ಥಳೀಯ ಬಿಲ್ಲವರ ಯುವಕರಿದ್ದಾರೆ.[4] ಇದೆಂತಹ ವಿಪರ್ಯಾಸ ಮತ್ತು ಎಂತಹ ಶಾಪಗ್ರಸ್ತ ಸಮಾಜ. ಸಾವಿರಾರು ಕುಟುಂಬಗಳಿಗೆ ಏನೇನೂ ಬಂಡವಾಳದ ವಿನಿಯೋಜನೆ ಇಲ್ಲದೆ ಬದುಕನ್ನು ನೀಡುತ್ತಿದ್ದ ಒಂದು ಕಸುಬನ್ನು ಕನಿಷ್ಠವಾಗಿ ಕಂಡ ಸಮಾಜ ಅದೇ ಬಗೆಯ ಅಥವಾ ಅದಕ್ಕಿಂತಲೂ ಹೆಚ್ಚು ಅಪಾಯಕಾರಿ ಮತ್ತು ಕೇವಲ ಬಂಡವಾಳ ಇದ್ದವರು ಮಾತ್ರ ಮಾಡಬಹುದಾದ ಬಾರ್ ಸಂಸ್ಕೃತಿಯನ್ನು ಚಕಾರವೆತ್ತದೆ ಸಹಿಸಿಕೊಂಡಿದೆ.

ಬೆಸ್ತರ ಸ್ಥಿತಿ ಕೂಡ ಹೆಚ್ಚು ಕಡಿಮೆ ಇದೇ ರೀತಿ ಇದೆ. ಕೆಲವು ನೂರು ಅಥವಾ ಸಾವಿರ ರೂಪಾಯಿ ವಿನಿಯೋಜನೆ ಮಾಡಿ (ಬಲೆ ಮತ್ತು ಮರದ ಸಣ್ಣ ಬೋಟ್ ಖರೀದಿಗೆ) ಸಮುದ್ರದ ಭಯ ಇಲ್ಲದ ಯಾರು ಕೂಡ ಆರಂಭಿಸಬಹುದಾದ ಕಸುಬು ಮೀನುಗಾರಿಕೆ. ಪುರುಷರು ಹಿಡಿದು ತಂದ ಮೀನನ್ನು ಮಾರಲು ಬೆಸ್ತರ ಮಹಿಳೆಗೆ ಸಂತೆಯಲ್ಲಿ ಕುಳಿತುಕೊಳ್ಳಲು ಒಂದು ಸಣ್ಣ ಸ್ಥಳವಿದ್ದರೆ ಸಾಕು. ಈ ಕಸುಬು ಕೂಡ ಸಾವಿರಾರು ಕುಟುಂಬಗಳಿಗೆ ಬದುಕನ್ನು ನೀಡಿದೆ. ನಮ್ಮ ಸಾಂಪ್ರದಾಯಿಕ



ಆಧುನಿಕ ಸಮಾಜದಲ್ಲಿ ಮಾನ ಕಸುಬಿನಿಂದಲ್ಲ ದುಡ್ಡಿನಿಂದ-ಬಾರ್ ಅಥವಾ ಮೆಕಾನೈಸ್ಡ್ ಬೋಟ್ ಆರಂಭಿಸಿದರೆ ಮಾನ ತನ್ನಿಂದ ತಾನೇ ಬರುತ್ತದೆ, ಆದರೆ ಅದಕ್ಕೆ ಬಂಡವಾಳವಿಲ್ಲದೆ, ಬೇರೆ ಉದ್ಯೋಗ ದೊರಕಿಸಬಹುದಾದ ಶಿಕ್ಷಣ ಇಲ್ಲದೆ ಊರಲ್ಲೇ ಉಳಿಯಬೇಕಾದ ಸಾವಿರಾರು ಯುವಕರಲ್ಲಿ ಒಂದು ಕಡೆಯಿಂದ ಹತಾಶೆ ಹೆಚ್ಚಿದರೆ ಮತ್ತೆ ಕೆಲವರಲ್ಲಿ ನಾವು ಕೂಡ ಸಾಧಿಸಬೇಕೆಂಬ ಛಲವನ್ನು ಸೃಷ್ಟಿಸುತ್ತದೆ. ಆದರೆ ಬಂಡವಾಳ ಮತ್ತು ತಂತ್ರಜ್ಞಾನ ಆಧಾರಿತ ಅಭಿವೃದ್ಧಿ ಮಾದರಿ ಈ ಯುವಕರಿಗೆ ಅವರು ಬಯಸುವ ಬದುಕಿನ ಅವಕಾಶ ನೀಡುತ್ತಿಲ್ಲ. ಹಾಗೆಂದು ತಮ್ಮ ಸಾಂಪ್ರದಾಯಿಕ ಕಸುಬನ್ನು ಮಾಡಲು ಮಾನ ಮರ್ಯಾದೆ ಅಡ್ಡ ಬರುತ್ತದೆ. ಇಂತಹ ಸ್ಥಿತಿ ಯುವಕರನ್ನು ಇನ್ನೂ ಹತಾಶರನ್ನಾಗಿಸುತ್ತದೆ. ಅವರುಗಳು ಸುಲಭದಲ್ಲಿ ಕೋಮುವಾದದ ವಿಷವರ್ತುಲದಲ್ಲಿ ಸಿಕ್ಕಿಕೊಳ್ಳುತ್ತಾರೆ.

ಸಮಾಜದ ಮೌಲ್ಯಗಳು ಈ ಕಸುಬನ್ನು ಕೂಡ ಅಸಹ್ಯವಾಗಿ ಕಂಡದ್ದು ನಿಜ. ಹಾಗಾಗಿ ಬೆಸ್ತರು ಕೂಡ ತಮ್ಮ ಸಾಂಪ್ರದಾಯಿಕ ಕಸುಬಲ್ಲಿ ಮುಂದುವರಿಯಲು ಇಷ್ಟಪಡುವುದಿಲ್ಲ. ಹಾಗೆಂದು ಮೀನುಗಾರಿಕೆ ನಿಂತಿಲ್ಲ. ಹಿಂದಿನ ಕೆಲವು ಸಾವಿರ ವಿನಿಯೋಜಿಸಿ ಶುರು ಮಾಡುವ ಮೀನುಗಾರಿಕೆಯ ಸ್ಥಳದಲ್ಲಿ ಲಕ್ಷಗಟ್ಟಲೆ ವಿನಿಯೋಜಿಸಿ ಮೆಕಾನೈಸ್ಡ್ ಬೋಟ್ ಮೂಲಕ ಮೀನು ಹಿಡಿಯುವುದು ನಡೆಯುತ್ತಿದೆ.[5] ಇಂತಹ ಸಂದರ್ಭದಲ್ಲಿ ಕಡಿಮೆ ಬಂಡವಾಳ ವಿನಿಯೋಜಿಸಿ ಆರಂಭಿಸಬಹುದಾದ ಅವರ ಸಾಂಪ್ರದಾಯಿಕ ಕಸುಬನ್ನು ಆರಂಭಿಸುವ ಸ್ಥಿತಿಯಲ್ಲಿ ಬೆಸ್ತರ ಯುವಕರಿಲ್ಲ. ಯಾಕೆಂದರೆ 'ನಮ್ಮ ಕಾಲಕ್ಕೆ ಇದು ಸಾಕು ಮಗನೇ, ನೀನು ಇದೇ ಕಸುಬು ಮಾಡಿ ಮಾನ ಕಳೆದುಕೊಳ್ಳಬೇಡ' ಎಂದು ಅವರ ಹಿರಿಯರೇ ಬುದ್ಧಿವಾದ ಹೇಳುತ್ತಿರುತ್ತಾರೆ.

ಆಧುನಿಕ ಸಮಾಜದಲ್ಲಿ ಮಾನ ಕಸುಬಿನಿಂದ ಬರುವುದಿಲ್ಲ ದುಡ್ಡಿನಿಂದ ಬರುವುದೆಂದು ಬಹುತೇಕ ಯುವಕರಿಗೆ ತಿಳಿದಿದೆ. ಬಾರ್ ಅಥವಾ ಮೆಕಾನೈಸ್ಡ್ ಬೋಟ್ ಆರಂಭಿಸಿದರೆ ಮಾನ ತನ್ನಿಂದ ತಾನೇ ಬರುತ್ತದೆಂದು ಅವರಿಗೂ ತಿಳಿದಿದೆ. ಆದರೆ ಬಾರ್ ಅಥವಾ ಮೆಕಾನೈಸ್ಡ್ ಬೋಟ್ ಆರಂಭಿಸಲು ಬಂಡವಾಳ ಎಲ್ಲಿದೆ? ಈ ಬಗೆಯಲ್ಲಿ ಉದ್ಯೋಗ ದೊರಕಿಸಬಹುದಾದ ಶಿಕ್ಷಣ ಇಲ್ಲದವರು ಮತ್ತು ಬಂಡವಾಳ ಹೂಡಿ ತಮ್ಮದೇ ಆಧುನಿಕ ವ್ಯಾಪಾರ ವಹಿವಾಟು ಆರಂಭಿಸಲು ಶಕ್ತರಲ್ಲದ ಸಾವಿರಾರು ಯುವಕರು ಊರಲ್ಲೇ ಉಳಿಯುವುದು ಅನಿವಾರ್ಯವಾಗಿದೆ. ತಮ್ಮ ಜತೆಗೆ ಪ್ರಾಥಮಿಕ ಅಥವಾ ಪ್ರೌಢಶಾಲೆಗಳಲ್ಲಿ ಓದಿದ ತಮ್ಮ ವಾರಗೆಯ ಕೆಲವರ ಸಾಧನೆ (ವಲಸೆ, ಶಿಕ್ಷಣ, ಪಾರಂಪರಿಕ ಸಂಪತ್ತು, ಸಾಮಾಜಿಕ/ರಾಜಕೀಯ ನೆಟ್‌ವರ್ಕ್ ಇತ್ಯಾದಿಗಳಿಂದ ಸಾಧ್ಯವಾದ ಸಾಧನೆ) ಊರಲ್ಲೇ ಉಳಿದ ಯುವಕರಲ್ಲಿ ಒಂದು ಕಡೆಯಿಂದ ಹತಾಶೆ ಹೆಚ್ಚಿಸಿದರೆ ಮತ್ತೆ ಕೆಲವರಲ್ಲಿ ನಾವು ಕೂಡ ಸಾಧಿಸಬೇಕೆಂಬ ಛಲವನ್ನು ಸೃಷ್ಟಿಸುತ್ತದೆ. ಆದರೆ ಮೇಲೆ ವಿವರಿಸಿದ ಅಭಿವೃದ್ಧಿ ಮಾದರಿ (ಬಂಡವಾಳ ಮತ್ತು ತಂತ್ರಜ್ಞಾನ ಆಧರಿತ ಅಭಿವೃದ್ಧಿ ಮಾದರಿ) ಈ ಯುವಕರಿಗೆ ಅವರು ಬಯಸುವ ಬದುಕಿನ ಅವಕಾಶ ನೀಡುತ್ತಿಲ್ಲ. ಹಾಗೆಂದು ತಮ್ಮ ಸಾಂಪ್ರದಾಯಿಕ ಕಸುಬನ್ನು ಮಾಡಲು ಮಾನ ಮರ್ಯಾದೆ ಅಡ್ಡ ಬರುತ್ತದೆ. ಇಂತಹ ಸ್ಥಿತಿ ಯುವಕರನ್ನು ಇನ್ನೂ ಹತಾಶರನ್ನಾಗಿಸುತ್ತದೆ. ಮತ್ತು ಅವರುಗಳು ಸುಲಭದಲ್ಲಿ ಕೋಮುವಾದದ ವಿಷವರ್ತುಲದಲ್ಲಿ ಸಿಕ್ಕಿಕೊಳ್ಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ಕೋಮುವಾದಿಗಳು ಮತ್ತೊಂದು ರಾಗ ಆರಂಭಿಸಿದ್ದಾರೆ. ದನದ ಮಾಂಸ ತಿನ್ನುವುದು ಮತ್ತು ಮಾರಾಟ ಮಾಡುವುದರ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ಒಂದು ಕಾಲದಲ್ಲಿ ಪ್ರತಿ ಹಳ್ಳಿಯಲ್ಲಿ ಹಾಲು ಕೊಡದ (ಗೊಡ್ಡು) ದನ ಅಥವಾ ಎಮ್ಮೆಯನ್ನು, ಮುದಿ ಎತ್ತು ಅಥವಾ ಕೋಣವನ್ನು ವ್ಯಾಪಾರಿ ಅದನ್ನು ಒಯ್ದು ಏನು ಮಾಡುತ್ತಾನೆ ಎನ್ನುವುದರ ಬಗ್ಗೆ ಯಾರು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಹಳ್ಳಿಯಲ್ಲಿ ದನ ಅಥವಾ ಎಮ್ಮೆ ಸತ್ತರೆ ಹರಿಜನ ಕೇರಿಗೆ ಸುದ್ದಿ ಹೋಗುತ್ತಿತ್ತು. ಅವರು ಬಂದು ಸತ್ತ ದನ ಅಥವಾ ಎಮ್ಮೆಯನ್ನು ಕೊಟ್ಟಿಗೆಯಿಂದ ಹೊರಗೆ ಒಯ್ದು ದೂರದ ಗಿಡದ ಮರೆಯಲ್ಲಿ ಚರ್ಮ ಸುಲಿದು ಮಾಂಸ ಮಾಡಿ ಅಳಿದುಳಿದ ಭಾಗವನ್ನು ಮಣ್ಣು ಮಾಡಿ ಹೋಗುತ್ತಿದ್ದರು. ಉತ್ತರ ಕರ್ನಾಟಕದ ಹಲವು ಹಳ್ಳಿಗಳಲ್ಲಿ ದಲಿತರು ಮುಂದಿಡುತ್ತಿದ್ದ ಹಲವು ಬೇಡಿಕೆಗಳಲ್ಲಿ ದನದ ಮಾರ್ಕೆಟ್ ಊರಿಗೆ ಹತ್ತಿರ ಇರಬೇಕೆನ್ನುವುದು ಒಂದು. ಕಾರಣ ಕೇಳಿದರೆ ಅವರ ಕೈಗೆಟುಕುವ ದರದಲ್ಲಿ ಸಿಗುವುದು ದನದ ಮಾಂಸ ಮಾತ್ರ, ಮಾರ್ಕೆಟ್ ದೂರ ಇರುವುದರಿಂದ ಮಾಂಸಕ್ಕಾಗಿ ಬಸ್ ಪ್ರಯಾಣ ಮಾಡುವ ವೆಚ್ಚ ಒಂದು ಕಡೆ ಆದರೆ ಇವರು ಮಾರ್ಕೆಟ್ ತಲುಪುವ ಹೊತ್ತಿಗೆ ಉತ್ತಮ ಮಾಂಸ ಮಾರಾಟ ಆಗಿ ಎಲುಬು ತುಂಬಿದ ಮಾಂಸ ಉಳಿಯುವುದು ಮತ್ತೊಂದು ಕಡೆ ಟ್ಯುಬರ್‌ಕ್ಯುಲಾಸಿಸ್ (ಟಿಬಿ) ಇರುವವರಿಗೆ ಮಾತ್ರೆಯೊಂದಿಗೆ ಹೆಚ್ಚು ಕ್ಯಾಲ್ಸಿಯಂ ತೆಗೆದುಕೊಳ್ಳಬೇಕೆಂದು ವೈದ್ಯರು ಸಲಹೆ ಮಾಡುವುದು ಸಾಮಾನ್ಯ. ಅತೀ ಕಡಿಮೆ ದರದಲ್ಲಿ ಹೆಚ್ಚು ಕ್ಯಾಲ್ಸಿಯಂ ದೊರೆಯಲು ದನದ ಮಾಂಸ ತಿನ್ನುವುದು ಅನಿವಾರ್ಯ. ಹೀಗೆ ದನದ ಮಾಂಸವನ್ನು ಕೇವಲ ಮುಸ್ಲಿಮರು ಮಾತ್ರ ತಿನ್ನುತ್ತಾರೆ ಆದುದರಿಂದ ಮುಸ್ಲಿಂ ವಿರೋಧಿ ಕೋಮುವಾದದ ಹೆಸರಿನಲ್ಲಿ ದನದ ಮಾಂಸ ಮಾರಾಟವನ್ನು ವಿರೋಧಿಸಿದರೆ ಕೇವಲ ಮುಸ್ಲಿಂರಿಗೆ ಮಾತ್ರ ನೋವಾಗುವುದಿಲ್ಲ. ಕಡಿಮೆ ಆದಾಯ ಇರುವ ಪ್ರತಿಯೊಬ್ಬರ ಆಹಾರ ಪದ್ಧತಿಗೆ ಕೋಮುವಾದಿಗಳ ಈ ಧೋರಣೆ ವಿರುದ್ಧ ಇದೆ. ಸಂವಿಧಾನದಲ್ಲಿ ಅಥವಾ ದೇಶದ ಅಥವಾ ರಾಜ್ಯದ ಯಾವುದೇ ಕಾನೂನು ಕೂಡ ದನದ ಮಾಂಸ ತಿನ್ನುವುದನ್ನು ನಿಷೇಧಿಸಿಲ್ಲ. ಇಂತಹ ಸಂದರ್ಭದಲ್ಲಿ ಸರಕಾರಕ್ಕೆ ಕೋಮುವಾದಿಗಳ ದನದ ಮಾಂಸ ವಿರೋಧಿ ಕಾರ್ಯಕ್ರಮಗಳನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲವೆಂದರೆ ಇದೊಂದು ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಸರಕಾರದ ವಿಫಲತೆಯಲ್ಲವೇ?

ಕೋಮುವಾದದ ಬೆಳವಣಿಗೆ ಕೇವಲ ವ್ಯಕ್ತಿ ಅಥವಾ ಸಮುದಾಯಗಳನ್ನು ಮಾತ್ರ ಕಾಡುವುದಲ್ಲ. ಇಡೀ ಪ್ರದೇಶದ ವಿದ್ಯಮಾನಗಳನ್ನು ಮೇಲ್ವರ್ಗದ ಪರವಾಗಿ ಮತ್ತು ಕೆಳವರ್ಗದ ಪರವಾಗಿ ಮತ್ತು ಕೆಳವರ್ಗದ ವಿರುದ್ಧವಾಗಿ ತಿರುಚುವ ಸಾಧ್ಯತೆ ಇದೆ. ಯಾಕೆಂದರೆ ಕೋಮುವಾದ ಬಲಗೊಳ್ಳುವುದರಿಂದ ಇಡೀ ಸಮಾಜ ಹಿಂದೂ ಮುಸ್ಲಿಮ್ ಎಂದು ಧ್ರುವೀಕರಣಗೊಂಡು ಸಮಾಜದೊಳಗಿನ ಇತರ ವೈರುಧ್ಯಗಳು ಮರೆಯಾಗುತ್ತಿವೆ. ಜಿಲ್ಲೆಯಲ್ಲಿ ಶೇಕಡಾ ಇಪ್ಪತ್ತೈದರಿಂದ ಮೂವತ್ತು ರೈತರಿದ್ದಾರೆ. ಅವರಲ್ಲಿ ಶೇಕಡಾ ತೊಂಬತ್ತರಷ್ಟು ಸಣ್ಣ ಮತ್ತು ಅತೀ ಸಣ್ಣ ರೈತರು. ಸಂಘಟಿತ ರೈತ ಹೋರಾಟ ಇಲ್ಲದ ಕಾರಣ ರೈತರ ಯಾವತ್ತು ಸಮಸ್ಯೆಗಳು (ಹಣಕಾಸು, ಮಾರುಕಟ್ಟೆ, ನೀರಾವರಿ ಇತ್ಯಾದಿ) ಸಾಮಾಜಿಕ ಸಮಸ್ಯೆಗಳಾಗಿಲ್ಲ. ಇತ್ತೀಚಿನ ರಾಜ್ಯ ಸರ್ಕಾರದ ಸಾಲ ಮನ್ನಾದ ಲಾಭವನ್ನು ಕೂಡ ಜಿಲ್ಲೆಯ ರೈತರು ಪಡೆಯಲಾಗಲಿಲ್ಲ. ಕಾರಣ ಅವರೆಲ್ಲ ಹೊಸ ಸಾಲ

ಮಾಡಿ ಸೊಸೈಟಿಗಳಿಂದ ಪಡೆದ ಹಳೇ ಸಾಲವನ್ನು ಸಂದಾಯ ಮಾಡಿದ್ದರು.[7] ಸತತ ಸಾಲಗಾರರಾಗಿರುವ ಸಂದರ್ಭದಲ್ಲೇ ಸರ್ಕಾರ ಕೊಟ್ಟ ಸಾಲಮನ್ನಾ ಸೌಲಭ್ಯವನ್ನು ಬಳಸಿಕೊಳ್ಳಲಾಗದ ನತದೃಷ್ಟರು. ಅತೀ ಜನ ಸಾಂದ್ರತೆಯುಳ್ಳ ಕೆಲವೇ ಕೆಲವು ಪ್ರದೇಶಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಕೂಡ ಒಂದು. ಜನರು ವಸತಿಗಾಗಿ, ಕೃಷಿಗಾಗಿ, ಸಾರ್ವಜನಿಕ ಸವಲತ್ತುಗಳ ಸೃಷ್ಟಿಗಾಗಿ ಭೂಮಿ ಕೊರತೆಯನ್ನು ಸತತವಾಗಿ ಅನುಭವಿಸುತ್ತಾ ಬಂದಿದ್ದಾರೆ. ಇಂತಹ ಪರಿಸರದಲ್ಲಿ ಸಾವಿರಾರು ಎಕರೆ ಭೂಮಿಗಳನ್ನು ಬಲತ್ಕಾರದಿಂದ ರೈತರಿಂದ ವಶಪಡಿಸಿ ಕೈಗಾರಿಕಾ ಬಳಕೆಗೆ (ಸ್ಪೆಷಲ್ ಎಕಾನಮಿಕ್ ಜೋನ್‌ಗಾಗಿ, ಹೈಡಲ್ ಪವರ್ ಯೋಜನೆಗಾಗಿ ಇತ್ಯಾದಿಗಳಿಗಾಗಿ) ಕಡಿಮೆ ದರದಲ್ಲಿ ನೀಡಲಾಗುತ್ತಿದೆ. ಇಂತಹ ಬೆಳವಣಿಗೆಗಳ ವಿರುದ್ಧ ನಡೆಯುವ ಹೋರಾಟಗಳು ಭೂಮಿ ಕಳಕೊಂಡವರ ಸಣ್ಣಪುಟ್ಟ ಹೋರಾಟಗಳಾಗಿವೆ.

ಬಹುತೇಕರ ಸಾಮಾನ್ಯ ಸಮಸ್ಯೆಗಳಾದ ನಿರುದ್ಯೋಗ, ಕುಡಿಯುವ ನೀರು, ವಸತಿ ಇತ್ಯಾದಿ ಮೂಲಭೂತ ಸವಲತ್ತುಗಳ ಕೊರತೆ, ಖಾಸಗಿ ಬಸ್ಸು ಮಾಲಿಕರ ದುಬಾರಿ ದರ ನಿಗದಿ, ಖಾಸಗಿ ಹಾಸ್ಪಿಟಲ್‌ಗಳ ಹಗಲು ದರೋಡೆ ಇತ್ಯಾದಿ ದಿನನಿತ್ಯದ ಸಮಸ್ಯೆಗಳ ವಿರುದ್ಧ ಹೋರಾಟಗಳ ಹಿಂದೆ ಜನರೇ ಇಲ್ಲ. ಮೇಲಿನ ದಿನನಿತ್ಯದ ಸಮಸ್ಯೆಗಳ ವಿರುದ್ಧ ಬಳಸಬೇಕಾದ ಸಿಟ್ಟು, ಅಸಹನೆ, ಆವೇಶ, ಉದ್ವೇಗ ಇತ್ಯಾದಿಗಳನ್ನು ಜನಸಾಮಾನ್ಯರು ಕೋಮುಗಲಭೆಯಲ್ಲಿ ವ್ಯರ್ಥ ವ್ಯಯ ಮಾಡುತ್ತಿದ್ದಾರೆ. ಕ್ರಾಂತಿಯ ಕನಸು ಕಾಣುವ ಮತ್ತು ಸುತ್ತಮುತ್ತ ನಡೆಯುವ ಅನ್ಯಾಯಗಳ ವಿರುದ್ಧ ಸಿಡಿದೇಳುವ ಲಕ್ಷಣಗಳೆಲ್ಲ ವಿದ್ಯಾರ್ಥಿ ಜೀವನದಲ್ಲಿ ಕಂಡಷ್ಟು ನಂತರ ಇರುವುದಿಲ್ಲ. ಆದರೆ ಹಲವಾರು ವರ್ಷಗಳಿಂದ ಕೋಮುಗಲಭೆಯ ಹೆಸರಲ್ಲಿ ಇಲ್ಲಿ ನಡೆಯುವ ಮಾರಣಹೋಮದ ಬಗ್ಗೆ ಜಿಲ್ಲೆಯ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟಿಸಿದ್ದು ಅಪರೂಪ. ಪ್ರತಿಭಟಿಸುವ ಬದಲು ಈ ಬಗೆಯ (ಹಿಂದೂ ಮುಸ್ಲಿಮ್) ಧ್ರುವೀಕರಣವನ್ನು ಅಂತಿಮ ಸತ್ಯವೆಂದು ಬಗೆದು ಅವುಗಳೊಂದಿಗೆ ತಮ್ಮ ಶಕ್ತಿಯನುಸಾರ ಗುರುತಿಸಿಕೊಳ್ಳುವುದು ತಮ್ಮ ಜೀವನದ ಪರಮ ಸಾಧನೆ ಎಂದು ತಿಳಿದುಕೊಂಡು ವ್ಯವಹರಿಸುವ ವಿದ್ಯಾರ್ಥಿಗಳು ಮತ್ತು ಅವರಿಗೆ ಪಾಠಮಾಡುವ ಮೇಸ್ಟ್ರುಗಳನ್ನು ಇಲ್ಲಿ ಕಾಣಬಹುದು. ಎಲ್ಲದರಲ್ಲೂ ಬಹುತ್ವವನ್ನು ಬಯಸುವುದು ಮತ್ತು ಬೆಳೆಸುವುದು ಆರೋಗ್ಯವಂತ ಸಮಾಜದ ಲಕ್ಷಣ. ಆದರೆ ಕೋಮುವಾದದ ಬೆಳವಣಿಗೆಯಿಂದಾಗಿ ಇಡೀ ಪ್ರದೇಶವೇ ಏಕಮುಖವಾಗಿ ಚಿಂತಿಸುವ ಮತ್ತು ಪ್ರತಿಕ್ರಿಯಿಸುವ ಒಂದು ವಿಚಿತ್ರ ಸನ್ನಿವೇಶ ಜಿಲ್ಲೆಯಲ್ಲಿದೆ. ಇದರಿಂದಾಗಿ ಇಲ್ಲಿನ ಮೇಲ್ವರ್ಗ ತನ್ನ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಮತ್ತು ಆ ಮೂಲಕ ತನ್ನ ಯಜಮಾನಿಕೆಯನ್ನು ವಿಸ್ತರಿಸಿಕೊಳ್ಳುವುದು ಸುಲಭವಾಗಿದೆ. ಆದರೆ ಇಂತಹ ಏಕಮುಖ ಚಿಂತನೆ ಮತ್ತು ವ್ಯವಹಾರ ಜಿಲ್ಲೆಯ ತಳಸಮುದಾಯಗಳಿಗೆ ಶಾಪವಾಗಿದೆ. ತಮ್ಮ ದಿನನಿತ್ಯದ ಬದುಕಿನಲ್ಲಿ ಎದುರಾಗುವ ಅನ್ಯಾಯಗಳನ್ನು, ಶೋಷಣೆಗಳನ್ನು, ದಬ್ಬಾಳಿಕೆಗಳನ್ನು ಎದುರಿಸಲು ಜನಸಮಾನ್ಯರಿಗೆ ಅಸಂಖ್ಯಾತ ರಾಜಕೀಯ ಪ್ರಕ್ರಿಯೆಗಳ ಅವಶ್ಯಕತೆ ಇದೆ. ಆದರೆ ಕೋಮುವಾದ ವರ್ಗ, ಲಿಂಗ, ಭಾಷೆ, ಪ್ರದೇಶ, ಸಮುದಾಯ ಇತ್ಯಾದಿ ನೆಲೆಯಲ್ಲಿ ಕಟ್ಟಿಕೊಳ್ಳಬಹುದಾದ ಹೋರಾಟವನ್ನು ನಾಶ ಮಾಡಿದೆ. ಇಂತಹ ಅಸಂಖ್ಯಾತ ಹೋರಾಟಗಳ ನೆಲೆಗಳ ಬದಲು ಇಂದು ಜಿಲ್ಲೆಯ ತಳಸಮುದಾಯಕ್ಕೆ ದಕ್ಕಿರುವುದು ಕೇವಲ ಕೋಮು ನೆಲೆಯ ಹೋರಾಟ ಮಾತ್ರ. ಈ ಹೋರಾಟವನ್ನು ಮಾಡುವ ಮೂಲಕ ತಳಸಮುದಾಯದ ಜನರು ತಮ್ಮ ಜೀವ ಸೆಲೆಗಳಾದ ಪ್ರೀತಿ ಪ್ರೇಮಗಳನ್ನು, ಶಾಂತಿ ಸಮಾಧಾನಗಳನ್ನು, ನಂಬಿಕೆಗಳನ್ನು ಬಲಿಕೊಡಬೇಕಾಗಿದೆ. ಮತ್ತು ಈ ಬಲಿ ಕೂಡ ಯಾರ ಆಸಕ್ತಿಯನ್ನು ಈಡೇರಿಸುವುದಕ್ಕಾಗಿ? ಖಂಡಿತವಾಗಿಯೂ ತಳಸಮುದಾಯದ ಜನರ ಭವಿಷ್ಯಕ್ಕಾಗಿ ಅಲ್ಲ.

ಸುಮಾರು ಎಪ್ಪತ್ತರ ದಶಕದ ವರೆಗೂ ಕರಾವಳಿ ಕರ್ನಾಟಕದಲ್ಲಿ ಸಮಾಜವನ್ನು ಜಾತಿಯ ಗೆರೆಗಳ ಮೇಲೆ ಪ್ರಧಾನ ಮತ್ತು ಅಧೀನ ಎಂಬ ಸ್ತರಗಳಲ್ಲಿ ವಿಭಜಿಸಿದ್ದು ಬಹಳ ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಪ್ರಧಾನ ಜಾತಿಗಳನ್ನು ಕೆಲವು ನಿರ್ಧಿಷ್ಠ ಪಡಿಸಿದ ಗುಣಲಕ್ಷಣಗಳ ಮೂಲಕ ಗುರುತಿಸಲಾಗುತ್ತಿತ್ತು. ಅಧೀನ ಜಾತಿಗಳ ಲಕ್ಷಣಗಳು ಈ ಪ್ರಧಾನ ಜಾತಿಗಳ ಲಕ್ಷಣಗಳಿಗೆ ಹೆಚ್ಚು ಕಡಿಮೆ ವಿರೋಧವಾಗಿದ್ದವು. ಈ ಸ್ತರೀಕರಣಗೊಳಿಸುವ ಮತ್ತು ಗುರುತಿಸುವ ಪ್ರಕ್ರಿಯೆಗಳು ಸಂಕಥನದೊಂದಿಗೆ ಸಮಾಜದ ಭೌತಿಕ ಸ್ಥಿತಿಗತಿಗಳ ಮೇಲೆ ಅವಲಂಬಿತವಾಗಿದ್ದವು. ಪ್ರಧಾನ ಜಾತಿಗಳನ್ನು ಗುರುತಿಸಲಾಗುವ ಲಕ್ಷಣಗಳು ಸಹಜವೆಂದು ಭಾವಿಸುವುದು ಆ ಜಾತಿಗಳ ಪ್ರಾಬಲ್ಯಕ್ಕೆ ಮತ್ತು ಯಥಾಸ್ಥಿತಿಯ ಮುಂದುವರಿಕೆಗೆ ಅವಶ್ಯವಾಗಿದ್ದವು. ಸಾಂಸ್ಕೃತಿಕ ಮತ್ತು ಸಾಮಾಜಿಕ ಲೋಕದ ವ್ಯವಹಾರಗಳ ಮೂಲಕ ಆರ್ಥಿಕ ಕ್ಷೇತ್ರದ ಬಲಾಢ್ಯತೆಗೆ ಯಜಮಾನಿಕೆಯ ಮೆರಗನ್ನು ಕಂಡುಕೊಳ್ಳಲಾಯಿತು. ಈ ಬಗೆಯ ಮನುಷ್ಯ ನಿರ್ಮಿತ ಮೇಲು ಕೀಳುಗಳನ್ನು, ಉಚ್ಚ-ನೀಚತೆಯನ್ನು ದೈವ/ದೇವರ/ ಸೃಷ್ಠಿಯೆಂದು ತಳಸ್ತರದ ಜಾತಿ ಜನರನ್ನು ನಂಬಿಸಲು ಸಾಂಸ್ಕೃತಿಕ ಮತ್ತು ಸಾಮಾಜಿಕ ಲೋಕದ ವ್ಯವಹಾರಗಳು ಸಹಕರಿಸಿದವು. ಇದರಿಂದಾಗಿ ತಳಸ್ತರದ ಸಮುದಾಯಗಳು ಮೇಲ್ವರ್ಗಗಳ ದಬ್ಬಾಳಿಕೆಯನ್ನು, ಯಜಮಾನಿಕೆಯನ್ನು ಸಹಜವೆಂದು ನಂಬಿ ವ್ಯವಹರಿಸುವ ಕಾಲವಿತ್ತು. ಹೀಗೆ ಸ್ಥಳೀಯ ಸಮಾಜಕ್ಕೆ 'ಸ್ವ' ಮತ್ತು 'ಅನ್ಯ'ದ ಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಳ್ಳುವ ಮತ್ತು ಆ ಕಲ್ಪನೆಗಳಿಗನುಗುಣವಾಗಿ ದಿನನಿತ್ಯದ ಬದುಕನ್ನು ನಡೆಸುವ ಅಭ್ಯಾಸ ಹಿಂದಿನಿಂದಲೇ ಇತ್ತು. ಹಿಂದೆ ಜಾತಿ ನೆಲೆಯಲ್ಲಿ 'ಸ್ವ' ಮತ್ತು 'ಅನ್ಯ'ವನ್ನು ಕಟ್ಟಿಕೊಳ್ಳಲಾಗಿತ್ತು. ಹಿಂದಿನ ವಿಂಗಡನೆಯಲ್ಲಿ ಸ್ಥಳೀಯ ಕೆಳಜಾತಿಗಳು 'ಅನ್ಯ'ದ ಸ್ಥಾನದಲ್ಲಿದ್ದವು. ಆ ಕಾರಣಕ್ಕಾಗಿ ಅವರುಗಳು ಆರ್ಥಿಕ ಅಸಮಾನತೆಯ ಜತೆಜತೆಗೆ ಸಾಮಾಜಿಕ, ಸಾಂಸ್ಕೃತಿಕ ಹಾಗು ರಾಜಕೀಯ ಅಸಮಾನತೆಗಳನ್ನು ಅನುಭವಿಸಬೇಕಿತ್ತು. ಇಂತಹ ಒಂದು ಪರಿಸರದಲ್ಲಿ ವಸಾಹತು ಆಡಳಿತ ಮತ್ತು ನಂತರದ ಪ್ರಭುತ್ವ ನೇತೃತ್ವದಲ್ಲಿ ನಡೆದ ತಾಂತ್ರಿಕ ಆಧುನೀಕರಣಗಳು ಮಧ್ಯ ಪ್ರವೇಶಗೈದವು.

ವಸಾಹತು ಆಡಳಿತ ಸಂದರ್ಭದಲ್ಲಿ ಸಾಂಪ್ರದಾಯಿಕ ರಾಜಕೀಯ ಅಧಿಕಾರ ಕೇಂದ್ರಗಳು ಪಲ್ಲಟಗೊಂಡು ಹೊಸ ಅಧಿಕಾರ ಕೇಂದ್ರಗಳು ಸ್ಥಾಪಿತವಾದವು. ವಸಾಹತು ಆಡಳಿತ ಸ್ಥಳೀಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಸಂಬಂಧಗಳನ್ನು ನೇರವಾಗಿ ಮೂಲಭೂತವಾಗಿ ಪ್ರಶ್ನಿಸಲು ಪ್ರಯತ್ನಿಸಲಿಲ್ಲ. ಆದರೆ ಇದೇ ಸಂದರ್ಭದಲ್ಲಿ ಕ್ರಿಶ್ಚಿಯನ್ ಧರ್ಮ ಕರಾವಳಿ ಕರ್ನಾಟಕದಲ್ಲಿ ತಳವೂರಲು ಪ್ರಯತ್ನ ಮಾಡಿತು. ಸ್ಥಳೀಯರನ್ನು ತಮ್ಮ ಧರ್ಮಕ್ಕೆ ಆಕರ್ಷಿಸಲು ಮತ್ತು ಯಾವುದೋ ಕಾರಣಕ್ಕೆ ಮತಾಂತರಗೊಂಡವರನ್ನು ತಮ್ಮದೇ ಧರ್ಮದಲ್ಲಿ ಉಳಿಸಿಕೊಳ್ಳುವುದು ಕ್ರಿಶ್ಚಿಯನರಿಗೆ ಅನಿವಾರ್ಯವಾಗಿತ್ತು. ಜತೆಗೆ ವಸಾಹತು ಆಡಳಿತ ಹುಟ್ಟು ಹಾಕಿದ ಅಧಿಕಾರ ಕೇಂದ್ರಗಳಲ್ಲಿ ತಳಸ್ತರದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ಮಾನವ ಸಂಪನ್ಮೂಲಗಳನ್ನು ತರಬೇತುಗೊಳಿಸಬೇಕಿತ್ತು. ಈ ಎಲ್ಲ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿಶ್ಚಿಯನ್ ಮಿಶನರಿಗಳು ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದರು. ಹೀಗೆ ಆರಂಭಗೊಂಡ ಶಿಕ್ಷಣ ಸಂಸ್ಥೆಗಳು ಅವುಗಳ ಮೂಲ ಉದ್ದೇಶಕ್ಕೆ ಅಥವಾ ಅವುಗಳು

ಸಾರ್ವಜನಿಕವಾಗಿ ಘೋಷಿಸಿಕೊಂಡ ಉದ್ದೇಶಕ್ಕಿಂತ ಭಿನ್ನವಾದ ಕೆಲವೊಂದು ಪರಿಣಾಮಗಳನ್ನು ಸ್ಥಳೀಯ ಸಾಮಾಜಿಕ ಮೌಲ್ಯಗಳ ಮೇಲೆ ಮಾಡಲಾರಂಭಿಸಿದವು. ಲಿಂಗ, ಜಾತಿ ನೆಲೆಯಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಅಸಮಾನತೆ ಆಚರಣೆಗೆ ಪೂರಕವಾಗಿರುವ ಹಲವಾರು ಸಾಮಾಜಿಕ ಆಚರಣೆಗಳನ್ನು ಈ ಕ್ರಿಶ್ಚಿಯನ್ ಮಿಶನರಿಗಳ ಕಾರ್ಯಕ್ರಮಗಳು ಮುರಿದವು. ಈ ಬೆಳವಣಿಗೆಗೆ ಸ್ಥಳೀಯ ಸಮಾಜದ ಮೇಲ್ವರ್ಗ ಮಿಶ್ರ ಪ್ರತಿಕ್ರಿಯೆ ನೀಡಿದೆ. ಮೇಲ್ವರ್ಗದ ಒಂದು ಗುಂಪು ಕ್ರಿಶ್ಚಿಯನ್ ಮಿಶನರಿಗಳು ಪ್ರತಿಪಾದಿಸಿದ ಆಧುನಿಕ ಮೌಲ್ಯಗಳನ್ನು ಬೆಂಬಲಿಸಿದರೆ ಮತ್ತೊಂದು ಗುಂಪು ವಿರೋಧಿಸಲಾರಂಬಿಸಿತು. ಈ ಪರ ವಿರೋಧಗಳು ಮೇಲ್‌ಸ್ತರದಲ್ಲೇ ಇದ್ದುದರಿಂದ ವಸಾಹತು ಸಂದರ್ಭದಲ್ಲಿ ಸ್ಥಳೀಯವಾಗಿ ದಕ್ಕಿಸಿಕೊಂಡ ಕೆಲವೊಂದು ಲಾಭಗಳು (ಆಧುನಿಕ ಶಿಕ್ಷಣ, ಅದು ಕೊಡಮಾಡಿದ ಹುದ್ದೆಗಳು, ವ್ಯಾಪಾರ ವಹಿವಾಟು ನಡೆಸಲು ಅನುಕೂಲತೆಗಳು, ಭೂಮಿ ಇತ್ಯಾದಿಗಳು) ಕೂಡ ಮೇಲ್‌ಸ್ತರದಲ್ಲೇ ಉಳಿದವು. ಕೆಲವೊಂದು ಬಾರಿ ಮತಾಂತರಗಳ ಮೂಲಕ (ಸ್ಥಳೀಯ ಸಮಾಜದ ತಳ ಸಮುದಾಯಗಳ ಜನರು ಮತಾಂತರಗೊಂಡ ಸಂದರ್ಭದಲ್ಲಿ) ವಸಾಹತು ಆಡಳಿತದ ಲಾಭಗಳು ತಳ ಸಮುದಾಯಗಳ ಜನರಿಗೂ ತಲುಪಿವೆ. ವಸಾಹತು ಆಡಳಿತ ಮತ್ತು ಮಿಶನರಿಗಳ ಮಧ್ಯಪ್ರವೇಶದಿಂದ ಅದ ಲಾಭ-ನಷ್ಟದ ಲೆಕ್ಕಚಾರಕ್ಕಿಂತ ಹೆಚ್ಚು ಆ ಸಂದರ್ಭದಲ್ಲಿ ಸ್ಥಳೀಯ ಮೇಲ್ವರ್ಗ ಅಂದಿನ ಬೆಳವಣಿಗೆಗಳಿಗೆ ಪ್ರತಿಕ್ರಿಯಿಸಿದ ವಿಧಾನ ಇಂದಿನ ಕೋಮುವಾದವನ್ನು ಅರ್ಥಮಾಡಿಕೊಳ್ಳಲು ತುಂಬ ಉಪಯುಕ್ತ. ಅಂದು ಕೂಡ ಒಂದು ಕಡೆ ನಮ್ಮಲ್ಲಿನ ಕೊರತೆಗಳನ್ನು ಲೋಪಗಳನ್ನು ಸರಿಪಡಿಸಿಕೊಂಡು ಎಲ್ಲರೂ ಸಮಾನತೆಯಿಂದ ಬಾಳಲು ಅಗತ್ಯವಿರುವ ಮೌಲ್ಯಗಳ, ಸಂಸ್ಥೆಗಳ ಹುಡುಕಾಟಕ್ಕೆ ಪ್ರಾಮಾಣಿಕ ಪ್ರಯತ್ನಗಳು ನಡೆದವು. ಆದರೆ ಅದೇ ಸಂದರ್ಭದಲ್ಲಿ ಮತ್ತೊಂದೆಡೆ ಬಹುತೇಕರಿಗೆ ಮನುಷ್ಯರಾಗಿ ಸಮಾನರಾಗಿ ಬದುಕುವ ಅವಕಾಶಗಳನ್ನು ಸೃಷ್ಟಿಸುವ ಬಗ್ಗೆ ವಿಶೇಷ ಚಿಂತಿಸದೆ ಕ್ರಿಶ್ಚಿಯನ್ ಮಿಶನರಿಗಳನ್ನು 'ಅನ್ಯ'ದ ಸ್ಥಾನದಲ್ಲಿ ನಿಲ್ಲಿಸಿ ಸ್ಥಳೀಯರು ನಾವೆಲ್ಲ ಒಂದೇ ಎನ್ನುವ 'ಸ್ವ' ದ ಕಲ್ಪನೆಯನ್ನು ಪ್ರಚಾರ ಪಡಿಸಲು ಸ್ಥಳೀಯ ಮೇಲ್ಜಾತಿಗಳ ಒಂದು ಗುಂಪು ಪ್ರಯತ್ನ ನಡೆಸಿತು. ಆದರೆ ಅಂದಿನ ದಿನನಿತ್ಯದ ಬದುಕಿನ ಜಾತಿ, ಲಿಂಗ, ವರ್ಗ ಬೇಧಗಳ ತೀವ್ರತೆ ಎಷ್ಟಿತ್ತೆಂದರೆ ನಾವೆಲ್ಲ ಒಂದೇ ಎನ್ನುವ ಮೇಲ್ಜಾತಿಗಳ ಘೋಷಣೆ ಹುಸಿಯೆಂದು ತಳಸಮುದಾಯಗಳಿಗೆ ಮನವರಿಕೆಯಾಗಲು ವಿಶೇಷ ಕಾಲ ಹಿಡಿಯಲಿಲ್ಲ. ಜತೆಗೆ ವಸಾಹತು ಅಧಿಕಾರ ಕೂಡ ಮಿಶನರಿಗಳ ಪರ ಇತ್ತು. ದಿನನಿತ್ಯದ ಬದುಕಿನಲ್ಲಿ ಆಚರಣೆಗೆ ಬಾರದೆ 'ನಾವೆಲ್ಲ ಒಂದೇ' ಎನ್ನುವ ಈ ಘೋಷಣೆಯಿಂದ ನಮಗೆ ಮೋಕ್ಷವಿಲ್ಲವೆಂದು ತಳ ಸಮುದಾಯಗಳ ಹಲವಾರು ಜನರು

ಇಂದು ಮುಂದು

ಇತ್ತೀಚೆಗಂತೂ ಎಲ್ಲೆಲ್ಲೂ
ದಿಗಿಲುಗಳೇ..,
ಇಲ್ಲಿ ಬಣ್ಣಗಳೆಲ್ಲವ
ಗುತ್ತಿಗೆ ಹಿಡಿದಿದ್ದಾರೆ..
ಮತ್ತೆ ತಮ್ಮ ತಮ್ಮ
ಬಾವುಟಗಳಿಗೆ ಮೆತ್ತಿಕೊಂಡಿದ್ದಾರೆ..

ಸತ್ತ ಪ್ರಾಣಿಯೂ
ಈಗ ದೈವವಾಗಿದೆ,
ಹೊಟ್ಟೆಗಿಲ್ಲದೆ ಜನ ಸತ್ತರೂ;
ದನ ಸಾಯಕೂಡದು...
ದನ ಸತ್ತರೂ ತಿನ್ನಕೂಡದು...

ಸೊಲ್ಲೆತ್ತಿದವರ ಹಣೆಗೇ
ಗುಂಡಿಕ್ಕಿದ್ದಾರೆ..
ಅಲ್ಲೆಲ್ಲೋ ಚಪ್ಪಲಿ ಎಸೆದು
ಇನ್ನೆಲ್ಲೋ ಗೋಡೆ ಮುರಿದು;
ಬಿದ್ದ ಬೆಂಕಿಯಲ್ಲಿ
ಮೈ ಕಾಯಿಸಿಕೊಳ್ಳುತ್ತಿದ್ದಾರೆ...

ಶಾಲೆಗೆ ಹೋದ
ನನ್ನ ತಂಗಿಯರ ಕನಸುಗಳೆಲ್ಲಾ
ಹಾಡಿ-ಗುಡ್ಡದಲ್ಲೆಲ್ಲೋ
ಬೆತ್ತಲಾಗಿ ಬೀಳುತ್ತಿವೆ...

ಕಾಡು ಮೇಡುಗಳಲ್ಲಿ
ಬದುಕು ಸವೆಸುತಿದ್ದವರ
ಬುಡಕ್ಕೇ ಕೊಡಲಿ ಇಟ್ಟಿದ್ದಾರೆ...

ಅನ್ನ ಬೆಳೆದವ
ಮನೆಯ ಜಂತಿಯಲ್ಲಿ
ತೂಗಾಡುತಿದ್ದಾನೆ..
ನೆಲ ಅಗೆದು ದೋಚಿದವ
ಊರಿಗೇ ಚಪ್ಪರ ಹಾಕಿ
ಮದುವೆ ಮಾಡಿದ್ದಾನೆ..

ಗದ್ದುಗೆಯಲಿ ಕುಳಿತ ದೊರೆ
ಚಹಾ ಹೀರುತ್ತಾ
ಕಟ್ಟಪ್ಪಣೆ ಹೊರಡಿಸಿದ್ದಾನೆ..
ಬಣ್ಣ ಬಣ್ಣದ ಮಾತುಗಳಲ್ಲಿ
ಬೆನ್ನಿಗಿರಿದು
ಇಂಚಿಂಚೇ ಒಳನೂಕುತಿದ್ದಾನೆ..
ಧರ್ಮಕ್ಕೆ ನೆತ್ತರ ದಾಹ,
ಬಂಡವಾಳಕ್ಕೆ ಬೆವರ ದಾಹ...

ಕಾದಿರಿ ಮತಿಗೇಡಿಗಳೇ;
ಒಂದಲ್ಲಾ ಒಂದು ದಿನ
ಈ ನೆಲದಲ್ಲಿ
ಮುಳ್ಳಿಲ್ಲದ ಗುಲಾಬಿ ಹುಟ್ಟುತ್ತದೆ..,
ಜಾತಿ ಧರ್ಮಗಳೆಲ್ಲವ ಹೊಡೆದಟ್ಟಿದ
ಮೇಲು ಕೀಳೆಲ್ಲವ ಮುಡಿಗಟ್ಟಿದ
ಹೊಸ ಲೋಕ ಹುಟ್ಟುತ್ತದೆ...

ಮಂದಿರದ ಜಾಗಟೆ ನಾದ,
ಮಸೀದಿಯ ನಮಾಜು,
ಚರ್ಚಿನ ಗಂಟೆಯ ಸದ್ದು
ಒಟ್ಟೊಟ್ಟಿಗೆ ಈ ನೆಲದಲ್ಲಿ ಮೇಳೈಸುತ್ತವೆ..

ಏಳು ಬಣ್ಣಗಳು ಒಂದಾಗಿ
ಶುಭ್ರ ಬಿಳಿ ಬಣ್ಣವಾಗುತ್ತದೆ...,
ಏಳು ಬಣ್ಣಗಳು ಜೊತೆಯಾಗಿ
ಬಾಗಿ ಬಳುಕಿ ನಿಂತ ಮಳೆಬಿಲ್ಲಾಗುತ್ತದೆ...
ನಿಮ್ಮ ತಂತ್ರ ಕುತಂತ್ರಗಳೆಲ್ಲಾ
ಕಾಲಗರ್ಭದೊಳಗೆ
ಹುಗಿದುಹೋದ ಅವಶೇಷಗಳಾತ್ತವೆ..

– ಸಚಿನ್ ಅಂಕೋಲಾ

ಮತಾಂತರಗೊಂಡರು.

ಸ್ವಾತಂತ್ರ್ಯ ನಂತರ ನಡೆದ ತಾಂತ್ರಿಕ ಆಧುನೀಕರಣ ಆದರ ಆರಂಭಿಕ ಹಂತಗಳಲ್ಲಿ ವಸಾಹತು ಆಡಳಿತದ ಸುಧಾರಿತ ರೂಪದಲ್ಲೇ ಪರಿಣಾಮ ಬೀರಿದೆ. ಆಧುನಿಕ ಪ್ರಭುತ್ವ ಜಾರಿಗೊಳಿಸಿದ ತಾಂತ್ರಿಕ ಆಧುನೀಕರಣ ಜೊತೆಗೆ ಈ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಮಿಷನರಿಗಳು ಮತ್ತು ಸ್ಥಳೀಯ ಮೇಲ್ಜಾತಿಗಳು ಕೊಡಮಾಡಿದ್ದನ್ನು ಆರಂಭದ ದಿನಗಳಲ್ಲಿ ಮೇಲ್ಜಾತಿ ಜನರು ತಮ್ಮದಾಗಿಸಿಕೊಂಡರು. ಇದರಿಂದಾಗಿ ಮತ್ತು ಬಹುತೇಕ ಬ್ಯಾಂಕ್‌ಗಳನ್ನು, ಶಾಲಾ ಕಾಲೇಜುಗಳನ್ನು, ಸೊಸೈಟಿಗಳನ್ನು ಸ್ಥಳೀಯ ಮೇಲ್ಜಾತಿ ಜನರು ಆರಂಭಿಸಿದ್ದರಿಂದ ಐವತ್ತು ಎಪ್ಪತ್ತರ ದಶಕಗಳಲ್ಲಿ ಬ್ಯಾಂಕ್‌ಗಳಲ್ಲಿ, ಇನ್ಸೂರೆನ್ಸ್ ಆಫೀಸುಗಳಲ್ಲಿ, ಶಾಲೆ ಕಾಲೇಜುಗಳಲ್ಲಿ ಸ್ಥಳೀಯ ಮೇಲ್ಜಾತಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಪಡೆದರು. ಕೆಳಜಾತಿ ಜನರು ತಮ್ಮ ಅತ್ಯಲ್ಪ ಶಿಕ್ಷಣದಿಂದ ಸಮಾಜದ ಕೆಲವು ಅಧೀನ ಉದ್ಯೋಗಗಳಲ್ಲಿ ಅಂದರೆ ಡ್ರೈವರ್, ಪ್ಲಂಬರ್, ಟೈಲರ್, ಮೆಕಾನಿಕ್ ಇತ್ಯಾದಿಗಳಲ್ಲಿ ಸಮಾಧಾನ ಪಟ್ಟುಕೊಳ್ಳಬೇಕಾಯಿತು. ಉಳಿದ ಅವಕಾಶ ವಂಚಿತರು ಪರ ಊರುಗಳಿಗೆ (ಆರಂಭದಲ್ಲಿ ಮುಂಬಯಿ, ನಂತರ ಕೊಲ್ಲಿ ರಾಷ್ಟ್ರಗಳಿಗೆ) ವಲಸೆ ಹೋದರು. ತಾಂತ್ರಿಕ ಆಧುನೀಕರಣದ ಭಾಗವಾಗಿ ಬಂದ ರಾಜಕೀಯ ಅಧಿಕಾರ ಕೇಂದ್ರಗಳನ್ನು ಪ್ರಜಾಪ್ರಭುತ್ವ ತತ್ವಗಳಿಗನುಸಾರ ರೂಪಿಸಲು ಮಾಡಿದ ಪ್ರಯತ್ನಗಳು ದೂರಗಾಮಿ ಪರಿಣಾಮ ಬೀರಲು ಆರಂಭಿಸಿದವು. ಪ್ರಜಾಪ್ರಭುತ್ವ ಪ್ರತಿಪಾದಿಸುವ ಆಧುನೀಕ ನಾಗರೀಕ ಜಗತ್ತಿನ ಮನುಷ್ಯರೆಲ್ಲರೂ ಸಮಾನರು ಎಂಬ ತಿಳುವಳಿಕೆ ಏನಿದೆ ಅದು ಬ್ರಾಹ್ಮಣವಾದದ ತಾತ್ವಿಕತೆಯಲ್ಲಿ ಬೆಳದು ಬಂದ ಜಾತಿಬದ್ಧವಾದ ತಾತ್ವಿಕತೆಗೆ ವಿರುದ್ಧ ಇದೆ. ಯಾಕೆಂದರೆ ಜಾತಿಬದ್ಧತೆ ಹುಟ್ಟಿನಿಂದಲೇ ಮನುಷ್ಯರೆಲ್ಲರೂ ಸಮಾನರು ಎನ್ನುವ ಕಲ್ಪನೆಯನ್ನು ತಿರಸ್ಕರಿಸುತ್ತಿದೆ. ಆದರೆ ಪ್ರಜಾಪ್ರಭುತ್ವದ ತಾತ್ವಿಕ ನೆಲೆಗಳು ಜಾತಿ ಅಥವಾ ಲಿಂಗ ಅಥವಾ ಧರ್ಮದ ನೆಲೆಯಲ್ಲಿ ವ್ಯಕ್ತಿಯೊಬ್ಬರ ಸ್ಥಾನಮಾನಗಳನ್ನು ಅಲ್ಲಗಳೆಯುವುದಕ್ಕೆ ವಿರುದ್ಧ ಇದೆ.[8] ಈ ಎಲ್ಲ ಬೆಳವಣಿಗೆಗಳು ಸಾಂಪ್ರದಾಯಿಕ ಸಮಾಜದ ಯಜಮಾನಿಕ ವರ್ಗಗಳಿಗೆ ನುಂಗಲಾರದ ತುತ್ತಾಯಿತು. ಒಂದು ಕಾಲದಲ್ಲಿ ಮೇಲ್‌ವರ್ಗದ ಜನರು ಕಾಲಲ್ಲಿ ತೋರಿಸಿದ ಕೆಲಸವನ್ನು ತಲೆಯಲ್ಲಿಟ್ಟುಕೊಂಡು ಮಾಡುತ್ತಿದ್ದ ಜನರು ಇಂದು ಸಾಕಷ್ಟು ಕೂಲಿ ಕೊಟ್ಟು ನಿಗದಿತ ಅವಧಿಗೆ ಕೆಲಸ ಮಾಡಿ ಎಂದು ಮನೆಬಾಗಿಲಿಗೆ ಹೋಗಿ ಕರೆದರೂ ಬರುವುದಿಲ್ಲ. ಹಾಗೆಂದು ಹಿಂದಿನ ರೀತಿಯಲ್ಲಿ ಹೊಡೆದು ಬಡಿದು ಕೂಲಿ ಮಾಡಿಸುವಂತಿಲ್ಲ; ಯಾವುದೋ ಬಗೆಯಲ್ಲಿ ಓಲೈಸಿಯೇ ಕೂಲಿ ಮಾಡಿಸಬೇಕಾಗಿದೆ. ಒಂದು ಕಾಲದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮೇಲ್‌ಜಾತಿ ಜನರು ಬರುವಾಗ ದಾರಿಯಿಂದ ದೂರ ಸರಿದು ಗೌರವ ತೋರಿಸುತ್ತಿದ್ದವರು, ಸಾರ್ವಜನಿಕ ಸ್ಥಳಗಳಲ್ಲಿ ಮೇಲ್ ಜಾತಿ ಜನರ ಅಸಮಾನ ನಡವಳಿಕೆಯನ್ನು ಒಪ್ಪಿಕೊಂಡವರು, ಎಲ್ಲ ಬಗೆಯ ಅಸಮಾನತೆಗಳನ್ನು ಮೌನವಾಗಿ ಸಹಿಸುತ್ತಿದ್ದ ಜನರು ಎಲ್ಲ ರಂಗಗಳಲ್ಲೂ ಸಮಾನತೆಯನ್ನು ಕೇಳುವದು ಎಂದಾದರೆ ಮೇಲ್‌ವರ್ಗದ ಅಹಂಗೆ ಭಾರೀ ಪೆಟ್ಟಲ್ಲವೇ? ಹೀಗೆ ಆಧುನೀಕರಣ ಮಾಡಿದ ಸಿಂಬಾಲಿಕ್ ಬದಲಾವಣೆಗಳು ಸ್ಥಳೀಯ ಮೇಲ್‌ವರ್ಗದ ಜನರ ಅಹಂಗೆ ದೊಡ್ಡ ಅಘಾತವನ್ನು ನೀಡಿವೆ.

ಈ ಸಿಂಬಾಲಿಕ್ ಬದಲಾವಣೆಗಿಂತ ಹೆಚ್ಚು ಮೇಲ್‌ಜಾತಿ ಜನರ ಸ್ಥಾನಮಾನವನ್ನು ಮೂಲಭೂತವಾಗಿ ಬದಲಿಸಿದ್ದು ಸಮಷ್ಠಿಯ ಸಂಪನ್ಮೂಲಗಳನ್ನು ಶತಮಾನಗಳಿಂದ ಖುಶಿ ಬಂದಂತೆ ಬಳಸುವ ಅವರ ಹಕ್ಕಿಗೆ ಬಂದ ವಿಪತ್ತು. ಜಲ ಸಂಪನ್ಮೂಲ, ಭೂಮಿ, ಅರಣ್ಯ ಸಂಪನ್ಮೂಲ, ಖನಿಜ ಸಂಪನ್ಮೂಲ ಇತ್ಯಾದಿಗಳ ಬಳಿಕೆ ತೀರ್ಮಾನದ ಹಕ್ಕನ್ನು ಮೇಲ್‌ಜಾತಿ ಜನರು ಶತಮಾನಗಳಿಂದ ಅನುಭವಿಸುತ್ತಾ ಬಂದಿದ್ದರು. ಮೇಲ್‌ಜಾತಿ ಜನರು ಬಳಸಿ ಉಳಿಸಿದನ್ನು ಕೆಳಜಾತಿ ಜನರಿಗೆ ವಿತರಿಸಲಾಗುತ್ತಿತ್ತು ಮತ್ತು ಅವರು (ಕೆಳಜಾತಿ ಜನರು) ತಮ್ಮ ಪಾಲಿಗೆ ಬಂದುದರಲ್ಲಿ ತೃಪ್ತರಾಗಬೇಕಿತ್ತು. ಹೆಚ್ಚು ಸಂಖ್ಯೆಯಲ್ಲಿರುವ ನಮಗ್ಯಾಕೆ ಕಡಿಮೆ? ಕಡಿಮೆ ಸಂಖ್ಯೆಯಲ್ಲಿರುವ ನಿಮಗ್ಯಾಕೆ ಹೆಚ್ಚು? ಎಂದು ಪ್ರಶ್ನಿಸುವ ಸ್ಥಿತಿ ಇರಲಿಲ್ಲ. ಹೀಗೆ ಸಮಷ್ಠಿಯ ಸಂಪನ್ಮೂಲ ವಿತರಣೆಯನ್ನು ತೀರ್ಮಾನಿಸುವ ಮೇಲ್‌ಜಾತಿ ಜನರ ಹಕ್ಕು ಸಾಂಪ್ರದಾಯಿಕ ಸಮಾಜದಲ್ಲಿ ಪ್ರಶ್ನಾತೀತವಾಗಿತ್ತು. ಆದರೆ ತಾಂತ್ರಿಕ ಆಧುನೀಕರಣದೊಂದಿಗೆ ಈ ಸ್ಥಿತಿ ಸಂಪೂರ್ಣವಾಗಿ ಬದಲಾಯಿತು. ಸಮಷ್ಠಿಯ ಸಂಪನ್ಮೂಲ (ಭೌತಿಕ ಹಾಗು ಸಾಂಸ್ಕೃತಿಕ ಸಂಪನ್ಮೂಲಗಳ) ವಿತರಣೆ ತೀರ್ಮಾನದಾರರು ಕೂಡ ಬದಲಾದರು. ಆಧುನೀಕರಣದೊಂದಿಗೆ ಸಮಷ್ಠಿಯ ಸಂಪನ್ಮೂಲ ವಿತರಣೆ ತೀರ್ಮಾನ ಆಧುನಿಕ ಸಂಸ್ಥೆಗಳಿಗೆ (ಸೊಸೈಟಿ, ಪಂಚಾಯತ್, ವಿಧಾನ ಸಭೆ, ಲೋಕ ಸಭೆ ಇತ್ಯಾದಿಗಳಿಗೆ) ವರ್ಗಾಯಿಸಲ್ಪಟ್ಟಿತ್ತು. ಈ ಆಧುನಿಕ ಸಂಸ್ಥೆಗಳ ಸದಸ್ಯತ್ವ ಹುಟ್ಟಿನಿಂದ ಬರುವುದಲ್ಲ; ಓಟಿನಿಂದ ಬರುವಂತಾಯಿತು. ಅತೀ ಹೆಚ್ಚು ಓಟು ಪಡೆದ ಯಾರು ಕೂಡ ಈ ಆಧುನಿಕ ಸಂಸ್ಥೆಗಳ ಸದಸ್ಯರಾಗಬಹುದು. ಕೆಳಜಾತಿ ಜನರು ಸಂಖ್ಯೆಯಲ್ಲಿ ಹೆಚ್ಚು ಇದ್ದುದರಿಂದ ಸಹಜವಾಗಿಯೇ ಅವರು ಹೆಚ್ಚು ಓಟು ಪಡೆಯುವುದು ಸುಲಭವಾಯಿತು. ಇದರಿಂದಾಗಿ ಹೆಚ್ಚು ಹೆಚ್ಚು ಕೆಳಜಾತಿ ಜನರು ಮೇಲಿನ ಸಂಸ್ಥೆಗಳಲ್ಲಿ (ಸೊಸೈಟಿ, ಪಂಚಾಯತ್, ವಿಧಾನ ಸಭೆ, ಲೋಕಸಭೆ ಇತ್ಯಾದಿಗಳಲ್ಲಿ) ಸದಸ್ಯರಾಗಲು ಸಾಧ್ಯವಾಯಿತು. ಈ ಬೆಳವಣಿಗೆಯಿಂದಾಗಿ ಸಮಷ್ಠಿಯ ಸಂಪನ್ಮೂಲಗಳ ವಿತರಣೆ ಮೇಲೆ ಮೇಲ್ ಜಾತಿ ಜನರ ಹಿಡಿತ ಕಡಿಮೆ ಆಗುವುದರ ಜತೆಗೆ ಕೆಳಜಾತಿ ಜನರ ಹಿಡಿತ ಬಲಗೊಳ್ಳುತ್ತಾ ಬಂತು. ಈ ಎಲ್ಲ ಬದಲಾವಣೆಗಳು ಮೇಲ್‌ವರ್ಗದ ಜನರಿಗೆ ನುಂಗಲಾರದ ತುತ್ತಾಯಿತು. ಹಾಗೆಂದು ಈ ಎಲ್ಲ ಆಘಾತಗಳಿಂದ ಹೊರಬರಲು ಹಿಂದಿನ ರೀತಿಯಲ್ಲಿ ಕೆಳವರ್ಗದ ಜನರ ಮೇಲೆ ನೇರ ದಬ್ಬಾಳಿಕೆ ಅಥವಾ ಯಜಮಾನಿಕೆ ಸಾಧ್ಯವಾಗಿಲ್ಲವಾಗಿತ್ತು.

ಇಂತಹ ಸಂದಿಗ್ಧ ಪರಿಸ್ಥಿತಿಯಿಂದ ಹೊರಬರಲು ಮೇಲ್‌ವರ್ಗದ ಜನರು ಕಂಡುಕೊಂಡ ಸುಲಭ ದಾರಿಯೆಂದರೆ ಕೋಮುವಾದ, ಮತ್ತೊಂದು ಜಾತಿ ಅಥವಾ ಧರ್ಮದ (ಮುಸ್ಲಿಂರು/ಕ್ರಿಶ್ಚಿಯನ್ನರನ್ನು) ಜನರನ್ನು ಖಳನಾಯಕರನ್ನಾಗಿ ಚಿತ್ರಿಸಿ ನಮ್ಮಲ್ಲಿಯ ಕುಂದು ಕೊರತೆಗಳಿಗೆ ಈ ಖಳನಾಯಕರೇ ಕಾರಣ ಎಂದು ಕೋಮುವಾದ ಹೇಳುತ್ತದೆ ಮತ್ತು ಈ ಕೋಮುವಾದ ಕಟ್ಟಿಕೊಡುವ ಚಿತ್ರಣವನ್ನು ನಂಬುವಂತೆ ಮಾಡಲು ಹಲವು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಈ ಎಲ್ಲ ಕಾರ್ಯಕ್ರಮಗಳಲ್ಲೂ ಖಳನಾಯಕರಾಗಿ ಚಿತ್ರಿಸಲ್ಪಟ್ಟ ಸಮುದಾಯದ ಜನರ ಬದುಕು, ಆಚರಣೆಗಳು ಬಹುಸಂಖ್ಯಾತರ ಬದುಕು, ಆಚರಣೆಗಳಿಗೆ ಎಷ್ಟು ಭಿನ್ನ ಮಾತ್ರವಲ್ಲ, ವಿರುದ್ಧ ಇವೆ ಎಂದು ಸಾಬೀತು ಪಡಿಸಲಾಯಿತು. ಅಲ್ಪಸಂಖ್ಯಾತರ ಬದುಕು ಆಚರಣೆಗಳು ಬಹುಸಂಖ್ಯಾತರ ಏಳಿಗೆಗೆ ಕುತ್ತಾಗಿದೆಯೆಂದು ಪ್ರಚಾರ ಪಡಿಸಲಾಯಿತು. ಅಷ್ಟು ಮಾತ್ರವಲ್ಲ ಬಹುಸಂಖ್ಯಾತರ ಏಳಿಗೆಗೆ ಅಥವಾ

ಅಭಿವೃದ್ಧಿಗೆ ಅಲ್ಪಸಂಖ್ಯಾತರ ಕೋಮಿನ ನಾಶ ಎಷ್ಟು ಅಗತ್ಯ ಎಂದು ಸತತವಾಗಿ ಹೇಳಲಾಯಿತು. ಈ ಎಲ್ಲ ಅಂಶಗಳು ಕೋಮುವಾದವನ್ನು ನಂಬುವ ಜನರ ಅರಿವಿಗೆ ಬಾರದೆ ಅವರ ಪ್ರಜ್ಞೆಯ ಭಾಗವಾಗುತ್ತವೆ ಮತ್ತು ಕೋಮು ಗಲಭೆ ಸಂದರ್ಭದಲ್ಲಿ ಅವರೆಲ್ಲ ನೇರ (ಹೊಡೆತ ಬಡಿತ, ಕೊಲೆ ಸುಲಿಗೆಗಳಲ್ಲಿ ಭಾಗವಹಿಸುವುದು) ಮತ್ತು ಪರೋಕ್ಷವಾಗಿ (ಕೋಮುಗಲಭೆಗಳನ್ನು ಹಬ್ಬಿಸುವ ಮಾಹಿತಿಗಳಿಗೆ ವಾಹಕರಾಗುವುದು. ಗಲಭೆಗಳನ್ನು ವಿರೋಧಿಸದಿರುವುದು, ಗಲಭೆಗೆ ಗುರಿಯಾದವರಿಗೆ ರಕ್ಷಣೆ ನೀಡದಿರುವುದು) ಕೋಮುಗಲಭೆಗಳಲ್ಲಿ ಭಾಗವಹಿಸುವಂತೆ ಮಾಡಿದೆ. ಈ ಬಗೆಯ ಕೋಮುವಾದದಿಂದ ಮೇಲ್‌ವರ್ಗಕ್ಕೆ ಎರಡು ಲಾಭ, ಒಂದು, ಅಲ್ಪಸ್ವಲ್ಪ ಬಲಗೊಳ್ಳುವ ಅಲ್ಪಸಂಖ್ಯಾತರನ್ನು ಹತೋಟಿಯಲ್ಲಿಟ್ಟುಕೊಳ್ಳುವುದು. ಎರಡು, ಕೆಳಜಾತಿ ಜನರನ್ನು ಧರ್ಮದ ನೆಲೆಯಲ್ಲಿ ಒಗ್ಗೂಡಿಸುವುದು ಕೋಮುವಾದದ ಮತ್ತೊಂದು ಉದ್ದೇಶವಾಯಿತು. ಹೀಗೆ ಮಾಡುವುದರಿಂದ ತಮ್ಮದೇ ಕೋಮಿಗೆ ಸೇರಿದ ಆಧುನೀಕರಣದಿಂದ ಪ್ರಭಾವಿತಗೊಂಡು ಸಾಂಪ್ರದಾಯಿಕ ಸಮಾಜದ ಯಜಮಾನಿಕ ವರ್ಗದ ಮೌಲ್ಯಗಳನ್ನು ಪ್ರಶ್ನಿಸುವ ಕೆಳ ಜಾತಿ ಜನರನ್ನು ಅಲ್ಪಸಂಖ್ಯಾತ ಕೋಮಿನವರನ್ನು ಸದೆಬಡಿಯಲು ಪ್ರೇರೇಪಿಸಲಾಯಿತು. ಕೆಳಜಾತಿ/ವರ್ಗದ ಜನರು ತಮ್ಮ ಜಾತಿ/ವರ್ಗದ ನೆಲೆಯಲ್ಲಿ ಒಟ್ಟಾಗದಿರುವುದರಿಂದ ಸಮಷ್ಠಿಯ ಸಂಪನ್ಮೂಲ ವಿತರಿಸುವ ಸಂಸ್ಥೆಗಳಲ್ಲಿ ಸದಸ್ಯತ್ವ ಸಾಧ್ಯವಿಲ್ಲದಾಯಿತು. ಇದೇ ಸಂದರ್ಭದಲ್ಲಿ ಹಿಂದುಗಳು ನಾವೆಲ್ಲ ಒಂದೇ ಎಂದು ಹೇಳುತ್ತಾ ಹಿಂದುಗಳಲ್ಲಿನ ಮೇಲ್‌ವರ್ಗಗಳು ಮೇಲಿನ ಎಲ್ಲ ಸಂಸ್ಥೆಗಳಲ್ಲಿ ತಮ್ಮ ಸ್ಥಾನ ಭದ್ರಪಡಿಸಲು ಕೋಮುವಾದ ಸಹಕರಿಸುತ್ತದೆ.

ಕೊನೆ ಟಿಪ್ಪಣಿಗಳು :

1. ಹಾಗೆಂದು ಆ ಸಮುದಾಯಗಳು ತಮ್ಮ ಕಸುಬನ್ನು ಬಿಟ್ಟು ಬದುಕಲು ಸಾಧ್ಯವಿರಲಿಲ್ಲ. ಜತೆಗೆ ತಮ್ಮ ಉತ್ಪಾದನೆಗೆ ಸಾಕಷ್ಟು ಬೇಡಿಕೆ ಇದ್ದುದರಿಂದ (ಶೇಂದಿ ಕುಡಿಯುವವರು ಮತ್ತು ಮೀನು ತಿನ್ನುವವರು ಇದ್ದುದರಿಂದ) ಸಾಂಪ್ರದಾಯಿಕ ವೃತ್ತಿಗಳನ್ನು ಮಾಡಿ ತಮ್ಮ ಜೀವನಾಂಶ ಭರಿಸಿಕೊಳ್ಳುತ್ತಿದ್ದರು.

2. ಆಧುನೀಕರಣದ ಆರಂಭದ ದಿನಗಳಲ್ಲಿ ತಾಂತ್ರಿಕ ಶಿಕ್ಷಣ ನೀಡುವ ಸಂಸ್ಥೆಗಳನ್ನು ಆರಂಭಿಸಿದ ಜಿಲ್ಲೆಗಳಲ್ಲಿ ದಕ್ಷಿಣ ಕನ್ನಡ ಕೂಡ ಒಂದು. ಮೆಡಿಕಲ್, ಎಂಜಿನೀಯರಿಂಗ್ ಕಾಲೇಜುಗಳು ತುಂಬಾ ಹಿಂದಿನಿಂದಲೇ ಇದ್ದವು. ಇತ್ತೀಚಿನವರೆಗೆ ಜಿಲ್ಲೆಯ ತಳಸಮುದಾಯಗಳ ಬೆರಳೆಣಿಕೆಯಷ್ಟು ಮಂದಿ ಈ ವಿದ್ಯಾಲಯಗಳಲ್ಲಿ ಓದಲು ಅವಕಾಶ ದೊರೆಯಲಿಲ್ಲ. ಅದಕ್ಕೆ ಬಹುಮುಖ್ಯ ಕಾರಣ ಈ ಸಂಸ್ಥೆಗಳು ಕೇಳುತ್ತಿದ್ದ ಕ್ಯಾಪಿಟೇಷನ್. ಕೆಲವು ಲಕ್ಷಗಳಿದ್ದ ಕ್ಯಾಪಿಟೇಷನ್ ಕೊಟ್ಟು ಓದಿಸುವಷ್ಟು ಶಕ್ತಿ ಮೂರು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದ ತಳಸಮುದಾಯಗಳಿಗೆ ಇರಲಿಲ್ಲ. ಆದುದರಿಂದ ಹೊರಗಿನ ಅನುಕೂಲಸ್ಥರೊಂದಿಗೆ ಸ್ಥಳೀಯ ಅನುಕೂಲಸ್ಥರು ಮಾತ್ರ ಈ ಸಂಸ್ಥೆಗಳ ಲಾಭ ಪಡೆಯಲು ಸಾಧ್ಯವಾಯಿತು.

3. ಎಂ.ಚಂದ್ರ ಪೂಜಾರಿ, ಟ್ರೆಂಡ್ಸ್ ಇನ್ ಎಂಟರ್‌ಪ್ರನರ್‌ಶಿಪ್ ಅಂಡ್ ರೀಜನಲ್ ಡೆವಲಪ್‌ಮೆಂಟ್ – ಎ ಸ್ಟಡಿ ಸ್ಪೇಷಲ್ ರೆಫರೆನ್ಸ್ ಟು ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್, ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿಹೆಚ್‌ಡಿ ಮಹಾಪ್ರಬಂಧ, 1995

4. ಮರ ಹತ್ತುವ (ಸ್ಕಿಲ್ ಇದ್ದವರು) ಕಲೆ ಗೊತ್ತಿರುವ ಯಾರು ಕೂಡ ಶೇಂದಿ ತೆಗೆಯಬಹುದು. ಹರಿತವಾದ ಕತ್ತಿ (ಇದನ್ನು ತುಳುವಿನಲ್ಲಿ ತಾರ್ಕತಿ ಎನ್ನುತ್ತಾರೆ) ಮರ ಹತ್ತಲು ಬಿದಿರಿನ ಏಣಿ (ಇದನ್ನು ತುಳುವಿನಲ್ಲಿ ಕೇರ್ಪು ಎನ್ನುತ್ತಾರೆ) ಮತ್ತು ಶೇಂದಿ ಶೇಖರಿಸಲು ಕೆಲವು ಮಡಿಕೆಗಳು ಶೇಂದಿ ತೆಗೆಯವ ಕೆಲಸಕ್ಕೆ ಬೇಕಾದ ತಯಾರಿ. ಈ ಎಲ್ಲದಕ್ಕೆ ಈಗ ಹೆಚ್ಚೆಂದರೆ ಕೆಲವು ನೂರು ರೂಪಾಯಿಗಳು ಸಾಕು. ತೆಗೆದ ಶೇಂದಿಯನ್ನು ಮಾರಲು ರಸ್ತೆ ಬದಿಯೇ ಆಗಬೇಕೆಂದಿಲ್ಲ, ಸುಸಜ್ಜಿತ ಕಟ್ಟಡ ಬೇಕೆಂದಿಲ್ಲ, ಕುರ್ಚಿ ಮೇಜುಗಳ ಅವಶ್ಯಕತೆಯಿಲ್ಲ, ದುಬಾರಿ ಗ್ಲಾಸುಗಳು ಬೇಕಿಲ್ಲ. ಶೇಂದಿ ಮರದ ಬುಡದಲ್ಲಿ ಮಣ್ಣಿನ ಕುಡಿಕೆಯಲ್ಲಿ ಕುಡಿಯುವ ಗ್ರಾಹಕರು ಎಲ್ಲ ಕಡೆ ಇದ್ದಾರೆ.

5. ಬೆಸ್ತರು ಅಥವಾ ಬಿಲ್ಲವರು ತಮ್ಮ ಸಾಂಪ್ರದಾಯಿಕ ಕಸುಬಿಗೆ ಅಂಟಿಕೊಳ್ಳಬೇಕೆನ್ನುವ ವಾದ ಇದಲ್ಲ. ಖಂಡಿತವಾಗಿಯೂ ಅವರು ಕೂಡ ಡಾಕ್ಟರು, ಎಂಜೀನಿಯರ್, ಕಂಪ್ಯೂಟರ್ ಸೈಂಟಿಸ್ಟ್‌ಗಳು ಆಗಬೇಕು. ಆದರೆ ಬಹುತೇಕ ಬಿಲ್ಲವರ ಅಥವಾ ಬೆಸ್ತರ ಅಥವಾ ತಳಸ್ತರದ ಸಮುದಾಯಗಳ ಜನರಿಗೆ ಡಾಕ್ಟರ್, ಎಂಜೀನೀಯರ್ ಆಗುವುದು ಬಿಡಿ ಅವರ ಆರ್ಥಿಕ ಹಿನ್ನೆಲೆಯಿಂದ ಬಿಎ, ಬಿಕಾಂ ಓದುವುದೇ ಕಷ್ಟವಾಗಿದೆ. ಬಿಎ, ಬಿಕಾಂ ಓದಿದವರಿಗೆ ಉದ್ಯೋಗದ ಮಾರುಕಟ್ಟೆಯಲ್ಲಿ ಯಾವ ಅವಕಾಶ ಕಾದಿದೆ ಎಂದು ನಮಗೆಲ್ಲ ತಿಳಿದಿದೆ. ಇನ್ನು ಸರಕಾರಿ ಕೆಲಸ ಸಿಗಬೇಕಾದರೆ ಯೋಗ್ಯತೆಗಿಂತ ಹೆಚ್ಚು ದುಡ್ಡು ಮತ್ತು ಪ್ರಭಾವದ ಅಗತ್ಯ ಇದೆ ಎಂದು ಎಲ್ಲರಿಗೂ ತಿಳಿದ ವಿಷಯ.

6. ಹೆಚ್ಚಿನ ವಿವರಗಳಿಗೆ ಎಂ.ಚಂದ್ರ ಪೂಜಾರಿಯವರ, ಜನಾಯೋಜನೆ – ಹೈದರಾಬಾದ್ ಕರ್ನಾಟಕದ ಅನುಭವಗಳು (ವಿದ್ಯಾರಣ್ಯ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ – ಹಂಪಿ,. 2004) ಪುಸ್ತಕ ನೋಡಬಹುದು.

7. ಜಿಲ್ಲೆಯ ಬಹುತೇಕ ಕಡೆ ಇಂದು ಕೂಡ ಸೊಸೈಟಿಗಳು ಸಮಾಜದ ಮೇಲ್ವರ್ಗ ಹಿಡಿತದಲ್ಲಿವೆ. ಇವರಿಗೆ ತಮ್ಮ ಸೊಸೈಟಿಗಳು ವ್ಯವಸ್ಥಿತವಾಗಿ ನಡೆಯುತ್ತಿವೆ ಎಂದು ಹೊರಗಿನ ಪ್ರಪಂಚಕ್ಕೆ ತೋರಿಸುವುದು ಮುಖ್ಯ. ಇದಕ್ಕಾಗಿ ಪ್ರತಿ ವರ್ಷ ಸಾಲ ಕಟ್ಟಲಾಗದ ರೈತರನ್ನು ಪುಸಲಾಯಿಸಿಯೋ ಅಥವಾ ಒತ್ತಡದಿಂದಲೋ ಹೊಸ ಸಾಲ ಮಾಡಿ ಹಳೇ ಸಾಲವನ್ನು ತೀರಿಸಲು ಒಪ್ಪಿಸುತ್ತಾರೆ.

8. ಲಿಖಿತ ಸಂವಿಧಾನವನ್ನು ಲೋಕಸಭೆ ಸ್ವೀಕರಿಸಿದ ನಂತರ ಕಾನೂನು ಪ್ರಕಾರ ಜಾತಿ, ಧರ್ಮ, ಲಿಂಗ, ಇತ್ಯಾದಿ ನೆಲೆಗಳಲ್ಲಿ ಸಾರ್ವಜನಿಕವಾಗಿ ಅಸಮಾನತೆ ಆಚರಿಸುವುದು ಕಾನೂನು ಬಾಹಿರ. ಜಾತಿ, ಧರ್ಮ, ಲಿಂಗ ಇತ್ಯಾದಿಗಳ ನೆಲೆಯಲ್ಲಿ ನಡೆಯುವ ಅಸಮಾನತೆಯನ್ನು ತಡೆಗಟ್ಟಲು ಅಸ್ಪೃಶ್ಯತೆ ನಿವಾರಣೆ ಕಾಯಿದೆ, ವರದಕ್ಷಿಣೆ ತಡೆ ಕಾಯಿದೆ, ಮಹಿಳೆಯರಿಗೆ ಆಸ್ತಿಯಲ್ಲಿ ಸಮಪಾಲು, ಕೌಟುಂಬಿಕ ದೌರ್ಜನ್ಯಗಳನ್ನು ತಡೆಯುವ ಕಾಯಿದೆ ಇತ್ಯಾದಿಗಳು ಜಾರಿಗೆ ಬಂದಿವೆ.

ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆ



ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ

ಕರಾವಳಿಯ ದೈವದೇವರುಗಳು, ಜಾತಿ ಮತ ಧರ್ಮಗಳು, ಭಾಷೆಗಳು ವೈವಿಧ್ಯಮಯವಾಗಿದ್ದು ಅದರ ಪಾಲುದಾರರಾದ ಕರಾವಳಿಯ ಜನತೆ ದೀರ್ಘಕಾಲದ ಇತಿಹಾಸದಲ್ಲಿ ರಾಜಕೀಯ ಸಾಮಾಜಿಕ ಕಾರಣಗಳಿಗಾಗಿ ಸೌಹಾರ್ದವನ್ನು ತಾವೇ ಕಟ್ಟಿಕೊಂಡಿರುವುದು ಕಂಡು ಬರುತ್ತದೆ. ಅಂಥ ಅನಿವಾರ್ಯತೆಯನ್ನು ಎಲ್ಲಾ ಕಾಲಕ್ಕೂ ನಾವು ಕಂಡುಕೊಳ್ಳಬೇಕು. ಪರಂಪರೆಯ ಅರಿವು ಈ ನಿಟ್ಟಿನಲ್ಲಿ ಅಗತ್ಯವಾಗಿ ನಾವು ಪಡೆಯಬೇಕಾಗಿದೆ.

ವಾಸುದೇವ ಉಚ್ಚಿಲ ಉಪಾಧ್ಯಕ್ಷರು, ಸಮುದಾಯ ಕರ್ನಾಟಕ

ಯಾವುದೇ ಪ್ರದೇಶದಲ್ಲಿ ಕೃಷಿ, ಮೀನುಗಾರಿಕೆ, ವಾಣಿಜ್ಯ, ಕೈಗಾರಿಕೆ ಇತ್ಯಾದಿ ಆರ್ಥಿಕ ಚಟುವಟಿಕೆ ಸ್ಥಿರವೂ ಅಭಿವೃದ್ಧಿಶೀಲವೂ ಆಗಬೇಕಿದ್ದರೆ, ಆ ಪ್ರದೇಶದ ಜನಜೀವನದಲ್ಲಿ ಸಂಘರ್ಷವಿಲ್ಲದ ವಾತಾವರಣ ಬೇಕು. ಶಾಂತಿ ಸೌಹಾರ್ದದ ಕಾಲಾವಧಿಯಲ್ಲಿ ಜನತೆಯ ಆರ್ಥಿಕ ಜೀವನ ವಿಕಸಿತವಾಗುವುದಲ್ಲದೆ, ಸಾಮಾಜಿಕ ಸಾಂಸ್ಕೃತಿಕ ಶೈಕ್ಷಣಿಕ ಜೀವನವೂ ಉನ್ನತ ಮಟ್ಟಕ್ಕೇರುತ್ತದೆ. ಕರಾವಳಿ ಕರ್ನಾಟಕದ ಸೌಹಾರ್ದ ಕೆಟ್ಟು ಹೋದ ಕಾಲಘಟ್ಟದಲ್ಲಿ ನಾವು ನಿಂತಿದ್ದೇವೆ. ಕಳೆದು ಹೋದ ಸೌಹಾರ್ದವನ್ನು ಮರಳಿ ಗಳಿಸಿಕೊಳ್ಳಲು ಪರಂಪರೆಯಲ್ಲಿನ ಸೌಹಾರ್ದದ ನೆಲೆಗಳನ್ನು ಗುರುತಿಸಿ ಮನನ ಮಾಡುವುದು ನಾವು ಮಾಡಬೇಕಾದ ಕರ್ತವ್ಯಗಳಲ್ಲಿ ಒಂದಾಗಿದೆ.

ಕರ್ನಾಟಕದ ಕರಾವಳಿ ಎನ್ನುವಾಗ ಕಳೆದ 30 ವರ್ಷಗಳಿಂದ ಮತೀಯ ಸೌಹಾರ್ದ ಕೆಟ್ಟು ಹೋಗಿರುವ ಕಾಸರಗೋಡಿನಿಂದ ತೊಡಗಿ ಉತ್ತರದ ಶಿರೂರು ವರೆಗಿನ ಹಿಂದಿನ ದಕ್ಷಿಣ ಕನ್ನಡ ಜಿಲ್ಲೆಯನ್ನು ಇಲ್ಲಿ ವಿಷಯ ವ್ಯಾಪ್ತಿಯಲ್ಲಿ ತರಲಾಗಿದೆ. ಬೇರೆ ಬೇರೆ ಮತಗಳ ಜನರು ಒಂದೆಡೆ ವಾಸಿಸುವುದೂ, ಹಲವು ಜಾತಿಗಳವರು ಹಾಗೂ ಹಲವು ಭಾಷೆ ಮಾತನಾಡುವವರು ಒಂದೇ ಪ್ರದೇಶದಲ್ಲಿ ವಾಸಿಸುವುದೂ ಸಂಘರ್ಷಗಳಿಗೆ ಕಾರಣ ಎಂದು ಕೆಲವರು ಆಗೀಗ ವಾದಿಸುತ್ತಿರುತ್ತಾರೆ. ಅದು ಸುಳ್ಳು. ಇಲ್ಲಿ ಹೇಳಿದ ದಕ್ಷಿಣ ಕನ್ನಡ ಜಿಲ್ಲೆಯ 2000 ವರ್ಷಗಳ ಇತಿಹಾಸವನ್ನು ಅಭ್ಯಸಿಸಿದವರಿಗೆ, ಜಾತಿ ಮತ ಭಾಷೆಗಳ ಬಹುತ್ವ ಎಂದೂ ಸೌಹಾರ್ದ ಸಾಮರಸ್ಯಗಳಿಗೆ ಅಡ್ಡಿಯಾಗುವುದಿಲ್ಲವೆಂಬುದನ್ನು ವಿಶದಪಡಿಸುತ್ತದೆ. ಆರ್ಥಿಕ ರಾಜಕೀಯ ಕಾರಣಗಳಿಗಾಗಿ ಅಲ್ಲೊಮ್ಮೆ ಇಲ್ಲೊಮ್ಮೆ ಆದ ಗಲಭೆಗಳೂ ಜವಾಬ್ದಾರಿಯುತ ನಾಗರಿಕರಿಂದ, ಅಧಿಕಾರಿಗಳಿಂದ ಸುಲಲಿತವಾಗಿ ನಿವಾರಣೆಯಾದ ಉದಾಹರಣೆಗಳನ್ನು ನಾವು ನೋಡುತ್ತೇವೆ.

ಜಾತಿ ಮತ ಭಾಷೆಗಳ ಬಹುತ್ವ

ಸುಮಾರು ಇನ್ನೂರು ಕಿಲೋಮೀಟರ್ ದಕ್ಷಿಣೋತ್ತರವಾಗಿ ಚಾಚಿರುವ ದಕ್ಷಿಣ ಕನ್ನಡದ ಪಶ್ಚಿಮಕ್ಕೆ ವಿಸ್ತಾರ ಕಡಲು ಇದೆ. ಪೂರ್ವಕ್ಕೆ ಬೆಟ್ಟ ಕಾಡು ಕಣಿವೆಗಳಿಂದ ಕೂಡಿದ ಸಹ್ಯಾದ್ರಿ ಇದೆ. ಇವೆರಡರ ನಡುವಿರುವ ದಕ್ಷಿಣ ಕನ್ನಡ ಜಿಲ್ಲೆಯ ನೆಲ ಸಮತಟ್ಟಾಗಿರದೆ ಗುಡ್ಡ ಬಯಲು ಹೊಳೆಗಳಿಂದ ಕೂಡಿದೆ. ಕಡಲಿಗೆ ಸೇರುವ ನದೀಮುಖಗಳ ಊರುಗಳು ನೌಕಾಯಾನ ಹಾಗೂ ವಾಣಿಜ್ಯಕ್ಕೆ ಅನುಕೂಲವಾಗಿದ್ದು ಕಿಸ್ತಶಕದ ಆರಂಭಕ್ಕೇನೇ ಹಲವು ಬಂದರು ಪಟ್ಟಣಗಳಾಗಿದ್ದುವು. ಇವುಗಳಿಂದ ವಾಣಿಜ್ಯ ಹೆಚ್ಚಿ ಕರಾವಳಿಯ ಸಂಪತ್ತೂ ವೃದ್ಧಿಯಾಯಿತು. ಕಾಸರಗೋಡು, ಕುಂಬಳೆ, ಮಂಜೇಶ್ವರ, ಉಳ್ಳಾಲ, ಮಂಗಳೂರು, ಮೂಲ್ಕಿ, ಮಲ್ಪೆ, ಬಾರ್ಕೂರು, ಬಸ್ರೂರು, ಗಂಗೊಳ್ಳಿ ಇತ್ಯಾದಿ ಬಂದರು ಪಟ್ಟಣಗಳು ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ವ್ಯಾಪಾರದ ಕೇಂದ್ರಗಳಾಗಿದ್ದುದನ್ನು ತಿಳಿಸುತ್ತದೆ. ಮಲೆನಾಡು ಉತ್ಪನ್ನಗಳಾದ ತೆಂಗು, ಅಡಿಕೆ, ಮೆಣಸು, ಏಲಕ್ಕಿ, ಸಾಂಬಾರ ಇತ್ಯಾದಿ ಕೃಷ್ಯುತ್ಪನ್ನಗಳು ಈ ಜಿಲ್ಲೆಯಲ್ಲಿ ಬೆಳೆಯುತ್ತಿದ್ದುದಲ್ಲದೆ, ಮೂಡಣದ ಕನ್ನಡನಾಡಿನ ಹತ್ತಿ, ಖನಿಜ ಹಾಗೂ ಕೃಷಿ ಉತ್ಪನ್ನಗಳೂ ಇವೇ ಬಂದರಿನಿಂದ ಅರಬ್ ಹಾಗೂ ಪಶ್ಚಿಮದ ದೇಶಗಳಿಗೆ ರಫ್ತಾಗುತ್ತಿದ್ದುದು ಇತಿಹಾಸದಿಂದ ತಿಳಿದು ಬರುತ್ತದೆ. ಆ ಕಾರಣಗಳಿಗಾಗಿಯೇ ಇತಿಹಾಸ ಕಾಲದಲ್ಲಿ ಬೇರೆ ಬೇರೆ ಜಾತಿ ಮತ ಭಾಷೆಗಳ ಜನಗಳು ಬಂದು ಈ ಪ್ರದೇಶದಲ್ಲಿ ನೆಲೆ ನಿಂತಿವೆ.

ಭಾಷೆಯ ಮಟ್ಟಿಗೆ ಹೇಳುವುದಾದರೆ ಪ್ರಧಾನವಾಗಿ ತುಳು ಭಾಷಿಗರಿದ್ದಾರೆ; ಅವರ ತುಳುವಿನಲ್ಲೂ ಪ್ರಾದೇಶಿಕ ಪ್ರಭೇದಗಳೂ

ಜಾತಿ ವಿಶಿಷ್ಟವಾದ ಪ್ರಭೇದಗಳೂ ಇವೆ. ಹವ್ಯಕ, ಕುಂದಗನ್ನಡ, ಅರೆಭಾಷೆ ಇತ್ಯಾದಿ ಕನ್ನಡದ ಪ್ರಭೇದಗಳನ್ನು ಆಡುವ ಕನ್ನಡಿಗರೂ ಇದ್ದಾರೆ. ಬ್ಯಾರಿ, ಕೊಂಕಣಿ, ಮರಾಠಿ ಇವುಗಳನ್ನು ಆಡುವವರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಮಲಯಾಳ ಭಾಷಿಗರೂ, ಅದರ ಉಪಭಾಷೆಗಳನ್ನಾಡುವವರೂ ಸಣ್ಣ ಸಂಖ್ಯೆಯಲ್ಲಿದ್ದಾರೆ. ತಮಿಳರೂ ಇದ್ದಾರೆ. ಇವತ್ತು ಇಷ್ಟೊಂದು ಪ್ರಮಾಣದಲ್ಲಿ ವಿವಿಧ ಭಾಷೆಗಳನ್ನಾಡುವ ಜನರನ್ನು ನೋಡುತ್ತಿದ್ದರೆ, ಇತಿಹಾಸದ ಕಾಲದಲ್ಲಿ ಒಟ್ಟಿಗಲ್ಲದಿದ್ದರೂ ಬೇರೆ ಬೇರೆ ಸಂದರ್ಭದಲ್ಲಿ ಇವರು ಬಂದವರೇ ಆಗಿರಬೇಕು. ಆದರೆ ಶಾಸನೋಕ್ತ ದಾಖಲೆಗಳಂತೆ ಕನ್ನಡವೇ ಇಲ್ಲಿನ ಆಡಳಿತದ ಭಾಷೆಯಾಗಿದ್ದು ತಿಳಿಯುತ್ತದೆ.

ಇನ್ನು ಮತೀಯ ಧಾರ್ಮಿಕ ಪಂಥಗಳ ವಿಚಾರ. ವಿವಿಧ ಜಾತಿಗಳಾಗಿ ಗುರುತಿಸಲ್ಪಟ್ಟ ತುಳು ಭಾಷಿಕರು ನಾಗಾರಾಧನೆ ಮತ್ತು ದೈವಾರಾಧನೆಯನ್ನು ಮಾಡುವವರಾಗಿದ್ದರು. ಬೌದ್ಧ ಧರ್ಮ ಇಲ್ಲಿ ಬಂದಿತ್ತೆನ್ನುವುದಕ್ಕೆ ಮಂಗಳಾದೇವಿ ಕದ್ರಿ ಗುರುತುಗಳಾಗಿವೆ. ಆ ಮೇಲಿನ ಅವಧಿಯಲ್ಲಿ ನಾಥಪಂಥವೂ ಪ್ರಭಾವಿಸಿತ್ತು ಎನ್ನುವುದಕ್ಕೆ ಕದ್ರಿಯ ಆರಾಧನಾಲಯಗಳೂ ಆ ಪಂಥಾನುಯಾಯಿಗಳಾದ ಜೋಗಿ(ಪುರುಷ)ರೆಂಬ ಜಾತಿಯೂ ಸಾಕ್ಷಿಯಾಗಿದೆ. ಜೈನ ಧರ್ಮ ದೊಡ್ಡ ಪ್ರಭಾವ ಬೀರಿದ್ದು, ಇಲ್ಲಿದ್ದ ಭೂಮಾಲಕ ವರ್ಗದ ಅನೇಕರು ಜೈನಾವಲಂಬಿಗಳಾದರು; ಹಲವು ಜೈನ ಸಾಮಂತರಸರು ವಿಜಯನಗರದ ಅರಸರು ಹಾಗೂ ಆ ಬಳಿಕ ಕೆಳದಿ (ಇಕ್ಕೇರಿ) ಅರಸರ ಕೆಳಗೆ ತಮ್ಮ ತಮ್ಮ ಸೀಮೆ ಕಟ್ಟಿಕೊಂಡಿದ್ದರು. ಬಹುಶ: ಕದಂಬ ಮಯೂರಶರ್ಮನ ಕಾಲದಲ್ಲಿ ಮತ್ತು ಅನಂತರ ಬ್ರಾಹ್ಮಣರು ಕರಾವಳಿಗೆ ಬಂದರು. ವೈದಿಕ ದೇವರುಗಳನ್ನು ತಂದರು. ನಾಗ ಮತ್ತು ದೈವಾರಾಧಕರಾದ ತುಳುಕನ್ನಡ ಭಾಷಿಗರನ್ನು ಮತ್ತು ಅವರ ದೈವಗಳನ್ನು ತಾವು ಕಟ್ಟಿಸಿದ ಪುರಾಣದ ದೇವರುಗಳ ಗುಡಿಗಳ ಅಧೀನರನ್ನಾಗಿ ಮಾಡಿದರು. ಕ್ರಿ.ಶ.6–7ನೇ ಶತಮಾನದಲ್ಲಿ ಶೈವ ದೇವಾಲಯಗಳು ನಿರ್ಮಾಣವಾದದ್ದು ಕಂಡು ಬರುತ್ತದೆ. ಬಳಿಕದ ಕಾಲಘಟ್ಟದಲ್ಲಿ ದುರ್ಗೆಯ ದೇವಾಲಯಗಳೂ, ಆ ಬಳಿಕದ ಕಾಲಘಟ್ಟದಲ್ಲಿ ವೈಷ್ಣವ ದೇವಾಲಯಗಳೂ ಹೆಚ್ಚಿಗೆ ನಿರ್ಮಾಣವಾದುದು ಕಂಡು ಬರುತ್ತದೆ. ಇಸ್ಲಾಂ ಧರ್ಮ ಕ್ರಿ.ಶ.8ನೇ ಶತಮಾನದ ವೇಳೆಗೆ ಅರಬರ ಮೂಲಕ ಕರಾವಳಿ ಕರ್ನಾಟಕಕ್ಕೆ ಬಂದಿದೆಯೆಂದು ತಿಳಿಯುತ್ತದಾದರೂ, 15ನೇ ಶತಮಾನದಲ್ಲಿ ವಿಜಯನಗರದ ಅವಧಿಯಲ್ಲಿ ಹಂಜಮಾನ(ಅಂಜುಮಾನ್) ವಾಣಿಜ್ಯ ಸಂಘವಾಗಿ ಪ್ರಾಬಲ್ಯಕ್ಕೆ ಬಂದುದೂ ಬ್ಯಾರಿ ಮುಸ್ಲಿಮರು ಕರಾವಳಿಯಾದ್ಯಂತ ವಿಸ್ತರಿಸಿದ್ದೂ ತಿಳಿದು ಬರುತ್ತದೆ. 16ನೇ ಶತಮಾನದಲ್ಲಿ ಪೋರ್ಚ್‌ಗೀಸ ನಾವೆಗಳು ಮಂಗಳೂರು ಉಳ್ಳಾಲದ ನದೀಮುಖದ ಕಡಲಿನಲ್ಲಿ ಠಾಣೆ ಊರಿದ್ದ ಸಂದರ್ಭದಲ್ಲಿ ಮತ್ತು ಆ ಬಳಿಕವೂ ಕೊಂಕಣಿ ಕ್ರೈಸ್ತರು ಗೋವೆಯಿಂದ ಬಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಶ್ರಯ ಪಡೆದಿರುತ್ತಾರೆ. ಜರ್ಮನಿಯ ಬಾಸೆಲ್ ಮಿಶನ್ನಿನವರು 19ನೇ ಶತಮಾನದಲ್ಲಿ ಆಧುನಿಕ ಶಿಕ್ಷಣ, ಕೈಗಾರಿಕೆ, ಉದ್ಯಮವನ್ನು ಆರಂಭಿಸುವುದರೊಂದಿಗೆ ಜಿಲ್ಲೆಯ ಕೆಳಜಾತಿ ಜನರು ಸಣ್ಣ ಪ್ರಮಾಣದಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತ ಮತಕ್ಕೆ ಮತಾಂತರಗೊಂಡಿದ್ದಾರೆ. ಖಂಡಿತವಾಗಿಯೂ ಕರಾವಳಿ ಕರ್ನಾಟಕದಲ್ಲಿ ನಡೆದ ಮತಾಂತರಗಳ ಜೊತೆಯಲ್ಲಿ ಯಾವ ಸಂಘರ್ಷಗಳೂ ನಡೆದೇ ಇಲ್ಲ ಎನ್ನುವಂತಿಲ್ಲ. ಆದರೆ ಐತಿಹಾಸಿಕ ದಾಖಲಾತಿಗಳಲ್ಲಿ ಅಂಥ ಸಂಘರ್ಷದ ನಿರೂಪಣೆಗಳು ಕಡಿಮೆ. ಅಂದಂದಿನ ಆರ್ಥಿಕ ಸಾಮಾಜಿಕ ಅವಶ್ಯಕತೆಯ ಒತ್ತಡದಿಂದಾಗಿ ಈ ಮತಾಂತರಗಳು ಆಗಿರಬಹುದು.

ಎರಡು ಮತೀಯ ಸಂಘರ್ಷಗಳು

ಹಾಗಿದ್ದರೂ, ಇತಿಹಾಸದಲ್ಲಿ ದಾಖಲಾದ 2 ಪ್ರಕರಣಗಳನ್ನು ಇಲ್ಲಿ ನಿರೂಪಿಸಬಹುದು. ವಿಜಯನಗರದ ಕಾಲದಲ್ಲಿ ದಕ್ಷಿಣ ಕನ್ನಡವು ಮಂಗಳೂರು ಮತ್ತು ಬಾರ್ಕೂರು ಎಂಬ 2 ಅಧೀನ ರಾಜ್ಯಗಳಾಗಿ ಅಲ್ಲಿ ಸಾಮ್ರಾಜ್ಯದಿಂದ ನೇಮಿಸಲ್ಪಟ್ಟ ಅಧಿಕಾರಿಗಳಿದ್ದರು. ಕ್ರಿ.ಶ.1418ರ ಮಂಗಳೂರಿನ ಕೊಡಿಯಾಲ್ ಶಾಸನ ಹೇಳುವಂತೆ ವಿಜಯನಗರ ಅರಸರ ಪ್ರತಿನಿಧಿ ತಿಮ್ಮಣ್ಣ ಒಡೆಯನೆಂಬವನು ಹಂಜಮಾನ (ಮುಸ್ಲಿಮ)ರೊಂದಿಗೆ ವೈಮನಸ್ಸಿನಲ್ಲಿ ನಾಲ್ಕೈದು ಮಸೀದಿಗಳನ್ನು ಒಡೆದು ಹಾಕಿದನು. ಈ ಬಗ್ಗೆ ಹಂಜಮಾನದವರು ವಿಜಯನಗರ ಅರಸರ ಮೊರೆಹೋದಾಗ, ಅರಸನು ಹಂಜಮಾನದವರಿಗೆ ಪರಿಹಾರ ಹಾಗೂ ಭೂಮಿ ಕಾಣಿಕೆ ನೀಡಿ, ಮುಂದೆ ಈ ಮಸೀದಿಯ ಭೂಮಿಯನ್ನು ಯಾರಾದರೂ ಕಬಳಿಸಿದರೆ ಆತನಿಗೆ ಕಾಶಿಗೆ ಹೋಗಿ ಸಾವಿರ ದನಗಳನ್ನು ಕಡಿದ ಪಾಪ ತಗಲುವದೆಂದು ಆ ಶಾಸನದಲ್ಲಿ ಬರೆಸಿದ್ದನು. ಇಲ್ಲಿ ಭೂಮಿಯ ರಕ್ಷಣೆಗೆ ಕೊಟ್ಟ ಶರ್ತ ಉಲ್ಲೇಖನೀಯ. ಧಾರ್ಮಿಕ ಸಾಮರಸ್ಯದ ಇನ್ನೊಂದು ಉದಾಹರಣೆಯನ್ನು ಕ್ರಿ.ಶ.1551ರ ಕೋಟೇಶ್ವರ ಶಾಸನ ಹೇಳುತ್ತದೆ. ವಿಜಯನಗರದ ಬಾರ್ಕೂರು ರಾಜ್ಯವನ್ನು ರಾಜಪ್ರತಿನಿಧಿ ಇಕ್‌ದಾಲ್‌ಖಾನ್ (ಇಕ್‌ಬಾಲ್‌ಖಾನ್) ಒಡೆಯನು ಆಳುತ್ತಿದ್ದಾಗ, ಕೋಟೇಶ್ವರ ದೇವಾಲಯದ ಕೊಡಿಹಬ್ಬದಂದು ನಡೆದ ಜಾತಿಕಲಹದಲ್ಲಿ ಹಲವಾರು ಬ್ರಾಹಣರು, ಶೂದ್ರರು, ದನಗಳು ಕೊಲ್ಲಲ್ಪಟ್ಟು ದೇವಾಲಯವು ಅಶುದ್ಧಿಯಾದಾಗ, ಮುಸ್ಲಿಮನಾದ ರಾಜಪ್ರತಿನಿಧಿ ಇಕ್‌ದಾಲ್‌ಖಾನ್ ಒಡೆಯನು ದೇವಾಲಯದ ಶುದ್ಧಿಗೆ ಕ್ರಮ ಕೈಗೊಂಡು ಆರಾಧನೆ ನಡೆಯುವಂತೆ ಮಾಡಿದನು. ಆ ಕಾಲದಲ್ಲಿ ಹಿಂದೂ ದೇವಾಲಯವನ್ನು ಸುಸ್ಥಿತಿಗೆ ತರುವಲ್ಲಿ ಒಬ್ಬ ಮುಸ್ಲಿಮ್ ಆಡಳಿತಗಾರನ ಮುತುವರ್ಜಿಯನ್ನು ಆ ಶಾಸನ ವಿವರಿಸುತ್ತದೆ.

ಮುಸ್ಲಿಮರ ಮಸೀದಿ ದರ್ಗಾಗಳಿಗೆ ಜಿಲ್ಲೆಯನ್ನು ಆಳಿದ ಆಡಳಿತಗಾರರು ಭೂಮಿದಾನ ನೀಡಿದ ಅನೇಕ ಉಲ್ಲೇಖಗಳಿವೆ. ಕ್ರಿ.ಶ. 1628ರಲ್ಲಿ ಕರಾವಳಿಯನ್ನು ವಶದಲ್ಲಿಟ್ಟಿದ್ದ ಕೆಳದಿ ರಾಜನಾದ ವೆಂಕಟಪ್ಪನಾಯಕನ ಸಹಾಯದಿಂದ ಹುಲಿಕಲ್ಲು ಘಾಟಿಯಲ್ಲಿ ಮುಲ್ಲಾ ಹಾಜಿ ಎಂಬಾತ ಮಸೀದಿ ಕಟ್ಟಿಸಿದ. ಕೆಳದಿ ರಾಣಿ ಚೆನ್ನಮ್ಮಾಜಿ ಜಿಲ್ಲೆಯ ಕಿನ್ನಿ ಕಂಬಳ ಎಂಬಲ್ಲಿ, ಅದೇ ರೀತಿ ಗಂಜಿಮಠ ಎಂಬಲ್ಲಿ ಮುಸ್ಲಿಮ್ ಪೀರ್ (ಸಂತರಿಗೆ) 101 ಎಕ್ರೆ ಜಮೀನುದಾನ ನೀಡಿದ ಉಲ್ಲೇಖವಿದೆ. ಅಜಿಲಮೊಗರಿನ ಮುಸ್ಲಿಮ್ ಸಂತರ ದರ್ಗಾಕ್ಕೆ ಹಾಗೂ ಮಸೀದಿ ಕಟ್ಟಿಸಲು ಸಾಮಂತರಾದ ಅಜಿಲರಾಜರು ಭೂಮಿ ದಾನ ನೀಡಿದ್ದು ಅಲ್ಲಿ ಜನಜನಿತವಾಗಿದೆ.

ಮತೀಯ ಸೌಹಾರ್ದತೆಯ ಪರಂಪರೆ

ಮುಸ್ಲಿಮರ ಹಲವಾರು ದರ್ಗಾಗಳಿಗೆ ಕರಾವಳಿಯ ಹಿಂದೂಗಳು ಹರಕೆ ಹೊತ್ತು ನಡೆದುಕೊಂಡು ಬರುತ್ತಿದ್ದಾರೆ. ಮನೆಯ ಸದಸ್ಯರ, ಜಾನುವಾರುಗಳ ಕಾಯಿಲೆ ವಾಸಿಯಾಗುವಂತೆ ಎಣ್ಣೆ, ಖರ್ಜೂರ, ಕಲ್ಲುಸಕ್ಕರೆ ಒಪ್ಪಿಸುವ ರೂಢಿ ಅನೇಕ ಹಿಂದೂಗಳಲ್ಲಿದೆ. ವಿಶೇಷವಾಗಿ

ಈ ದರ್ಗಾಗಳಲ್ಲಿ ನಡೆಯುವ ಉರೂಸು ಸಮಾರಂಭಗಳಿಗೆ ಹೋಗಿ ಕೈಮುಗಿದು ಬರುವುದು ನಡೆದುಕೊಂಡು ಬಂದಿದ್ದು, ತೀರಾ ಇತ್ತೀಚಿನ 20–25 ವರ್ಷಗಳಿಂದ ಈ ರೀತಿ ದರ್ಶನ ನೀಡುವ ಹಿಂದೂಗಳ ಸಂಖ್ಯೆ ಕಡಿಮೆಯಾಗಿದೆ. ಉಳ್ಳಾಲ, ಅಜಿಲಮೊಗರು, ಮಿತ್ತಬಾಗಿಲುಗಳ ಉರೂಸುಗಳು ಹಿಂದೂಗಳೂ ಹೆಚ್ಚು ಸಂಖ್ಯೆಯಲ್ಲಿ ಭೇಟಿ ನೀಡುವ ಸುಪ್ರಸಿದ್ಧ ದರ್ಗಾಗಳು. ಅದೇ ರೀತಿ ಕ್ರೈಸ್ತರ ಇಗರ್ಜಿಗಳಲ್ಲಿ ನಡೆಯುವ ವಾರ್ಷಿಕ ಜಾತ್ರೆಯಲ್ಲಿ ಸಾಂತಮಾರಿ ಹಬ್ಬದಲ್ಲಿ ಜಿಲ್ಲೆಯ ಹಿಂದೂಗಳು ಇಂದಿಗೂ ಭಾಗವಹಿಸುತ್ತಾರೆ. ಅದರಲ್ಲೂ ಕಾರ್ಕಳದ ಸಮೀಪದ ಇನ್ನೂರು ವರ್ಷ ಹಳೆಯದಾದ ಅತ್ತೂರಿನ ಸೈಂಟ್ ಲಾರೆನ್ಸ್ ಇಗರ್ಜಿಯಲ್ಲಿ ನಡೆಯುವ ವಾರ್ಷಿಕ ಜಾತ್ರೆಗೆ ಮಂಗಳೂರು, ಉಡುಪಿ ಹಾಗೂ ಇತರ ಊರುಗಳಿಂದ ಹಲವಾರು 'ಜಾತ್ರಾ ಸ್ಪೆಷಲ್' ಬಸ್ಸುಗಳು ಹೋಗುವುದೂ, ಕ್ರೈಸ್ತರಂತೆಯೇ ಹಿಂದೂಗಳೂ ಹರಕೆ ಸಲ್ಲಿಸುವುದೂ ಸಾಮಾನ್ಯವಾಗಿದೆ.

ಕಳೆದ ದಶಕದಿಂದೀಚೆಗೆ ಹಿಂದುತ್ವವಾದಿಗಳಿಂದ ಕ್ರೈಸ್ತ ಚರ್ಚ್‌ಗಳ ಮೇಲೆ ಆಗೀಗ ದಾಳಿಗಳಾಗುತ್ತಿದ್ದರೂ, ಜಿಲ್ಲೆಯ ಜನಸಾಮಾನ್ಯ ಹಿಂದೂಗಳು ಅತ್ತೂರು ಇಗರ್ಜಿಯ ಜಾತ್ರೆಗೋ ತಮ್ಮದೇ ಊರಿನ ಸಾಂತಮಾರಿ ಹಬ್ಬಕ್ಕೋ ಹೋಗುವುದನ್ನು ಕಡಿಮೆ ಮಾಡಿಲ್ಲ. ನೆಲ್ಯಾಡಿ, ಹೊಸಂಗಡಿ(ಕುಂದಾಪುರ ತಾಲೂಕು)ಗಳ ಕ್ರೈಸ್ತ ಆರಾಧನಾಲಯಗಳ ಉತ್ಸವಗಳಿಗೂ ಹಿಂದೂಗಳು ಭೇಟಿ ನೀಡಿ ಹರಕೆ ತೀರಿಸುತ್ತಾರೆ.

ದೈವಾರಾಧನೆ ತುಳುನಾಡು ಪ್ರದೇಶದಲ್ಲಿ ಶೂದ್ರ ಹಿಂದೂಗಳ ಆರಾಧನೆಯಾಗಿದ್ದರೂ, ಅಹಿಂಸಾ ಧರ್ಮವನ್ನು ಅವಲಂಬಿಸಿರುವ ಜೈನರ ಅನೇಕ ಗುತ್ತಿನ ಮನೆಗಳಲ್ಲಿ ದೈವಗಳ 'ಬೀಡು' ಇದ್ದು, ದೈವದ ಕೋಲವೇ ಮೊದಲಾದ ಉತ್ಸವಗಳು ನಡೆಯುತ್ತಿವೆ. ಧರ್ಮಸ್ಥಳದ ಜೈನ ಹೆಗಡೆಗಳು ನಾಲ್ಕು ಶತಮಾನಗಳಿಂದ ಶೈವ ದೇವಾಲಯವನ್ನು ನಡೆಸಿಕೊಂಡು ಹೋಗುತ್ತಿದ್ದಾರಲ್ಲದೆ, ಅಣ್ಣಪ್ಪ ಪಂಜುರ್ಲಿ ದೈವ ಆರಾಧನೆಯನ್ನೂ ನಡೆಸಿಕೊಡುತ್ತಿದ್ದಾರೆ. ಟಿಪ್ಪುಸುಲ್ತಾನನ ಕಾಲದಲ್ಲಿ ಕೆಲವು ದುಷ್ಕರ್ಮಿಗಳು ಅಂದಿನ ಕುಡುಮ (ಧರ್ಮಸ್ಥಳ)ದ ಆಡಳಿತಗಾರ ಮಂಜಯ್ಯ ಹೆಗ್ಗಡೆ ಎನ್ನುವವರನ್ನು ಕೊಲೆ ಮಾಡಿ ಆಡಳಿತವನ್ನು ಸ್ವಾಧೀನಪಡಿಸಿದ್ದರು. ಟಿಪ್ಪು ಈ ಬಗ್ಗೆ ಕೂಡಲೇ ಕ್ರಮಕೈಗೊಂಡು, ಅದರ ನಿಜವಾದ ವಾರೀಸುದಾರರಾದ ಮಂಜಯ್ಯ ಹೆಗ್ಗಡೆಯವರ ಪುತ್ರ ಕುಮಾರ ಹೆಗ್ಗಡೆಗೆ ಪಟ್ಟದ ಅಧಿಕಾರ ಲಭಿಸುವಂತೆ ಮಾಡಿದನು.

ಟಿಪ್ಪುವು ಕರಾವಳಿಯ ದೇವಾಲಯಗಳಿಗೆ ನೀಡಿದ ಭೂಮಿ ಹಾಗೂ ದಾನಗಳ ವಿವರ ಅಷ್ಟು ಪ್ರಚಾರವಾಗಿಲ್ಲ. ಮಂಗಳೂರಿನ ಶರವು ದೇವಾಲಯಕ್ಕೆ ಮೂಡುಶೆಡ್ಡೆ ಗ್ರಾಮವನ್ನು ದತ್ತು ನೀಡಿ, ಅಲ್ಲಿಯ ದೈನಂದಿನ ಪೂಜಾವಿಧಿಗಳಿಗಾಗಿ ಒಂದು ವರಹ ತಸ್ತೀಕ್ ನೀಡಿದನು. ಗುರುಪುರದ ಲಿಂಗಾಯಿತ ಮಠಕ್ಕೆ ಭೂಮಿ ಮತ್ತು ಪೂಜಾ ವಿಧಿಗಳಿಗಾಗಿ ತಸ್ತೀಕ್ ನೀಡಿದನು. ಮಂಜೇಶ್ವರ ಅನಂತೇಶ್ವರ ದೇವಾಲಯಕ್ಕೆ ಶಂಭೂರು ಗ್ರಾಮದಲ್ಲಿ ಭೂಮಿ ದಾನ ನೀಡಿದ್ದಾನೆ. ಕ್ರೈಸ್ತರನ್ನು ಬ್ರಿಟಿಷ್ ಪಕ್ಷಪಾತಿಗಳೆಂದು ಭಾವಿಸಿ, ಬಲವಂತದಿಂದ ಶ್ರೀರಂಗಪಟ್ಟಣಕ್ಕೆ ಆತ ವಲಸೆ ಹೊರಡಿಸಿದಾಗ, ಹಲವಾರು ಕ್ರೈಸ್ತರು ಆತನ ಸೈನ್ಯದ ಕಣ್ಣುತಪ್ಪಿಸಿ ಮುಸ್ಲಿಮರ ಮನೆಗಳಲ್ಲಿ ಅಡಗಿದ್ದರೆಂದು ಬ್ರಿಟಿಷ್ ದಾಖಲೆಯೊಂದು ತಿಳಿಸುತ್ತದೆ.

ಬ್ಯಾರಿ ಮುಸ್ಲಿಮರು ವ್ಯಾಪಾರ ನಡೆಸುವುದರೊಂದಿಗೆ ಭೂಮಿ ಹಾಗೂ ಸೈನ್ಯದಲ್ಲೂ ತೊಡಗಿದವರಿದ್ದರು. ಇಂದಿಗೂ 'ಬ್ಯಾರಿ'ಗಳನ್ನು ತಮ್ಮಂತೆ ಒಂದು ಜಾತಿ ಎಂದೇ ಹಿಂದೂಗಳು ನಿರೂಪಿಸುತ್ತಾರೆ. ಕ್ರೈಸ್ತರನ್ನು 'ಪೊರ್ಬು' ಹಾಗೂ 'ಮಿಶನ್ನಿನವರು' ಎಂದು ಹೇಳುತ್ತಾರೆ. ಕೆಳದಿರಾಜರ ಸೇನಾಧಿಪತಿಯಾಗಿದ್ದ ಮೂಸಬ್ಯಾರಿಯ ಬಗ್ಗೆ ಇಟೆಲಿ ಪ್ರವಾಸಿ ಪೀಟರ್ ಡಲ್ಲವಿಲ್ಲೆ 1523 ರಲ್ಲಿ ನಮೂದಿಸಿದ್ದಾನೆ. ಪೋರ್ಚುಗೀಸರನ್ನು ಎದುರಿಸಿದ ಉಳ್ಳಾಲದ ರಾಣಿ ಅಬ್ಬಕ್ಕಳ ಚರಿತ್ರೆಯಲ್ಲಿ ಸೈನ್ಯದಲ್ಲಿದ್ದ ಕುಟ್ಟಿಪೋಕರ್ ಮತ್ತು ಕುಂಞಆಲಿ ಮರಕ್ಕರ್ ಬ್ಯಾರಿಗಳ ಉಲ್ಲೇಖ ಬರುತ್ತದೆ. ಅಬ್ಬಕ್ಕ ಸೈನ್ಯ ಬ್ಯಾರಿಗಳು ಮತ್ತು ಮೊಗವೀರರಿಂದ ಕೂಡಿದ್ದಾಗಿತ್ತು. ಬ್ರಿಟಿಷರ ವಿರುದ್ಧ ನಡೆದ ಕೊಡಗಿನ 'ಕಲ್ಯಾಣಪ್ಪನ ಕಾಟುಕಾಯಿ' ಎಂದು ಪ್ರಸಿದ್ಧವಾದ ದಂಗೆಯಲ್ಲಿ ನರಿಂಗಾನದ ಮೋನು ಬ್ಯಾರಿ, ಬಂಟ್ವಾಳದ ಅದ್ದುನ್ನಿ ಬ್ಯಾರಿ ಎನ್ನುವವರು ಪ್ರಮುಖ ಪಾತ್ರವಹಿಸಿ ಶಿಕ್ಷೆಗೊಳಗಾಗಿದ್ದರು.

ಬಪ್ಪನಾಡು, ಉದ್ಯಾವರ ಮಾಡದ ಜಾತ್ರೆಗಳು

ಜಿಲ್ಲೆಯ ಕೆಲವು ದೇವಾಲಯ ದೈವಸ್ಥಾನಗಳಲ್ಲಿ ಮುಸ್ಲಿಮರಿಗೂ ವಿಶೇಷ ಸ್ಥಾನಮಾನವಿರುವ ಸ್ಥಳಗಳುಂಟು. ಬಪ್ಪನಾಡು ದುರ್ಗಾದೇವಾಲಯವು ಬಪ್ಪಬ್ಯಾರಿ ಎಂಬಾತನಿಂದಲೇ ನಿರ್ಮಾಣವಾದುದೆಂಬ ಸ್ಥಳಪುರಾಣವುಂಟು. ವಾಸ್ತವವಾಗಿ ಹಿಂದೆಯೇ ನಿರ್ಮಾಣವಾಗಿದ್ದ ದೇವಾಲಯವು ಬಾಪಾ ಬ್ಯಾರಿಯ ಕಾಲದಲ್ಲಿ ಆತನ ಸಹಾಯದಿಂದ ಪುನರ್ನಿರ್ಮಾಣವಾಯಿತು. ಊರಿಗೂ ಬಪ್ಪನಾಡು ಎಂದು ಹೆಸರು ಬಂತು. ಇಂದಿಗೂ ಬಪ್ಪನಾಡು ಜಾತ್ರೆಯ ಸಂದರ್ಭದಲ್ಲಿ ಮೊದಲ ದಿನ ನಡೆಯುವ ಮೂಡುಪೇಟೆ ಸವಾರಿ ವೇಳೆಗೆ, ಬಪ್ಪಬ್ಯಾರಿಯದೆಂದು ಹೇಳಲಾಗುವ ಹಳೆಯ ಉಪ್ಪರಿಗೆಯ ಮನೆಯ ಮುಂಬಾಗಿಲಿಗೆ ಗಂಧ ಹಚ್ಚಿ, ಆ ಮನೆಯವರಿಗೆ ದೇವಿಯ ಗಂಧ ಪ್ರಸಾದ ನೀಡುವ ಪರಿಪಾಟ ಈಗಲೂ ಮುಂದುವರಿದಿದೆ. ಬಾರಕೂರು, ಬಸ್ರೂರುಗಳ ದೇವಾಲಯಗಳ ಉತ್ಸವದ ಆರಂಭದಲ್ಲಿ ಮುಸ್ಲಿಮರಿಗೂ ಕೆಲವು ಕರ್ತವ್ಯಗಳುಂಟು. ಉಡುಪಿ ಶ್ರೀ ಕೃಷ್ಣ ದೇವಾಲಯ ಹಾಗೂ ಮಠಗಳು ಉತ್ಸವದ ದೇವರ ಲೋಹ

ಆಲಿಭೂತ



ಮೂರ್ತಿಗಳ ನಿರ್ಮಾಣವನ್ನು ಕೆಲವು ಲೋಹಕಾರ ಮುಸ್ಲಿಂ ಕುಟುಂಬಗಳಿಗೇ ನೀಡುವ ಪರಂಪರೆ ಇದೆ. ಕರಾವಳಿಯ ಹೆಚ್ಚಿನ ಎಲ್ಲಾ ದೇವಾಲಯಗಳಲ್ಲೂ ಸುಡುಮದ್ದುಗಳನ್ನು ಪ್ರದರ್ಶಿಸುವವರು ಕೆಲವು ಮುಸ್ಲಿಮ್ ಕುಟುಂಬದವರೇ.

ಮಂಜೇಶ್ವರ ಸಮೀಪದ ಉದ್ಯಾವರ ಮಾಡದ ಜಾತ್ರೆಯಲ್ಲಿ ಮುಸ್ಲಿಮರ ಪಾತ್ರದ ಬಗ್ಗೆ ವಿಶೇಷವಾಗಿ ಹೇಳಬೇಕು. ಆ ಮಾಡದ ದೈವಗಳು ಜಾತ್ರೆಗೆ 15–20 ದಿನಗಳ ಮೊದಲು ಒಂದು ಶುಕ್ರವಾರ ಅಲ್ಲಿನ ಹಿರಿಯ ಮುಸೀದಿಗೆ ಭೇಟಿ ನೀಡುವ ಆಚರಣೆಯೊಂದಿದೆ. ಮುಸ್ಲಿಮರು ಶುಕ್ರವಾರದ ಪ್ರಾರ್ಥನೆ ಮುಗಿಸಿದ ಬಳಿಕ, ಓಲಗದಲ್ಲಿ ಅಲ್ಲಿ ತಲುಪಿದ ದೈವಪಾತ್ರಿಗಳು ಮಸೀದಿಯ ಬಾಗಿಲಲ್ಲಿ ನಿಂತು, ದೈವಾವೇಶದಲ್ಲಿ ಶೇಕರೊಂದಿಗೆ (ಬಹುಶಃ ಮೃತರಾದ ಸಂತರು) ಸಂಭಾಷಿಸುವ ವಿಧಿ ಇದೆ. 'ಮಾಡ'ದ ಮೊದಲ ನೇಮದಲ್ಲಿ ಅಣ್ಣ ದೈವವು ಸಂತೆ ಸವಾರಿ ಮಾಡುವಾಗ ಮೊದಲಲ್ಲಿ ಒಬ್ಬ ಮುಸ್ಲಿಂ ಕುಟುಂಬದ ವ್ಯಕ್ತಿಯಿಂದ ತೆಂಗಿನಕಾಯಿ ಕೊಳ್ಳುವ ಆಚರಣೆ ಇದೆ. ಅಲ್ಲದೆ ಅಲ್ಲಿ ಬ್ರಾಹ್ಮಣರು ಮಾತ್ರ ಕುಳಿತುಕೊಳ್ಳುವ ಬ್ರಹ್ಮಕಟ್ಟೆಯಲ್ಲಿ ಅವರ ಹಿಂಭಾಗದಲ್ಲಿ ಕುಳಿತುಕೊಳ್ಳಲು ಮುಸ್ಲಿಮರಿಗೆ ಮಾತ್ರ ಅವಕಾಶವಿರುವುದು ವಿಶೇಷ; ಇತರ ಹಿಂದೂ ಜಾತಿಯವರಿಗೆ ಈ ಅವಕಾಶವಿಲ್ಲ. ಮುಸ್ಲಿಮರು ಉದ್ಯಾವರ ಜಾತ್ರೆಯನ್ನು ತಮ್ಮದೇ ಜಾತ್ರೆಯೆಂಬಂತೆ ತಿಳಿದುಕೊಳ್ಳುವುದು ವಿಶೇಷ.

ಬೊಬ್ಬರ್ಯ ಹಾಗೂ ಆಲಿಭೂತಗಳು

ತುಳುವರ ದೈವಾರಾಧನೆಯಲ್ಲಿ ಎರಡು ಮುಸ್ಲಿಂ ದೈವಗಳು ವಿಶೇಷವಾಗಿ ಎದ್ದು ಕಾಣುತ್ತವೆ. ಸಾಹಸಿಗರೋ ಪರೋಪಕಾರಿಗಳೋ ಪರಪೀಡಕರೋ ಆದ ಪ್ರಾಚೀನರನ್ನು ದೈವವೆಂದು ಪೂಜಿಸುವ ಕ್ರಮವೂ ತುಳುವರಲ್ಲಿದೆ. ಬೊಬ್ಬರ್ಯ ಹಾಗೂ ಆಲಿಭೂತಗಳು ಮುಸ್ಲಿಮ್ ಪ್ರಾಚೀನರೇ. ಆರಾಧನೆಗೊಳ್ಳುವ ದೈವ ಅಥವಾ ಭೂತದ ಕಥೆಯನ್ನು ನಿರೂಪಿಸುವ ಹಾಡುಗಬ್ಬಗಳೇ ಪಾಡ್ದನಗಳು. ಬೊಬ್ಬರ್ಯ ಪಾಡ್ದನ ಪ್ರಕಾರ ಬೊಬ್ಬರ್ಯನ ತಂದೆ ಮುರುವ ಬ್ಯಾರಿ; ತಾಯಿ ಪಾತುಮ. ಕನ್ನಡ ಜಿಲ್ಲೆಯ ಕಾಸರಗೋಡಿನಿಂದ ತೊಡಗಿ ಉತ್ತರದ ಅಂಕೋಲದವರೆಗೆ ಕಡಲತೀರದ ಊರುಗಳಲ್ಲಿ ಈತನನ್ನು ಭೂತವಾಗಿ ಆರಾಧಿಸುತ್ತಾರೆ. ಈತನ ಕಥೆಯಲ್ಲಿ ಬರುವಂತೆ ಈತ ನಾವೆಕಟ್ಟಿ ವ್ಯಾಪಾರ ನಡೆಸುವ ಬ್ಯಾರಿ. ಇತರ ದೈವಗಳ ಪಾಡ್ದನಗಳಲ್ಲೂ ಕೆಲವು ದೈವಗಳು ಬೊಬ್ಬರ್ಯನನ್ನು ಭೇಟಿಯಾಗುವ ಸನ್ನಿವೇಶಗಳು ನಿರೂಪಿತವಾಗುತ್ತವೆ. ಕೊರಗ ತನಿಯನನ್ನು ಮಾಯ ಮಾಡುವ ನಾಲ್ಕು ದೈವಗಳಲ್ಲಿ ಬೊಬ್ಬರ್ಯನೂ ಒಬ್ಬ. ಉದ್ಯಾವರ ಅರಸುದೈವಗಳ ಕಥೆಯಲ್ಲಿ ಅಣ್ಣ ದೈವಕ್ಕೆ ಮಂಜೇಶ್ವರ ಕಡಲ ತೀರದಲ್ಲಿ ಬೊಬ್ಬರ್ಯ ಎದುರಾಗುವ ಸನ್ನಿವೇಶವಿದೆ. ಈಗಲೂ ಮಂಜೇಶ್ವರ ಕಡಲ ತೀರದ ಬೊಬ್ಬರ್ಯನ ಸಾನದ ವಾರ್ಷಿಕ ಉತ್ಸವದ ವೇಳೆ ಅಲ್ಲಿಗೆ ಅರಸುದೈವಗಳು ಪಾತ್ರಿಗಳ ಮೇಲೆ ಆವೇಶವಾಗಿ ಭೇಟಿ ನೀಡುವ ಪದ್ಧತಿ ಇದೆ.

ತುಳುವರು ಆರಾಧಿಸುವ ಇನ್ನೊಂದು ಮುಸ್ಲಿಮ್ ಭೂತ ಆಲಿಭೂತ. ಆಲಿಯು ಒಬ್ಬ ಮಂತ್ರವಾದಿ. ಹೆಣ್ಣುಗಳನ್ನು ಆಕರ್ಷಿಸುವವ. ಕೊನೆಯಲ್ಲಿ ಕೊಲೆಗೀಡಾಗಿ 'ಮಾಯ'ಕ್ಕೆ ಸಲ್ಲುತ್ತಾನೆ. ಈ ಮಾಯ




ಬೊಬ್ಬರ್ಯ ಆರಾಧನೆ

ಮಾಡುವಲ್ಲಿ ಚಾಮುಂಡಿ ದೈವದ ಪಾತ್ರವಿದ್ದುದರಿಂದ, ಆಲಿಭೂತವನ್ನು ಆಲಿಚಾಮುಂಡಿಯೆಂದೂ ಕರೆಯುವರು. ಹಲವು ಊರುಗಳಲ್ಲಿ ಆಲಿಭೂತಕ್ಕೆ 'ಕೋಲ'ಗಳಿದ್ದರೂ, ಕುಂಬಳೆ ಸಮೀಪದ ಪಾರೆ ಎಂಬಲ್ಲಿ ಹರಕೆ ಒಪ್ಪಿಸುವವರು, ಪರಿಹಾರ ಬಯಸುವವರು ಬಹಳ ಜನರಿದ್ದಾರೆ. ಗಂಡಸರಿಗಿಂತಲೂ ಹೆಂಗಸರೇ ಆಲಿಭೂತಕ್ಕೆ ಹೆಚ್ಚು ಹರಕೆ ಹೊರುತ್ತಾರೆ.

ಕರಾವಳಿಯ ದೈವದೇವರುಗಳು, ಜಾತಿ ಮತ ಧರ್ಮಗಳು, ಭಾಷೆಗಳು ವೈವಿಧ್ಯಮಯವಾಗಿದ್ದು ಅದರ ಪಾಲುದಾರರಾದ ಕರಾವಳಿಯ ಜನತೆ ದೀರ್ಘಕಾಲದ ಇತಿಹಾಸದಲ್ಲಿ ರಾಜಕೀಯ ಸಾಮಾಜಿಕ ಕಾರಣಗಳಿಗಾಗಿ ಸೌಹಾರ್ದವನ್ನು ತಾವೇ ಕಟ್ಟಿಕೊಂಡಿರುವುದು ಕಂಡು ಬರುತ್ತದೆ. ಅಂಥ ಅನಿವಾರ್ಯತೆಯನ್ನು ಎಲ್ಲಾ ಕಾಲಕ್ಕೂ ನಾವು ಕಂಡುಕೊಳ್ಳಬೇಕು. ಪರಂಪರೆಯ ಅರಿವು ಈ ನಿಟ್ಟಿನಲ್ಲಿ ಅಗತ್ಯವಾಗಿ ನಾವು ಪಡೆಯಬೇಕಾಗಿದೆ.

ಗ್ರಂಥ ಋಣ:

1. ಬಹುಧರ್ಮ ಧೇನು ನಿವಹ: ಡಾ। ಪಾಳ್ತಜೆ ವಸಂತ ಕುಮಾರ್ (ಗ್ರಂಥ:ಪೊಲಿ–ಕೆನರಾ 00)
2. ಧಾರ್ಮಿಕ ಸಾಮರಸ್ಯ –ಡಾ। ವಹಾಬ್ ದೊಡ್ಡಮನೆ (ಗ್ರಂಥ:ಪೊಲಿ–ಕೆನರಾ 200)
3. The devil worship of the Tuluvas, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ



ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಸಿದ್ಧಾಂತಗಳು ಅವಿಭಜಿತ ದ.ಕ ಜಿಲ್ಲೆಯ ಎಲ್ಲಾ ರಂಗಗಳಲ್ಲೂ ಹಾಸುಹೊಕ್ಕಾಗಿ ಪಸರಿಸಿರುವ ಹಿನ್ನೆಲೆಯನ್ನು ಕಳೆದ ಏಳೆಂಟು ದಶಕಗಳ ಬೆಳವಣಿಗೆಯ ಹಿನ್ನೆಲೆಯಿಂದ ವಿಮರ್ಶಿಸುವಂತಹ ವಿಧಾನವನ್ನು ಬದಲಾಯಿಸಬೇಕಾಗಿದೆ. 1498ರಿಂದ ಒಮ್ಮೆ ಬಹಿರಂಗವಾಗಿ ಮತ್ತೊಮ್ಮೆ ಗುಪ್ತವಾಗಿ ಕಾರ್ಯಾಚರಿಸುತ್ತಿದ್ದ ಮತೀಯತೆಯ ದ್ವೇಷ, ವೈಷಮ್ಯ ಮತ್ತು ಅಪಪ್ರಚಾರಗಳ ಒಟ್ಟು ಹಿನ್ನೆಲೆಯಲ್ಲಿ ವಿಮರ್ಶೆ ನಡೆಸಬೇಕಾಗಿದೆ. ಪ್ರಬಲವಾದಂತಹ ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಜೀವನಗಳ ಮೌಲ್ಯಗಳ ತಾತ್ವಿಕತೆಯನ್ನು ಅಂದಾಜಿಸಿಕೊಂಡು ತನ್ಮೂಲಕ ಬಹುಸ್ತರೀಯ ಸ್ವರೂಪದ ಸಂಘಟನಾತ್ಮಕ ಸೈದ್ಧಾಂತಿಕ ಹೋರಾಟಗಳನ್ನು ರೂಪಿಸುವಾಗ ಮೇಲಿನ ಚಾರಿತ್ರಿಕ ಬೆಳವಣಿಗೆಯನ್ನು ಗಮನಿಸಲೇಬೇಕು.

ಕರಾವಳಿ ಕರ್ನಾಟಕದಲ್ಲಿ ಹಿಂದೂ ಮತೀಯವಾದಿ ಸಿದ್ಧಾಂತದ ಪೂರ್ವಭೂಮಿಕೆಯ ಚಾರಿತ್ರಿಕ ನೋಟಗಳು

ಕೃಷ್ಣಪ್ಪ ಕೊಂಚಾಡಿ, ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸದಸ್ಯರು

ಕೋಮುದ್ವೇಷ ಮತ್ತು ಮತೀಯತೆಯ ಆಡುಂಬೊಲ **'ಕರಾವಳಿ ಕರ್ನಾಟಕ'** ಎಂಬುದು ಕರ್ನಾಟಕದ ಮಟ್ಟಿಗೆ ಎಲ್ಲರೂ ಒಪ್ಪುವ ಅಂಶವಾಗಿದೆ. ಪ್ರಸ್ತುತ ಸಂಘ ಪರಿವಾರದ ಪಾಲಿಗೆ ಕರಾವಳಿ ಕರ್ನಾಟಕ ಪ್ರಯೋಗ ಶಾಲೆ ಎಂಬುದು ಕೂಡಾ ಅಷ್ಟೇ ವಾಸ್ತವಿಕವಾಗಿದೆ. ದೇಶದ ಸಂಘ ಪರಿವಾರದ ಸಂಘಟನಾ ಜಾಲಕ್ಕೆ ಹಿಂದುತ್ತ್ವದ ವಿಷಬೀಜಗಳ ಪ್ರಚಾರದ ಬತ್ತಳಿಕೆಗೆ ಹೊಸಹೊಸ ಅನ್ವೇಷಣೆ ಮತ್ತು ಕಾರ್ಯತಂತ್ರವನ್ನು ಕೂಡಾ ಕಲಿಸಿಕೊಟ್ಟ ಪ್ರದೇಶವಾಗಿದೆ. ಇತ್ತೀಚೆಗೆ ಮಾಧ್ಯಮದ ಪ್ರತಿನಿಧಿಗಳು ಗುಪ್ತವಾಗಿ ಚಿತ್ರೀಕರಿಸಿದ ದಾಖಲೆಯಲ್ಲಿ 'ಲವ್ ಜಿಹಾದ್' ಎಂಬುದು ಕೂಡಾ ಇಲ್ಲಿಯೇ ಉತ್ಪಾದಿಸಿರುವ ಅಪಪ್ರಚಾರ ಬಗೆ ಎಂದು ಸ್ವತಃ ಇದರ ನಾಯಕರೇ ಪ್ರಸ್ತಾಪಿಸಿದ್ದಾರೆ. ಸಂಘ ಪರಿವಾರದ ಸಂಘಟನಾ ಜಾಲ ಮತ್ತು ಸಮಾಜದಲ್ಲಿ ಅದು ಹರಿಯ ಬಿಟ್ಟಿರುವ ಕೋಮುವಾದಿ ವಿಷದ ಪ್ರಭಾವವನ್ನು ಹಾಗೂ ದಿನನಿತ್ಯ ಇಲ್ಲಿ ನಡೆಯುತ್ತಿರುವ ಮತೀಯವಾದಿ ಚಟುವಟಿಕೆ ಮತ್ತು ಘಟನೆಗಳನ್ನು ವಿಶ್ಲೇಷಿಸುವಂತಹ ಜಾತ್ಯಾತೀತ ಪ್ರಗತಿಪರ ಮನೋಭಾವದ ಚಿಂತಕರು, ಈ ಭಾಗದಲ್ಲಿ ಪ್ರಾರಂಭಿಸಲ್ಪಟ್ಟಿರುವ ಆರ್‌ಎಸ್‌ಎಸ್‌ನ ಅಸ್ತಿತ್ತ್ವ ಮತ್ತು ಬೆಳವಣಿಗೆಯ ಮೂಲದ ತನಕ ಮಾತ್ರ ಹೋಗುತ್ತಾರೆ. ಅಂದರೆ 1930ರ ದಶಕದಿಂದಲೇ ನಡೆದು ಬಂದ ಬೆಳವಣಿಗೆ ಎಂದು ಎಲ್ಲರೂ ವಿಶ್ಲೇಷಿಸುತ್ತಾರೆ. ಆದರೆ ಕರಾವಳಿ ಕರ್ನಾಟಕದ ಚಾರಿತ್ರಿಕ ಬೆಳವಣಿಗೆಯ 500 ವರ್ಷಗಳ ಪಥವನ್ನು ಅಭ್ಯಸಿಸಿದಾಗ ಪ್ರಸ್ತುತ ಇಲ್ಲಿ ಗಟ್ಟಿಯಾಗಿ ನೆಲೆ ನಿಂತಿರುವ ಬಹುಸಂಖ್ಯಾತ ಕೋಮುವಾದಕ್ಕೆ 'ನೆಲವನ್ನು ಹದಮಾಡುವ ಪ್ರಕ್ರಿಯೆ' ಸಾಂಸ್ಥಿಕ ಸ್ವರೂಪದಲ್ಲಿ 1498ರಿಂದಲೇ ಪ್ರಾರಂಭವಾಗಿದೆ ಎಂದು ತಿಳಿದು ಬರುತ್ತದೆ.

ಈ ವಿಚಾರವನ್ನು ಬಹಳಷ್ಟು ಜನರು ಸುಲಭವಾಗಿ ಸ್ವೀಕರಿಸಲು ಸಿದ್ಧರಿರುವುದಿಲ್ಲ. ಏಕೆಂದರೆ, ಇದೇ ಅವಧಿಯಲ್ಲಿ ನಾವೆಲ್ಲರೂ ಬಯಸುವ ಮತೀಯ ಸೌಹಾರ್ದತೆಯ ಪ್ರವಾಹ (Current) ಕರಾವಳಿ ಕರ್ನಾಟಕದಲ್ಲಿ ಉಜ್ವಲವಾಗಿಯೂ ಇತ್ತು: ಇದರ ಪಳಿಯುಳಿಕೆಗಳು ಮತ್ತು ಐತಿಹ್ಯಗಳು ದಾಖಲೆಗಳ ರೂಪದಲ್ಲಿ ಮತ್ತು ಮೌಖಿಕವಾಗಿ ಸಮಕಾಲೀನ ಘಟ್ಟದಲ್ಲಿ ಈಗಲೂ ಮುಂದುವರಿಯುತ್ತಿದೆ. ಇಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಚಾರಿತ್ರಿಕವಾಗಿ ಪರಸ್ಪರ ಕೊಡುಕೊಳ್ಳುವ ಸಾಂಸ್ಕೃತಿಕ ಸೌಹಾರ್ದತೆಗಳ ಕುರುಹುಗಳು ಎಲ್ಲಾ ರಂಗದಲ್ಲೂ ಮುಂದುವರಿಯುತ್ತಿರುವ ಘಟ್ಟದಲ್ಲೇ ಮತೀಯ ವಿಷಬೀಜದ ಪ್ರಜ್ಞಾಪೂರ್ವಕ ಪ್ರಕ್ರಿಯೆಗಳಿಗೂ ಒಂದು ದೀರ್ಘ ಇತಿಹಾಸವಿದೆ. ಇದನ್ನು ಮರೆಮಾಚುವುದರಿಂದ ಮತೀಯ ಸೌಹಾರ್ದತೆಗೆ ಭಂಗ ಬರಬಹುದೆಂಬ ಪಲಾಯನವಾದಿ ಚಿಂತನೆ ಬೇಕಾಗಿಯೂ ಇಲ್ಲ. ತತ್ಕಾರಣ ಚರಿತ್ರೆಯಿಂದ ಪಾಠ ಕಲಿತರೆ ಮಾತ್ರ ಜನಪರವಾದ ಚರಿತ್ರೆ ನಿರ್ಮಾಣ ಮಾಡಲು ಸಾಧ್ಯ ಎಂಬ ಪ್ರಜ್ಞೆ ಸದಾ ನಮ್ಮ ಮನಸ್ಸಿನಲ್ಲಿ ಇರಬೇಕಾಗಿದೆ.

ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ಸಾಮ್ರಾಜ್ಯದ ಮಧ್ಯೆ ಇದ್ದ ಮಧ್ಯಯುಗದ ಸಹಜವಾದ ಲಕ್ಷಣವಾದ 'ರಾಜ ಪ್ರಭುತ್ವದ ವೈರತ್ವ'ಕ್ಕೆ ಅದಾಗಲೇ ಇದ್ದ ಮತೀಯ ದ್ವೇಷದ ಲೇಪನವನ್ನು ವ್ಯವಸ್ಥಿತ ರೀತಿಯಲ್ಲಿ ಲೇಪಿಸಿ ಅದರ ಬೆಳೆಕೊಯ್ಲು ನಡೆಸುವಲ್ಲಿ, 1498ರಲ್ಲಿ ಆಗಮಿಸಿದ ಪೋರ್ಚುಗೀಸರು ಪ್ರಾರಂಭದಿಂದಲೇ ಯಶಸ್ವಿಯಾಗಿರುತ್ತಾರೆ. ತಮ್ಮ ಬತ್ತಳಿಕೆಯಲ್ಲಿ ಹೊಂದಿದ್ದ ಎರಡು ಆಯುಧಗಳಾದ ವಾಣಿಜ್ಯೋಧ್ಯಮ ಮತ್ತು ಕ್ರೈಸ್ತ ಮತದ ಪ್ರಚಾರದ ಕಾರ್ಯಭಾರವನ್ನು ಜಾರಿಗೊಳಿಸುವಲ್ಲಿ ತೀವ್ರ ಗಮನ ಹರಿಸಿದರು. ಇದರ ಪರಿಣಾಮವಾಗಿ ಕರಾವಳಿ ಕರ್ನಾಟಕ ಮತ್ತು ಮಲಬಾರ್ ತೀರದಲ್ಲಿ ಅರಬ್ಬರು, ಮಾಪಿಳ್ಳೆಗಳು ಮಧ್ಯಪ್ರಾಚ್ಯದ ಹಾಗೂ ಯುರೋಪಿನ ವ್ಯಾಪಾರಸ್ಥರು ಸಮಗ್ರವಾಗಿ ವ್ಯಾಪಾರದ ಹತೋಟಿಯನ್ನು ಪಡೆದುಕೊಂಡಿದ್ದರು. ಯುರೋಪಿನಲ್ಲಿ ವಿದೇಶಿ ವ್ಯಾಪಾರ ತಮ್ಮ ಕೈಯಿಂದ ತಪ್ಪಿ ಹೋಗಿ ಮುಸ್ಲಿಂ ಮತೀಯ ವ್ಯಾಪಾರಿಗಳ ಅಡುಂಬೊಲವಾದಾಗ ಭಾರತಕ್ಕೆ ನೇರ ಸಮುದ್ರ ಮಾರ್ಗ ಕಂಡು ಹಿಡಿಯುವ ಮೂಲಕ ಮುಸ್ಲಿಂ ಸಮುದಾಯದಿಂದ ಅಂತರಾಷ್ಟ್ರೀಯ ವ್ಯಾಪಾರವನ್ನು ತಮ್ಮ ಕೈವಶ ಮಾಡಬೇಕೆಂಬ

ಉದ್ದೇಶವನ್ನು ಹೊಂದಿದ್ದರು. ಇಂತಹ ಮೂಲ ಉದ್ದೇಶದ ಪೋರ್ಚುಗೀಸರು 'ಮುಸ್ಲಿಮರ ವಿರುದ್ಧದ ಮತೀಯ ದ್ವೇಷಕ್ಕೆ' ಕರಾವಳಿ ಕರ್ನಾಟಕದ ಮಣ್ಣು ಹದವಾಗಿರುವುದನ್ನು ಕಂಡುಕೊಂಡರು. ಈ ರೀತಿ ಮುಸ್ಲಿಮರ ವಿರುದ್ಧ ಪ್ರಾರಂಭವಾದ ವ್ಯಾಪಕ ದೌರ್ಜನ್ಯ, ಹಲ್ಲೆ, ಅಪಪ್ರಚಾರಗಳ ಸರಮಾಲೆ ನಡೆದು ಸರಿಸುಮಾರು 50 ವರ್ಷಗಳ ಕಾಲಾವಧಿಯಲ್ಲೇ ಈ ಭೂಭಾಗವನ್ನು ತಮ್ಮ ತೆಕ್ಕೆಗೆ ಒಳಪಡಿಸಿಕೊಂಡರು. ಸಾಮೂಹಿಕ ಹತ್ಯಾಕಾಂಡಗಳು ಗೋವಾ, ಕಾರವಾರ, ಭಟ್ಕಳದವರೆಗೂ ನಡೆಯಿತು. ಇದಕ್ಕೆ ವಾಣಿಜ್ಯೋದ್ಯಮದ ನೆಲೆಯಲ್ಲಿ ಒಂದು ಹೊಸ ಆಯಾಮವೂ ದೊರೆಯಿತು. ಇದೇ ಅವಧಿಯಲ್ಲಿ ಪೋರ್ಚುಗೀಸರು ಗೋವಾದಲ್ಲಿ ಪ್ರಾರಂಭಿಸಿದ ಮತಾಂತರ ಪ್ರಕ್ರಿಯೆಯಿಂದ ಸಾಂಪ್ರದಾಯಿಕ ಸಾರಸ್ವತ ಕೊಂಕಣಿ ಸಮುದಾಯ ಅಲ್ಲಿಂದ ದಕ್ಷಿಣದತ್ತ ಬಂದು ಕರಾವಳಿ ಕರ್ನಾಟಕದಲ್ಲಿ ನೆಲೆ ನಿಂತರು. ಇವರುಗಳು ಕೂಡ ಈ ಮೊದಲು ಗೋವಾದಲ್ಲಿ ಪ್ರಭಾವಿ ವ್ಯಾಪಾರಿ ಸಮುದಾಯವಾಗಿದ್ದು ಮುಸ್ಲಿಂ ಸಮುದಾಯದೊಂದಿಗೆ ಸಹಜವಾಗಿಯೇ ವ್ಯಾಪಾರಿ ವೃತ್ತಿ ಧರ್ಮದ ವೈರತ್ವ ಇತ್ತು. ಈಗ ಪೋರ್ಚುಗೀಸರು ಪ್ರಾರಂಭಿಸಿದ ಕ್ರೈಸ್ತ ಮತದ ಮತಾಂತರದ ಪ್ರಕ್ರಿಯೆ ಬಗ್ಗೆ ಸಹಜವಾಗಿಯೇ ಅಸಹನೆ ಬೆಳೆದು ಬಂತು. ಒಟ್ಟಾರೆಯಾಗಿ ಗೋವಾದಿಂದ ದಕ್ಷಿಣಕ್ಕೆ ಬಂದ ಈ ಪ್ರಬಲ ಸಮುದಾಯದ ಮಧ್ಯೆ ಮುಸ್ಲಿಂ ಮತ್ತು ಕ್ರೈಸ್ತರ ವಿರುದ್ಧದ ಮತೀಯ ದ್ವೇಷ ಮನೆ ಮಾಡಿತ್ತು. ಕರಾವಳಿಯ ಕೆಳದಿ ಸಾಮ್ರಾಜ್ಯದ ಆಳ್ವಿಕೆಯ ಸಮಯದಲ್ಲಿ ಈ ಭಾಗದಲ್ಲಿ ನೆಲೆನಿಂತ ಈ ವ್ಯಾಪಾರಿ ಸಮುದಾಯದ ಮೂಲ ಭಾವನೆಗೆ ಬಿದ್ದ ಗಾಯದ ನೆನಪು ಮಾಸಲಿಲ್ಲ. ಕೆಳದಿಯ ಆಳ್ವಿಕೆಯ ಸುಮಾರು 250 ವರ್ಷಗಳ ಕಾಲದಲ್ಲಿ ಪೋರ್ಚುಗೀಸರೊಂದಿಗೆ ಜರುಗಿದ ವಿವಿಧ ಸ್ವರೂಪದ ಸಂಘರ್ಷ-ಯುದ್ಧಗಳು ಮತ್ತು ಅದರ ಪರಿಣಾಮವಾಗಿ ನಡೆದ ದ್ವಿಪಕ್ಷೀಯ ಒಪ್ಪಂದಗಳನ್ನು ಕೂಲಂಕುಶವಾಗಿ ಪರಿಗಣನೆಗೆ ತಂದಾಗ ಧಾರ್ಮಿಕ ನಂಬಿಕೆ ಮತ್ತು ಆಚರಣೆಯ ಪ್ರಶ್ನೆ ಹಾಗೂ 'ಗೋವು' ರಾಜಕೀಯ ನೆಲೆಯನ್ನು ಕಂಡುಕೊಂಡಿರುವುದನ್ನು ನಾವು ಕಾಣಬಹುದು. ಅಂದರೆ ಈ ಅವಧಿಯಲ್ಲಿ ನಡೆದ ಎಲ್ಲಾ ಒಪ್ಪಂದಗಳಲ್ಲಿ ಗೋವು, ದೇವಸ್ಥಾನ, ಕ್ರೈಸ್ತ ಮತದ ಪ್ರಾರ್ಥನಾ ಮಂದಿರ (ಚರ್ಚ್) ಹಾಗೂ ಕ್ರೈಸ್ತ ಮತದ ಪ್ರಚಾರ ಇವುಗಳು ಒಪ್ಪಂದದ ಅಂಶಗಳಾಗಿರುವುದನ್ನು ಗಮನಿಸಬಹುದು. ಅರ್ಥಾತ್ 'ಗೋವು' ರಾಜಕೀಯದ ದಾಳವಾಗಿ 16ನೇ ಶತಮಾನದಿಂದಲೇ ಚಲಾವಣೆಯಲ್ಲಿರುತ್ತದೆ. ಅಂದಿನಿಂದ ಇಂದಿನವರೆಗೂ ಗೋವು ವಿವಾದದ ಪ್ರಾಣಿಯಾಗಿಯೇ ಮುಂದುವರಿಯುತ್ತಿದೆ.

ಗೋವಾದಲ್ಲಿ ಮತಾಂತರಗೊಂಡಿರುವ ಕ್ರೈಸ್ತ ಸಮುದಾಯದ ಜನರ ವಿರುದ್ಧವೇ ನಡೆದ ಪಾಷಂಡ ವಿಚಾರಣೆ (ಇನ್‌ಕ್ವಿಷನ್)ಗೆ ಹೆದರಿ ಅವರೂ ಕರಾವಳಿ ಕರ್ನಾಟಕದಲ್ಲಿ ಬಂದು ನೆಲೆ ನಿಲ್ಲುತ್ತಾರೆ. ಸರಿ ಸುಮಾರು 16ನೇ ಶತಮಾನದಲ್ಲಿ ಈ ಭಾಗದಲ್ಲಿ ಮೂರು ಪ್ರಮುಖ ಮತಗಳ ಆಶ್ರಯ ತಾಣವಾಗುತ್ತದೆ. ಅದಾಗಲೇ ಇದ್ದ ಮತೀಯ ಭಾವನೆಗಳ ಸಾಮಾಜಿಕ ಬದುಕಿಗೆ ಹೊಸ ಆಯಾಮ ದೊರೆಯುತ್ತದೆ. ಆದರೆ ಈ ಸಮಯದಲ್ಲಿ ಇಂದು ಕಾಣುವಂತಹ ಪರಸ್ಪರ ಮತೀಯ ದ್ವೇಷದ ಗಲಭೆಗಳು ರೂಪುಗೊಂಡಿರುವುದಿಲ್ಲ.

ಪೋರ್ಚುಗೀಸರ ನಂತರ 1763ರಲ್ಲಿ ಕರಾವಳಿ ಕರ್ನಾಟಕದ ರಾಜಕೀಯದಲ್ಲಿ ಇಂಗ್ಲೀಷರು ಮತ ಧರ್ಮ, ಜಾತಿ ಹಾಗೂ ಪ್ರಾಂತೀಯ ಭಿನ್ನತೆಗಳನ್ನು ಉಪಯೋಗಿಸಿ ಅಧಿಕಾರವನ್ನು ಪಡೆಯುವ ನಿಟ್ಟಿನಲ್ಲಿ ಹಲವಾರು ತಂತ್ರ ಕುತಂತ್ರಗಳನ್ನು ಅನುಸರಿಸಿರುತ್ತಾರೆ. ಈ ಪ್ರಕ್ರಿಯೆಯನ್ನು ಕಾರ್ಲ್ ಮಾರ್ಕ್ಸ್‌ರವರು 1857ರ ಪ್ರಥಮ ಸ್ವಾತಂತ್ರ್ಯ ಸಮರದ ಸಮಯದಲ್ಲಿ ನಿರಂತರವಾಗಿ ಲಂಡನ್‌ನಿಂದ ಪತ್ರಿಕೆಗೆ ಬರಹಗಳನ್ನು ನೀಡುತ್ತಿದ್ದು ಅದರಲ್ಲಿ ಈ ರೀತಿ ವಿವರಿಸಿರುತ್ತಾರೆ. "ಬ್ರಿಟೀಷರು ಭಾರತದಲ್ಲಿ ತಮ್ಮ ಪ್ರಭುತ್ವವನ್ನು ಸಕ್ರಿಯವಾಗಿ ನೆಲೆಯಾಗಿಸಲು ಎಲ್ಲಾ ರೀತಿಯ ಮತೀಯ ಧಾರ್ಮಿಕ ಮತ್ತು ಜಾತಿ ಜಾತಿಗಳ ಬಗೆಗಿನ ಭಿನ್ನಾಭಿಪ್ರಾಯಗಳ ಕಲಹಗಳನ್ನು ಸಂಪೂರ್ಣವಾಗಿ ಉಪಯೋಗಿಸಿ ತನ್ನ ಮೂಲಭೂತ ಒಡೆದು ಆಳುವ ದ್ವೇಷ ಹುಟ್ಟಿಸುವ ರಾಜಕೀಯ ತಂತ್ರವನ್ನು ಈ ಭಾಗದಲ್ಲಿ ವ್ಯವಸ್ಥಿತವಾಗಿ ಉಪಯೋಗಿಸಿಕೊಂಡರು" ಎಂದು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹೈದರಾಲಿ ಮತ್ತು ಟಿಪ್ಪುವಿನ 36 ವರ್ಷಗಳ ಆಳ್ವಿಕೆಯ ಘಟ್ಟದಲ್ಲಿ ಸಹಜವಾಗಿಯೇ ಇದ್ದ ಮತೀಯ ದ್ವೇಷದ ಭಾವನೆಗೆ ಹೊಸ ಸ್ವರೂಪ ಬೆಳೆದು ಬಂತು. ಕ್ರೈಸ್ತ ಸಮುದಾಯ ಮತ್ತು ಹಿಂದೂ ಸಮುದಾಯದ ಮಧ್ಯೆ ಹೈದರಾಲಿ ಮತ್ತು ಟಿಪ್ಪುವಿನ ವಿರುದ್ಧ ಮತೀಯ ನೆಲೆಯಲ್ಲೂ ಅಪಪ್ರಚಾರ ಮಾಡಿರುವುದನ್ನು ಗಮನಿಸಬೇಕು. ಇಂಗ್ಲೀಷರು ಟಿಪ್ಪುವಿನ ವಿರುದ್ಧ ನಿರಂತರವಾಗಿ ಅಪಪ್ರಚಾರವನ್ನು ಮಾಡುತ್ತಿರುವ ಬಗ್ಗೆ ಡಚ್ಚ್ ಈಸ್ಟ್ ಇಂಡಿಯಾ ಕಂಪೆನಿಯ ಆ ಕಾಲದ ದಾಖಲೆಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುತ್ತಾರೆ. ಇಂಗ್ಲೀಷರು ಟಿಪ್ಪುವಿನ ವಿರುದ್ಧ ಮತೀಯ ಭಾವನೆಯನ್ನು ಯಥೇಚ್ಛವಾಗಿ ಬಳಸುತ್ತಾರೆ. ಟಿಪ್ಪುವಿನ ವಿರುದ್ಧ ಕ್ರೈಸ್ತ ಸಮುದಾಯ, ಕೊಡವರನ್ನು ಮತ್ತು ನಾಯರ್ ಸಮುದಾಯವನ್ನು ವ್ಯವಸ್ಥಿತವಾಗಿ ಬಳಸಿಕೊಂಡು ಇಂದಿಗೂ ಆ ದ್ವೇಷ ಈ ಪ್ರಾಂತ್ಯದಲ್ಲಿ ಟಿಪ್ಪುವಿನ ವಿರುದ್ಧ ಶಾಶ್ವತವಾಗಿ ಇರುವುದನ್ನು ಕಾಣಬಹುದು. ಇದೇ ರೀತಿ ಕರಾವಳಿ ಕರ್ನಾಟಕಕ್ಕೆ ಗೋವಾದಿಂದ ಬಂದು ಇಲ್ಲಿ ನೆಲೆ ನಿಂತು ಇಲ್ಲಿಯ ಸಮುದಾಯವೇ ಆಗಿ ಬೆಳೆದು ಬಂದು ವ್ಯಾಪಾರ, ವ್ಯವಹಾರ ಮತ್ತು ರಾಜಕೀಯದಲ್ಲಿ ಪ್ರಬಲ ಶಕ್ತಿಯಾಗಿ ರೂಪಿತಗೊಂಡ ಗೌಡ ಸಾರಸ್ವತ ಸಮಾಜದ (ಕೊಂಕಣಿ ಸಮುದಾಯ) ಓರ್ವ ಮಹಿಳೆ ಟಿಪ್ಪುವಿನ ವಿರುದ್ಧ ಬ್ರಿಟೀಷರ ಪರವಾಗಿ ಗೂಡಾಚಾರಿಕೆ ನಡೆಸಿರುವುದು ಆಕಸ್ಮಿಕ ಅಥವಾ ಅನಿವಾರ್ಯ ಪ್ರಕ್ರಿಯೆ ಅಲ್ಲ. ಇದು ಉದ್ದೇಶ ಪೂರಕ ರಾಜಕೀಯ ಕರ್ತವ್ಯವಾಗಿತ್ತು.

ಮುಂದೆ 1811ರಲ್ಲಿ ಬ್ರಿಟೀಷರ ವಿರುದ್ಧ ಜರುಗಿದ ರೈತಾಪಿ ಜನರ ಕೂಟ್ ಬಂಡಾಯ ದೇವಸ್ಥಾನಗಳ ಅಂಗಣದಲ್ಲಿ ರೂಪುಗೊಂಡಿದ್ದು ಇದಕ್ಕೂ ಬ್ರಿಟೀಷ್ ವರದಿಯು ಮತೀಯ ಸ್ವರೂಪದ ಲೇಪನವನ್ನು ಕೊಟ್ಟಿರುವುದನ್ನು ವಿಶ್ಲೇಷಿಸಿದಾಗ ಅಂದಿನ ಆ ಸಮಯದಲ್ಲಿ ಮತೀಯತೆ ಸದಾ ಪ್ರವಹಿಸುತ್ತಿತ್ತು ಎಂಬುದು ತಿಳಿದು ಬರುತ್ತದೆ. 1834-36ರ ಅಮರ ಸುಳ್ಯ ದಂಗೆಯಲ್ಲಂತೂ ಬ್ರಿಟೀಷರ ವಿರುದ್ಧ ನಡೆದ ಪ್ರಬಲ ಪ್ರತಿಭಟನೆ ತೀವ್ರ ದಂಗೆಯಾಗಿ ಬ್ರಿಟೀಷ್ ಕಛೇರಿಗಳಿಗೆ ಬೆಂಕಿ, ಲೂಟಿ ಇವೇ ಮೊದಲಾದವುಗಳು ವ್ಯಾಪಕ ಪ್ರಮಾಣದಲ್ಲಿ ಜರುಗಿತು. ಇದು ಧಾರ್ಮಿಕ ಯಾ ಮತೀಯ ಚೌಕಟ್ಟನ್ನು ಮೀರಿ 1857ರ ಭಾರತದ ಪ್ರಥಮ ಸ್ವಾತಂತ್ರ್ಯದ ಸಮಯದಲ್ಲಿ ಕಂಡು ಬಂದಂತಹ ರೀತಿಯಲ್ಲಿ ಮತೀಯ ಸಹಮತ ಸಾಮರಸ್ಯದ ಐಕ್ಯ ಹೋರಾಟವಾಗಿ ರೂಪುಗೊಂಡಿಲ್ಲ. ಈ ಹೋರಾಟವನ್ನು ಬಗ್ಗು ಬಡಿಯಲು ಬ್ರಿಟೀಷರು ಮತೀಯ ಧಾಳವನ್ನು ಯಾವ ಸ್ವರೂಪದಲ್ಲಿ ಉಪಯೋಗಿಸಿಕೊಂಡರೆಂಬ ಬಗ್ಗೆ ಪ್ರತ್ಯೇಕ ಅಧ್ಯಯನ ನಡೆಯಬೇಕಾಗಿದೆ. ಮೇಲ್ನೋಟಕ್ಕೆ ಮತೀಯ ಕಾರ್ಯತಂತ್ರವನ್ನು ಉಪಯೋಗಿಸಿರುವುದು ಕಂಡು ಬರುತ್ತಿಲ್ಲ. ಆದರೆ ಭಾರತದ ಮಣ್ಣಿನಲ್ಲಿ ಅಧಿಕಾರಕ್ಕಾಗಿ ನಡೆಸಿದ ಎಲ್ಲಾ ಹೋರಾಟ, ಯುದ್ಧಗಳಲ್ಲಿ

ಇಂಗ್ಲೀಷರು ಪರಸ್ಪರ ದ್ವೇಷದ ಬೀಜವನ್ನು ಬಿತ್ತಿ ಸಮರ್ಥವಾಗಿ ಉಪಯೋಗಿಸಿಕೊಂಡಿರುವಾಗ ಇಂಗ್ಲೀಷರ ಪಾಲಿಗೆ ಭಾರೀ ಕಷ್ಟನಷ್ಟ ಮತ್ತು ಅವಮಾನಕಾರಿಯಾದ ಸನ್ನಿವೇಶವನ್ನು ನಿರ್ಮಾಣ ಮಾಡಿದ ಈ ಅಮರ ಸುಳ್ಯ ದಂಗೆಯಲ್ಲೂ ಬ್ರಿಟಿಷರು ಮತೀಯ ದಾಳವನ್ನು ಉಪಯೋಗಿಸದಿರಲು ಸಾಧ್ಯವೇ ಇಲ್ಲ. ಒಂದಂತೂ ಸತ್ಯ. 1811ರ ಕೂಟ್ ರೆಬೆಲಿಯನ್‌ನ್ನು ರೂಪು ತಾಳಿದ್ದೇ ಕದ್ರಿ ದೇವಸ್ಥಾನ, ವೆಂಕಟರಮಣ ದೇವಸ್ಥಾನ ಮತ್ತು ಮಂಜೇಶ್ವರದ ದೇವಸ್ಥಾನಗಳಲ್ಲಿ ಪ್ರಾಂಗಣಗಳಲ್ಲಿ. 'ಕೂಟ್' ಅಂದರೆ ಸಭೆ ಸೇರುವುದು ಅಥವಾ ಕೂಟ ಸೇರುವುದು. ಹಾಗಿರುವಾಗ ಇದು ನಡೆದ ಅನಂತರದ 20 ವರ್ಷಗಳ ಅವಧಿಯಲ್ಲಿ ರೂಪುಗೊಂಡ ಅಮರ ಸುಳ್ಯ ದಂಗೆಯಲ್ಲಿ, ದಂಗೆಕೋರರು ಮಂಗಳೂರಿಗೆ ತಲುಪಲು ದೀರ್ಘ ಸಮಯಗಳಿದ್ದರೂ, ಈ ಮೊದಲಿನಂತೆ ದೇವಸ್ಥಾನಗಳು ಯಾಕೆ ಪಾತ್ರವಹಿಸಲಿಲ್ಲ ಎಂಬುದನ್ನು ವಿಶ್ಲೇಷಿಸಬೇಕಾಗಿದೆ.

ಜರ್ಮನ್‌ನ ಬಾಷೆಲ್ ಮಿಶನ್ ಸಂಸ್ಥೆಯು 1834ರಲ್ಲಿ ಮಂಗಳೂರಲ್ಲಿ ಸ್ಥಾಪನೆಗೊಂಡು, ನಂತರ ತಳ ಸಮುದಾಯದ ಮಧ್ಯೆ ಮತಾಂತರ, ಶಿಕ್ಷಣ, ಆರೋಗ್ಯದ ಸೇವಾ ಕಾರ್ಯ ಕೈಗೊಂಡ ಮೇಲೆ ಮತೀಯ ದ್ವೇಷಕ್ಕೆ ಹೊಸ ಸ್ವರೂಪ ದೊರೆಯಿತು. ಆ ಪ್ರಕಾರ ಬಿಲ್ಲವ ಅಥವಾ ಇತರೆ ಹಿಂದುಳಿದ ಸಮದಾಯವನ್ನು ಮತಾಂತರಗೊಳಿಸಿದಾಗ ಸಾಮಾನ್ಯ ರೀತಿಯಲ್ಲಿ ಜನ ಪ್ರತಿಕ್ರಿಯಿಸುತ್ತಿದ್ದರು. ಆದರೆ ನಿರ್ದಿಷ್ಟವಾಗಿ ಬ್ರಾಹ್ಮಣ ಸಮುದಾಯದ ಇಬ್ಬರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಘಟನೆಯು ಹೊಸ ಮತೀಯ ಕ್ಷೋಭೆಗೆ ಹೇತು ಆಯಿತು. ಆಧುನಿಕ ಕಾಲ ಘಟ್ಟದಲ್ಲಿ ನಡೆಯುವಂತಹ ರೀತಿಯಲ್ಲಿಯೇ ಮತೀಯ ಕೃತ್ಯಗಳೂ ನಡೆಯಿತು. ಈ ಮತಾಂತರ ವಿರೋಧಿಸಿ ಪ್ರಾರಂಭದಲ್ಲಿ ಸಾಮಾಜಿಕ ಬಹಿಷ್ಕಾರ, ಪ್ರತಿಭಟನೆ, ಗೃಹ ಬಂಧನ ಮತ್ತು ಮನವಿಗಳೂ ಸಲ್ಲಿಸಲ್ಪಟ್ಟವು. ಇವೆಲ್ಲವುಗಳು ಯಾವುದೇ ಪ್ರಯೋಜನವಾಗದೇ ಇರುವಾಗ ಮುಸ್ಲಿಂ ಸಮುದಾಯವನ್ನು ಬಾಷೆಲ್ ಮಿಶನ್ ಮತ್ತು ಕ್ರೈಸ್ತ ಸಮುದಾಯದ ವಿರುದ್ಧ ಎತ್ತಿಕಟ್ಟಿ ಕೋಮುಗಲಭೆ ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಮಂಗಳೂರಿನ ಮಸೀದಿಯ ಪ್ರಾಂಗಣದಲ್ಲಿ ಹಂದಿಯ ತಲೆಯನ್ನು ಎಸೆದು ಮತೀಯ ಉದ್ವಿಘ್ನತೆಯ ವಾತಾವರಣ ನಿರ್ಮಿಸಿದರು. ಕ್ರೈಸ್ತರ ವಿರುದ್ಧ ಮುಸ್ಲಿಮರೂ ತಿರುಗಿ ಬೀಳಬೇಕೆಂಬ ಹುನ್ನಾರ ಈ ಕಾಲಘಟ್ಟದಲ್ಲಿ ನಡೆಯುವಂತಹ ರೀತಿಯಲ್ಲೇ 150 ವರ್ಷಗಳ ಹಿಂದೆಯೂ ನಡೆದಿತ್ತು. ಈ ಶತಮಾನದಲ್ಲಿ ಸಂಘ ಪರಿವಾರದ ಮಾಮೂಲಿ ಕೃತ್ಯ ಅಂದೂ ಕೂಡ ನಡೆದಿತ್ತು ಎಂಬುದು ವಿಶೇಷವಾಗಿದೆ. ಆದರೆ ಬ್ರಿಟೀಷ್ ಪೊಲೀಸರ ಮಧ್ಯ ಪ್ರವೇಶ ಇಡೀ ಪರಿಸ್ಥಿತಿಯನ್ನೇ ಶಾಂತಗೊಳಿಸಿತು ಹಾಗೂ ಮತಾಂತರಗೊಂಡವರು ಶಾಶ್ವತವಾಗಿ ಪ್ರೊಟೆಸ್ಟೆಂಟ್ ಕ್ರೈಸ್ತರಾಗಿ ಹಾಗೂ ಧರ್ಮ ಪ್ರಚಾರಕರಾಗಿ ಪ್ರಸಿದ್ಧರಾಗಿದ್ದರು.

ಪ್ರಾರಂಭದಿಂದಲೇ ಬಿಲ್ಲವ ಸಮುದಾಯದ ಮಧ್ಯೆ ವ್ಯಾಪಕ ಮತ ಪ್ರಚಾರ ಹಾಗೂ ಮತಾಂತರಗಳ ಮೂಲಕ ಮಿಶನರಿಗಳ ಪ್ರಭಾವ ವ್ಯಾಪಕವಾಗಿ ಬೆಳೆಯಿತು. ಈ ಸಮುದಾಯ ಮತಾಂತರಗೊಂಡ ಮೇಲೆ ಅವರು ನಂಬಿಕೊಂಡು ಪೂಜಿಸುತ್ತಿದ್ದ ಭೂತದ ದೈವಸ್ಥಾನ, ಹಾಗೂ ಭೂತದ ಪ್ರತಿಮೆಗಳೂ ಕಣ್ಮರೆಯಾಗಿ ಅದು ಮಿಶನರಿಗಳ ಧಾರ್ಮಿಕ ನಂಬಿಕೆಯ ತಾಣವಾಯಿತು. ಬಾಷೆಲ್ ಮಿಶನ್ ಧಾರ್ಮಿಕವಾಗಿ ನಡೆಸುವ ಸಾರ್ವಜನಿಕ ಕ್ರೈಸ್ತ ಭೋದನೆಗಳಿಗೆ ಉಭಯ ಜಿಲ್ಲೆಗಳಲ್ಲೂ ಅಡೆತಡೆಗಳು ಮುಂದುವರಿದವು. ಉಡುಪಿಯ ಅಷ್ಟ ಮಠದಲ್ಲಿ ಪರ್ಯಾಯದ ಅವಧಿಯಲ್ಲಿ ಕ್ರೈಸ್ತ ಭೋದನಾ ಸಭೆಗಳು ನಿರಂತರವಾಗಿ ದಾಳಿಗೆ ಒಳಗಾಯಿತು. ಮತಾಂತರಗೊಂಡ ಕುಟುಂಬಗಳ ಸದಸ್ಯರಿಗೆ ಸಾರ್ವಜನಿಕ ಬಹಿಷ್ಕಾರ ಆಸ್ತಿ ಹಕ್ಕಿನಿಂದ ಹೊರತಾಗಿಸುವಂತಹ ಘಟನೆಗಳೂ ನಡೆದು ಹಂತ ಹಂತವಾಗಿ ಮತೀಯ ದ್ವೇಷಕ್ಕೆ ಹೊಸ ಹೊಸ ಸ್ವರೂಪ ಬೆಳೆದು ಬಂದುದು 19ನೇ ಶತಮಾನದ ಮತೀಯ ಸಂಘರ್ಷದಲ್ಲಿ ಹೊಸ ಘಟ್ಟವಾಗಿದೆ. ಇವೆಲ್ಲವುಗಳ ಪರಿಣಾಮವಾಗಿ ಅಂದಿನ ಸಂಪ್ರದಾಯಸ್ತ ಸಮಾಜ ಈ ಬೆಳವಣಿಗೆಗಳನ್ನು ಆತಂಕದಿಂದ ಗಮನಿಸಿತು. ಮುಂದಿನ ಶತಮಾನದ ಪ್ರಾರಂಭದಲ್ಲಿ ಆರ್ಯ ಸಮಾಜ, ಬ್ರಹ್ಮ ಸಮಾಜ, ಶುದ್ಧಿ ಸಮಾಜದ ಚಟುವಟಿಕೆಗಳು ಇಲ್ಲಿಯ ಮತಾಂತರದ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಮಂಗಳೂರಲ್ಲಿ ಅಸ್ತಿತ್ವಕ್ಕೆ ಬಂದವು.

ಬಿಲ್ಲವ ಸಮಾಜದಿಂದ ವ್ಯಾಪಕ ಮತಾಂತರ ಪ್ರಕ್ರಿಯೆಗಳು ನಡೆಯುತ್ತಿರುವಾಗ ಈ ಸಮುದಾಯದ ಮುಂದಾಳುಗಳು ಅದನ್ನು ತಡೆಯಲು ಬ್ರಹ್ಮ ಸಮಾಜವನ್ನು ಸ್ಥಾಪಿಸುವ ಉದ್ದೇಶದಿಂದ ಮುಂಬೈ ಮತ್ತು ಕೊಲ್ಕತ್ತಾಕ್ಕೆ ತೆರಳಿ ಅದರ ನಾಯಕರನ್ನು ಮಂಗಳೂರಿಗೆ ಬರುವಂತೆ ಆಮಂತ್ರಣ ನೀಡಿದರು. ಈ ಮೂಲಕ ಬ್ರಹ್ಮ ಸಮಾಜವನ್ನು ಮಂಗಳೂರಿನಲ್ಲಿ ಸ್ಥಾಪನೆ ಮಾಡುವ ಉದ್ದೇಶದ ಹಿಂದೆ ಮತೀಯ ಉದ್ದೇಶವೂ ಇತ್ತು. ಬ್ರಹ್ಮ ಸಮಾಜದ ಸಂಘಟನಾ ಸ್ವರೂಪದ ಪ್ರಕ್ರಿಯೆಯಲ್ಲಿ ಬಿಲ್ಲವ ಸಮುದಾಯದ ಮುಂದಾಳುಗಳೊಂದಿಗೆ ಸಾಥ್ ನೀಡಿದ ಸಮುದಾಯವೆಂದರೆ ಗೌಡ ಸಾರಸ್ವತ (ಕೊಂಕಣಿ) ಮತ್ತು ಬ್ರಾಹ್ಮಣ ಸಮುದಾಯವಾಗಿದೆ. ಇದೇ ಸಮುದಾಯ ಇಂದು ಕೂಡ ಸಂಘ ಪರಿವಾರದ ಸಿದ್ಧಾಂತದ ಪ್ರಬಲ ಪ್ರತಿಪಾದಕರಾಗಿ ಅದರ ಬೌದ್ಧಿಕ ಮತ್ತು ಆರ್ಥಿಕ ಬೆನ್ನೆಲುಬು ಆಗಿದ್ದಾರೆ. ಬಿಲ್ಲವ ಸಮುದಾಯ ಸಂಘ ಪರಿವಾರದ ದೈಹಿಕ ತಾಕತ್ತಿಗಾಗಿ ನಿರಂತರವಾಗಿ ಹೋರಾಡುವ ಸಮುದಾಯವಾಗಿ ಮುಂದುವರಿಯುತ್ತಿರುವುದು ಇತಿಹಾಸದ ವಾಸ್ತವಿಕತೆಯಾಗಿದೆ.

ಈ ರೀತಿ ಹಂತ ಹಂತವಾಗಿ ಬೆಳೆದು ಬಂದ ಮತೀಯ ವಿಭಜನೆಯು ಹೊಸ ಹೊಸ ಮಜಲುಗಳಿಗೆ ವಿಸ್ತರಣೆಯಾಯಿತು. ಆದುದರಿಂದ ಕರಾವಳಿ ಕರ್ನಾಟಕದಲ್ಲಿ ಕಳೆದ ಐದು ಶತಮಾನಗಳ ಸಾಮಾಜಿಕ ರಾಜಕೀಯ ಬೆಳವಣಿಗೆಗಳಲ್ಲಿ ಮತೀಯ ದ್ವೇಷಕ್ಕೆ ನೆಲವನ್ನು ಹದಗೊಳಿಸುವ ಪ್ರಕ್ರಿಯೆ ನಡೆಯುತ್ತಾ ಸಾಗಿತ್ತು. ಇದರೊಂದಿಗೆ ಇಲ್ಲಿನ ಬಹುಸಂಖ್ಯಾತ ಸಮುದಾಯದ ಧಾರ್ಮಿಕ ನಂಬಿಕೆಗಳು ಸಾವಿರ ಸಾವಿರ ಸಂಖ್ಯೆಯಲ್ಲಿರುವ ಭೂತದ ದೈವಸ್ಥಾನ, ಗುಡಿ, ಗೋಪುರ, ಭಜನಾ ಮಂದಿರ, ಕೋಲ, ನೇಮ, ಬಲಿ, ಆಯನ ಇವೆಲ್ಲವುಗಳು ಪರಸ್ಪರ ಸಾಮರಸ್ಯ ಮತ್ತು ದ್ವೇಷದ ಮಧ್ಯೆ ಸದಾ ಬೂದಿ ಮುಚ್ಚಿದ ಕೆಂಡದಂತಹ ಸನ್ನಿವೇಶವನ್ನು ಸುಪ್ತವಾಗಿ ನಿರ್ಮಿಸಿಕೊಂಡು ಬಂದಿದೆ. ಇಲ್ಲಿರುವಷ್ಟು ಅದರಲ್ಲೂ ನಿರ್ಧಿಷ್ಟವಾಗಿ ಅವಿಭಜಿತ ದ.ಕ ಜಿಲ್ಲೆಯಲ್ಲಿರುವಷ್ಟು ಧಾರ್ಮಿಕ ಆಚರಣೆಗಳ ತಾಣಗಳು ಇತರ ಯಾವುದೇ ಜಿಲ್ಲೆಯಲ್ಲಿ ಕಾಣಲು ಅಸಾಧ್ಯ. ತುಳು ಭಾಷಿಕ ಕುಟುಂಬಗಳಲ್ಲಿ ಚಾಲ್ತಿಯಲ್ಲಿರುವ ಕೌಟುಂಬಿಕ ಧಾರ್ಮಿಕ ಆಚರಣೆಗಳು, ವಾರ್ಷಿಕ ಮನೆಂಯ ಪರ್ವಗಳು, ಗ್ರಾಮದ ಪರ್ವಗಳು, ಊರಿನ



ಪರ್ವಗಳೆಂಬ ಉತ್ಸವಗಳೂ, ಮಳೆಗಾಲದ ಆಚರಣೆ, ಬೇಸಿಗೆಯ ಆಚರಣೆಗಳೆಂಬ ಹತ್ತು ಹಲವು ಸ್ತರಗಳ ಧಾರ್ಮಿಕ ಸಾರ್ವಜನಿಕ ಉತ್ಸವಗಳೂ ಈ ಪ್ರದೇಶದ ವಿಶೇಷತೆಯಾಗಿದೆ. ಈ ರೀತಿ ಪ್ರಬಲ ಹಿಂದೂ ಧರ್ಮದ ಕದಂಬ ಬಾಹುಗಳು ಬಿಗಿಯಾಗಿ ಸುತ್ತುವರಿದಿದ್ದರೂ ಹೊಸತಾಗಿ ಬಂದ ಪ್ರೊಟೆಸ್ಟೆಂಟ್ ಕ್ರೈಸ್ತ ಮತಕ್ಕೆ ಈ ಸಮುದಾಯಗಳಿಂದಲೇ ಸಾಕಷ್ಟು ಮತಾಂತರಗಳು ನಡೆದಿರುವಂತಹದ್ದು ಒಂದು ಚಾರಿತ್ರಿಕ ವೈರುಧ್ಯವಾಗಿದೆ.

ಇಂತಹ ಸಾಮಾಜಿಕ ಹಿನ್ನೆಲೆಯನ್ನು ಬ್ರಿಟಿಷರು ಸಮರ್ಪಕವಾಗಿ ಉಪಯೋಗಿಸಿಕೊಂಡು ಬೇಳೆ ಬೇಯಿಸಿದರು. 1811ರ ಅವಧಿಯಲ್ಲಿ ಇಲ್ಲಿಯ ದೇವಸ್ಥಾನಗಳು ಬಂಡಾಯದ ಕೇಂದ್ರಗಳಾದುವು. ಆದರೆ ನೂರು ವರ್ಷದ ನಂತರ ಅಂದರೆ 1911–12ರ ಅವಧಿಯಲ್ಲಿ ಬ್ರಿಟಿಷ್ ರಾಣಿಯ ದರ್ಬಾರಿನ ಮಹೋತ್ಸವವನ್ನು ಆಚರಿಸಿ ವಿಶೇಷ ಪೂಜೆ ಪುರಸ್ಕಾರಗಳು, ಅನ್ನದಾನ ನೆರವೇರಿಸಿದ ಘಟನೆ ಕೆಲವು ದೇವಾಲಯಗಳಲ್ಲಿ ನಡೆದಿದ್ದು ಇದು ಕೂಡಾ ಒಂದು ವ್ಯತಿರಿಕ್ತ ಬೆಳವಣಿಗೆಯಾಗಿದೆ. ಸಮಕಾಲೀನ ಸಂದರ್ಭದಲ್ಲಿ ಹೆಚ್ಚಿನ ದೇವಸ್ಥಾನಗಳು ಸಂಘ ಪರಿವಾರದ ಸೈದ್ಧಾಂತಿಕ ಪ್ರಚಾರ ಮತ್ತು ತರಬೇತಿಯ ನೆಲೆವೀಡಾಗಿ ಬದಲಾಗಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಸಾಮಾನ್ಯವಾಗಿ ಮಿಶನರಿಗಳ ಮತಾಂತರದ ಪ್ರಕ್ರಿಯೆಯಲ್ಲಿ ದಲಿತರು ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರಗೊಂಡಿರುತ್ತಾರೆಂಬುದು ಸಾಮಾನ್ಯ ನಂಬಿಕೆಯಾಗಿದೆ. ಆದರೆ ಅವಿಭಜಿತ ದ.ಕ ಜಿಲ್ಲೆ ಮತ್ತು ಪಕ್ಕದ ಮಲಬಾರ್ ಪ್ರಾಂತ್ಯದ ಕಣ್ಣನೂರಿನವರೆಗಿನ ಮಿಶನರಿಗಳ ಮತಾಂತರದ ಚರಿತ್ರೆಯನ್ನು ಅಭ್ಯಾಸಿಸಿದಾಗ ದಲಿತರು ಮತಾಂತರಗೊಂಡ ಸಂಖ್ಯೆಯು 5%ದಷ್ಟು ಇಲ್ಲ. ಬಾಸೆಲ್ ಮಿಶನ್‌ನ ವರದಿಗಳ ಪ್ರಕಾರ ದಲಿತರ ಮತಾಂತರಕ್ಕೆ ಅಡ್ಡ ಬಂದಿರುವಂತಹದ್ದು ಅವರು ನಂಬಿಕೊಂಡಿರುವಂತಹ ಭೂತ ಮತ್ತಿತರ ಆಚರಣೆಗಳೇ ಆಗಿವೆ ಎಂದು ಹೇಳುತ್ತದೆ. ಬಿಲ್ಲವ ಮತ್ತಿತರೆ ತಳ ಸಮುದಾಯದ ಜನರಿಗೆ ಆ ಭೂತಗಳನ್ನು ಬಿಟ್ಟು ಬಂದು ಹೊಸ ಮತಕ್ಕೆ ಸೇರಲು ಯಾವುದೇ ಅಡ್ಡಿಯಾಗಲಿಲ್ಲ. ಆದರೆ ದಲಿತರ ಪಾಲಿಗೆ ಇದು ಅಡ್ಡಿಯಾಯಿತು. ಆದುದರಿಂದ ಕರಾವಳಿ ಕರ್ನಾಟಕದ ಮತೀಯ ಅಧ್ಯಯನದಲ್ಲಿ ಇದೊಂದು ವೈರುಧ್ಯಮಯ ವಿಷಯವಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ದಲಿತ ಸಮುದಾಯದ ಅತೀ ಹೆಚ್ಚಿನ ಭಾಗ ಸಂಘ ಪರಿವಾರದ ಬೆಂಬಲಿತರಾಗಿದ್ದಾರೆ. ಅದೂ ತೀರಾ ಹಿಂದುಳಿದಿರುವ ಪಾಳೆಯಗಾರಿ ಮೌಲ್ಯಗಳು ಮತ್ತು ಅಸ್ಪೃಶ್ಯತಾ ಆಚರಣೆ ಮತ್ತಿತರೆ ಅಮಾನವೀಯ ದೌರ್ಜನ್ಯಗಳ, ಕ್ರೂರ ಇತಿಹಾಸ ಹೊಂದಿರುವ ಸುಳ್ಯ, ಬಂಟ್ವಾಳ, ಪುತ್ತೂರು ಕಡೆಗಳಲ್ಲಿ ಇದು ದೊಡ್ಡ ಪ್ರಮಾಣದಲ್ಲಿ ಕಾಣಬಹುದು.



ಆದುದರಿಂದ ಮೇಲೆ ವಿವರಿಸಿರುವ ಚಾರಿತ್ರಿಕ ಸಂಕೀರ್ಣ ಬೆಳವಣಿಗೆಯ ಪಡಿಯಚ್ಚಿನಲ್ಲಿ ಕಳೆದ ಶತಮಾನದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಜನ್ಮವೆತ್ತಿದ ಆರ್‌ಎಸ್‌ಎಸ್‌ನ ಹುಟ್ಟು ಮತ್ತು ಸಂಘಟನಾ ಬೆಳವಣಿಗೆಯ ಚರಿತ್ರೆಯನ್ನು ವಿಶ್ಲೇಷಿಸಬೇಕಾಗುತ್ತದೆ. ಮಂಗಳೂರು ಮತ್ತು ಉಡುಪಿಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಸ್ಥಾಪನೆಯಾದ ಸಂದರ್ಭದಲ್ಲೇ ಅಸ್ತಿತ್ವಕ್ಕೆ ಬಂತು. ಅಂದಿನಿಂದಲೇ ಮುಸ್ಲಿಮರ ವಿರುದ್ಧ, ಕ್ರೈಸ್ತರ ವಿರುದ್ಧ, ಕಮ್ಯೂನಿಸ್ಟರ ವಿರುದ್ಧ ದಾಳಿಯನ್ನು ಕೇಂದ್ರೀಕರಿಸಿದರು. ಇದರ ನಾಯಕತ್ವದಲ್ಲಿ ಮುಖ್ಯವಾಗಿ ಬ್ರಾಹ್ಮಣರು ಮತ್ತು ಜಿಎಸ್‌ಬಿ (ಕೊಂಕಣಿ) ಸಮುದಾಯಗಳವರು ಪ್ರಮುಖರಾಗಿದ್ದರು. 1948ರಲ್ಲಿ ಗಾಂಧೀಜಿಯವರ ಹತ್ಯೆಯಾದಾಗ ಮಂಗಳೂರಿನ ಕಾರ್‌ಸ್ಟ್ರೀಟ್‌ನಲ್ಲಿ ಸಿಹಿಯನ್ನು ಹಂಚಿದ ಘಟನೆಗಳನ್ನು ಕಮ್ಯುನಿಸ್ಟ್ ನಾಯಕರು ಬರೆದ ತಮ್ಮ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು. ಆರ್‌ಎಸ್‌ಎಸ್ ಮತ್ತು ಜನಸಂಘವನ್ನು "ಜನಿವಾರ ಧರಿಸುವವರ" ಸಂಘಟನೆ ಎಂದು 80ರ ದಶಕದವರೆಗೂ ಜನ ಹೇಳುತ್ತಿದ್ದರು. ಆದರೆ ಇಂದು ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರದ ಸಿದ್ಧಾಂತಗಳು ಅವಿಭಜಿತ ದ.ಕ ಜಿಲ್ಲೆಯ ಎಲ್ಲಾ ರಂಗಗಳಲ್ಲೂ ಹಾಸುಹೊಕ್ಕಾಗಿ ಪಸರಿಸಿರುವ ಹಿನ್ನೆಲೆಯನ್ನು ಕಳೆದ ಎಳೆಂಟು ದಶಕಗಳ ಬೆಳವಣಿಗೆಯ ಹಿನ್ನೆಲೆಯಿಂದ ವಿಮರ್ಶಿಸುವಂತಹ ವಿಧಾನವನ್ನು ಬದಲಾಯಿಸಬೇಕಾಗಿದೆ. 1498ರಿಂದ ಒಮ್ಮೆ ಬಹಿರಂಗವಾಗಿ ಮತ್ತೊಮ್ಮೆ ಗುಪ್ತವಾಗಿ ಕಾರ್ಯಾಚರಿಸುತ್ತಿದ್ದ ಮತೀಯತೆಯ ದ್ವೇಷ, ವೈಷಮ್ಯ ಮತ್ತು ಅಪಪ್ರಚಾರಗಳ ಒಟ್ಟು ಹಿನ್ನೆಲೆಯಲ್ಲಿ ವಿಮರ್ಶೆ ನಡೆಸಬೇಕಾಗಿದೆ. ಪ್ರಬಲವಾದಂತಹ ಸಾಮಾಜಿಕ ಸಾಮರಸ್ಯ, ಸಾಂಸ್ಕೃತಿಕ ಜೀವನಗಳ ಮೌಲ್ಯಗಳ ತಾತ್ವಿಕತೆಯನ್ನು ಅಂದಾಜಿಸಿಕೊಂಡು ತನ್ಮೂಲಕ ಬಹುಸ್ತರೀಯ ಸ್ವರೂಪದ ಸಂಘಟನಾತ್ಮಕ ಸೈದ್ಧಾಂತಿಕ ಹೋರಾಟಗಳನ್ನು ರೂಪಿಸುವಾಗ ಮೇಲಿನ ಚಾರಿತ್ರಿಕ ಬೆಳವಣಿಗೆಯನ್ನು ಗಮನಿಸಲೇಬೇಕು.

ಗ್ರಂಥಋಣ

(1) ಜಾರ್ಜ್ ಎಂ. ಮೋರಸ್ "ಮ್ಯಾಂಗ್ಲೂರು ಎ ಹಿಸ್ಟಾರಿಕಲ್ ಸ್ಕೆಚಸ್" – 1927, ಮುಂಬೈ.

(2) ಟಿ.ಡಬ್ಲೂ.ವೆನ್ "ಮ್ಯಾಂಗ್ಲೂರು"

(3) ಸ್ಯಾಮ್ಯುವೆಲ್ ಮಿಲ್ಲೆ "ಕೆನರಾ ಪಾಸ್ಟ್ ಆ್ಯಂಡ್ ಪ್ರೆಸೆಂಟ್" – 1873, ಮಂಗಳೂರು.

(4) ಬಿ.ಎಸ್ ಶಾಸ್ತ್ರೀ "ಗೋವಾ – ಕೆನರಾ ಪೋರ್ಚುಗೀಸ್ ರಿಲೇಶನ್ಸ್ 1498 – 1763" 2000, ನವದೆಹಲಿ.

(5) ಕೆ. ಜಿ. ವಸಂತ ಮಾಧವ "ರಿಲೀಜನ್ಸ್ ಇನ್ ಕೋಸ್ಟಲ್ ಕರ್ನಾಟಕ"

(6) ಕ್ರಾಂತಿ ಕೆ. ಫರೇಯಸ್ "ದ ಕ್ರಿಶ್ಚಿಯನ್ ಇಂಪ್ಯಾಕ್ಟ್ ಇನ್ ಸೌತ್‌ಕೆನರಾ" – 1999.

(7) ಜಿ. ಗಲ್ಲೇಟ್ಟಿ "ದ ಡಚ್ಚ್ ಇನ್ ಮಲಬಾರ್" 1911, ಮದ್ರಾಸ್.

(8) ಬಾಸೆಲ್ ಮಿಶನ್ನಿನ ವಾರ್ಷಿಕ ವರದಿಗಳು (1834ರಿಂದ).

ತಲಿ ಚಿಟ್.... ಹಿಡಿದದ!

ತಲೆ ಚಿಟ್....ಹಿಡಿದದ
ನನಗಿಗ ತಲಿ ಚಿಟ್ ಹಿಡಿದದ!
ದಿನಕ್ಕೊಂದು ಕಾಯ್ದೆ ಜಾರಿ ಕಂಡು
ದೇಶ ಆಳೋರ್ದ ನೀತಿ ಕಂಡು
ತಲಿ ಕೆಟ್ಟಂಗ ಆಗೆದ ನನಗಿಗ
ನೋಡಿ ಎತ್ಲಾಗರ
ಓಡಿ ಹೋಗುವಂಗ ಆಗೆದ!!
ಒಳ್ಳೆ ದಿನ ಬರಲಿ
ರೊಕ್ಕಾ ತಿನ್ನೊದು ನಿಲ್ಲಲಿ
ಕಪ್ಪು ಹಣ ಸಿಗ್ಲಿ
ಕಳ್ರು ಕಂಬಿ ಎಣಸ್ಲಿ
ಇಂಡಿಯಾ ಇಂಪ್ರು ಆಗ್ಲಿ ಅಂತ!
ರಾತ್ರೋರಾತ್ರಿ ನೋಟು ಬ್ಯಾನ್ ಆಗೆದ!!
ಇದ್ದೋರೆಗೆ, ಇಲ್ಲದೋರೆಗೆ
ನಿದ್ದಿ ಬರದಂಗ ಮಾಡಿ
ಎದ್ದ ಗೊಂದ್ಲ ನೋಡಿ
ದಿಕ್ಕು ತಿಳಿದಂಗ ಆಗೆದ
ನನಗಿಗ ದಿಕ್ಕು ತಿಳಿದಂಗ ಆಗೆದ!!


ದುಡ್ಡು ಇದ್ದೊರು ಒಳಗ ಕುಂತು
ಡೀಲ್ ಮುಗಿಸಿ
ನೋಟು ಚೆಂಜ್ ಮಾಡಿದ್ರು !
ದುಡಿದು ತಿನ್ನೋರು ಬೀದಿಗೆ ಬಂದು
ಆ ಕಾರ್ಡ್ ಈ ಕಾರ್ಡ್ ತೋರ್ಸಿ
ಹಗಲು ರಾತ್ರಿಯಿಡಿ
ಬ್ಯಾಂಕು, ಎಟಿಎಂ ಮುಂದ ಕ್ಯೂ ನಿಂತು
ಬಾಳ ತ್ರಾಸ ಪಟ್ರು !!
ಕೂಡಿಟ್ಟ ಬಂಗಾರ ಮ್ಯಾಗ
ಟ್ಯಾಕ್ಸ್ ಅಂತ !
ಕ್ಯಾಶ್ ಲೆಸ್ ಮಾರ್ಕೆಟ್ ಅಂತ
ಆನ್‌ಲೈನ್ ಬುಕ್ಕಿಂಗ್ ಅಂತ !!!
ಇನ್ನೂ ಇಪ್ಪತ್ತು ವರ್ಷದಾಗ
ಇಂಡಿಯಾ
ವರ್ಲ್ಡ್‌ಗೆ ನಂಬರ್ ಒನ್ ಅಂತ !!
ಡೀಬೆಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಅಂತ
ನಾವು ಬೆವರ ಸುರಿಸಿದ ಹಣ
ಬ್ಯಾಂಕನ್ಯಾಗ ಇಟ್ರ
ದಿನ್ನ ಎರಡ ಸಾವಿರ ರೂಪಾಯಿ ಅಂತ !

ಅದು ಅಂತ, ಇದು ಅಂತ
ಇನ್ನೂ ಏನೇನೋ ಅಂತ ಅನ್ನೊದು ಕೇಳಿ
ತಲಿ ಕೆಟ್ಟಂಗ ಆಗೆದ ನನಗಿಗ
ನನಗಿಗ ತಲಿ ಕೆಟ್ಟಂಗ ಆಗೆದ!!

ಈ ವರ್ಷ ಬರಾ ಬಂದು
ರೈತ ಕಂಗಾಲ ಆಗ್ಯಾನ!
ಸಾಲದ ಬಾಧೆ ಹೆಚ್ಚಾಗಿ
ನೇಣು ಹಾಕ್ಕೊಂಡು ಸಾಯಾಕತ್ತನಾ !!
ಮಿಡಿಯಾದೊರು ಒಂದಿಷ್ಟು ಸುದ್ದಿ ಮಾಡಿ
ಊರ ಸಾವ್ಕಾರ ಮದುವಿ ಐತಂತ
ಅಲ್ಲಿ ಹೋಗ್ಯಾರ!
ಇನ್ನೂ ಸರ್ಕಾರದವರು ಒಂದಿಷ್ಟು ಪರಿಹಾರ
ಘೋಷಣೆ ಮಾಡಿ !
ಸಚಿವ ಸಂಪುಟ ಹಿಗ್ಗೋಸೊದರೊಳಗ
ಬಾಳ ಮಗ್ನ ಆಗ್ಯಾರ !
ಇನ್ನು ಯಾರ್ಯಾರೋದೋ ಮಗ್ನತೆ ಕೇಳಿ
ಮನಸ್ಸಿಗೆ ಬಾಳ ಬ್ಯಾಸರ ಆಗ್ಯದ !!
ನನಗಿಗ ಮನಸ್ಸಿಗೆ ಬಾಳ ಬ್ಯಾಸರ ಆಗ್ಯದ!!

ಅವ್ವಗ ಆರಾಮಿಲ್ಲದ
ದವಾಖಾನ್ಯಾಗ ಅದಾಳ
ತಂಗಿ ಮದುವಿ ಎದಿ ಮ್ಯಾಗ ಬಂದು
ಬಾಳ ಗಾಬ್ರಿ ಆಗ್ಯಾಳ !
ಡಾಕ್ಟರು ದೇಶ ಸೇವೆ ಅಂತಾನ
ಅಡ್ವಾನ್ಸ್ ಬಿಲ್ಲು ಕಟ್ಟಿಲ್ಲ ಅಂತ
ಪೇಷೆಂಟು ನೋಡದ ಕುಂತಾನ
ಬೀಗರು ವರದಕ್ಷಿಣೆಗೆ ದಿಕ್ಕಾರ ಅಂತಾರ
ಒಳಗೊಳಗ ಕೊಡ್ಡ ಹೋದ್ರ
ಮದುವೆ ಕ್ಯಾನ್ಸಲ್ ಅಂತಾರ !!
ಯಾರು ಏನು ಮಾಡೋದು
ಹೋದ ಜೀವ, ಮುರಿದು ಬಿದ್ದ ಮದುವಿಗೆ
ಜವಾಬು ಕೊಡೋರು ಯಾರು ?
ಜವಾಬ್ದಾರಿ ತಗೋಳು ಮನಿ ಹಿರಿಯಾ
ನಾ ಫಕೀರ ಅದಿನಿ ಅಂತಾನ
ನಾ ಸನ್ಯಾಸಿ ಅಂತಾನ !
ಇದು ನಮ್ಮ ಬದುಕಿನ ಕಥೆ
ಇದು ನಮ್ಮ ಬಾಳಿನ ವ್ಯಥಿ !!

– ವೀರಪ್ಪ ತಾಳದವರ್



ಕೆ. ಫಣಿರಾಜ್
ಎಡಪಂಥೀಯ ಚಿಂತಕರು

ಕರಾವಳಿಯಲ್ಲಿ 'ರಾಮಜನ್ಮಭೂಮಿ ಚಳುವಳಿ'ಯ ಪರಿಣಾಮಗಳು –ಕೆಲವು ಟಿಪ್ಪಣಿಗಳು

ಜಾತೀಯವಾಗಿಯೂ, ಆರ್ಥಿಕವಾಗಿಯೂ, ಪರಸ್ಪರ ವೈರುಧ್ಯಗಳಲ್ಲಿ ಒಡೆದು ಹೋಗಿರುವ ಹಿಂದುಗಳನ್ನು, 'ಹಿಂದುತ್ವ'ದ ಆಸ್ಮಿತೆಯಡಿ ಒಗ್ಗೂಡಿಸಿ ಸಾಮಾಜಿಕ ಅಧಿಕಾರ ಹೊಂದುವ ರಾಜಕಾರಣವನ್ನು ಆರೆಸ್ಸೆಸ್ 1950ರಿಂದಲ್ಲೂ ರೂಢಿಸಿಕೊಂಡು ಬಂದಿತ್ತು. ದಮನಿತ ಕೆಳ ಜಾತಿಗಳ ಸ್ವಾಭಿಮಾನದ ಆಸ್ಮಿತೆ ಹಾಗು ದುಡಿದೂ ಬಡವರಾಗೇ ಉಳಿಯುವ ಜನರ ಆರ್ಥಿಕ ವರ್ಗ ಆಸ್ಮಿತೆಗಳು ತೆಳುವಾಗಿ, ಜನರಲ್ಲೇ ಆ ಅಸ್ಮಿತೆಗಳ ಕುರಿತು ಅನುಮಾನ ಉಂಟಾಗುವ ಕಾಲಕ್ಕಾಗಿ ಆರೆಸ್ಸೆಸ್ 60 ವರ್ಷ ಕಾದಿತ್ತು; 1985ರ ಉತ್ತರಾರ್ಧ ಆ ಚಾರಿತ್ರಿಕ ಅವಕಾಶವನ್ನು ಅದಕ್ಕೆ ನೀಡಿತ್ತು; 'ರಾಮಜನ್ಮಭೂಮಿ ಚಳುವಳಿ' ಆ ರಾಜಕೀಯವನ್ನು ಆಕ್ರಮಣಶೀಲವಾಗಿ ಮುಂದೊತ್ತುವ ಸಾಮಾಜಿಕ ಕಾರ್ಯಾಚರಣೆಯಾಗಿತ್ತು; ವಸಾಹತುಸಾಹಿ ವಿರೋಧಿ ಹೋರಾಟವು ಒಂದು ಸಾಮಾಜಿಕ ಬದಲಾವಣೆಯ ಹೋರಾಟವಾಗಿಯೂ ಫಲಶೃತವಾದ ಕಾಲದಲ್ಲಿ ದಮನಿತ ಜಾತಿ–ಲಿಂಗ–ವರ್ಗಗಳು ತಮ್ಮ ಸಮಪಾಲನ್ನು ಹಕ್ಕಾಗಿ ಬೇಡುವ ಕ್ರಾಂತಿ ರಾಜಕೀಯದಲ್ಲಿ ತೊಡಗಿದ್ದಾಗ, ಅಂತಹ ರಾಜಕೀಯವನ್ನು ಮಣಿಸಲು ಹುಟ್ಟಿದ್ದು ಆರೆಸ್ಸೆಸ್. ದಮನಿತರ ಹಕ್ಕಿನ ಸಾಮಾಜಿಕ ಮನೋಭಾವ ಮರುನಿರೂಪಿಸದೇ, ಒಂದು ಚಾರಿತ್ರಿಕ 'ಪ್ರತಿಕ್ರಾಂತಿ'ಯಾದ 'ರಾಮಜನ್ಮಭೂಮಿ ಚಳುವಳಿ'ಯ ರಾಜಕೀಯವನ್ನು ನಿಶ್ಯಸ್ತ್ರಗೊಳಿಸಲಾಗದು.

ಈ ವಿಷಯ ಕುರಿತಾಗಿ, ನಾನು ಕಳೆದ ಒಂದುವರೆ ದಶಕಗಳಿಂದ ಕೋಮು ಸೌಹಾರ್ದ ಚಳುವಳಿಯಲ್ಲಿ ತೊಡಗಿಸಿಕೊಂಡು ಪಡೆದ ಅನುಭವದ ಹಿನ್ನೆಲೆಯಲ್ಲಿ ಮಾತನಾಡುವುದರಿಂದ, ಇವುಗಳನ್ನು ಟಿಪ್ಪಣಿಗಳು ಎನ್ನದೆ ವಿಧಿ ಇಲ್ಲ. ಚಳುವಳಿಯಲ್ಲಿ ತೊಡಗಿಸಿಕೊಳ್ಳುವುದು ಎಂದರೆ ಬರಿದೇ ಬೀದಿ ಹೋರಾಟ ಹಾಗು ಭಾಷಣಗಳು ಮಾತ್ರವಾಗಿರುವುದಿಲ್ಲ. ಚಳುವಳಿಯಲ್ಲಿ ಯಾಕೆ ಭಾಗವಹಿಸಬೇಕು? ನಾವು ಪ್ರತಿರೋಧಿಸುತ್ತಿರುವ ಸಂಘಟನೆಗಳ ಶಕ್ತಿ, ಕ್ರಿಯಾಶೀಲತೆ ಎಷ್ಟು? ಅವರಿಗೆ ಜನಮಾನ್ಯತೆ ಹೇಗೆ ದಕ್ಕಲು ಸಾಧ್ಯವಾಯಿತು?–ಇಂತಹ ಸವಾಲುಗಳ ಕುರಿತ ಭೌದ್ಧಿಕ ಅಧ್ಯಯನ ಹಾಗು ವಿವೇಚನೆಯೂ ಆಗಿರುತ್ತದೆ. ಇಷ್ಟಾದರೂ ನಾನು ನನ್ನ ಅನುಭವಗಳನ್ನು ಟಿಪ್ಪಣಿಗಳು ಎಂದೇ ಕರೆಯುತ್ತೇನೆ. ಯಾಕೆಂದರೆ, ಅವುಗಳ ವಾಸ್ತವಿಕತೆಯನ್ನು ಮತ್ತೂ ಹೆಚ್ಚಿನ ಸಂಶೋಧನಾ ಅಧ್ಯಯನಗಳಿಂದ ಮಾತ್ರವೇ ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಮತ್ತೂ ಅಂತಹ ಅಧ್ಯಯನಗಳು ಸಾಕಷ್ಟಿಲ್ಲ ('ಸಾಕಷ್ಟಿಲ್ಲ' ಎನ್ನುವದೇ 1980ರ ದಶಕದ ನಂತರದ ಮೂರುವರೆ ದಶಕಗಳ ಕಾಲದಲ್ಲಿ ಕರಾವಳಿಯ ಸಮಾಜದಲ್ಲಿ ಆಗಿರುವ ಚಾರಿತ್ರಿಕ ಪಲ್ಲಟಗಳನ್ನು ಸೂಚಿಸುತ್ತದೆ ಎನ್ನುವುವುದು ಖಚಿತ). ಇಂತಹ ಟಿಪ್ಪಣಿಗಳನ್ನು ಮಾಡುವಾಗ, ನಾವು ಭಾಗವಹಿಸುತ್ತಿರುವ ಚಳುವಳಿಗಳ ಚೌಕಟ್ಟಿನಿಂದ ಹೊರಬಂದು, ಪಕ್ಷಪಾತಿ ಭಾವಗಳಿಂದ ಕೊಂಚ ದೂರ ನಿಲ್ಲಬೇಕಾಗುತ್ತದೆ; ನಮ್ಮ ವಿರೋಧಿಗಳ ಸಾಧನೆಗಳನ್ನು ವಸ್ತುನಿಷ್ಠತೆಯಲ್ಲಿ ವಿವರಿಸಬೇಕಾಗುತ್ತದೆ–ಇಷ್ಟು ಮಾಡಿದ ಮಾತ್ರಕ್ಕೆ ನಮ್ಮ ದೈವಗಳೇನೂ ಬದಲಾಗುವುದಿಲ್ಲ! ಸೌಹಾರ್ದ ಕರಾವಳಿ/ಕರ್ನಾಟಕವನ್ನು ಮರು ಪಡೆಯಲು ಕಾರ್ಯ ಪ್ರವೃತ್ತರಾಗಿರುವ ಚಳುವಳಿಗಳು, ಕೆಲವು ಅವಗಣಿಸಲಾದ ಸಾಮಾಜಿಕ ಸಮಸ್ಯೆಗಳಿಗೆ ಉತ್ತರಗಳನ್ನು ಶೋಧಿಸಿಕೊಳ್ಳುವ ಜರೂರು ಇದೆ. ಹೀಗಾಗಿ ಇವುಗಳನ್ನು ಸ್ವವಿಮರ್ಶೆಯ ಟಿಪ್ಪಣಿಗಳಾಗಿ ಓದಿಕೊಳ್ಳಿ ಎಂದು ಓದುಗರಲ್ಲಿ ವಿನಂತಿ.

1) 1950ರ ದಶಕದಲ್ಲಿ ನಮ್ಮ ಪ್ರಭುತ್ವವು ಅಮೇರಿಕದಿಂದ

ಪಿಎಲ್-480 ಎಂಬ ಗೋಧಿಯ ತಳಿಯನ್ನು ಪಡೆದು ಹೆಚ್ಚು ಗೋಧಿ ಉತ್ಪಾದನೆಗೆ ರೈತರನ್ನು ಉತ್ತೇಜಿಸಿತು. ಈ ತಳಿಯ ಜೊತೆ ಪಾರ್ಥೇನಿಯಂ ಎಂಬ ಕಳೆಯೂ ಬಂದು, ನಮ್ಮ ಊರುಗಳ ಅರೆಯಿಂಚು ಖಾಲಿ ಜಾಗದಲ್ಲೂ ಊರಿಕೊಂಡು ಕಳೆಯ ವಿಸ್ತಾರ ಪೊದೆಗಳು ಬೆಳೆಯುವುದು ಸಾಮಾನ್ಯವಾಯಿತು. ಯಾವ ಆರೈಕೆಯನ್ನು ಬೇಡದೆ ಕಂಡಲ್ಲಿ ನೆಟ್ಟುಕೊಂಡು ಭಯಾನಕ ವೇಗದಲ್ಲಿ ಹಬ್ಬುವ ಈ ಪಾರ್ಥೇನಿಯಂ ಕಳೆಯ ಪರಿಯನ್ನು ಕಂಡು, ಕರ್ನಾಟಕದ ಬಯಲು ಪ್ರದೇಶಗಳ ಜನ ಇದನ್ನು 'ಕಾಂಗ್ರೆಸ್ ಹುಲ್ಲು' ಎಂದು ನಾಮಕರಣ ಮಾಡಿದ್ದರೆ, ಕರಾವಳಿಯ ಜನ ಇದಕ್ಕೆ 'ಕಮ್ಯುನಿಷ್ಟ್ ಹುಲ್ಲು' ಎಂದು ಕರೆಯುವುದು ವಾಡಿಕೆಯಾಗಿತ್ತು. ಇದು ವಕ್ರವಾದ ನಾಮಕರಣವಾದರೂ, ಈ ಎರಡೂ ಪಕ್ಷಗಳೂ ಆಯಾ ಪ್ರದೇಶಗಳಲ್ಲಿ ಊರಿಕೊಂಡು ಬಿರುಸಿನಿಂದ ತಮ್ಮ ರಾಜಕೀಯವನ್ನು ಹಬ್ಬಿಸುವ ವಿದ್ಯಮಾನದ ಬಗೆಗಿನ ಜನರ ವಕ್ರ ಮೆಚ್ಚುಗೆಯೂ ಆಗಿತ್ತು. 1950-80ರ ವರೆಗೆ ಕರ್ನಾಟಕದ ಕರಾವಳಿಯಲ್ಲಿ ಕಮ್ಯುನಿಷ್ಟ್ ಪಕ್ಷಗಳು ಮಧ್ಯಮ, ಕೆಳ ಮಧ್ಯಮ ಹಾಗು ದುಡಿವ ಬಡ ವರ್ಗಗಳ ನಡುವೆ ಜಾತ್ಯಾತೀತವಾದ ಪ್ರಭಾವವನ್ನು ಹೊಂದಿದ್ದವು; ಶಾಸನ ಸಭೆಯಲ್ಲಿ ಹೆಚ್ಚು ಸ್ಥಾನಗಳನ್ನು ಪಡೆಯದಿದ್ದರೂ, ಜನಮಾನಸದಲ್ಲಿ ಊರಿಕೊಳ್ಳುವಷ್ಟು ಪ್ರಭಾವಶಾಲಿಯಾಗಿದ್ದವು ಎನ್ನುವುದನ್ನೇ ಈ ವಕ್ರನಾಮವೂ ಹೇಳುತ್ತದೆ. ಆದರೆ, 1985ರ ನಂತರದ ಐದು ವರ್ಷಗಳಲ್ಲಿ 'ರಾಮಜನ್ಮಭೂಮಿ ಚಳುವಳಿ'ಯ ಫಲವಾಗಿ, ಸಾಮಾಜಿಕ ಪ್ರಭಾವ ನಕ್ಷೆಯಲ್ಲಿ ಗುರುತರವಾದ ಪಲ್ಲಟವಾಯಿತು. ಕಾಂಗ್ರೆಸ್ ಹಾಗು ಕಮ್ಯುನಿಷ್ಟ್ ಪಕ್ಷಗಳ ಸಾಮಾಜಿಕ ಪ್ರಭಾವ ವಲಯಗಳನ್ನು ಸಂಘಪರಿವಾರ ಯೋಜಿತ 'ಹಿಂದುತ್ವವಾದಿ ರಾಜಕೀಯ' ಭರದಿಂದ ಆಕ್ರಮಿಸಿಕೊಳ್ಳತೊಡಗಿತು ಎನ್ನುವುದು ಖಚಿತ. 2000ದ ನಂತರವಂತೂ ಪಾರ್ಥೇನಿಯಂನ್ನು 'ಹಿಂದುತ್ವದ ಹುಲ್ಲು' ಅನ್ನದೆ ವಿಧಿ ಇಲ್ಲ!

2) ರಭಸದಲ್ಲಿ 'ಹಿಂದುತ್ವವಾದಿ ರಾಜಕೀಯ' ಸಾಮಾಜಿಕ ಪ್ರಭಾವ ವಲಯವನ್ನು ಆಕ್ರಮಿಸಿಕೊಂಡ ರೀತಿಯ ಬಗ್ಗೆ ಒಂದು ಚಿತ್ರವತ್ತಾದ ಉದಾಹರಣೆ ಕೊಡುತ್ತೇನೆ. 1980ರವರೆಗೂ ಕರಾವಳಿಯ ಗ್ರಾಮ ಪ್ರದೇಶಗಳಲ್ಲಿ - ಒಂದು ಗದ್ದೆ, ಅದರ ಮಧ್ಯೆ ಒಂದು ಮನೆ ಹಾಗು ಗದ್ದೆಯಿಂದ ಸ್ವಲ್ಪ ದೂರದಲ್ಲೋ, ಅಂಚಿಗೋ, ಭೂಹೀನ ಕೃಷಿಕರ ಗುಡಿಸಲುಗಳು-ಇಂತಹ ಮೂರು ನಾಲ್ಕು ಪ್ರದೇಶವು ಒಂದು ಊರು ಅಂತ ಇರುತ್ತಿತ್ತು. ಪಟ್ಟಣವಾದರೂ, ಇಂತಹ ಅತಿ ಹತ್ತಿರದ ಹಲವು ಹಳ್ಳಿಗಳ ನಡುವೆ ಸಂಪರ್ಕ ರಸ್ತೆ ಬಂದು, ಒಂದು ಗ್ರಾಮ ಸಮುಚ್ಚಯವಾಗಿರುತ್ತಿದ್ದವು. ಇಂಥಾ ಪ್ರತಿ ಪಟ್ಟಣವೂ ರಾಜ್ಯ ಅಥವ ರಾಷ್ಟ್ರೀಯ ಹೆದ್ದಾರಿಗಳ ಸಮೀಪವಿದ್ದು, ಹೆದ್ದಾರಿಯ ಇಕ್ಕೆಲಗಳಲ್ಲಿ ಆ ಪಟ್ಟಣದ 'ಪೇಟೆ' ಇರುತ್ತಿತ್ತು. ಉಡುಪಿಯೂ ಇಂತಹ ಒಂದು ನಗರವಾಗಿದ್ದು, ಉಡುಪಿ ಅಂದರೆ ಇಂದಿಗೂ ಜನಮಾನಸದಲ್ಲಿ ಉಡುಪಿ ಪೇಟೆ ಮಾತ್ರವೇ! ಬಾಕಿಯದೆಲ್ಲಾ ತಮ್ಮ ಗ್ರಾಮಗಳು. ಹೆದ್ದಾರಿಯ ಇಕ್ಕೆಲಗಳಲ್ಲಿ ಹಬ್ಬಿರುವ ಪೇಟೆಯ ಬಸ್‌ಸ್ಟ್ಯಾಂಡಿನಲ್ಲಿ ಇಳಿದವರನ್ನು ತಮ್ಮ ಹಳ್ಳಿಗಳಿಗೆ ತಲುಪಿಸುವ ಒಂದು ಅಟೋ ರಿಕ್ಷಾಸ್ಟ್ಯಾಂಡ್ ಕಾಯಂ.

1990ಕ್ಕೆ ಮುಂಚೆ ನೀವು ಏಕೀಕೃತ ದಕ್ಷಿಣ ಕನ್ನಡದ ಬೈಂದೂರಿನಿಂದ ಸುಳ್ಯಾದವರೆಗೆ ರಾಷ್ಟ್ರೀಯ/ ರಾಜ್ಯ ಹೆದ್ದಾರಿಯ ಮೂಲಕ ಸಾಗಿದರೆ, ಪ್ರತಿ ಪೇಟೆಯ ರಿಕ್ಷಾ ಸ್ಟ್ಯಾಂಡ್-ರಿಕ್ಷಾ ಚಾಲಕರ ಒಗ್ಗಟ್ಟನ್ನು ಪ್ರತಿನಿಧಿಸಲು ಒಂದು ಯುನಿಯನ್- ಹಾಗು ಅದರ ಲಾಂಛನವಾಗಿ ಬಿಳಿ ಬಣ್ಣದ ಕತ್ತಿ ಸುತ್ತಿಗೆಯನ್ನು ಹೊಂದಿದ ಕೆಂಪು ಧ್ವಜ ರಿಕ್ಷಾ ಸ್ಟ್ಯಾಂಡಿನ ಮುಂಚೂಣಿಯಲ್ಲಿದ್ದ ಧ್ವಜ ಸ್ತಂಭದಲ್ಲಿ ಹಾರಾಡುವುದನ್ನು ಕಾಣುವುದು ಬೇಸರ ತರಿಸುವಷ್ಟು ಸಾಮಾನ್ಯವಾಗಿತ್ತು. 2000ದ ನಂತರದಲ್ಲಿ ನೀವು ಇದೇ ಹಾದಿಯಲ್ಲಿ ಪ್ರಯಾಣಿಸಿದರೆ, ನಿಮಗೆ ಧ್ವಜಸ್ಥಂಭದಲ್ಲಿ ಕಾಣುವುದು ಓಂಕಾರ ಚಿನ್ಹೆ ಸಹಿತವಾದ ಕೇಸರಿ ಧ್ವಜಗಳು! ಈಗ ಬಹುಪಾಲು ರಿಕ್ಷಾ ಚಾಲಕರು ಹಾಗು ಕರಾವಳಿಯ ಸಾಮಾನ್ಯ ಪ್ರಯಾಣ ಸಾಧನವಾದ ಖಾಸಗಿ ಬಸ್ಸುಗಳ ಕಂಡಕ್ಟರ್, ಕ್ಲೀನರುಗಳೂ ಸಂಘಪರಿವಾರದ ಹಿಂಸಾತ್ಮಕ ಬ್ರಿಗೇಡುಗಳ ಸ್ವ-ಇಚ್ಛೆಯ ಭಾಗಿದಾರರು; ಕರಾವಳಿಯಲ್ಲಿ ದಿನಕ್ಕೊಂದರಂತೆ ನಡೆಯುವ 'ನೈತಿಕ ಪೋಲಿಸುಗಿರಿ'ಯ ಅತಿ ಪ್ರಮುಖ ಪಾತ್ರಧಾರಿಗಳು ಇವರುಗಳೇ. ಇವರು ಒಂದು ವಿಶಿಷ್ಟವಾದ ವಿಭಾಗ. ಈ ರಿಕ್ಷಾ ಚಾಲಕರು, ಬಸ್ ಕಂಡಕ್ಟರ್-ಕ್ಲೀನರುಗಳಲ್ಲಿ 'ಹಿಂದು' ಎಂದು ಕರೆಯಲಾಗುವ ಸಕಲ ಜಾತಿಯ ಜನರೂ ಇದ್ದಾರೆ; 'ಮೇಲ್ಜಾತಿ'ಯ ಬ್ರಾಹ್ಮಣರು ಹಾಗು ದಲಿತರಲ್ಲಿ ದಲಿತರಾದ ಜಾತಿಯವರ ಪ್ರಾತಿನಿಧ್ಯ ಅತಿ ಕಡಿಮೆಯಾದರೂ, ಬಡತದ ಹೊಟ್ಟೆಪಾಡಿನ ಪ್ರತಿನಿಧಿಗಳಾಗಿ ಈ ಜಾತಿಗಳವರ ಹಾಜರಿ ಇದೆ. ಕುತೂಹಲಕರವಾಗಿ, ಸಂಘಟಿತ ವಲಯವನ್ನು ಕಟ್ಟಲು ರಾಜಕೀಯವಾಗಿ ಗುರುತಿಸಲಾಗುವ ಜಾತಿ-ಪ್ರದೇಶ-ಭಾಷೆ-ಆರ್ಥಿಕ ವರ್ಗ-ಇವುಗಳ ಕಲಸುಮಲೋಗರವಾಗಿರುವ ಈ ಜನಸಮೂಹವನ್ನು ಒಂದು ಸಮುದಾಯವಾಗಿ ಒಗ್ಗೂಡಿಸಿದ್ದು ಎಡಪಕ್ಷಗಳ ಟ್ರೇಡ್ ಯುನಿಯನ್‌ಗಳು. 'ತಮ್ಮ ದುಡಿಮೆಯ ಶ್ರಮಕ್ಕೆ ತಕ್ಕುದಾದ ಸಂಪನ್ಮೂಲದ ಪಾಲನ್ನು ಹಕ್ಕಿನಿಂದ ಒತ್ತಾಯಿಸಿ ಪಡೆಯುತ್ತೇವೆ' ಎಂಬ ತಾತ್ವಿಕತೆಯಡಿ ಒಗ್ಗೂಡಿದ್ದ ಸಮುದಾಯವು ಕೇವಲ ಹತ್ತು ವರ್ಷಗಳಲ್ಲಿ 'ಅಸ್ತಿತ್ವದ ಹಕ್ಕಿನ ಅಸ್ಮಿತೆ'ಯನ್ನು ಬಿಟ್ಟು ಕೊಟ್ಟು 'ಗರ್ವ್ ಸೇ ಕಹೋ ಹಮ್ ಹಿಂದು ಹೈ!' ಎಂಬ ಅಸ್ಮಿತೆಯನ್ನು ಅಪ್ಪಿದ್ದು ಯಾಕೆ ಮತ್ತು ಹೇಗೆ? ಇದು ಅಧ್ಯಯನ ಬೇಡುವ ವಿಷಯ. ಹಾಗಂತ ಇದನ್ನು ಪಂಡಿತರ ಮರ್ಜಿಗೆ ಬಿಟ್ಟು ಸುಖಿಸುವಂತಿಲ್ಲ. ಚಳುವಳಿಗಾರರ ಬೌದ್ಧಿಕ ಜವಾಬ್ದಾರಿಯಲ್ಲಿ ನಾವು ಇದಕ್ಕೆ ನಾವುಗಳು ನಮಗಿರುವಷ್ಟೇ ಹಾಸಿಗೆಯಲ್ಲಿ ಕಾಲು ಚಾಚಿ ಉತ್ತರ ಕಂಡುಕೊಳ್ಳುವ ತುರ್ತು ಇದೆ.

3) 'ಹಿಂದುತ್ವವಾದಿ ರಾಜಕಾರಣ' ಕರ್ನಾಟಕ ಕರಾವಳಿಗೆ ತೀವ್ರವಾಗಿ ಲಗಾವಾಗುವಂತಹ ಗುಣಗಳನ್ನು ಏನಾದರೂ ಪಡೆದಿದೆಯೋ? ಕರಾವಳಿಯಲ್ಲಿ ಘಟಿಸುತ್ತಿರುವ ಕೋಮು ಹಿಂಸೆಯ ತೀಕ್ಷ್ಣತೆ ಹಾಗು ಗತಿಯ ವೇಗ ಈ ಪ್ರಶ್ನೆಯನ್ನು ಕೇಳುವಂತೆ ಪ್ರಚೋದಿಸುವುದು ನಿಜ. ಆದರೆ, ಇದು ಕರಾವಳಿ ಕರ್ನಾಟಕಕ್ಕೆ ಮಾತ್ರವಲ್ಲ, ಕರ್ನಾಟಕಕ್ಕೇ ಮಾತ್ರವೇ ವಿಶಿಷ್ಟವಾದುದ್ದಲ್ಲ. ಇದು 1925ರಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಶುರುವಿಟ್ಟುಕೊಂಡು, 1940ರ ದಶಕದಲ್ಲಿ ಆರೆಸ್ಸೆಸ್‌ನ 'ಗುರು' ಗೋಲ್ವಾಲ್ಕರ್ ಹೆಣೆದ ಚಳುವಳಿಯ ಹಾದಿಯಲ್ಲಿ, ಇಡೀ ಭಾರತ ದೇಶದಲ್ಲಿ ನಡೆಯುತ್ತಿರುವ ರಾಜಕೀಯ. ಈ ರಾಜಕೀಯದ ವ್ಯಾಕರಣವೂ 'ಕೋಮು ದ್ವೇಷ' ಪ್ರಚೋದಿಸುವುದರಲ್ಲಿ 1999ರ ಕರ್ನಾಟಕ ಕರಾವಳಿಯ ಸುರತ್ಕಲ್ಲಿನಿಂದ ಹಿಡಿದು 2013ರ ಮುಜಫ್ಫರ್ ನಗರದ ಹಿಂಸೆಯವರೆಗೆ ಸರ್ವೇಸಾಮಾನ್ಯವಾಗಿದೆ.



ಆದರೆ ಒಂದು ಸ್ಥಳೀಯ ಸಮಾಜದಲ್ಲಿ ಈ ರಾಜಕೀಯ ಬೀಜ ಊರಲೂ, ಫಸಲು ಬೆಳೆಯಲೂ ಸ್ಥಳೀಯವಾದ ಸಾಮಾಜಿಕ ಸ್ಥಿತಿಗತಿಯ ಪಾತ್ರವೂ ಇರುತ್ತದೆ ಎನ್ನುವುದನ್ನು ಕಡೆಗಣಿಸಲಾಗದು. ಕರ್ನಾಟಕದ ಕರಾವಳಿಯ ಮಟ್ಟಿಗೆ 1985–1990ರ ಅವಧಿ ಕ್ರಾಂತಿಕಾರಕವಾದದ್ದು–ಕ್ರಾಂತಿಕಾರಕವೆಂದರೆ, ಇದ್ದ ಸಾಮಾಜಿಕ ವೈಚಾರಿಕತೆಯಲ್ಲಿ ತೀವ್ರಗತಿಯ ಪಲ್ಲಟವಾಗಿ ವಿರುದ್ಧ ದಿಕ್ಕಿಗೆ ತಿರುಗುವುದು ಎಂದಷ್ಟೇ. ಕರ್ನಾಟಕ ಸಾಹಿತ್ಯ–ಸಂಸ್ಕೃತಿಗಳಲ್ಲಿ ಶಿವರಾಮ ಕಾರಂತರ ಸ್ಥಾನಮಾನವೇನು ಎನ್ನುವುದನ್ನು ಬಣ್ಣಿಸುವ ಅವಶ್ಯಕತೆ ಇಲ್ಲ. ತಮ್ಮ 'ವೈಜ್ಞಾನಿಕ ಮನೋಭಾವ' ಹಾಗು ಆ ವೈಚಾರಿಕತೆಯ ಮುಂಚೂಣಿ ಸಾಹಿತ್ಯ ಪ್ರಸಾರಕರಾಗಿದ್ದ ಕಾರಂತರು 1990ರ ವೇಳೆಗೆ 'ರಾಮಜನ್ಮಭೂಮಿ ಚಳುವಳಿ'ಯ ಪ್ರಬಲ ಸಮರ್ಥಕರಾಗಿದ್ದರು ಎನ್ನುವ ವಾಸ್ತವವನ್ನು ಗಮನದಲ್ಲಿಟ್ಟುಕೊಂಡರೆ 1990ರಲ್ಲಿ ಕರಾವಳಿಯಲ್ಲಾದ ಸಾಮಾಜಿಕ ಪಲ್ಲಟಗಳ ಮಹತ್ವವೂ ಗಮನಕ್ಕೆ ಬರಬಹುದು. ಈ ಕಾಲಾವಧಿಯಲ್ಲಿ ಕಮ್ಯುನಿಷ್ಟ್ ಚಳುವಳಿ ಹಾಗು ಕಾಂಗ್ರೆಸ್ಸಿನ ರಾಜಕೀಯಗಳು ಪ್ರಬಲ ಪ್ರಭಾವ ವಲಯಗಳನ್ನು ಹೊಂದಿದ್ದ ಕರಾವಳಿಯಲ್ಲಿ 'ಹಿಂದುತ್ವವಾದಿ ರಾಜಕೀಯ' ಹೇಗೆ ಆಕ್ರಮಿಸಿಕೊಂಡಿತು? ಎನ್ನುವುದು ಮುಖ್ಯವಾದ ಸಮಸ್ಯೆಯಾಗಿದೆ.

4) 1990ರ 'ಹಿಂದುತ್ವವಾದಿ ರಾಜಕಾರಣ' ಕಾಂಗ್ರೆಸ್ಸ್ ಹಾಗು ಕಮ್ಯುನಿಷ್ಟ್ ಸಾಮಾಜಿಕ ವಲಯಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾಗ, ಈ ಎರಡೂ ರಾಜಕೀಯ ಶಕ್ತಿಗಳು ಆ ಆಕ್ರಮಣವನ್ನು ಹೇಗೆ ಅಳೆದವು ಮತ್ತು ತಮ್ಮ ಪ್ರಭಾವಿ ವಲಯಗಳನ್ನು ರಕ್ಷಿಸಿಕೊಳ್ಳಲು ಯಾವ ಕಾರ್ಯತಂತ್ರವನ್ನು ಕೈಗೊಂಡವು ಎನ್ನುವುದರತ್ತ ಈಗ ನಾವು ಹಿಂತಿರುಗಿ ನೋಡಬೇಕಿದೆ. ನನ್ನ ಅನುಭವದಲ್ಲಿ ಹೇಳಬಹುದಾದರೆ, ಕಾಂಗ್ರೆಸ್ಸ್ ಹಾಗು ಕಮ್ಯುನಿಷ್ಟ್ ಪಕ್ಷಗಳೆರಡೂ 'ರಾಮಜನ್ಮಭೂಮಿ ಚಳುವಳಿ'ಯನ್ನು ಆರೆಸ್ಸೆಸ್ಸ್‌ನ ಫ್ಯಾಸಿಸ್ಟ್ ರಾಜಕೀಯದ ಕೇಂದ್ರ ಸಿದ್ಧಾಂತವನ್ನು ಅವಗಣಿಸಿದವು. 1950ರಲ್ಲಿಯೇ ಗೋಲ್ವಾಲ್ಕರ್, 'ರಾಜಕೀಯ ಅಧಿಕಾರ ಪಡೆಯುವುದಕ್ಕಿಂತ ಸಾಮಾಜಿಕ ಅಧಿಕಾರ ಸ್ಥಾಪಿಸುವುದರ ಕಡೆ ನಾವು ಕಾರ್ಯಾಚರಿಸಬೇಕು. ಸಾಮಾಜಿಕ ಅಧಿಕಾರ ಪಡೆದರೆ, ಮಿಕ್ಕೆಲ್ಲ ಅಧಿಕಾರಗಳ ಮೇಲೆ ನಿಯಂತ್ರಣ ಸಾಧ್ಯವಾಗುತ್ತದೆ' ಎಂಬ ಪ್ರಮೇಯವನ್ನು ಮಂಡಿಸಿದ್ದರು. ಜಾತೀಯವಾಗಿಯೂ, ಆರ್ಥಿಕವಾಗಿಯೂ, ಪರಸ್ಪರ ವೈರುಧ್ಯಗಳಲ್ಲಿ ಒಡೆದು ಹೋಗಿರುವ ಹಿಂದುಗಳನ್ನು, 'ಹಿಂದುತ್ವ'ದ ಆಸ್ಮಿತೆಯಡಿ ಒಗ್ಗೂಡಿಸಿ ಸಾಮಾಜಿಕ ಅಧಿಕಾರ ಹೊಂದುವ ರಾಜಕಾರಣವನ್ನು ಆರೆಸ್ಸೆಸ್ಸ್ 1950ರಿಂದಲ್ಲೂ ರೂಢಿಸಿಕೊಂಡು ಬಂದಿತ್ತು. ದಮನಿತ ಕೆಳ ಜಾತಿಗಳ ಸ್ವಾಭಿಮಾನದ ಆಸ್ಮಿತೆ ಹಾಗು ದುಡಿದೂ ಬಡವರಾಗೇ ಉಳಿಯುವ ಜನರ ಆರ್ಥಿಕ ವರ್ಗ ಆಸ್ಮಿತೆಗಳು ತೆಳುವಾಗಿ, ಜನರಲ್ಲೇ ಆ ಅಸ್ಮಿತೆಗಳ ಕುರಿತು ಅನುಮಾನ ಉಂಟಾಗುವ ಕಾಲಕ್ಕಾಗಿ ಆರೆಸ್ಸೆಸ್ಸ್ 60 ವರ್ಷ ಕಾದಿತ್ತು; 1985 ರ ಉತ್ತರಾರ್ಧ ಆ ಚಾರಿತ್ರಿಕ ಅವಕಾಶವನ್ನು ಅದಕ್ಕೆ ನೀಡಿತ್ತು; 'ರಾಮಜನ್ಮಭೂಮಿ ಚಳುವಳಿ' ಆ ರಾಜಕೀಯವನ್ನು ಆಕ್ರಮಣಶೀಲವಾಗಿ ಮುಂದೊತ್ತುವ ಸಾಮಾಜಿಕ ಕಾರ್ಯಾಚರಣೆಯಾಗಿತ್ತು; ಕರಾವಳಿ ಕರ್ನಾಟಕದಲ್ಲೂ ಸಂಘಪರಿವಾರ ಈ ಯೋಜನೆಗೆ ಬದ್ಧವಾಗಿಯೇ ಚಳುವಳಿಗಳನ್ನು ಹಮ್ಮಿಕೊಂಡಿತ್ತು. 1985–89ರವರೆಗೆ ಸಂಘಪರಿವಾರದ ಕಾರ್ಯಕರ್ತರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿ ಹಳ್ಳಿಗಳಿಗೆ ತೆರಳಿ, ಕೆಳ ಜಾತಿಯ ಬಡವರ ಮನೆಯಲ್ಲಿ ದಿನಗಳ ಕಾಲ ಉಳಿದುಕೊಂಡು 'ಹಿಂದುಗಳ ಆಸ್ಮಿತೆ'ಗೆ ಎದುರಾಗಿರುವ ಆಪಾಯಗಳ ಬಗ್ಗೆ ಸಹಜ ಕಥನ ಶೈಲಿಯಲ್ಲಿ ನಿರೂಪಿಸಿ ಜನಮನ ತಲುಪಿದ್ದರ ಬಗ್ಗೆ ಕನಿಷ್ಠ ಹತ್ತು ಖುದ್ದಾದ ಅನುಭವಗಳನ್ನು ನಾನು ಕೇಳಿದ್ದೇನೆ.

5) ದುರಾದೃಷ್ಟವಶಾತ್ ಕಾಂಗ್ರೆಸ್ಸ್ ಹಾಗು ಕಮ್ಯುನಿಷ್ಟ್ ಪಕ್ಷಗಳು 'ರಾಮಜನ್ಮಭೂಮಿ ಚಳುವಳಿ'ಯನ್ನು ಬಿಜೆಪಿಯು ಜನ ಸಾಮಾನ್ಯರ ಧಾರ್ಮಿಕ ನಂಬುಕೆಗಳನ್ನು ಪ್ರಚೋಧಿಸುವ ಚಳುವಳಿಯನ್ನಾಗಿ ಕಂಡವು. ಕಾಂಗ್ರೆಸ್ಸಿನವರು ತಾವು ಬಿಜೆಪಿಯವರಿಗಿಂತ ಕಡಿಮೆ ಧಾರ್ಮಿಕರಲ್ಲ ಎಂದು ತೋರಿಸಿಕೊಳ್ಳುವ ಸ್ಪರ್ಧೆಗಿಳಿದರು. ಮಂಗಳೂರಿನ ಗೋಕರ್ಣನಾಥೇಶ್ವರ ದೇವಸ್ಥಾನ ಆ ಸ್ಪರ್ಧೆಯ ದಡ್ಡತನಕ್ಕೊಂದು ಪ್ರತಿಮೆಯೂ ಆಯಿತು. ಇತ್ತ ಕಮ್ಯುನಿಷ್ಟ್ ಪಕ್ಷಗಳು 1990ರ 'ಆರ್ಥಿಕ ಜಾಗತೀಕರಣ' ಕ್ರಿಯೆಯ ರಾಜಕಾರಣದ ಕಡೆ ಹೆಚ್ಚು ಗಮನ ಹರಿಸಿ, 'ಜಾಗತೀಕರಣದ ಕೇಡುಗಳಿಂದ ಜನಮನವನ್ನು ವಿಮುಖಗೊಳಿಸಲು ನಡೆಯುತ್ತಿರುವ ಚಳುವಳಿ' ಎಂದು 'ರಾಮಜನ್ಮಭೂಮಿ ಚಳುವಳಿಯನ್ನು' ಅರ್ಥೈಸತೊಡಗಿದವು; ಮತ್ತು ಜಾಗತೀಕರಣ ಉಂಟು ಮಾಡುವ ಆರ್ಥಿಕ ಕರಾಳತೆಯು ಈ 'ಧಾರ್ಮಿಕ ಉನ್ಮಾದದ ನಿಷೆ' ಇಳಿಸುತ್ತದೆ ಎಂದು ಭಾವಿಸಿದವು. ಹಾಗಾಗಿ 'ಹಿಂದುತ್ವವಾದಿ ರಾಜಕೀಯ' ಯೋಜನೆಯು ತಮ್ಮ ಸಾಮಾಜಿಕ ಪ್ರಭಾವಿ ವಲಯಗಳನ್ನು ಆಕ್ರಮಿಸುತ್ತಿರುವುದರ ಕಡೆ ಗಮನವನ್ನೇ ಹರಿಸದಾದವು ಎನಿಸುತ್ತದೆ.

6) ವಸಾಹತುಸಾಹಿ ವಿರೋಧಿ ಹೋರಾಟವು ಒಂದು ಸಾಮಾಜಿಕ ಬದಲಾವಣೆಯ ಹೋರಾಟವಾಗಿಯೂ ಫಲಶೃತವಾದ ಕಾಲದಲ್ಲಿ ದಮನಿತ ಜಾತಿ–ಲಿಂಗ–ವರ್ಗಗಳು ತಮ್ಮ ಸಮಪಾಲನ್ನು ಹಕ್ಕಾಗಿ ಬೇಡುವ ಕ್ರಾಂತಿ ರಾಜಕೀಯದಲ್ಲಿ ತೊಡಗಿದ್ದಾಗ, ಅಂತಹ ರಾಜಕೀಯವನ್ನು ಮಣಿಸಲು ಹುಟ್ಟಿದ್ದು ಆರೆಸ್ಸೆಸ್ಸ್. ದಮನಿತರ ಹಕ್ಕಿನ ಸಾಮಾಜಿಕ ಮನೋಭಾವ ಮರುನಿರೂಪಿಸದೇ, ಒಂದು ಚಾರಿತ್ರಿಕ 'ಪ್ರತಿಕ್ರಾಂತಿ'ಯಾದ 'ರಾಮಜನ್ಮಭೂಮಿ ಚಳುವಳಿ'ಯ ರಾಜಕೀಯವನ್ನು ನಿಶ್ಶಸ್ತ್ರಗೊಳಿಸಲಾಗದು.

ಕೈಗಾರೀಕರಣ ಹಾಗೂ ಕೋಮುವಾದೀಕರಣ



ಸ್ಥೂಲವಾಗಿ ಹೇಳುವುದಾದರೆ ,
ಹೆಪ್ಪುಗಟ್ಟಿದ ಕೈಗಾರೀಕರಣ,
ಇದಕ್ಕೆ ಪ್ರತಿಯಾಗಿ ಬೆಳೆದ
ಮೂರನೇ ಘಟ್ಟದ ಸೇವಾ ಉದ್ಯಮ,
ಇದರಿಂದ ಬಂದ ಲೂಂಪನೀಕರಣ
ಮತ್ತು ಮಾಫಿಯಾಕರಣ,
ಭೂಮಸೂದೆಯೊಂದಿಗೆ ಬರಬೇಕಿದ್ದ
ಸಾಮಾಜಿಕ ಹಾಗೂ
ಸಾಂಸ್ಕೃತಿಕ ಕ್ರಾಂತಿಯ
ಗೈರು ಹಾಜರು
ಇವೇ ಸಂಕೀರ್ಣಗೊಂಡು
ಕರಾಳ ಕೋಮುವಾದ
ಉಚ್ಛ್ರಾಯ ಸ್ಥಿತಿಗೆ ಬರುವಂತಾಯಿತು.

ಡಾ. ರಾಜೇಂದ್ರ ಉಡುಪ
ಪ್ರಾಧ್ಯಾಪಕರು, ಎನ್‌ಐಟಿಕೆ, ಸುರತ್ಕಲ್

ಕೋಮುವಾದೀಕರಣ ಹುಟ್ಟು ಮತ್ತು ತೀವ್ರತರವಾದ ಬೆಳವಣಿಗೆಗೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಆಯಾಮಗಳಿರುವಂತೆ ಆರ್ಥಿಕ ನೆಲೆಗಟ್ಟು ಇರುತ್ತದೆ. ಅದರಲ್ಲಿ ಮುಖ್ಯವಾದದ್ದು ಕೈಗಾರೀಕರಣದ ಪ್ರಕ್ರಿಯೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ (ಈಗಿನ ದಕ್ಷಿಣ ಕನ್ನಡ ಮತ್ತು ಉಡುಪಿ) ಗೆ ಒಂದು ವಿಶಿಷ್ಟ ಭೌಗೋಳಿಕ ಸನ್ನಿವೇಶ ಇದೆ. ದಟ್ಟ ಕಾಡುಗಳಿಂದ ಕೂಡಿದ ಪಶ್ಚಿಮಘಟ್ಟದಿಂದಾಗಿ ಇದು ಕರ್ನಾಟಕದ ನೆಲದಿಂದ ಬೇರ್ಪಟ್ಟಿತ್ತು. ಘಟ್ಟದಿಂದ ಪಶ್ಚಿಮಕ್ಕೆ ಹರಿಯುವ ನದಿಗಳಿಂದಾಗಿ ಈ ನೆಲ ದಕ್ಷಿಣದಿಂದ ಉತ್ತರದ ವರೆಗೆ ಹತ್ತು ಹನ್ನೊಂದು ಚೂರಾಗಿತ್ತು. ನಾಲ್ಕು ದಶಕಗಳ ಹಿಂದಿನ ತನಕ ಇಲ್ಲಿ ಜೀವಿಸುವ ಮೀನೂಗಾರರ ಜನಾಂಗದಲ್ಲಿ ಒಂದು ರೀತಿಯ ಅದಿಮ ಸಮತಾ ಸಮಾಜ ಇದ್ದಿತ್ತು. ಇಲ್ಲಿ ಒಂದು ಪ್ರಬಲ ರಾಜಪ್ರಭುತ್ವ ಇಲ್ಲದೇ ಇಲ್ಲಿನ ಊಳಿಗಮಾನ್ಯ ಪದ್ಧತಿಯೊಂದಿಗೆ, ಊಳಿಗಮಾನ್ಯ–ಪೂರ್ವ ಉತ್ಪಾದನಾ ಪದ್ಧತಿಯೂ ಸೇರಿಕೊಂಡಿತ್ತು. ಮುಂದೆ ಅರಬ್ಬರೂ ಹಾಗೂ ಕ್ರಿಶ್ಚಿಯನ್ನರು ಈ ಪ್ರದೇಶಕ್ಕೆ ತಾಂತ್ರಿಕತೆಯ ಪರಿಚಯ ಮಾಡಿಸಿದರು.

ಕೈಗಾರಿಕೀಕರಣದ ಘಟ್ಟಗಳು

1841ರಲ್ಲಿ ಬ್ಯಾಸೆಲ್ ಮಿಶನ್ನರಿಗಳು ಇಲ್ಲಿ ಮುದ್ರಣಾಲಯವನ್ನು ಪ್ರಾರಂಭಿಸಿದರು. ಅವರ ಒಂದು ಮುದ್ರಣಾಲಯದಲ್ಲಿ 2000 ಕಾರ್ಮಿಕರು ದುಡಿಯುತ್ತಿದ್ದರೆಂಬ ಪ್ರತೀತಿ ಇದೆ. ಅದಲ್ಲದೇ 1851ರಲ್ಲಿ ಇವರು ಕೈಮಗ್ಗಕ್ಕೆ ಫ್ಲೆಯಿಂಗ್ ಶೆಟಲ್ ಜೋಡಿಸಿ ನೇಕಾರಿಕೆಯಲ್ಲಿ ಕ್ರಾಂತಿಯನ್ನೇ ತಂದರು. 1865ರಲ್ಲಿ ಇವರು ಹಂಚಿನ ಕಾರ್ಖಾನೆಗಳನ್ನು ಸ್ಥಾಪಿಸಿದರು. ಮಂಗಳೂರಿನ ಜೆಪ್ಪು ಎಂಬಲ್ಲಿ ನಿರ್ಮಿಸಿದ ಎರಕ ಶಾಲೆ ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ಸ್ವಾತಂತ್ರ್ಯ ಸಿಗುವ ಅಸುಪಾಸಿನ ಸಮಯದಲಿ ಮಂಗಳೂರಿನಲಿ ಸುಮಾರು 35 ಹಂಚಿನ ಕಾರ್ಖಾನೆಗಳಿದ್ದವು. ಸುಮಾರು 30 ಸಾವಿರ ಕಾರ್ಮಿಕರು ಬೇರೆ ಬೇರೆ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದರು. ಈ ಕಾರ್ಮಿಕರು ಎಐಟಿಯುಸಿ ನೇತೃತ್ವದಲ್ಲಿ ಸಂಘಟಿತರಾಗಿದ್ದರು. ಮಂಗಳೂರು, ಉಡುಪಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಬೀಡಿ, ನೇಕಾರಿಕೆ, ಗೋಡಂಬಿ ಉದ್ಯಮಗಳಿದ್ದು, ಇವುಗಳ ಕಾರ್ಮಿಕರು ಸಂಘಟಿತರಾಗಿದ್ದರು. ಕುಂದಾಪುರದಲ್ಲಿ ಹಂಚಿನ ಕಾರ್ಖಾನೆಗಳಿದ್ದವು.

19ನೇ ಶತಮಾನದ ಮೊದಲ ದಶಕಗಳಲ್ಲಿ ಉದ್ಯಮಗಳಿಂದ ಸಮೃದ್ಧಿಗೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆ ಮುಂದಿನ ಹಂತದಲ್ಲಿ ಮುಗ್ಗರಿಸಿತು. ಇದಕ್ಕೆ ಅನೇಕ ಕಾರಣಗಳಿವೆ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಇವರ ನೇತೃತ್ವದಲ್ಲಿ ನಡೆದ, ಮೈಸೂರು ಸಂಸ್ಥಾನದ ಕೈಗಾರೀಕರಣದ ಲಾಭ ಕರಾವಳಿಗೆ ದಕ್ಕದೇ ಹೋಯಿತು. ಸ್ವಾತಂತ್ರ್ಯ ಸಿಗುವವರೆಗೆ ದ.ಕ. ಜಿಲ್ಲೆ ಬ್ರಿಟೀಷ್ ಆಡಳಿತದಲ್ಲಿದ್ದು, ಮುಂದೆ ಕರ್ನಾಟಕ ಏಕೀಕರಣದ ನಂತರವೇ ಕನ್ನಡ ನೆಲವನ್ನು ಸೇರಿಕೊಂಡಿತ್ತು. ಸ್ವಾತಂತ್ರ್ಯ ಸಿಕ್ಕು ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದಾಗ ದ.ಕ. ಜಿಲ್ಲೆಗೆ ವಿಮಾನ ನಿಲ್ದಾಣ, ಬಂದರು, ಮಾರ್ಗ ಜೋಡಣೆ, ವಿದ್ಯುತ್ ಸರಬರಾಜು, ಇಂಜಿನಿಯರಿಂಗ್ ಕಾಲೇಜುಗಳಂತಹ ಮೂಲ ಸೌಲಭ್ಯದ ಪ್ರಾಜೆಕ್ಟ್‌ಗಳು ಬಂದವು. ಆದರೆ ಹೊಸ ಕೈಗಾರಿಕೆಗಳು ಬರಲಿಲ್ಲ. ಮುಖ್ಯವಾಗಿ ಸಾರ್ವಜನಿಕ ವಲಯದ ಯಾವ ಕೈಗಾರಿಕೆಗಳೂ ಪಂಚವಾರ್ಷಿಕ ಯೋಜನೆಗಳು ಪ್ರಾರಂಭದ ಎರಡು, ಮೂರು ದಶಕಗಳಾದರೂ ಹುಟ್ಟಲ್ಲಿಲ್ಲ. ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರ ಆಗಲೀ ಈ ಕಾಲಘಟ್ಟದಲ್ಲಿ ವಿನಿಯೋಗಿಸಿದ ಹಣ ಅತ್ಯಲ್ಪ ಎಂದೇ ಹೇಳಬಹುದು. ಇದರಿಂದ ದ.ಕ.ಜಿಲ್ಲೆ ಕೈಗಾರೀಕರಣದ ಓಟದಿಂದ ಹೊರಗುಳಿಯಿತು. ಖಾಸಗೀ ಒಡೆತನದಲ್ಲಿ ಎರಡು ಮಿನಿ ಉಕ್ಕಿನ ಕಾರ್ಖಾನೆ ಕೆನರಾ ಸ್ಪ್ರಿಂಗ್‌ಗಳನ್ನು ಬಿಟ್ಟರೆ ಸಾಂಪ್ರದಾಯಿಕ ಉದ್ಯಮಗಳಾದ ಹಂಚು, ಬೀಡಿ, ಕೈಮುಗ್ಗ ಇತ್ಯಾದಿ ಮಾತ್ರ ಅಸ್ತಿತ್ವದಲ್ಲಿದ್ದವು. ಎಪ್ಪತ್ತು–ಎಂಬತ್ತರ ದಶಕದ ನಂತರ ಇಲ್ಲಿ ಕೆಲವು ಭಾರೀ ಉದ್ಯಮಗಳು ಬರತೊಡಗಿದವು. ಇಷ್ಟಾದರೂ, ಒಂದು ಆರೋಗ್ಯಕರ ಕೈಗಾರೀಕರಣ ಹುಟ್ಟಿ, ಬೆಳೆದು, ಪಸರಿಸಿ ಜನತೆಯನ್ನು

ತೊಡಗಿಸಿಕೊಳ್ಳುವ ಪ್ರಕ್ರಿಯೇ ಆಗಲೇ ಇಲ್ಲ. ಕೈಗಾರೀಕರಣದ ವಿಚಾರವಾಗಿ ಪೂರ್ವ ಕರಾವಳಿಯಲ್ಲಿರುವ ವಿಶಾಖಪಟ್ಟಣ ಮತ್ತು ಪಶ್ಚಿಮ ಕರಾವಳಿಯ ಮಂಗಳೂರನ್ನು, ಹೋಲಿಸಿ ನೋಡಿ.

ವಿಶಾಖಪಟ್ಟಣದೊಂದಿಗೆ ಹೋಲಿಕೆ

ವಿಶಾಖಪಟ್ಟಣದಲ್ಲಿ 79 ಭಾರೀ ಕೈಗಾರಿಕೆ (ಉತ್ಪಾದನಾ ಘಟಕ)ಗಳಿವೆ. ಇವುಗಳಲ್ಲಿ ಸುಮಾರು 46 ಸಾವಿರ ಕಾರ್ಮಿಕರು ದುಡಿಯುತ್ತಾರೆ. ಅಲ್ಲಿನ ಉಕ್ಕಿನ ಕಾರ್ಖಾನೆ ಒಂದರಲ್ಲೇ 17 ಸಾವಿರಕ್ಕೂ ಹೆಚ್ಚು ಜನ ದುಡಿಯುತ್ತಾರೆ. 79 ಭಾರೀ ಕೈಗಾರಿಕೆಗಳಲ್ಲಿ 7 ಕೈಗಾರಿಕಾ ಘಟಕಗಳು ಸಾರ್ವಜನಿಕ ಕ್ಷೇತ್ರದಲ್ಲಿವೆ. ಮಂಗಳೂರಿನಲ್ಲಿ 20 ಭಾರೀ ಕೈಗಾರಿಕೆಗಳಿವೆ. ಇವುಗಳಲ್ಲಿ ಒಟ್ಟು 6 ಸಾವಿರ ಕಾರ್ಮಿಕರು ದುಡಿಯುತ್ತಾರೆ. ಇವುಗಳಲ್ಲಿ ಕೇವಲ 3 ಸಾರ್ವಜನಿಕ ವಲಯದಲ್ಲಿದ್ದು ಇದರಲ್ಲಿ 1400 ಜನ ದುಡಿಯುತ್ತಾರೆ. ಆದರೆ ಸಣ್ಣ ಘಟಕಗಳಲ್ಲಿ (Small and Micro Enterprises) 90 ಸಾವಿರ ಕಾರ್ಮಿಕರು ದುಡಿಯುತ್ತಾರೆ.

ಮೇಲೆ ಕೊಟ್ಟ ಅಂಕಿ ಅಂಶಗಳಲ್ಲಿ ಹೇಳದೇ ಇರುವ ವಿಷಯವಿದೆ. ಅದೇನೆಂದರೆ ಅಭಿವೃದ್ಧಿ ಸೂಚ್ಯಂಕ ನೋಡಿದರೆ ದ.ಕ.ಜಿಲ್ಲೆ ವಿಶಾಖಪಟ್ಟಣಂ ಪ್ರದೇಶಕ್ಕಿಂತ ಮುಂದಿದೆ. ಆದರೆ ಕೈಗಾರೀಕರಣದಲ್ಲಿ ಹಿಂದಿದೆ. ದ.ಕ. ಜಿಲ್ಲೆಯಲ್ಲಿ ಭೂಸುಧಾರಣೆ ತಕ್ಕಮಟ್ಟಿನ ಯಶಸ್ಸನ್ನು ಪಡೆದಿತ್ತು. ಇಲ್ಲಿನ ವಿದ್ಯಾಭ್ಯಾಸದ ಗರಿಷ್ಠ ಮಟ್ಟದಲ್ಲಿದೆ. ಇಲ್ಲಿಂದ ಜನರು ಉದ್ಯೋಗಕ್ಕಾಗಿ ಮುಂಬಾಯಿ, ಬೆಂಗಳೂರು, ಕೊಲ್ಲಿ ರಾಷ್ಟ್ರ ಹಾಗೂ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಗುತ್ತಾರೆ. ಅಲ್ಲಿಂದ ಭಾರಿ ಪ್ರಮಾಣದ ಹಣ ಹರಿದು ಬರುತ್ತದೆ. ಅನೇಕ ಬ್ಯಾಂಕ್‌ಗಳಿವೆ. ಇಷ್ಟಾದರೂ ಹಣದ ಕ್ರೋಡಿಕರಣಗೊಂಡು ಅದು ಕೈಗಾರಿಕ ಬಂಡವಾಳವಾಗಿ ಕಾರ್ಖಾನೆಗಳು ಹುಟ್ಟಿಕೊಳ್ಳಲಿಲ್ಲ. ಇರುವ ಕೈಗಾರಿಕೆಗಳೂ ಮಂಗಳೂರಿನ ಸುತ್ತ ಕೇಂದ್ರಿಕೃತವಾಗಿದೆ. ದ.ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಇಂದಿಗೂ ಕೈಗಾರೀಕರಣ (ಆಧುನೀಕರಣ) ದಲ್ಲಿ ಹಿಂದೇ ಬಿದ್ದಿದೆ. (ಇದೇ ತಾಲೂಕಿನಲ್ಲೂ ಧರ್ಮಸ್ಥಳವೂ ಇದೆ.) ಉಡುಪಿ ಜಿಲ್ಲೆಯಲ್ಲಿ ಎರಡು ವಿದ್ಯುತ್ ಉತ್ಪಾದನಾ ಘಟಕ, ಎರಕ ಶಾಲೆ, ಸುಸ್ಲಾನ್, ಒಂದು ಭಾರಿ ಬೆಸುಗೆಯ ಕಾರ್ಖಾನೆಗಳನ್ನು ಬಿಟ್ಟರೆ ಬೇರಾವ ಅಧುನಿಕ ಕಾರ್ಖಾನೆ ಇಲ್ಲ. ಕುಂದಾಪುರದ ಅಸುಪಾಸಿನಲ್ಲಿ ಹಂಚಿನ ಕಾರ್ಖಾನೆ, ಗೇರು ಬೀಜದ ಕಾರ್ಖಾನೆ ಮೀನಿನ ಸಂಸ್ಕರಣದ ಕಾರ್ಖಾನೆ, ಕೊಬ್ಬರಿ ಸಂಸ್ಕರಣದ ಕಾರ್ಖಾನೆ ಹಾಗೂ ಇತರೆ ಚಿಕ್ಕ ಪುಟ್ಟ ಉದ್ಯಮಗಳು ಮಾತ್ರ ಇವೆ. ಇಷ್ಟಲ್ಲದೆ ದ.ಕ. ಜಿಲ್ಲೆಯ ಸಾಂಪ್ರದಾಯಿಕ ಉದ್ಯಮಗಳು ನಶಿಸತೊಡಗಿದವು. ಹೆಚ್ಚು ಕಡಿಮೆ ಎಲ್ಲಾ ಹಂಚಿನ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಬೀಡಿ, ನೇಕಾರಿಕೆ ಉದ್ಯಮ ಕ್ಷೀಣಗೊಂಡಿವೆ. ಮಂಗಳೂರಿನ ಹಂಚಿನ ಮತ್ತು ಬೀಡಿ ಉದ್ಯಮ ಕಾರ್ಮಿಕ ಸಂಘಟನೆಯ ತಳಹದಿಯಾಗಿತ್ತು. ಈ ಉದ್ಯಮಗಳು ಕುಸಿದ ಕಾರಣ ಕಾರ್ಮಿಕ ಚಳವಳಿಗೆ ತುಂಬಾ ನಷ್ಟವಾಯಿತು. ಹೀಗೆ, ವಿಸ್ತೃತವಾದ ಸಂಘಟಿತ ಕಾರ್ಮಿಕ ವರ್ಗ ಬೆಳೆಯದೆ ಕೋಮುವಾದೀ ಶಕ್ತಿಗಳಿಗೆ ಎದೆ ಒಡ್ಡಿ ನಿಲ್ಲುವ ಒಂದು ಸಾಮಾಜಿಕ ಶಕ್ತಿ ಇಲ್ಲದಂತಾಯಿತು. ಇಷ್ಟಾದರೂ ಮಧ್ಯಮ ಹಾಗೂ ಸಣ್ಣ ಉದ್ದಿಮೆಗಳ ಕಾರ್ಮಿಕವರ್ಗವೇ ಸಂಘಟಿತಗೊಂಡು ಕೋಮುವಾದಿಗಳಿಗೆ ಒಂದು ಮಟ್ಟದ ಪ್ರತಿರೋಧವನ್ನು ಒಡ್ಡುತ್ತಿರುವ ಪ್ರಕ್ರಿಯೆಯನ್ನು ಗುರುತಿಸಬಹುದು.

ಅರ್ಥಿಕತೆಯ ಎರಡನೇ ಘಟ್ಟವಾದ ಕೈಗಾರಿಕರಣ ಕುಂಠಿತ ಆಗುವುದರೊಂದಿಗೆ ಮೂರನೇ ಘಟ್ಟದ ಉದ್ಯಮಗಳು ಬೆಳೆದು ಬಂದವು.

ಮೂರನೇ ಘಟ್ಟದ ಉದ್ಯಮ:

ಸೇವಾ ವಿಭಾಗಕ್ಕೆ ಸೇರಿದ ಈ ಘಟ್ಟದಲ್ಲಿ ಬ್ಯಾಂಕಿಂಗ್, ಶಿಕ್ಷಣ, ರಿಯಲ್ ಎಸ್ಟೇಟ್, ಅಸ್ಪತ್ರೆ, ಮನರಂಜನೆ, ಪ್ರವಾಸೋದ್ಯಮ ಇತ್ಯಾದಿಗಳು ಸೇರಿಕೊಂಡಿವೆ. ಈ ಉದ್ಯಮಗಳು ಬೃಹತ್ತಾಗಿ ಬೆಳೆದು ಇದರಿಂದ ಇಲ್ಲಿ ಮಾರುಕಟ್ಟೆಗೆ ಉಪಯುಕ್ತವಾದ ಒಂದು ಪ್ರಬಲ ಮಧ್ಯಮ ವರ್ಗ ನಿರ್ಮಾಣವಾಯಿತು. ಭೂಸುಧಾರಣೆ, ಮೀನುಗಾರಿಕೆಯ ಸ್ವರೂಪದಲ್ಲಿ ಬದಲಾವಣೆಗಳ ನಂತರ ಕುಟುಂಬ ವ್ಯವಸ್ಥೆಯಲ್ಲಿ ಬದಲಾವಣೆ ಬಂದು ಪ್ರತಿ ಕುಟುಂಬವೂ ಸ್ವಂತ ಸ್ಥಳವನ್ನೂ, ಮನೆಯನ್ನೂ ಹೊಂದುವ ಬೇಡಿಕೆಗೊಳಗಾಯಿತು. ರಿಯಲ್ ಎಸ್ಟೇಟ್ ದಂಧೆ ಭರದಿಂದ ಬೆಳೆಯಿತು. ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಇದರಿಂದ ಬಹಳಷ್ಟು ಕಾಡುನಾಶ ಅಯಿತು. ಕರಾವಳಿ ಜಿಲ್ಲೆಗಳು ವಿದ್ಯಾಸಂಸ್ಥೆಗಳ ಬೀಡಾಯಿತು. ಡೊನೇಶನ್ ಪದ್ಧತಿಯಲ್ಲಿ ನಡೆಸಿದ ದೇಶದ ಪ್ರಥಮ ಖಾಸಗಿ ವಿದ್ಯಾಸಂಸ್ಥೆ ಎಂದು ಮಣಿಪಾಲಕ್ಕೆ ಹೆಸರು ಬಂತು. ಈಗಂತೂ ದ.ಕ. ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹೇರಳವಾದ ಮೆಡಿಕಲ್, ಎಂಜಿನಿಯರಿಂಗ್ ಹಾಗೂ ಅನೇಕ ರೀತಿಯ ವೃತ್ತಿ ತರಬೇತಿಯ ಕಾಲೇಜುಗಳಿವೆ. ಇವೆಲ್ಲವೂ ಖಾಸಗೀ ಸಂಸ್ಥೆಗಳು ಲಾಭಕ್ಕಾಗಿ ನಡೆಸುವ ಕಾಲೇಜುಗಳು. ಈಗ ಮಣಿಪಾಲದಂತಹ ಡಿಗ್ರಿ ಮಾರುವ ಕೇಂದ್ರಗಳು ಅನೇಕ ಇವೆ. ಈ ಸಂಸ್ಥೆಗಳಲ್ಲಿ ಉ. ಭಾರತ, ಆಂಧ್ರ, ತಮಿಳುನಾಡಿನ ಭಾರಿ ಭೂಮಾಲಕರ ಹಾಗೂ ಶ್ರೀಮಂತರ ಮಕ್ಕಳನ್ನು ಸೇರಿಸಿಕೊಳ್ಳಲಾಗಿದೆ. ಇತರ ದೇಶದ ವಿದ್ಯಾರ್ಥಿಗಳಿಗೂ ಇಲ್ಲಿ ಪ್ರವೇಶ ಕೊಡಲಾಯಿತು. ಐಷಾರಾಮಿ ಮನೆತನದಿಂದ ಬಂದ ಹುಡುಗರು ತಮ್ಮೊಂದಿಗೆ ಕೆಟ್ಟ ಚಾಳಿಗಳನ್ನು ಹಿಡಿದುಕೊಂಡು ಬಂದರು. ಇವರ ಪಾರ್ಟಿ, ಮೋಜು, ಕುಡಿತ, ಅಮಲು, ಮೇಜವಾನಿಯ ಹೊಸ ಸಂಸ್ಕೃತಿಯೇ ಕರಾವಳಿಗೆ ಅಮದಾಯಿತು. ಇದರಿಂದಾಗಿ ಮಾದಕ ದ್ರವ್ಯ ಹಾಗೂ ಭೋಗ ವಸ್ತುಗಳಿಗೆ ಒಂದು ದೊಡ್ಡ ಮಾರುಕಟ್ಟೆಯೇ ಸಿದ್ಧವಾಯಿತು. ಬೇಡಿಕೆ ಇದ್ದಂತೆ ಪೂರೈಕೆಯೂ ಪ್ರಾರಂಭವಾಯಿತು. ಸುತ್ತಲಿನ ವಾತಾವರಣ ಕಲುಷಿತಗೊಂಡು ಯುವ ಜನ ಲುಂಪನಿಕರಣಕ್ಕೆ (lumpen : ನೀಚ, ದರಿದ್ರ, ಅಸಂಸ್ಕೃತ)ಒಳಗಾಯಿತು.

ಲುಂಪನೀಕರಣ ಮತ್ತು ಮಾಫಿಯಾಕರಣ

ಭೂಮಸೂದೆಯಿಂದ ಲಾಭ ಪಡೆದ ಒಕ್ಕಲುಗಳಲ್ಲೂ ಬದಲಾವಣೆ ಬಂತು. ಮೊದಲಿನ ಕಿತ್ತು ತಿನ್ನುವ ಬಡತನ ಸಾಕಷ್ಟು ಮಟ್ಟಿಗೆ ಕಡಿಮೆ ಅಯಿತು. ಹೆಚ್ಚಿನ ವಿದ್ಯೆಯನ್ನು ಪಡೆದ ಯುವ ಪೀಳಿಗೆ ನಗರಗಳನ್ನು ಸೇರಿ ದುಡಿಯಲು ಪ್ರಾರಂಬಿಸಿತು. ಇನ್ನು ಕೆಲವರು ವಿದೇಶಗಳಿಗೆ (ಮುಖ್ಯವಾಗಿ ಗಲ್ಫ್) ಹೋಗಿ ದುಡಿದು ತಮ್ಮ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಂಡರು. ಅಗಾಧ ರೂಪದಲ್ಲಿ ಜಿಲ್ಲೆಗೆ ಹಣ ಹರಿದು ಬರತೊಡಗಿತು. ಹೀಗೆ ಹರಿದು ಬಂದ ಹಣ ಕ್ರೋಡಿಕರಣಗೊಂಡು ಬಂಡವಾಳವಾಗಿ ಕೈಗಾರಿಕರಣದಲ್ಲಿ ಪರ್ಯವಸನಗೊಳ್ಳಬೇಕಿತ್ತು. ಆದರೆ ಅದು ಹಾಗಾಗಲಿಲ್ಲ. ಭೂಮಸೂದೆಯಂತ ತೀವ್ರವಾದ ಅರ್ಥಿಕ ಬದಲಾವಣೆ ಬಂದರೂ ಅದಕ್ಕೆ ಪೂರಕವಾದ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆ ನಡೆಯದೇ ಹೋಯಿತು. ಬಂಡವಾಳಶಾಹಿ ಔದ್ಯೋಗಿಕ ಕ್ರಾಂತಿ ನಿಂತ ನೀರಾಯಿತು. ಆದರೆ ಹೊರಗಿನಿಂದ ಬಂದ (ಹೆಚ್ಚಿನ ಅಕ್ರಮ) ಹಣ ಕರಾವಳಿಯಲ್ಲಿ ಧಾರ್ಮಿಕತೆಯ ಸ್ಫೋಟಕ್ಕೆ ಕಾರಣ

ಅಯಿತು. ದ.ಕ. ಜಿಲ್ಲೆ ಒಂದರಲ್ಲೇ ಭೂತಕೋಲಕ್ಕೆ ಹೊರಗಿನಿಂದ ಬರುವ ಹಣ ವರ್ಷಕ್ಕೆ ಸುಮಾರು 200 ಕೋಟಿಗಳಷ್ಟಾದೀತು. ಕಟೀಲಿನ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ ಅರು ಯಕ್ಷಗಾನ ಮೇಳಗಳಿವೆ. ಈ ಮೇಳಗಳ ಆಟಗಳು ಮುಂದಿನ 15 ವರ್ಷಕ್ಕೆ ರಿಸರ್ವ್ ಆಗಿ ಬಿಟ್ಟಿವೆ. ಮಂದರ್ತಿ ಮತ್ತು ಇತರ ದೇವಸ್ಥಾನಗಳ ಮೇಳಗಳಲ್ಲೂ ಹೀಗೆ ಆಗಿದೆ.

ಕರಾವಳಿಯ ಯಾತ್ರಾ ಸ್ಥಳಗಳು ಕೊಳೆತು ನಾರುತ್ತಿವೆ. ದೈವ ಭಕ್ತಿಯಿಂದ ಬರುವ ಯಾತ್ರಾರ್ಥಿಗಳಿಗೆ ಕೆಲವು ಚಾಪಲ್ಯಗಳಿರುತ್ತವೆ. ಇವನ್ನು ಪೋಷಿಸಿ ಬೆಳೆಸುವ ಒಂದು ಉದ್ಯಮವೇ ಬೆಳೆದಿದೆ. ಧರ್ಮವನ್ನು ವಿರೂಪಗೊಳಿಸಿ ಅದರಿಂದ ದಂದೆ ನಡೆಸುವ ಒಂದು ಲುಂಪೆನ್ ಅರ್ಥಿಕತೆಯೇ ಇದೆ. ಭೂಮಸೂದೆಯಿಂದ ವಿಘಟನೆ ಹೊಂದಿದ ಭೂಮಾಲಕರ ಒಂದು ವಿಭಾಗ ಮಾಫಿಯದತ್ತ ತಿರುಗಿತು. ಅಕ್ರಮ ಕಾಡು ಕಡಿಯುವುದು, ಅಕ್ರಮ ಗಣಿಗಾರಿಕೆ ಮಹಾನಗರಗಳಲ್ಲಿ ಭೂಗತ ಚಟುವಟಿಕೆ ನಡೆಸುವುದು, ಗಾಂಜಾ ಬೆಳೆಸಿ ಮಾರಾಟ ಮಾಡುವುದು ಇತ್ಯಾದಿ. ಇದೇ ರೀತಿ ರಿಯಲ್ ಎಸ್ಟೇಟ್ ಉದ್ಯಮಕ್ಕೂ ಮಾಫಿಯಾಕ್ಕೂ ನಿಕಟ ಸಂಬಂಧ ಇದೆ. ಮೀನೂಗಾರಿಕೆಯಲ್ಲಿ ಬಂದ ಬದಲಾವಣೆಯೂ ಕರಾವಳಿಯ ಮಾಫಿಯಾಕರಣ ಹಾಗೂ ಲೂಂಪನೀಕರಣಕ್ಕೂ ಕಾರಣವಾಯಿತು. ಲುಂಪೆನ್ ಯುವಕರು ಹಾಗೂ ಮಾಫಿಯಾ ಕ್ರಿಮಿನಲ್‌ಗಳೇ ಫ್ಯಾಸಿಸಂನ ಮೂಲದ್ರವ್ಯ. ಮಂಗಳೂರಿನಲ್ಲಿರುವ ಹಲವು ಕ್ರಿಮಿನಲ್ ಗ್ಯಾಂಗ್‌ಗಳ ರಾಜಕೀಯ ನಿಲುವು, ಕೋಮುದ್ವೇಷದ ಕೃತ್ಯಗಳು ಎಲ್ಲರಿಗೂ ತಿಳಿದ ವಿಚಾರಗಳೇ.

ಸ್ಥೂಲವಾಗಿ ಹೇಳುವುದಾದರೆ ಹೆಪ್ಪುಗಟ್ಟಿದ ಕೈಗಾರೀಕರಣ, ಇದಕ್ಕೆ ಪ್ರತಿಯಾಗಿ ಬೆಳೆದ ಮೂರನೇ ಘಟ್ಟದ ಸೇವಾ ಉದ್ಯಮ, ಇದರಿಂದ ಬಂದ ಲೂಂಪನೀಕರಣ ಮತ್ತು ಮಾಫಿಯಾಕರಣ, ಭೂಮಸೂದೆಯೊಂದಿಗೆ ಬರಬೇಕಿದ್ದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿಯ ಗೈರು ಹಾಜರು ಇವೇ ಸಂಕೀರ್ಣಗೊಂಡು ಕರಾಳ ಕೋಮುವಾದ ಉಚ್ಛ್ರಾಯ ಸ್ಥಿತಿಗೆ ಬರುವಂತಾಯಿತು.

ಕವಿತೆಯೊಂದರ ಮರಣೋತ್ತರ ಪರೀಕ್ಷೆ

ಬಿಸಿಲ ದಂಡೆಗೆ ಶಾಮಿಯಾನ ಹಾಸಿಕೂತ ಜನ
ಬತ್ತಿದ ನದಿಯ ಬಗ್ಗೆ
ಪ್ರಬಂಧಮಂಡಿಸಿದರು ನಾಟಕಮಾಡಿಸಿದರು
ಭಾಷಣಹೆಣೆದರು ಹಾಡುಹಸೆಹೊಸೆದರು
ಕಿಕ್ಕಿರಿದ ರೂಪಕಗಳಕವಿತೆ ನೇಯ್ದರು
ದೃಶ್ಯಾವಳಿಗಳ ಸುತ್ತ ಮಾತ ಸೆರಗ ಹೊಲಿದರು
ಗೆದ್ದವರಿಗೆ ಪ್ರಶಸ್ತಿಗಳ ಸುತ್ತಿದರು
ದೊರೆತ ಸಂಭಾವನೆ ಗೌರವಗಳ ಕಟ್ಟಿಕೊಂಡರು
ಸೋತವರು ಮತ್ತೊಂದು ಬತ್ತಿದ ನದಿಯ ಹುಡುಕಿದರು
ಅಥವಾ
ಅಹ್ವಾನ ಪತ್ರಿಕೆಗೆ ಕಾದರು
ಹೆಸರುಗಳ ಹುಡುಕಿದರು ಹೆಸರ ಗೈರಿಗೆ ಮುನಿದರು
ಶಪಿಸಿದರು ಹುಸಿ ವಿರಾಗಿಗಳಾದರು

ಮುಂದಿನ ಸಮಾವೇಶ
ಹೂವೊಂದರ ಅಕಾಲಿಕ ಪತನ
ಕತ್ತರಿಸಿಟ್ಟ ಮರದ ಬೊಡ್ಡೆಯ ಮೇಲೆ
ನಾಳಿನ ಭವಿಷ್ಯ ಬರೆಯಲು ನೂಕುನುಗ್ಗಲು ಇಲ್ಲಿ
ಹಕ್ಕಿಹಿಕ್ಕೆಯ ಕಮಟುಂಡ ಕೋಟೆ ಸ್ಮಾರಕಗಳು
ಹೊಗೆಯುಗಳನ್ನು ತುಟಿಯಂಚಲಿ
ಒರಸಿಕೊಂಡವು
ಕಾದಂಬರಿಗಳ ಪುಟಗಳಲಿ ಕಂಗೊಳಿಸಿದವು
ಬಣ್ಣದ ಪರದೆಗಳಲಿ ಸರಿದಾಡಿದವು

ಪ್ರಶಸ್ತಿಗಳು ಸುರಿಸಿದ ಹಣದಡಿ ಬಂಗಲೆಗಳು ಎದ್ದವು
ಶಾಲುಗಳು ಬಿಕರಿಯಾದವು
ಪ್ಲಾಸ್ಟಿಕ್ ಪೊಟ್ಟಣದಲಿ ಬೊಕ್ಕೆಗಳು ಬಿಕ್ಕಿದವು
ಅತ್ತ ಅಳು ಹೊಕ್ಕ ಸಂಕಟದ ಈಟಿಗಳು
ಕ್ಯಾನ್ ವಾಸಿನ ಮೇಲೆ ರಮ್ಯಗೊಂಡವು
ರತ್ನಗಂಬಳಿಯ ಹಾಲಿನಲ್ಲಿ ಕೀರ್ತಿಯ ಕಂಪು
ಒಡಲ ಪರಿಪಾಟಲ ದನಿಸಿದ ಕಲೆಗಾರ
ಬಂಗಲೆಯ ತಂಪು ಕೊಠಡಿಯಲಿ ಗುಡಿಸಲ ಚಿತ್ರ
ಭಾಗಿಯಾದವರ ಸ್ಮರಣಿಕೆಗೆ ಕುದಿವ ಕರುಳ ವಿನ್ಯಾಸ
ಆಹಾ!
ಅವಿಸ್ಮರಣೀಯ ಉತ್ಸವ
ಕುಡಿದು ಹೀರಿ ಉಂಡು ನೆಕ್ಕಿ ಎಸೆದ ಜಾಗಗಳಲ್ಲಿ
ಹಸಿದವರ ಮಾರಾಮಾರಿ

ಇನ್ನು
ಬರೆಯಲಾಗುತ್ತಿಲ್ಲ
ಸೋತ ಕವಿತೆಯೊಂದರ
ಮರಣೋತ್ತರ ಪರೀಕ್ಷೆ ನಡೆಯುತ್ತಿದೆ

– ವಾಸುದೇವ ನಾಡಿಗ್

ಪ್ರತಿರೋಧದ ದಾರಿ ದಾಟಿ ಹರಡುತ್ತಿದೆ ಮುಸ್ಲಿಂ ಕೋಮುವಾದ

ಮುಸ್ಲಿಂ ಕೋಮುವಾದ 'ಪ್ರತಿರೋಧದ' ದಾರಿಯನ್ನು ದಾಟಿ ರಾಜಕೀಯ ನೆಲೆಗಳನ್ನು ಹುಡುಕುತ್ತಿದೆ. ಥೇಟ್ ಸಂಘ ಪರಿವಾರದಂತೆಯೇ ವಿದ್ಯಾರ್ಥಿಗಳು, ಮಹಿಳೆಯರು, ಯುವಕರು, ಧಾರ್ಮಿಕ ನಾಯಕರು ಹೀಗೆ ಸಮುದಾಯದ ಎಲ್ಲಾ ವಿಭಾಗಗಳನ್ನು ವಿವಿಧ ಬ್ಯಾನರ್‌ಗಳಡಿ ಸಂಘಟಿಸುತ್ತಾ ಇಡೀ ಸಮುದಾಯವನ್ನು ನಿಯಂತ್ರಿಸಲು ಯತ್ನಿಸುತ್ತಿದೆ. ಇದರ ಅಪಾಯಗಳನ್ನು ಅರಿಯಲು ಕರಾವಳಿಯ ಜಾತ್ಯತೀತ ಶಕ್ತಿಗಳು, ಮುಸ್ಲಿಂ ಸಮುದಾಯದ ಮುಖ್ಯವಾಹಿನಿಯ ಸಂಘಟನೆಗಳು, ವಿಚಾರವಂತರು ವಿಫಲವಾಗಿರುವುದು ಕೋಮುವಾದದ ವಿರುದ್ಧ ಹೋರಾಟದ ಬಹುದೊಡ್ಡ ಕೊರತೆ.

ಮುನೀರ್ ಕಾಟಿಪಳ್ಳ ರಾಜ್ಯ ಅಧ್ಯಕ್ಷರು, ಡಿವೈಎಫ್ಐ

ಕಡಲ ತಡಿಯ ಜಿಲ್ಲೆ ದಕ್ಷಿಣ ಕನ್ನಡ ಎಂದಾಗ ಈ ಹಿಂದೆ ನೆನಪಾಗುತ್ತಿದ್ದದ್ದು ಇಲ್ಲಿನ ಸುಂದರ ಸಮುದ್ರ ದಂಡೆಗಳು, ತೆಂಗು, ಅಡಿಕೆ ತೋಟಗಳು, ಪಶ್ಚಿಮ ಘಟ್ಟದ ದಟ್ಟ ಕಾಡು, ಹೆಂಚು, ಬೀಡಿ ಉದ್ಯಮ, ಮೀನುಗಾರಿಕೆ. ಯಕ್ಷಗಾನ, ನೇಮ, ಉರೂಸ್ ಜಾತ್ರೆಗಳಲ್ಲಿ ಜೊತೆ, ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದ ಇಲ್ಲಿನ ತುಳುವರ, ಬ್ಯಾರಿಗಳ ಸಹಜ ಸೌಹಾರ್ದ ಬದುಕು. ಇದೆಲ್ಲ ಈಗ ಗತಕಾಲದ ಮಾತು. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಇಲ್ಲಿ ಎಲ್ಲವೂ ಬದಲಾಗಿದೆ. ಈಗ ಮಂಗಳೂರು ಎಂದಾಕ್ಷಣ ನೆನಪಾಗುವುದು ಹಿಂದೂ ಮುಸ್ಲಿಂ ಗಲಾಟೆಗಳು, ನೈತಿಕ ಪೊಲೀಸ್‌ಗಿರಿ, ಪರಸ್ಪರ ತೊಡೆತಟ್ಟುವ ಕೋಮು ಸಂಘಟನೆಗಳು.

ತೊಂಭತ್ತರ ದಶಕದ ಆರಂಭದಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಆದಂತೆ ಕರಾವಳಿಯಲ್ಲೂ ಬಾಬರಿ ಮಸೀದಿ ಧ್ವಂಸ ಕೋಮುಗಲಭೆಯ ಕಿಡಿ ಹತ್ತಿಸಿ ಕರ್ನಾಟಕದ ಕರಾವಳಿ ಭಾಗಗಳಲ್ಲೂ ಘರ್ಷಣೆಗಳು ನಡೆದವು. ಇತಿಹಾಸದಲ್ಲಿ ಪ್ರಥಮ ಬಾರಿಗೆ ಬ್ಯಾರಿಗಳೂ, ತುಳುವರೂ ತಮ್ಮ ಇತಿಹಾಸವನ್ನು ಮರೆತು ಕಾದಾಡಿದರು. ದಿನಗಳೆದಂತೆ ರಾಜ್ಯದ ಬೇರೆ ಪ್ರದೇಶಗಳು ಸಹಜ ಸ್ಥಿತಿಗೆ ಮರಳಿದರೆ ಕರಾವಳಿ ಜಿಲ್ಲೆಗಳು ಮಾತ್ರ ಆನಂತರ ಯಾವತ್ತೂ ಸೌಹಾರ್ದತೆಯ ದಾರಿಗೆ ಹೊರಳಲೇ ಇಲ್ಲ. ತೊಂಭತ್ತೆರಡರ ಗಲಭೆ ಐದಾರು ಜೀವಗಳನ್ನು ಬಲಿಪಡೆದರೆ ಅದರ ಮುಂದುವರಿಕೆಯಂತೆ ತೊಂಭತ್ತೆಂಟರ ಸುರತ್ಕಲ್ ಗಲಭೆ ಹತ್ತು ಜೀವಗಳನ್ನು ಬಲಿಪಡೆಯಿತು. ಈ ಶತಮಾನದ ಹದಿನಾರು ವರ್ಷಗಳಂತೂ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಕೋಮುವಾದದ ಉಚ್ಛ್ರಾಯ ದಿನಗಳು. ಯಾವ ಸಾಮಾಜಿಕ ಅಧ್ಯಯನಕಾರರ ವಿಶ್ಲೇಷಣೆಗೂ ಸಿಗದಷ್ಟು ಕೋಮುವಾದ ಇಲ್ಲಿ ಬೆಳೆದು ನಿಂತಿದೆ.

ಕರಾವಳಿಯಲ್ಲಿ ಬಹುಸಂಖ್ಯಾತ ಕೋಮುವಾದದ ಜಾಲಗಳು ತುಳುವರ ಮಧ್ಯೆ ವ್ಯಾಪಕವಾಗಿ ಹಬ್ಬಿರುವಂತೆಯೇ ಇಲ್ಲಿ ಅಲ್ಪಸಂಖ್ಯಾತ ಕೋಮುವಾದ ಬ್ಯಾರಿ ಮುಸ್ಲಿಮರ ಮಧ್ಯೆ ತನ್ನ ಬೇರುಗಳನ್ನು ಆಳಕ್ಕೆ ಇಳಿಸಿಕೊಂಡಿದೆ. ತೊಂಭತ್ತೆಂಟರ ಸುರತ್ಕಲ್ ಕೋಮುಗಲಭೆಯವರೆಗೂ ಕರಾವಳಿಯ ಕೋಮು ಕದನಗಳು ನಡೆದದ್ದು ಏಕಪಕ್ಷೀಯವಾಗಿಯೇ. ಆದರೆ ಎರಡು ಸಾವಿರ ಇಸವಿ ಆರಂಭ ಆದ ನಂತರದ ದಿನಗಳ ಕೋಮು ಘರ್ಷಣೆಯನ್ನು, ಕೋಮುವಾದದ ವ್ಯಾಪಕ ಬೆಳವಣಿಗೆಯನ್ನು ಅಷ್ಟು ಸರಳೀಕರಿಸಿ ನೋಡಲಾಗುವುದಿಲ್ಲ. ಭಟ್ಕಳದಲ್ಲಿ ನಡೆದ ನಿರಂತರ ಕೋಮುಗಲಭೆಗಳು, ಅಂತರ್ಮತೀಯ ಜೋಡಿ ನಾಪತ್ತೆ ಪ್ರಕರಣ, ಆಸೋಡು ಜಾತ್ರೆಯ ಹಿನ್ನಲೆಯಲ್ಲಿ ನಡೆದ ಕುಂದಾಪುರದ ಎರಡು ಕೋಮುಗಲಭೆಗಳು, ಸುರತ್ಕಲ್ ಗಲಭೆ, ಗುಜರಾತ್ ಕೋಮು ದಂಗೆಗಳ ಪರಿಣಾಮಗಳು ಕರಾವಳಿಯ ಬ್ಯಾರಿ ಮುಸಲ್ಮಾನರನ್ನು ಅತಂತ್ರ, ಹತಾಶ ಸ್ಥಿತಿಗೆ ತಲುಪಿಸಿದವು. ಮುಖ್ಯವಾಹಿನಿಯ ಮಾಧ್ಯಮಗಳು ಮುಸ್ಲಿಮರ ವಿರುದ್ಧ ನಿಂತ ಈ ಸಂದರ್ಭ ಮುಸ್ಲಿಂ ಮೂಲಭೂತವಾದ ಮತ್ತು ಕೋಮುವಾದದ ಬೆಳವಣಿಗೆಗೆ ಪೂರಕ ವಾತಾವರಣವನ್ನು ನಿರ್ಮಿಸಿಕೊಟ್ಟವು.

ಮೊದಮೊದಲು ಆತ್ಮರಕ್ಷಣೆ, ಕ್ರಿಯೆಗೆ ಪ್ರತಿಕ್ರಿಯೆ ಎಂಬ ಲಾಜಿಕ್ ಮೇಲೆ ಕಾರ್ಯತಂತ್ರ ಹೆಣೆದ ಅವಕಾಶಕ್ಕಾಗಿ ಕಾಯುತ್ತಿದ್ದ ಮುಸ್ಲಿಂ ಕೋಮುವಾದ, ಪರಿಸ್ಥಿತಿಯ ಪೂರ್ಣ ಲಾಭ ಪಡೆದು ಸಂಘಟಿತ ಶಕ್ತಿಯಾಗಿ ಕರಾವಳಿಯಲ್ಲಿ ಬೆಳೆದು ನಿಂತಿದೆ. ಈ ಅಲ್ಪಸಂಖ್ಯಾತ ಕೋಮುವಾದದ ಊರುಗೋಲಿನ ಸಹಾಯದಿಂದಲೇ ಬಹುಸಂಖ್ಯಾತ




ಪಿ. ಮಹಮ್ಮದ್ ಕಾರ್ಟೂನ್

ಕೋಮುವಾದ ತನ್ನ ಅಸ್ತಿತ್ವವನ್ನು ಯಾವುದೇ ಹಿನ್ನಡೆ ಇಲ್ಲದೆ ಕಾಪಾಡಿಕೊಳ್ಳುತ್ತಿದೆ. ಬಹುಶಃ ಅರವತ್ತರ ದಶಕದಲ್ಲೇ ಕರಾವಳಿಯ ನಗರ ಪ್ರದೇಶಗಳಲ್ಲಿ ಮುಸ್ಲಿಂ ಮೂಲಭೂತವಾದ ಕಾಣಿಸಿಕೊಂಡಿತ್ತು. 1978ರ ಅಫ್ಘಾನ್ ಕ್ರಾಂತಿಯನ್ನು ಸೋಲಿಸಲು ಮತ್ತು ಅದರ ಬೆಂಬಲಕ್ಕೆ ನಿಂತ ಸೋವಿಯತ್ ಒಕ್ಕೂಟವನ್ನು ಹಣಿಯಲು ಅಮೆರಿಕನ್ ಸಾಮ್ರಾಜ್ಯಶಾಹಿ ಮುಸ್ಲಿಂ ಮೂಲಭೂತವಾದವನ್ನು ಹುಟ್ಟಿ ಹಾಕಿತ್ತು. ಆ ಮೇಲೆ ವಿಶ್ವವ್ಯಾಪಿಯಾದ ಮತ್ತು ಸೋವಿಯೆತ್ ಕುಸಿತದ ನಂತರ ಉಂಟಾದ ಜಾಗತಿಕ ರಾಜಕಾರಣದ ಪಲ್ಲಟಗಳಿಂದ ಗಟ್ಟಿಗೊಂಡ ಮುಸ್ಲಿಂ ಮೂಲಭೂತವಾದ ಕರಾವಳಿಯ ಕಡೆಯೂ ತನ್ನ ನೆಲೆಗಾಗಿ ಯತ್ನ ನಡೆಸತೊಡಗಿತ್ತು. ಇಲ್ಲಿನ ಹಿಂದುತ್ವವಾದಿಗಳ ನಿರ್ಲಜ್ಜ ದಾಳಿಗಳು, ಪೊಲೀಸ್ ಇಲಾಖೆ, ಮಾಧ್ಯಮಗಳ ಕೋಮುವಾದೀಕರಣ, ಕಾಂಗ್ರೆಸ್ಸಿನ ವೈಫಲ್ಯ, ಎಡಶಕ್ತಿಗಳು ಕುಸಿತ ಮುಸ್ಲಿಂ ಕೋಮುವಾದದ ತೆಕ್ಕೆಗೆ ಅಲ್ಪಸಂಖ್ಯಾತ ಯುವಕರನ್ನು ಆಕರ್ಷಿಸುವಂತೆ ಮಾಡಿದವು. ಇವುಗಳಷ್ಟೇ ಮುಖ್ಯವಾದದ್ದು ಕರಾವಳಿಯ ಬಹಳ ದೊಡ್ಡ ಸಂಖ್ಯೆಯ ಬ್ಯಾರಿ ಯುವಕರು ಹದಿಹರೆಯ ವಯಸ್ಸಿನಲ್ಲೇ ಉದ್ಯೋಗವನ್ನರಸಿ ಕೊಲ್ಲಿ ರಾಷ್ಟ್ರಗಳಿಗೆ ತೆರಳಿರುವುದು. ಕರಾವಳಿಯ ಬೆಳವಣಿಗೆಗಳು ಈ ಯುವಕರಲ್ಲಿ ಸಹಜವಾಗಿಯೇ ಆಕ್ರೋಶವನ್ನು ಸೃಷ್ಟಿಸತೊಡಗಿದವು. ಇನ್ನೊಂದೆಡೆ ಕೊಲ್ಲಿ ರಾಷ್ಟ್ರಗಳಲ್ಲಿ ಆಳವಾಗಿ ಬೇರು ಬಿಟ್ಟಿರುವ, ವ್ಯವಸ್ಥೆಯನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡಿರುವ "ಪರಿಶುದ್ಧ ಇಸ್ಲಾಂ" ಘೋಷಣೆಯ ಕಟ್ಟರ್ ಮೂಲಭೂತವಾದಿ ವಹಾಬಿಸಂ ಕೂಡ ಗಲ್ಫ್‌ನಲ್ಲಿ ಉದ್ಯೋಗದಲ್ಲಿರುವ ಕರಾವಳಿಯ ಮುಸ್ಲಿಮರ ಮೇಲೆ ಒಂದಷ್ಟು ಪ್ರಭಾವವನ್ನು ಬೀರತೊಡಗಿದವು.

ಹೀಗೆ ಒಂದೆಡೆ ಕಳಂಕಗಳಿಲ್ಲದ "ಪರಿಶುದ್ಧ ಇಸ್ಲಾಂ" ಬ್ಯಾನರ್‌ನ ವಹಾಬಿಸಂ, ಇನ್ನೊಂದೆಡೆ ಆತ್ಮರಕ್ಷಣೆ, ಪ್ರತೀಕಾರ, ಸ್ವಾಭಿಮಾನದ ಹೆಸರಿನ ಮತೀಯ ತೀವ್ರವಾದ – ಇವೆರಡೂ ಕರಾವಳಿಯ ಬ್ಯಾರಿ ಸಮುದಾಯದ ಯುವಜನತೆಯ ಒಂದು ವಿಭಾಗವನ್ನು ಮುಸ್ಲಿಂ ಕೋಮುವಾದದ ಬಲೆಗೆ ಬೀಳುವಂತೆ ಮಾಡಿದೆ. ಇದರ ಪರಿಣಾಮ ಇಂದು ಕರಾವಳಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದ್ದು, ಮುಸ್ಲಿಂ ಕೋಮುವಾದ 'ಪ್ರತಿರೋಧದ' ದಾರಿಯನ್ನು ದಾಟಿ ರಾಜಕೀಯ ನೆಲೆಗಳನ್ನು ಹುಡುಕುತ್ತಿದೆ. ಥೇಟ್ ಸಂಘ ಪರಿವಾರದಂತೆಯೇ ವಿದ್ಯಾರ್ಥಿಗಳು, ಮಹಿಳೆಯರು, ಯುವಕರು, ಧಾರ್ಮಿಕ ನಾಯಕರು ಹೀಗೆ ಸಮುದಾಯದ ಎಲ್ಲಾ ವಿಭಾಗಗಳನ್ನು ವಿವಿಧ ಬ್ಯಾನರ್‌ಗಳಡಿ ಸಂಘಟಿಸುತ್ತಾ ಇಡೀ ಸಮುದಾಯವನ್ನು ನಿಯಂತ್ರಿಸಲು ಯತ್ನಿಸುತ್ತಿದೆ. ಇದರ ಅಪಾಯಗಳನ್ನು ಅರಿಯಲು ಕರಾವಳಿಯ ಜಾತ್ಯತೀತ ಶಕ್ತಿಗಳು, ಮುಸ್ಲಿಂ ಸಮುದಾಯದ ಮುಖ್ಯವಾಹಿನಿಯ ಸಂಘಟನೆಗಳು, ವಿಚಾರವಂತರು ವಿಫಲವಾಗಿರುವುದು ಕೋಮುವಾದದ ವಿರುದ್ಧ ಹೋರಾಟದ ಬಹುದೊಡ್ಡ ಕೊರತೆ.

ಕ್ಷಮಿಸಿಬಿಡು ವೇಮುಲ



ಸಹಿಸುವುದನ್ನು ಕಲಿಯುತ್ತ ಕಲಿಯುತ್ತ
ನಾನು ಅಸಹನೆಯನ್ನು ಅಡವಿಟ್ಟಿದ್ದೇನೆ
ರೋಷದಿಂದ ಬೀದಿಗಿಳಿಯಲಾರೆ
ಕಾರಣಗಳನ್ನು ಹುಡುಕುತ್ತಾ ಪರಿಣಾಮಗಳನ್ನು ಚಿಂತಿಸುತ್ತಾ
ಸಂವೇದನೆಯನ್ನು ಅಡವಿಟ್ಟಿದ್ದೇನೆ
ಕರಗಿ ಕಣ್ಣೀರಾಗಲಾರೆ
ಬದುಕನ್ನು ಗೆಲುವಾಗಿಸುತ್ತಾ
ಪ್ರಾಮಾಣಿಕತೆಯನ್ನು ಅಡವಿಟ್ಟಿದ್ದೇನೆ
ಆತ್ಮಸಾಕ್ಷಿಯನ್ನು ಮಾರಿಕೊಂಡಿದ್ದೇನೆ
ನಿನಗಿಂತ ಮೊದಲೇ ಸಮಾಧಿಯಾಗಿದ್ದೇನೆ
ನಿನ್ನಂತೆ ಹೊಳೆವ ನಕ್ಷತ್ರವಾಗಲಾರೆ
ಉರಿಯಾಗಿ ಸುಡಲಾರೆ
ಕ್ಷಮಿಸಿಬಿಡು ವೇಮುಲ !
ಚಿತೆಯ ಜ್ವಾಲೆಯ ಬಣ್ಣವ ವರ್ಣಿಸುತ್ತಾ
ಬೂದಿಯ ಮರೆಯಲ್ಲಿ ಕೆಂಡವ ಅರಸುತ್ತಾ
ಜನ ಮಾನವೀಯತೆಯನ್ನೇ ಅಡವಿಟ್ಟಿದ್ದಾರೆ...

– ಡಾ. ಕಾವ್ಯಶ್ರೀ ಎಚ್.



"ಸ್ವಾತಂತ್ರ್ಯದ ಓಟ"

ಇದು 2016ನೇ ಸಾಲಿನ ಕೇಂದ್ರ ಸಾಹಿತ್ಯ ಪ್ರಶಸ್ತಿ ಪಡೆದ ಬೊಳುವಾರು ಮಹಮ್ಮದ್‌ಕುಂಞಿ ಅವರ ಬೃಹತ್ ಕಾದಂಬರಿ; ಪ್ರೊ.ಎಸ್.ಜಿ.ಸಿದ್ಧರಾಮಯ್ಯನವರು ಈ ಕಾದಂಬರಿಯ ಮುನ್ನುಡಿಯಲ್ಲಿ ಹೇಳಿರುವಂತೆ ಭಾರತದ ಬದುಕಿನ ಮಹಾಯಾನವನ್ನು ತನ್ನ ಸಾವಿರದಷ್ಟು ಪುಟಗಳಲ್ಲಿ ನಿರೀಕ್ಷಿಸಿರುವ ಕಾದಂಬರಿ.

ಕನ್ನಡ ಗದ್ಯ ಸಾಹಿತ್ಯಕ್ಕೆ ಸುಮಾರು ನಾಲ್ಕು ದಶಕಗಳ ಹಿಂದೆ ಮುಸ್ಲಿಂ ಬದುಕನ್ನು ಮೊತ್ತ ಮೊದಲು ಪರಿಚಯಿಸಿ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ ಎಂಬ ಚರ್ಚೆಗೆ ನಾಂದಿ ಹಾಡಿದ ಬೊಳುವಾರು ಅವರು 'ಜನಶಕ್ತಿ'ಯ ಓದುಗರಿಗೆ ಸುಪರಿಚಿತರು. ಈ ವಿಶೇಷ ಸಂಚಿಕೆಯಲ್ಲಿ ಈ ಕೃತಿಯ ಒಂದು ಆಯ್ದ ಭಾಗ ನಮ್ಮ ಓದುಗರಿಗಾಗಿ. ಜತೆಗೆ ತಮ್ಮ ಈ ಮಹಾಕಾದಂಬರಿಗೆ ಸ್ವತಃ ಬೊಳುವಾರು ಅವರ ಮೊದಲ ಮಾತು ಮತ್ತು ಪ್ರೊ. ಎಸ್.ಜಿ.ಸಿದ್ಧರಾಮಯ್ಯನವರ ಮುನ್ನುಡಿಯ ಆಯ್ದ ಭಾಗಗಳೂ ಇಲ್ಲಿವೆ.

ಭಾರತದ ಬದುಕಿನ ಮಹಾಯಾನ

'ಬೊಳುವಾರು' ನಮ್ಮ ಕಾಲದ ಒಂದು ಮಹಾ ಕಥನ ಪ್ರತಿಭೆ. ಆದರೆ ಅವರ ಕಥನ ಕೇವಲ ಕಥೆ ಹೇಳುವುದಕ್ಕೆ ಮಾತ್ರ ಮೀಸಲಾದುದಲ್ಲ; ಧರ್ಮನಿಷ್ಠ ನೆಲೆಯಲ್ಲಿ ಮನುಷ್ಯ ಸಂಬಂಧಗಳನ್ನು ಹುಡುಕುವ, ಬಹುತ್ವದ ಭಾರತೀಯ ಸಮಾಜದ ಹೊಸ ಕನಸುಗಳನ್ನು, ಆಶಯಗಳನ್ನು ಮನಗಾಣಿಸುವ ನಿತ್ಯ ಶೋಧನೆ. 'ಒಂದು ತುಂಡು ಗೋಡೆ'ಯಂತಹ ಕಥನದ ಮೂಲಕ ನಮ್ಮ ಸಮಕಾಲೀನ ಸಂದರ್ಭದ ಧಾರ್ಮಿಕ, ರಾಜಕೀಯ ಸಂಘರ್ಷಗಳಿಗೆ ಕನ್ನಡಿ ಹಿಡಿದ ಈ ಕಥೆಗಾರ, ಇದೀಗ 'ಸ್ವಾತಂತ್ರ್ಯದ ಓಟ' ಕುರಿತು ಭಾರತದ ಬದುಕಿನ ಮಹಾಯಾನವನ್ನು, ತಮ್ಮ ಮಹತ್ವಾಕಾಂಕ್ಷೆಯ ಕಾದಂಬರಿ 'ಸ್ವಾತಂತ್ರ್ಯದ ಓಟ'ದ ಸಾವಿರದ ಪುಟಗಳಲ್ಲಿ ನಿರೀಕ್ಷಿಸಿದ್ದಾರೆ.

ಸಿಖ್ ಹೆಣ್ಣುಮಕ್ಕಳಿಬ್ಬರಿಗೆ ಸಹಾಯ ಮಾಡಲೆಂದು ಪಾಕಿಸ್ತಾನದ ಗಡಿ ದಾಟಿ–ಭಾರತಕ್ಕೆ ಬಂದ ಮುಸ್ಲಿಮ್ ಹುಡುಗನೊಬ್ಬ, ತನ್ನ 'ಮಾತೃಭೂಮಿ'ಗೆ ಹಿಂತಿರುಗಿ ಹೋಗಲಾರದ ಇಕ್ಕಟ್ಟಿಗೆ ಸಿಕ್ಕಿಕೊಂಡು ಭಾರತದಲ್ಲೇ ಉಳಿದು, ಐವತ್ತು ವರ್ಷಗಳ ಕಾಲದಲ್ಲಿ ಅನುಭವಿಸುವ ಸಂತೋಷ, ಸಂಕಟಗಳ ಸಂಕಥನ ಈ ಕಾದಂಬರಿ. ಇಡೀ ಕಾದಂಬರಿಯ ಬೆಳವಣಿಗೆಯಲ್ಲಿ ಚಾಂದ್ ಅಲೀಯ ಪಾತ್ರ ಮಹತ್ವದ್ದಾಗಿದ್ದು ಘಟಿಸುತ್ತಿರುವ ಎಲ್ಲಾ ಘಟನೆಗಳಿಗೂ ಸಾಕ್ಷಿಪ್ರಜ್ಞೆಯಂತಿದ್ದಾನೆ. 'ಸ್ವಾತಂತ್ರ್ಯದ ಓಟ' ಚಾಂದ್ ಅಲೀ ಒಬ್ಬನ ಓಟವಲ್ಲ. ಅವನ ಭಯ ನರಳುವಿಕೆ ಆತಂಕ ಈ ಓಟದ ಆಂತರ್ಯದಲ್ಲಿನ ದ್ರವ್ಯವಾಗಿದೆ. ಅವನ ಮಾತೃಭೂಮಿಯ ನಿಗೂಢತೆ, ಹುಟ್ಟಿನ ಮೂಲಕ ಬಗ್ಗೆ ಬಾಯಿಬಿಡಲಾಗದ ಮೌನ, ಅವನಲ್ಲಿ ಬದುಕಿನುದ್ದಕ್ಕೂ ಭೂತವಾಗಿ ಬೆಳೆದ ಅಭದ್ರತೆಯ ಪರಿಣಾಮವಾಗಿದೆ. ಇಲ್ಲಿದ್ದೂ ಇಲ್ಲಿಯವನಾಗದ, ಅಲ್ಲಿಗೆ ಹೋಗಲಾಗದ ಅತಂತ್ರ ಸ್ಥಿತಿಯನ್ನು ಸಾರುತ್ತಿದೆ. ಅವನ ಭಯವೆಂಬುದು ಪೀಳಿಗೆಯ ಭಯವಾಗಿ ಅವನ ಮಕ್ಕಳಲ್ಲಿ ವಿಸ್ತರಿಸಿಕೊಂಡಿದೆ, ಅವರಿಸಿಕೊಂಡಿದೆ. ಇಂತಹ ಸನ್ನಿವೇಶಗಳನ್ನು ಬರೆಯುವಾಗ ಬೊಳುವಾರರ ನಿರೀಕ್ಷಣೆಯ, ಮಾನವೀಯ ಆರ್ದ್ರತೆಯ ಶೋಧದ ಪಾತಳಿಯನ್ನು ಮುಟ್ಟುತ್ತದೆ.

.. ..

'ಸ್ವಾತಂತ್ರ್ಯದ ಓಟ' ಕೇವಲ ಕತೆ ಹೇಳುವ ಆಸೆಯಿಂದ ಬರೆದ ಮತ್ತೊಂದು ಕಾದಂಬರಿಯಾಗಿ ಕಾಣಿಸುವುದಿಲ್ಲ ಅಥವಾ ಚರಿತ್ರೆಯಲ್ಲಿ ಸಂಭವಿಸಿವೆ ಎಂದು ಹೇಳಲಾದ ಘಟನೆಗಳಲ್ಲಿ ತಮ್ಮ ವಾದಕ್ಕನುಕೂಲವಾಗುವುದನ್ನು ಮಾತ್ರ ಹೆಕ್ಕಿ ಹಿಕ್ಕೆ ಹಾಕುವ ಪ್ರಯತ್ನವೂ ಆಗಿ ಗೋಚರಿಸುವುದಿಲ್ಲ. ಇದರಲ್ಲಿ ಚಿತ್ರಿತವಾಗಿರುವ ಯಾವ ಪಾತ್ರಗಳೂ ಓದುಗನನ್ನು ರೊಚ್ಚಿಗೇಳಿಸುವುದಿಲ್ಲ. ಬದಲಿಗೆ, ಬೊಳುವಾರರ ಕಲ್ಯಾಣಗ್ರಾಮ 'ಮುತ್ತುಪ್ಪಾಡಿ'ಯ ಮನುಷ್ಯರ ಪರಮ ಔದಾರ್ಯದ ವರ್ತನೆಗಳು ಓದುಗನನ್ನು ಬೆಚ್ಚಿ ಬೀಳಿಸುತ್ತದೆ; ಬೆಚ್ಚಗೆ ಕಾಡುತ್ತದೆ. 'ಮುತ್ತುಪ್ಪಾಡಿ' ಬೇರೆ ಊರುಗಳಿಗಿಂತ ಭಿನ್ನವೂ ಮಾದರಿಯದೂ ಆದ ಭಾವದ ಬಗೆಯಲ್ಲಿ ಬದುಕು ನಡೆಸಿದೆ. ಇಲ್ಲೂ ಹೆಣ್ಣಿನ ಅಪಹರಣ ನಡೆದಿದೆ. ಯುವಕರ ಬಿಸಿರಕ್ತ ತಾಳ್ಮೆ ತಪ್ಪಿ ವರ್ತಿಸಿದ ಘಟನೆಗಳೂ ನಡೆದಿವೆ. ಆದರೆ ಆಗ ಊರನ್ನೂ ಮುನ್ನಡೆಸುವ ಮುತ್ಸದ್ದಿಗಳ ದಂಡೇ ಮುಂದಾಳತ್ವ ವಹಿಸಿ ಮುತ್ತುಪಾಡಿಯ ಬದುಕಿನಲ್ಲಿ ಮಾನವೀಯ ಮೌಲ್ಯಗಳನ್ನು ಸಂರಕ್ಷಿಸುತ್ತಾರೆ. ಸ್ವಾತಂತ್ರ್ಯಾನಂತರದ ಭಾರತದ ಬದುಕಿನಲ್ಲಿ ಈಗಲು ಹಿಂದೂಮುಸ್ಲಿಂ ಎಂಬ ದ್ವೈತ ನಿಲುವಿನಲ್ಲಿ ರಾಜಕಾರಣ ಮಾಡುವ ರಾಜಕೀಯ ಮುತ್ಸದ್ದಿಗಳು ಮನೋನಿರೀಕ್ಷೆಗೆ ಒಡ್ಡಿಕೊಳ್ಳಬೇಕಾದ ಒಳನೋಟಗಳನ್ನು ನೀಡುವ ಬರವಣಿಗೆಯಿದು.

ವಾಘಾ ಗಡಿಯಲ್ಲಿ ಆರಂಭವಾಗಿ ಕರಾಚಿ, ಲಾಹೋರು, ಡೆಲ್ಲಿ, ಮುತ್ತುಪ್ಪಾಡಿ, ಕ್ಯಾಲಿಪೋರ್ನಿಯಾ, ಬರ್ಲಿನ್‌ಗಳಲ್ಲಿ ಬೆಳೆದು ಮತ್ತೆ ವಾಘಾದಲ್ಲೇ ಕೊನೆಯಾಗುವ ಮಹಾಯಾನ ಇದು. ನೆಪ ಮಾತ್ರಕ್ಕೆ ವ್ಯಕ್ತಿಯೊಬ್ಬ ಕೇಂದ್ರವಾದರೂ, ಅದು ಸ್ಥಾವರಗೊಂಡ ಕೇಂದ್ರವಲ್ಲ. ಸ್ಥಳೀಯತೆಯಲ್ಲಿ ಬೇರುಬಿಟ್ಟು ದೇಶವ್ಯಾಪ್ತಿಯಲ್ಲಿ ಬದುಕಿನ ಗತಿಗಂತವ್ಯಗಳನ್ನು ಹಬ್ಬಿಸಿಕೊಂಡು ಬೆಳೆದ ಸ್ವಾತಂತ್ರ್ಯದ ಓಟದ ಕಥನವಿದು. ವ್ಯಕ್ತಿಯ ಸಾಕ್ಷಿಪ್ರಜ್ಞೆಯು ಸನ್ನಿವೇಶಗಳನ್ನು ಸಮಾಜವನ್ನು ನಿರೀಕ್ಷಿಸುತ್ತಲೇ ವಿಶ್ವ ಸಮುದಾಯಗಳ ಬದುಕು ಮಿಳಿತಗೊಂಡು ವಸ್ತುವಿನ್ಯಾಸದಲ್ಲಿ ಪ್ರೀತಿ, ಪ್ರೇಮಗಳ ಅನಾವರಣದಲ್ಲಿ ಧಾರ್ಮಿಕ ವಸ್ತುದ್ರವ್ಯವನ್ನು ನಿರೀಕ್ಷಿಸುವ 'ಸ್ವಾತಂತ್ರ್ಯದ ಓಟ' ನಮ್ಮ ಕಾಲದ ಬಹು ಮಹತ್ವದ ಕಾದಂಬರಿ.

ಎಸ್.ಜಿ. ಸಿದ್ಧರಾಮಯ್ಯ
ಬೆಂಗಳೂರು, ಫೆಬ್ರವರಿ 2012

ಕೊನೆಯ ಸುತ್ತು



ಸುಮಾರು ನಾಲ್ಕು ದಶಕಗಳ ಕೆಳಗೆ, ಬರೆಯಲು ಆರಂಭಿಸಿದಾಗ ನನ್ನೆದುರು ಹಲವು 'ಲೋಕ'ಗಳಿದ್ದವು; ಅದ್ದರಿಂದಲೇ, ನನ್ನ ಕಥಾ ಪಾತ್ರಗಳ ಬದುಕಿಗಾಗಿ 'ಮುತ್ತುಪ್ಪಾಡಿ' ಎಂಬ ನನ್ನದೇ ಆದ 'ಲೋಕ'ವೊಂದನ್ನು ಕಟ್ಟಿಕೊಂಡಿದ್ದೆ. ಮುತ್ತುಪ್ಪಾಡಿಯ ತುಂಬ ಮನುಷ್ಯರನ್ನು, ಅವರಿಗೆ ನಂಬಲೆಂದು ದೇವರುಗಳನ್ನು, ಪೂಜಿಸಲು ಮಂದಿರಗಳನ್ನು, ಪ್ರಾರ್ಥಿಸಲು ಮಸೀದಿಗಳನ್ನು, ಆರಾಧಿಸಲು ಚರ್ಚುಗಳನ್ನು, ಓದಲು ಶಾಲೆಗಳನ್ನು, ಆಡಲು ಬಯಲುಗಳನ್ನು, ಕವಾಯಿತಿಗೆ ಮೈದಾನಗಳನ್ನು ಆಳಲು ಪೋಲೀಸರನ್ನು, ವಂದಿಸಲು ಧ್ವಜಗಳನ್ನು, ಈಜಲು ಹೊಳೆಗಳನ್ನು, ಹಾರಲು ಕೆರೆಗಳನ್ನು, ಮಲಗಲು ಆಸ್ಪತ್ರೆಗಳನ್ನು, ಸುಡಲು ಸ್ಮಶಾನಗಳನ್ನು, ಹೂಳಲು ಕಬರಸ್ತಾನಗಳನ್ನು ಹೀಗೆ, ನಾಗರಿಕ ಜೀವನಕ್ಕೆ ಏನೇನು ಬೇಕೋ ಅವೆಲ್ಲವನ್ನೂ ಒದಗಿಸಿದ್ದೆ. ಆನಂತರ; ಮುತ್ತುಪಾಡಿಯ ಮನುಷ್ಯರಿಗೆ ಅವರಿಗಿಷ್ಟಬಂದಂತೆ ಬದುಕುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವರದೇ ಬದುಕಿನ ಕತೆಗಳನ್ನು ಒಂದೊಂದಾಗಿ ಬರೆದಿದ್ದೆ; ಇನ್ನು ಸಾಕು. ಅಂಕೆ ಸಂಖ್ಯೆಗಳ ಅಧಾರದಲ್ಲಿ ಇದು ನನ್ನ ಎರಡನೆಯ ಕಾದಂಬರಿ; ಇದುವರೆಗೆ ನಾನು ಬರೆದ ಮತ್ತು ಬರೆಯದೆ ಉಳಿದಿದ್ದ ಮುತ್ತುಪ್ಪಾಡಿಯ ಮನುಷ್ಯರ 'ಸ್ವಾತಂತ್ರ್ಯದ ಓಟಗಳ' ಕೊನೆಯ ಸುತ್ತು.

ಬೊಳುವಾರು, ಜನವರಿ 30, 2012

ಸ್ವಾತಂತ್ರ್ಯದ ಓಟ

(ಆಯ್ದ ಭಾಗಗಳು)

ಬೊಳುವಾರು ಮಹಮದ್ ಕುಂಞಿ

ಕೃಪೆ: ಜುಬೇದಾ, ಮುತ್ತುಪ್ಪಾಡಿ ಪುಸ್ತಕ

ಎರಡನೇ ಸುತ್ತು ಓಟ ಎರಡು

ಐದು

–1–

"ಮನುಷ್ಯರೆಲ್ಲ ಒಳ್ಳೆಯವರಾಗಿರುತ್ತಿದ್ದರೆ ಹೀಗಾಗುತ್ತಿರಲಿಲ್ಲ." ಕಾಸಿಮ್ ಜೋರಾಗಿ ನಕ್ಕಿದ್ದ; ನಗುತ್ತಲೇ ಇದ್ದ.

ಪುತ್ತೂರಿನ ಸರಕಾರೀ ಆಸ್ಪತ್ರೆಯ ಸ್ಪೆಶಲ್ ರೂಮಿನಲ್ಲಿ ಕಾಸಿಮನನ್ನು ನೋಡಲು ಅಬ್ಬನ ಜೊತೆಗೆ ರೋಷನ್ ಅಲೀ ಕೂಡಾ ಹೋಗಿದ್ದ. ಉಪ್ಪಿನಂಗಡಿಯ ಪೊಲೀಸ್ ಇನ್ಸ್‌ಪೆಕ್ಟರ್ ಮಂಚದಲ್ಲಿ ಮಲಗಿದ್ದ ಕಾಸಿಮನ ಸ್ಟೇಟ್‌ಮೆಂಟ್ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಕಾಸಿಮ್ ಯಾವುದಕ್ಕೂ ಉತ್ತರಿಸುತ್ತಿರಲಿಲ್ಲ; ಸುಮ್ಮನೆ ನಗುತ್ತಿದ್ದ. ಬಹಳ ಒತ್ತಾಯಿಸಿದ ಬಳಿಕ ಹೇಳಿದ್ದ, "ನೋ... ನೋ..., ಐ ಡಿಸರ್ವ್ ಇಟ್ ಇನ್ಸ್‌ಪೆಕ್ಟರ್. ಪೆಟ್ಟು ಕೊಟ್ಟವರಿಗೆ ನಾನು ನಿಜವಾಗಿ ಕೃತಜ್ಞನಾಗಿರಬೇಕು. ಸರಿಯಾದ ಜಾಗಕ್ಕೆ ಹೊಡೆದಿದ್ದಾರೆ. ಅವರಿಗೆ ಗೊತ್ತಿದ್ದಿರಬೇಕು, ನನ್ನ ಸಣ್ಣ ಮೆದುಳು ಇರಬೇಕಾದ ಜಾಗದಲ್ಲಿ ದೊಡ್ಡ ಮೆದುಳು, ದೊಡ್ಡ ಮೆದುಳಿನ ಜಾಗದಲ್ಲಿ ಸಣ್ಣ ಮೆದುಳು ಇತ್ತೆಂದು. ಅದನ್ನವರು ರಿಪೇರಿ ಮಾಡಿದ್ದಾರೆ,ಅಷ್ಟೆ. ನನಗೀಗ ಯೋಚನೆಗಳ ಗೊಂದಲಗಳಿಲ್ಲ. ಸಮಸ್ಯೆಗಳು ಚಿತ್ರಹಿಂಸೆ ಮಾಡುವುದಿಲ್ಲ. ನಾನೇನು ಮಾಡಬೇಕೆಂಬುದರ ಬಗ್ಗೆ ಇನ್ನೊಬ್ಬರಲ್ಲಿ ಸಲಹೆ ಕೇಳಬೇಕಾಗಿಲ್ಲ. ಐ ಬಿಕೇಮ್ ಫ್ರೀ ಫ್ರಮ್ ಆಲ್ ಪ್ರಾಬ್ಲಮ್. ನನಗೆ ಯಾರ ವಿರುದ್ಧವೂ ದೂರು ಕೊಡಲು ಇಷ್ಟವಿಲ್ಲ."

ತಲೆ ಕಾಲು ಎಲ್ಲವನ್ನು ಬಿಳಿ ಬ್ಯಾಂಡೇಜು ಬಟ್ಟೆಯಲ್ಲಿ ಮುಚ್ಚಿಕೊಂಡಿದ್ದ ಕಾಸಿಮನನ್ನು ಇನ್ಸ್‌ಪೆಕ್ಟರ್ ಬಹಳ ಒತ್ತಾಯಿಸಿದ್ದರು, "ಹೇಳಿ ಮಾಸ್ತ್ರೇ, ಯಾರನ್ನು ಐಡೆಂಟಿಫೈ ಮಾಡ್ತಿರಿ ಹೇಳಿ. ಬೂಟುಗಾಲಲ್ಲಿ ಒದ್ದು ಆ ಬೋಸುಡಿಕೆ ನನ್ಮಕ್ಳ ಚರ್ಮ ಸುಲಿಯದಿದ್ರೆ ನಾನು ನಿಮ್ಮ ಫ್ರೆಂಡೇ ಅಲ್ಲಾಂತ ತಿಳ್ಕೊಳ್ಳಿ. ನಿಮ್ಗೆ ಅವ್ರಲ್ಲಿ ಒಬ್ನದ್ದಾದ್ರೂ ಪರಿಚಯ ಇರ್ಬಹುದು."

"ಪರಿಚಯ ಉಂಟು ಅಂತ ನಂಬಿಕೊಂಡದ್ದೇ ತಪ್ಪಾಗಿದೆ ಇನ್ಸ್‌ಪೆಕ್ಟ್ರೇ. ನಾವು ಪರಸ್ಪರ ಪರಿಚಯ ಮಾಡಿಕೊಂಡಿದ್ದದ್ದು ನಮ್ಮ ದೇಹದ ಹೊರಗಿನ ಆಕಾರಗಳನ್ನು ಮಾತ್ರ, ಒಳಗಿನ ಮನಸ್ಸುಗಳನ್ನು ಪರಿಚಯ ಮಾಡಿಕೊಳ್ಳಲೇ ಇಲ್ಲ. ದೂರು ಕೊಡುವುದಾದರೆ ಆ ಮನಸ್ಸುಗಳ ವಿರುದ್ಧ ಕೊಡಬೇಕು. ಆದರೆ ಅವುಗಳಿಗೆ ಹೆಸರುಗಳೇ ಇಲ್ಲವಲ್ಲಾ? ಹ್ಹ.. ಹ್ಹಾ.."

ಕಾಸಿಮ್ ಯಾರ ಹೆಸರನ್ನೂ ಹೇಳಲಿಲ್ಲ; ಯಾರ ವಿರುದ್ಧವೂ ದೂರು ಕೊಡಲಿಲ್ಲ.


"ರಾತ್ರಿ ಮತ್ತೊಮ್ಮೆ ಬರ್ತೇನೆ. ಸರಿಯಾಗಿ ಯೋಚ್ನೆ ಮಾಡಿ. ನೀವು ಯಾರ ಮೇಲೂ ದೂರು ಕೊಡ್ದೆ ಇದ್ರೆ ನಾವು ಹೆಲ್ಪಲೆಸ್; ಏನೂ ಮಾಡ್ಲಿಕ್ಕೆ ಆಗುವುದಿಲ್ಲ." ಎಂದು ಹೇಳಿದ ಇನ್ಸ್‌ಪೆಕ್ಟರ್ ಹೊರಟು ಹೋಗಿದ್ದರು. ಅಷ್ಟು ಹೊತ್ತು ಬಾಗಿಲ ಹೊರಗೆಯೇ ಇದ್ದಳೆಂದು ಕಾಣುತ್ತದೆ; ಕಾಸಿಮನ ಉಮ್ಮ ಸಕೀನಾ ಒಳಗೆ ಬಂದವಳು ಚಾಂದಚ್ಚನವರನ್ನು ಕಂಡು ಬೆನ್ನ ಮೇಲಿದ್ದ ಸೆರಗನ್ನು ತಲೆಯ ಮೇಲೆ ಎಳೆದುಕೊಂಡಳು. ರೋಷನ್ ಅಲೀಗೆ ಸಕೀನಾದಾದಅಪರಿಚಿತರೇನೂ ಅಲ್ಲ. ತನ್ನ ಓದಿನ ಆದರ್ಶವಾಗಿರುವ ಕಾಸಿಮನ ಉಮ್ಮ ಎಂಬ ಗೌರವ ಬೇರೆ. ಅವರತ್ತ ನೋಡಿ ಪರಿಚಯದ ನಗು ಸೂಸಿದ. ಸಕೀನಾದಾದ "ಯಾವಾಗ ಬಂದಿ" ಎಂದು ಪ್ರಶ್ನಿಸಿದ್ದಳಾದರೂ, ರೋಷನ್ ಅಲೀಯ ಉತ್ತರದಲ್ಲಿ ಆಸಕ್ತಿಯಿಲ್ಲದವಳಂತೆ ಮಂಚದ

ಕಾಲ ಬಳಿಯ ಬುಟ್ಟಿಯಲ್ಲಿ ಇಟ್ಟಿದ್ದ ಬಟ್ಟೆಗಳನ್ನು ಎತ್ತಿಕೊಂಡು ಬಾತ್‌ರೂಮಿನತ್ತ ಹೋದಳು.

"ನೋವಾಗುತ್ತಿದೆಯಾ?" ರೋಷನ್ ಅಲೀ ಪ್ರಶ್ನಿಸಿದ್ದ. ಕಾಸಿಮ್ ಒಂದು ಕ್ಷಣ ರೋಷನ್ ಅಲೀಯನ್ನು ಹಾಗೆಯೇ ಎವೆಯಿಕ್ಕದೆ ದಿಟ್ಟಿಸಿದ; ಬಳಿಕ ಹೇಳಿದ, "ಇಲ್ಲ ಅಂತ ಹೇಳಿದರೂ ನಿನಗೆ ಸಮಾಧಾನವಾಗುವುದಿಲ್ಲ. ಯಾಕೆ ಗೊತ್ತಾ? ನಾನು ಸುಳ್ಳು ಹೇಳುತ್ತಿದ್ದೇನೆ ಅಂತ ನಿನಗೆ ಗೊತ್ತಾಗಿಬಿಟ್ಟಿರುತ್ತದೆ. ಉಂಟು ಅಂತ ಹೇಳಿದರೂ ನಿನಗೆ ಹೆಚ್ಚು ದುಃಖವಾಗುವುದಿಲ್ಲ, ಯಾಕೆ-ಂದ್ರೆ ಈ ಬ್ಯಾಂಡೇಜು ಅದನ್ನೆಲ್ಲ ನಿನ್ಗೆ ಹೇಳಿಬಿಟ್ಟಿದೆ ಅಲ್ವಾ?"ಕಾಸಿಮ್ ಮಾತನಾಡುವ ಕ್ರಮವೇ ಹಾಗೆ.

"ಇದು ಅದದ್ದಾದ್ರೂ ಹೇಗೇ ಕಾಸಿಮ್? ಹೀಗೆ ಹೊಡ್ದವ್ರು ಯಾರೂ? ಆ ಗುಂಪಿನಲ್ಲಿ ಮುತ್ತುಪ್ಪಾಡಿಯವ್ರು ಯಾರಾದ್ರೂ ಇದ್ರಾ?" ಚಾಂದಚ್ಚ ಕುತೂಹಲದಿಂದ ಪ್ರಶ್ನಿಸಿದ್ದರು.

ಕಾಸಿಮ್ ಸಣ್ಣಗೆ ನಕ್ಕು ಉತ್ತರಿಸಿದ್ದ, "ತಮಾಷೆಯೆಂದ್ರೆ ಇದುವರೆಗೆ ಯಾರೂ ಕೂಡಾ ನನ್ನ ಹತ್ರ ಬಂದು ಯಾಕೆ ಹೊಡೆದ್ರು ಅಂತ ಕೇಳಿಲ್ಲ. ಯಾರು ಹೊಡ್ದವರು ಅಂತ ಮಾತ್ರ ಕೇಳ್ತಿದ್ದಾರೆ. ಅದ್ಯಾಕೆ ಹಾಗೇ?! ಅಂದ್ರೇ.... ನಿಮ್ಗೆಲ್ಲ ಗೊತ್ತುಂಟು; ಈ ರೀತಿಯಲ್ಲಿ ಕೈಕಾಲು ಮುರಿಸಿಕೊಂಡು ಹೀಗೆ ಮಲಗುವ ಎಲ್ಲ ಅರ್ಹತೆಗಳನ್ನೂ ಹೊಂದಿರುವ ಮನುಷ್ಯ ನಾನು ಅಂತ ಅಲ್ವಾ? ನೀವು ಅಲ್ಲ ಅಂತ ಹೇಳಿದ್ರೂ ನಾನು ನಂಬುವುದಿಲ್ಲ. ಇನ್ನು ನನ್ಗೆ ಹೀಗೆ ಹೊಡ್ದವರು ಯಾರು ಎಂಬ ಪ್ರಶ್ನೆ. ಹೊಡ್ದವರಲ್ಲಿ ಮುತ್ತುಪ್ಪಾಡಿಯ ಯಾರೂ ಇರ್ಲಿಲ್ಲ ಅಂತ ಹೇಳಿದ್ರೆ ನಿಮ್ಗೆ ಖುಶಿಯಾಗ್ತದೆ ಅಂತ ನನ್ಗೆ ಗೊತ್ತುಂಟು ಕಾಕಾ. ಆದ್ರೆ ಅದು ಸತ್ಯ."



"ಅವ್ರು ಯಾರು ಅಂತ ನಿನ್ಗೆ ನಿಜವಾಗಿಯೂ ಗೊತ್ತಿಲ್ವಾ?"

"ನಾನು ಹೇಳಿದೆನಲ್ಲ, ಗುರ್ತ ಇದ್ದದ್ದು ಅವರ ದೇಹದ ಆಕಾರದ್ದು ಮಾತ್ರ ಅಂತ." ಕಾಸಿಮ್ ವಿಷಾದದ ನಗು ನಕ್ಕಿದ್ದ.

"ದೋಸೆ ಭಟ್ರ ಜನವಾ?" ರೋಷನ್ ಅಲೀ ಪ್ರಶ್ನಿಸಿದ್ದ.

"ಹಾಗಂತ ಮೊದ್ಲು ನಾನೂ ಅಂದ್ಕೊಂಡಿದ್ದೆ. ಅದ್ರೆ ಅವ್ರ ಜನ ಅಲ್ಲ. ಅವ್ರು ಕಳಿಸಿದ್ದ ಜನ ಆಗಿರ್ತಿದ್ರೆ "ಆ ಕೊಂಕ್ಲಿ ಹುಡ್ಗಿಗೆ ಬೇಕಾಗಿ ನಮ್ಮ ಜಾತಿ ಬಿಟ್ಟು ಹೋದ್ರೆ ಕೊಂದೇ ಬಿಡ್ತೇವೆ, ಅಂತ ಆವಾಜ್ ಹಾಕ್ತಿರ್ಲಿಲ್ಲ."

"ಹಾಗಾದರೆ ನಿನ್ಗೆ ಹೊಡ್ದವರು ನಮ್ಮವರಾ!?" ರೋಷನ್ ಅಲೀಯ ಬಾಯಿಯಿಂದ ಅವನಿಗರಿವಿಲ್ಲದೆ ಪ್ರಶ್ನೆ ಹೊರಟಿತ್ತು.

"ನನ್ಗೆ ಹೊಡೆದವರನ್ನು ನಮ್ಮವರು ಅಂತ ಹೇಳಲು ನಾನೇನು ಯೇಸು ಸ್ವಾಮಿಯಾ!?" ಕಾಸಿಮ್ ಗಹಗಹಿಸಿ ನಕ್ಕಿದ್ದ.

ಚಾಂದಚ್ಚನವರಿಗೆ ಸಿಡಿಲು ಬಂಡಿದಂತಾಗಿತ್ತು. ದೋಸೆ ಭಟ್ರ ಕಡೆಯವರ ಕಿತಾಪತಿ ಆಗಿದ್ದರೂ ಆಗಿರಬಹುದು ಎಂದೇ ಭಾವಿಸಿದ್ದಅವರಿಗೆ ಕಾಸಿಮನ ಒಗಟಿನಂತಹ ಮಾತುಗಳಿಂದ ತಲೆ ಚಿಟ್ಟು ಹಿಡಿದು ಹೋಗಿತ್ತು. ಹೊಡೆದವರು ಯಾರಿದ್ದಿರಬಹುದು? ಹೆಚ್ಚು ಮಾತನಾಡಲು ಹೋಗದೆ ಮರಳಿದ್ದರು.

ಕಾಸಿಮ್ ಆಸ್ಪತ್ರೆಯಲ್ಲಿರುವಾಗ ಅವನನ್ನು ನೋಡಲು ಶಾಲಿನಿ ಹೋದಾಳೆಂಬ ಭಯದಿಂದ ದೋಸೆಭಟ್ರು ಅವಳಿಗೆ ಗೃಹಬಂಧನ ವಿಧಿಸಿದ್ದರು. ಎರಡು ದಿನ ಪೂರ್ತಿ ನೀರು ಕೂಡಾ ಮುಟ್ಟದೆ ಹಟ ಹಿಡಿದು ಕುಳಿತಿದ್ದ ಶಾಲಿನಿ ಮೂರನೇ ದಿನ ಸೀರೆಯಿಂದಲೇನೋ ಹಾಕಿಕೊಳ್ಳಲು ಪ್ರಯತ್ನಿಸಿದ್ದಾಳಂತೆ ಎಂಬ ಸುದ್ದಿ ಊರೆಲ್ಲಾ 'ಟಾಂ ಟಾಂ' ಆದಾಗ ಮುತ್ತುಪ್ಪಾಡಿ ಹೊಸ ಸಮರವೊಂದರ ಕಾವು ಹಬ್ಬಿಸಿಕೊಳ್ಳತೊಡಗಿತ್ತು.

ಕಾಸಿಮನನ್ನು ಅದುವರೆಗೆ ತಮ್ಮ ಲೆಕ್ಕದಿಂದ ಹೊರಗುಳಿಸಿದ್ದ ಜಮಾತಿನವರು ಈಗ ಒಮ್ಮಿಂದೊಮ್ಮೆಗೇ ಆತನ ಪರವಾಗಿ ಶಬ್ದ ಹುಟ್ಟಿಸಲಾರಂಭಿಸಿದ್ದರು. ಕಾಸಿಮನ ಜಾತಿ ಕೆಡಿಸಲು ದೋಸೆ ಭಟ್ರ ಕಡೆಯವರು ಸಂಚು ನಡೆಸಿದ್ದಾರೆಂಬ ವದಂತಿ ಊರೊಳಗೆ ಹಬೆಯಾಡತೊಡಗಿತ್ತು. ಕಾಸಿಮ್ ಅಪರೂಪಕ್ಕೆ ಕಾಲಿಡುತ್ತಿದ್ದ ಮಸೀದಿ ಇದೀಗ ಅವನ ಪರವಾದ ಸಹಾನುಭೂತಿ ಮಾತುಗಳ ವೇದಿಕೆಯಾಗಿಬಿಟ್ಟಿತ್ತು.

ಚಾಂದಚ್ಚ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಮೊದಲು ಪುಟ್ಟ ಪಂಡಿತರ ಹತ್ರ ಮಾತಾಡಿದರು. ಪಂಡಿತರು, ಅನಂತಣ್ಣನಿಗೆ ಹೇಳಿ ಕಳಿಸಿದರು. ಚಾಂದಚ್ಚನವರಮನೆಗೆ ಮರುದಿನ ಬೆಳಗ್ಗೆಯೇ ಬಂದ ಹಾಂರ್ಝಾಕಾ, ತನ್ನ ಮಗ ಒಸಾಮಾನನ್ನು ಭಗವತೀ ಕಲ್ಯಾಣ ಮಂಟಪದ ಹುಡುಗರ ಜೊತೆಗೆ ಮಾತನಾಡಲು ಕಳಿಸಿದ್ದೇನೆ ಎಂದು ತಿಳಿಸಿದರು. ಅದೇ ದಿನ ಸಂಜೆಗೆ ಅನಂತಣ್ಣನವರು ತಮ್ಮ ಜೊತೆಗೆ ಪುಟ್ಟ ಪಂಡಿತರು ಮತ್ತು ರಿಟೈರ್ಡ್ ಹೆಡ್‌ಮಾಸ್ಟರ್ ನಾರಾಯಣ ಭಟ್ಟರನ್ನು ಕರೆದುಕೊಂಡು ಹೋಗಿ ಭಗವತೀ ಕಲ್ಯಾಣ ಮಂಟಪದಲ್ಲಿ ಸಣ್ಣದೊಂದು ಸಭೆ ನಡೆಸಿದರು.

ಮಿಠಾಯಿ ಅವುಲಿಯಾರ ಸಲಹೆಯಂತೆ ಚಾಂದಚ್ಚ ಅದೇ ರಾತ್ರಿ ರೈಸ್ ಮಿಲ್ ಕಾಮತರ ಮನೆಗೆ ಒಬ್ಬರೇ ಹೋಗಿ ಬಂದರು. ಮರುದಿನ ಬೆಳಗ್ಗೆ ಜನ್ನತ್ ಹಾಜಾರ್ರು ಮಸೀದಿಯ ಇಮಾಂ ಇಕ್ಬಾಲ್ ಮೌಲವಿಯವರನ್ನು ಕರೆದುಕೊಂಡು ಕಲ್ಲು ಮಂಟಪಕ್ಕೆ ಬಂದರು. ಕಲ್ಲು ಮಂಟಪದಲ್ಲಿ ಅದಾಗಲೆ ಚಾಂದಚ್ಚ, ಹಂರ್ಝಾಕಾ, ಉಸ್ಮಾನ್ ಸಾಹುಕಾರ್ರು, ಕರೀಂ ಖಾನ್, ಡೆಮ್ಮೆ ಸುಲೇಮಾನ್, ಅದ್ರಾಮ, ಇಬ್ರಾಯಿ ಎಲ್ಲ ಇದ್ರು. ಮಿಠಾಯಿ ಅವುಲಿಯಾ ಹೇಳಿದ್ದು ಒಂದೇ ಮಾತು, "ಮುಂದಿನ ನಲುವತ್ತು ದಿನಗಳ ಕಾಲ ಬಾಂಗ್ ಕೊಡುವಾಗ ಮೈಕ್ ಬಳಸುವುದು ಬೇಡ" ಎಂದು. ಅನಂತಣ್ಣ ಆ ಸುದ್ದಿಯನ್ನು ಭಗವತೀ ಕಲ್ಯಾಣ ಮಂಟಪದವರಿಗೆ ತಲುಪಿಸಿದರು. ಮುಂದಿನ ನಲುವತ್ತು ದಿನಗಳ ಕಾಲ ಭಗವತೀ ಕಲ್ಯಾಣ ಮಂಟಪದ ಧ್ವನಿವರ್ಧಕದಲ್ಲಿ ಮುಂಜಾನೆಯ ಸುಪ್ರಭಾತದ ಸದ್ದು ಕೂಡಾ ಕೇಳಿಸಲಿಲ್ಲ.

ಆದರೆ ಈ ನಡುವೆ ಮುತ್ತುಪ್ಪಾಡಿಯ ಎಲ್ಲರೂ ಸಮಾನವಾಗಿ ಕೇಳಿಸಿಕೊಂಡ ಹೊಸ ಸುದ್ದಿಯೆಂದರೆ ಕಾಲೇಜಿನ ಕೆಲಸಕ್ಕೆ ರಾಜೀನಾಮೆ ನೀಡಿ ಹೋಗಿರುವ ಕಾಸಿಮ್ ಎಲ್ಲಿದ್ದಾನೆಂದು ಯಾರಿಗೂ ಗೊತ್ತಿಲ್ಲ.

–2–

ಮುತ್ತುಪ್ಪಾಡಿಯ ಮಂದಿ ಈ ಎಲ್ಲ ಸಂಗತಿಗಳನ್ನು ಮರೆತು ಹೋಗಿ ವರ್ಷವಾಗಿತ್ತು.

ರೋಷನ್ ಅಲೀಗೆಹೆಣ್ಣು ಹುಡುಕುವ ಕೆಲಸ ನಡೆದೇ ಇತ್ತು. ಪ್ರಮೋಷನ್ ಆಗದೆ ಮದುವೆಯಾಗುವುದೇ ಇಲ್ಲ ಎಂದು ತೀರ್ಮಾನಿಸಿದ್ದ ರೋಷನ್ ಅಲೀಯಾವ ಹುಡುಗಿಯ ಬಗ್ಗೆ ಪ್ರಸ್ತಾಪಿಸಿದರೂ ಬೇಡವೆನ್ನುತ್ತಿದ್ದ. ಕಾಸರಗೋಡಿದ್ದು ಬೇಡ. ಕಣ್ಣೂರಿದ್ದು ಚೆನ್ನಾಗಿಲ್ಲ ಎನ್ನುತ್ತಲೇ ಮದುವೆಯನ್ನು ಮುಂದಕ್ಕೆ ಹಾಕುತ್ತಿದ್ದ. ಅದೂ ಅಲ್ಲದೆ ಎಸ್ಸೆಸ್ಸೆಲ್ಸಿ ಓದಿರುವ ಹುಡುಗಿಯರು ಸುಲಭದಲ್ಲಿ ಎಲ್ಲಿ ಸಿಗುತ್ತಾರೆ?

ಶಾಲೆಗಳಿಗೆ ದಸರಾ ರಜ ಮುಗಿದ ಬಳಿಕದ ಮೊದಲ ವಾರದಲ್ಲಿ ರೋಷನ್ ಅಲೀಯ ಸುರತ್ಕಲ್ ಬ್ಯಾಂಕಿನ ವಿಳಾಸಕ್ಕೊಂದು ಪತ್ರ ಬಂದಿತ್ತು. ಕಾಸಿಮನದ್ದೆಂದು ಗೊತ್ತಾದಾಗ ರೋಷನ್ ಅಲೀಯ ಬೆರಳುಗಳು ನಡುಗಿದ್ದವು. ಬರೆದದ್ದು ಎರಡೇ ಸಾಲುಗಳು. "ಯುವರ್ ಡೆಸರ್ಟೆಡ್ ಕಾಸಿಮ್ ಈಸ್ ಎ ಪ್ರಿನ್ಸಿಪಾಲ್ ನವ್. ಮೈ ಚೇಂಬರ್ ಈಸ್ ಕ್ಲೋಸ್ಡ್ ಫಾರ್ ಆಲ್, ಎಕ್ಸೆಪ್ಟ್‌ಯೂ."

ರೋಷನ್ ಅಲೀಯ ಅಚ್ಚರಿಗೆ ಕಾಸಿಮನ ಹೊಸ ವಿಳಾಸ ಸಮಾಧಾನ ಹೇಳಿತ್ತು.

ಮಂಗಳೂರಿನಲ್ಲಿ ಆರಂಭವಾಗಿದ್ದ ಮುಸ್ಲಿಮರ ಹೊಸ ವಿದ್ಯಾಸಂಸ್ಥೆ.



ಕುತೂಹಲ ತಡೆದುಕೊಳ್ಳಲಾಗದೆ ರೋಷನ್ ಮುಂದಿನ ಶನಿವಾರ ಮಧ್ಯಾಹ್ನ ಕಾಸಿಮನ ಕಾಲೇಜಿಗೆ ಹುಡುಕಿಕೊಂಡು ಹೋದ. ವೆರಾಂಡದಲ್ಲಿ ಸುತ್ತಾಡುತ್ತಿದ್ದ ಹುಡುಗನೊಬ್ಬನನ್ನು ವಿಚಾರಿಸಿದ. "ಸ್ಪೆಷಲ್ ಕ್ಲಾಸ್ ಮಾಡುತ್ತಿದ್ದಾರೆ" ಎಂದ. ಒಂದು ಕ್ಷಣ ಅಲೆಯುವವನಂತೆ ರೋಷನ್ ಅಲೀಯನ್ನು ದಿಟ್ಟಿಸಿದ ಹುಡುಗ, "ನೀವು ಅವರ ಛೇಂಬರಿನಲ್ಲಿ ಕುಳಿತುಕೊಳ್ಳಿ, ಬರ್ತಾರೆ" ಎಂದ.

ಹುಡುಗ ಬೊಟ್ಟು ಮಾಡಿದ ಕೋಣೆಯೊಂದರ ಒಳಗೆ ರೋಷನ್ ಅಲೀ ಇಣುಕಿದ.

ಮೇಜಿನ ಮೇಲೆ "ಪ್ರೊ॥ ಸೈಯದ್ ಕಾಸಿಮ್, ಎಂ.ಎ. ಬಿ.ಎಡ್. ಪ್ರಿನ್ಸಿಪಾಲ್" ಎಂಬ ಹಿತ್ತಾಳೆ ಫಲಕ ಲಕಲಕಿಸುತ್ತಿತ್ತು.

ಕ್ಲಾಸು ಮುಗಿಸಿ ಒಳಗೆ ಬಂದ ಕಾಸಿಮ್ ಕುರ್ಚಿಯಲ್ಲಿ ಕುಳಿತಿದ್ದ ರೋಷನ್ ಅಲೀಯನ್ನು ಕಂಡು "ಯೂ ಆರ್ ವೆಲ್‌ಕಮ್ ಟು ಮೀಟ್ ಎ ಟ್ರೂ ಮುಸ್ಲಿಮ್" ಎನ್ನುತ್ತಾ ಒಂದು ಕ್ಷಣ ಕಣ್ಣರಳಿಸಿ ನಕ್ಕ. ತಕ್ಷಣ ಮುಖ ಮುದುರಿಕೊಂಡು ಪ್ರಿನ್ಸಿಪಾಲ್ ಸಿಂಹಾಸನದಲ್ಲಿ ಕುಳಿತು ಕಣ್ಣು ಮುಚ್ಚಿದ.

ಕಾಸಿಮ್ ಬಹಳಷ್ಟು ಇಳಿದುಹೋಗಿದ್ದ. ಕನ್ನಡಕದ ಆಳದಲ್ಲಿ ಮುಳುಗಿರುವ ಕರಿಗೊಂಬೆಗಳಲ್ಲಿ ಹಿಂದಿನ ತುಂಟತನ ಕಾಣಿಸಲಿಲ್ಲ. ಅಗಲವಾಗುತ್ತಿದ್ದ ಹಣೆಯಲ್ಲಿ ನೋವು ಗೀಟುಗೊಳ್ಳುತ್ತಿದ್ದವು. ಕೆನ್ನೆ ಗಡ್ಡವನ್ನೆಲ್ಲ ಮುಚ್ಚಿ ಬೆಳೆದ ಕರಿಗಡ್ಡದಲ್ಲೂ ಹಿಂದಿನ ಓರಣವಿಲ್ಲ. ಎರಡು ನಿಮಿಷ ಶವದಂತೆ ಕಾಣಿಸಿದ ಕಾಸಿಮ್ ಒಮ್ಮೆಲೇ ಸೆಟೆದು ಕುಳಿತು ಮೇಜಿನ ಮೇಲಿದ್ದ ಕಾಲಿಂಗ್‌ಬೆಲ್ ಟಣಿಕಿಸಿದ. ಕೋಣೆಯೊಳಗೆತಲೆ ತೂರಿದ ಜವಾನನಿಗೆ ಎರಡು ಚಹ ತರಲು ಹೇಳಿ,ತಟ್ಟನೆ ರೋಷನ್ ಅಲೀಯತ್ತ ತಿರುಗಿ "ಹೇಳು ಅಲೀ, ನಿನ್ನನ್ನು ಕಂಡ ಕೂಡಲೇ ನಾನು ಏನು ಹೇಳಿದೆ?" ಎಂದು ಪ್ರಶ್ನಿಸಿದ. "ನಾನು ಸರಿಯಾಗಿ ಕೇಳಿಸಿಕೊಳ್ಳಲಿಲ್ಲ." ರೋಷನ್ ಅಲೀ ಸುಳ್ಳು ಹೇಳಿದ. ತಿರುಗು ಕುರ್ಚಿಯಲ್ಲಿ ಎಡಕ್ಕೆ ವಾಲುತ್ತಾ ಆರಾಮವಾಗಿ ಕೈಗಳನ್ನು ತಲೆಯ ಹಿಂಭಾಗದಲ್ಲಿ ಜೋಡಿಸುತ್ತಾ ಹೇಳಿದ. "ಯೂ ಆರ್ ವೆಲ್‌ಕಮ್ ಟು ಮೀಟ್ ಎ ಟ್ರೂ ಮುಸ್ಲಿಂ ಎಂದಿದ್ದೆ,ಅಲ್ವಾ?" ಕಾಸಿಮ್ ಗಹಗಹಿಸಿ ನಗತೊಡಗಿದ್ದ.

ರೋಷನ್ ಅಲೀಗೆ ಮುಜುಗರವೆನ್ನಿಸಿತು. ತಾನು ಬಹಳವಾಗಿ ಗೌರವಿಸುತ್ತಿರುವ ಕಾಸಿಮನಿಂದ ಈ ಬಗೆಯ ಮಾತುಗಳನ್ನು ನಿರೀಕ್ಷಿಸಿದ್ದಿರಲಿಲ್ಲ. "ನೋಡು ಕಾಸಿಮ್, ಒಗಟಿನಂತೆಯೇ ಮಾತನಾಡಬೇಕೆನ್ನುವುದು ನಿನ್ನ ಹಟವಾದರೆ ನಾನು ವಾಪಸು ಹೋಗುತ್ತೇನೆ." ಬೇಸರದಿಂದಲೇ ಹೇಳಿದ್ದ.

ಬಿಲ್ಲಿನಂತೆ ಮೇಜಿನೆದುರು ಬಾಗಿದ ಕಾಸಿಮ್ ಎರಡೂ ಕೈಗಳನ್ನು ಮುಷ್ಟಿಮಾಡುತ್ತಾ ಮೇಜು ಸವರತೊಡಗಿದ. ಅವನ ಕಣ್ಣುಗಳು ಕೆಂಪು ಉಂಡೆಯಾಗಿ ಕರಗಲಾರಂಭಿಸಿತು. ಜವಾನ ಚಹ ತಂದಿರಿಸಿ ಹೊರಗೆ ಹೋದ. ಆರಿ ಹೋಗಿದ ಚಹವನ್ನು ಒಂದೇ ಗುಟುಕಿಗೆ ಕುಡಿದು ಕಪ್ಪನ್ನು ಸ್ವರವೆಬ್ಬಿಸಿ ಮೇಜಿನ ಮೇಲೆ ಕುಕ್ಕಿದ ಕಾಸಿಮ್, ನಾಟಕೀಯ ಸ್ವರದಲ್ಲಿ ಪ್ರಶ್ನಿಸಿದ, "ನೀನು ಶಾಲಿನಿಯ ಕೈಯಲ್ಲಿ ಚಹ ಕುಡಿದಿದ್ದೀಯಾ?"

"ಏನ್ ಹೇಳ್ತಾ ಇದ್ದಿ ನೀನೂ?" ರೋಷನ್ ಅಲೀಯ ತಾಳ್ಮೆಯ ಕಟ್ಟೆಯೊಡೆದಿತ್ತು. ಅವನ ಸ್ವರದ ಜೋರಿಗೆ ಅವನೇ ಅಸಹ್ಯ ಪಟ್ಟುಕೊಳ್ಳುತ್ತಿರುವಾಗ, ಕಾಸಿಮ್ ಜೋರಾಗಿ ಕೈ ತಟ್ಟಿ ನಗಲಾರಂಭಿಸಿದ. ರೋಷನ್ ಅಲೀ ಮುಜುಗರದಿಂದ ಮುಖ ಕಿರಿದು ಮಾಡಿದ.

ಕಾಸಿಮ್ ನಿಧಾನವಾಗಿ ಎದ್ದು ಕಿಟಕಿಯ ಬಳಿ ನಡೆದ. ಕಿಟಕಿಯ ತೆರೆ ಸರಿಸಿದಾಗ ಬಯಲಲ್ಲಿ ಆಡುತ್ತಿದ್ದ ಮಕ್ಕಳ ಸಂತೋಷ, ಕಿಟಕಿ ತೂರಿ ಬಂದು ಕೋಣೆಯೊಳಗೆ ಜೀವ ತುಂಬಿತ್ತು. ಕಿಟಕಿಗೆ ಮುಖವಿರಿಸಿ ಹೊರಗೆ ದಿಟ್ಟಿಸುತ್ತಾ ಹೇಳತೊಡಗಿದ, "ನೀನಂದು ಕೊಂಡಿರಬಹುದು, ನಾನಿನ್ನೂ ಹಳೆಯ ಗುಂಗಿನಲ್ಲೇ ಇದ್ದೇನೆಂದು. ಅದು ನಿಜವೆಂದು ನಾನು ಹೇಳಿದರೆ ನಿನಗೆ ಅಸಹ್ಯವಾಗಬಹುದು. ಆದರೆ ಅದು ನಿಜ. ದೋಸೆ ಭಟ್ಟರ ಹೋಟೆಲಿನ ಬೆಣ್ಣೆ ದೋಸೆ ತಿಂದವರೆಲ್ಲ ನನಗೆ ಫಿಲಾಸಫಿ ಪಾಠ ಮಾಡಿದರು. ನಾನು ಅವತ್ತೇ ಅವರಿಗೆ ಹೇಳಿದ್ದೆ. ಕೇಳುವಂತಹ ಅರ್ಜುನ ಸಿಕ್ಕಿದರೆ ಯಾರೂ ಭಗವದ್ಗೀತೆ ಹೇಳಬಹುದು ಎಂದು. ಬಟ್ ಐ ವಾಸ್ ರೀಯಲೀ ಮ್ಯಾಡ್. ಐ ಥಾಟ್, ಐ ವಾಸ್ ಎ ರೀಯಲ್ ರೇಷನಲಿಸ್ಟ್. ನನಗೆ ಮಸೀದಿಗೆ ಹೋಗಿ ನಮಾಜು ಮಾಡಲು ಪುರುಸೊತ್ತುಸಿಗುತ್ತಿರಲಿಲ್ಲ. ಬಟ್ ಯೂ ನೋ, ಐ ನೆವರ್ ಮಿಸ್ಸ್‌ಡ್ ಎ ಸಿಂಗಲ್ ರೋಟರಿ ಮೀಟಿಂಗ್." ಪ್ರತಿ ಶಬ್ದಗಳಿಗೂ ಆವೇಶ ಬೆರೆಸಿ ಧ್ವನಿಸುತ್ತಿದ್ದ ಕಾಸಿಮ್, ತಟ್ಟನೆ ರೋಷನ್ ಅಲೀಯತ್ತ ತಿರುಗಿ ನೇರವಾಗಿ ದಿಟ್ಟಿಸುತ್ತಾ ಸಣ್ಣ ಸ್ವರದಲ್ಲಿ ಪ್ರಶ್ನಿಸಿದ, "ನಿನಗೆ ಮದುವೆಯಾಗಿದೆಯಾ?"

"ನಿನಗೆ ಗೊತ್ತಿಲ್ವಾ?" ರೋಷನ್ ಅಲೀ ಸಿಡುಕಿದ್ದ.

"ವೈ ಡೋಂಟ್ ಯೂ ಆಸ್ಕ್ ಸಚ್ ಕೊಶ್ಚನ್ಸ್ ವಿತ್ ಮೀ" ಕಾಸಿಮ್ ಕರ್ಕಶವಾಗಿ ಕಿರುಚಿದ, "ನೀನು ಮದುವೆಯಾಗುವುದಿಲ್ವಾ ಅಂತ ಯಾಕೆ ಕೇಳುವುದಿಲ್ಲಾ?"

ರೋಷನ್ ಆಲೀ ಸುಮ್ಮನೆ ಕುಳಿತ. ಕಾಸಿಮನೇ ನಿಧಾನವಾಗಿ ಹೇಳತೊಡಗಿದ, "ನನಗೀಗ ಮೂವತ್ತೆರಡು ದಾಟಿತು. ಈ ಊರಿಗೆ ಬಂದಾಗ, ಈ ಕಾಲೇಜಿನ ಪ್ರಿನ್ಸಿಪಾಲ್ ಅನ್ನಿಸಿಕೊಂಡಾಗ ನನಗೂ ಆಸೆಯಾದದ್ದುಂಟು. ಬಟ್ ದ್ಯಾಟ್ ಡರ್ಟಿ ಡೆವಿಲ್ ಶಾಲಿನಿ ನೆವರ್ ಲೆಟ್ ಮಿ ಟು ಲಿವ್ ಲೈಕ್ ಎ ಹ್ಯೂಮನ್." ಮುಂದುವರೆಸಲಾಗದೆ ಕಾಸಿಮ್ ಅವುದು ಕಚ್ಚತೊಡಗಿದ್ದ. ಕಣ್ಣುಗಳು ಬೆಂಕಿಯ ಉಂಡೆಯಾಗಿದ್ದವು.

"ಬಾ...., ಹೋಗೋಣ" ಕಾಸಿಮ್ ಎದ್ದು ಹೊರಟ.

'ಎಲ್ಲಿಗೇ' ಎಂದು ರೋಷನ್ ಅಲೀ ಪ್ರಶ್ನಿಸಲಿಲ್ಲ; ಮಾತಿಲ್ಲದೆ ಕಾಸಿಮನ ಬೆನ್ನು ಹಿಡಿದ. ವೆರಾಂಡದಲ್ಲಿ ಕಾಲೆಳೆಯುತ್ತಿರುವಂತೆಯೇ ಎಡಪಕ್ಕದಲ್ಲಿ ಅರ್ಧ ತಲೆಯೆತ್ತಿ ಅಲ್ಲಿಯೇ ಕೊನೆಗೊಂಡಿದ್ದ ಹೊಸ ಕಟ್ಟಡವಾಗಬಹುದಾಗಿದ್ದ ಹಳೆಯ ಪಳೆಯುಳಿಕೆಗಳನ್ನು ಎಡ ತೋರುಬೆರಳಿನಿಂದ ಬೊಟ್ಟು ಮಾಡುತ್ತಾ ಹೇಳಿದ, "ನಾನು ಬದಲಾದೆ ಅಂದುಕೊಂಡಿದ್ದೆ. ಹಾಗಾಗಿ ಬದಲಾವಣೆಗಳನ್ನು ಬಯಸಿದ್ದೆ. ಈ ಕಾಲೇಜು ಬೆಳೆಯಬೇಕು. ನಮ್ಮವರೂ ಹಿಂದೂಗಳೊಂದಿಗೆ ಸಮವಾಗಿ ಸ್ಪರ್ಧೆಗೆ ನಿಲ್ಲುವಂತಾಗಬೇಕು.ನಮ್ಮ ಎಲ್ಲಾ ಮಕ್ಕಳೂ ವಿದ್ಯಾವಂತರಾಗಬೇಕು.ಮುಖ್ಯವಾಗಿ ಹೆಣ್ಣುಮಕ್ಕಳು ಹೈಸ್ಕೂಲು ತನಕವಾದರೂ ಓದಬೇಕು. ಹೀಗೆ ಹತ್ತಾರು ಆಸೆ ಹೊತ್ತಿದ್ದೆ. ನಮ್ಮ ಮೇನೇಜ್‌ಮೆಂಟ್ ಕೂಡಾ ಆರಂಭದಲ್ಲಿ ಎಲ್ಲದಕ್ಕೂ ಹೂಂ ಗುಟ್ಟಿತ್ತು. ಊರಲ್ಲಿ, ಪರವೂರಲ್ಲಿ,ಕೊನೆಗೆ ಅರಬ್ ದೇಶಗಳಿಂದ ಡ್ರಾಫ್ಟ್ ತರಿಸಿದ್ದೂ ಆಯಿತು. ಒಂದೇ ವರ್ಷದಲ್ಲಿ ಬೇಕಾದಷ್ಟು ಹಣ ಸೇರಿತು. ಆದರೆ! ಹಣದೊಂದಿಗೆ ಜಗಳವೂ ಶುರುವಾಯಿತು. ನಾನು ನಾನು ಎಂದು ಪ್ರತಿಯೊಬ್ಬರೂಲೀಡರುಗಳಾಗಲು ಹೊರಟರು. ಕಟ್ಟಡ ಅರ್ಧದಲ್ಲೇ ನಿಂತಿತು. ಹಣ ಏನಾಯಿತೆಂದುಯಾರೂ ವಿಚಾರಿಸಲಿಲ್ಲ. ಪ್ರಶ್ನಿಸುವ ನೈತಿಕ ಬಲ ಮೇನೇಜ್‌ಮೆಂಟಿನ ಯಾರಲ್ಲೂ ಇರಲಿಲ್ಲ." ಇಬ್ಬರೂ ಕಾಂಪೌಂಡು ದಾಟಿ ರಸ್ತೆಗೆ ಬಂದಿದ್ದರು. "ಬಹಳ ಆಸೆ ಹೊತ್ತಿದ್ದೆ. ನನ್ನದೇ ಮನೆಯೆಂಬಂತೆ ಕೆಲಸ ಮಾಡಿದ್ದೆ. ಇಲ್ಲಿನ ಜವಾನನಿಂದ ಆರಂಭಿಸಿ ಪ್ರಸಿಡೆಂಟರ ತನಕ ಎಲ್ಲರೂ ನಮ್ಮವರೇ. ಎಂಡ್ ಬಿಕಾಸ್ ಆಫ್ ಇಟ್, ನೂರಕ್ಕೆ ತೊಂಬತ್ತು ಪಾಲು ಮಕ್ಕಳೂ ನಮ್ಮವರೇ. ಐ ಮೀನ್ ನಮ್ಮ ಜಾತಿಯವರೆ!"



"ಸೋ ವಾಟ್?" ರೋಷನ್ ಅಲೀ ತಟ್ಟನೆ ಪ್ರಶ್ನಿಸಿದ್ದ.

"ನಥಿಂಗ್...., ನಥಿಂಗ್...., ಏನೂ ಇಲ್ಲ. ಏನೇನೂ ಇಲ್ಲ. ಶಾಲೆ, ಪಾಠ, ಗಂಟೆ, ಫುಟ್‌ಬಾಲ್‌ಅಷ್ಟೆ, ಬೇರೆ ಏನೇನೂ ಇಲ್ಲ."

"ಹಾಗಂದ್ರೆ?"

ನಮ್ಮ ಕಾಲೇಜು ಈ ಜಿಲ್ಲೆಯಲ್ಲಿ ಫಸ್ಟು! ಫುಟ್‌ಬಾಲ್‌ನಲ್ಲಿ. ನಮ್ಮ ಮಕ್ಕಳು ಕುಣಿದು ಊರೆಲ್ಲ ಮೆರವಣಿಗೆ ಮಾಡಿದ್ರು."

"ವಾಟ್ ಇಸ್ ರಾಂಗ್? ತಪ್ಪಾಯ್ತ ಅದು?" ರೋಷನ್ ಅಲೀ ಪ್ರಶ್ನಿಸಿದ್ದ.

"ಹೌದು ನನಗನ್ನಿಸುವಂತೆ ಇದು ತಪ್ಪು. ನಮ್ಮ ಬೆಳವಣಿಗೆ ಕೇವಲ ಫುಟ್‌ಬಾಲ್ ರೋಲಿಂಗ್ ಶೀಲ್ಡ್ ಪಡೆಯುವಲ್ಲಿ ನಿಲ್ಲಬಾರದು. ಎಲ್ಲರಂತೆ ಎಲ್ಲದರಲ್ಲೂ ಹೋರಾಡಬೇಕು. ನಮ್ಮ ಹುಡುಗಿಯರು ಇಂಜಿನೀರ್ ಆಗ್ಬೇಕು. ಡಾಕ್ಟ್ರು ಆಗ್ಬೇಕು. ಕೇವಲ ಬೀಡಿ ಸುತ್ತುವ ಟೀಬೀ ಪೇಶಂಟ್‌ಗಳಾದರೆ ಸಾಲ್ದು. ನಿನ್ಗೆ ಮೊದ್ಲೇ ಗೊತ್ತುಂಟು. ಐ ಹೇಟ್ ಕಾಸ್ಟ್ ಸಿಸ್ಟಂ. ಆದ್ರೂ ನಾನು ನನ್ನ ಜಾತಿಯವ್ರನ್ನು ಹೆಚ್ಚು ಪ್ರೀತಿಸ್ತೇನೆ;ಯಾಕೆ ಗೊತ್ತುಂಟಾ? ಯಾಕೆಂದ್ರೆ ಅವ್ರನ್ನು ಬೇರೆ ಯಾವ ಜಾತಿಯವ್ರೂ ಪ್ರೀತಿಸುವುದಿಲ್ಲ. ತಮಾಷೆಯೆಂದ್ರೆ ನನ್ನ ಜಾತಿಯ ಶ್ರೀಮಂತ್ರು ಕೂಡಾ ನನ್ನ ಜಾತಿಯ ಬಡವರನ್ನು ಪ್ರೀತಿಸುವುದಿಲ್ಲ. ಆ ವಿಷ್ಯದಲ್ಲಿ ನಾನು ಮಾತಾಡಿದ್ರೆ ನನ್ನನ್ನು ಹುಚ್ಚ ಅಂತ ಹೇಳಿ ನಗ್ತಾರೆ. ಸಂಪ್ರದಾಯಕ್ಕೆ ಹೊಸ್ದಾದಯಾವುದನ್ನೂ ಇವ್ರು ಸ್ವಾಗತಿಸುವುದಿಲ್ಲ. ಆದ್ರೂ ಕೆಲವು ಮಂದಿ ಶ್ರೀಮಂತ್ರು ತಮ್ಮ ಹೆಣ್ಣುಮಕ್ಕಳನ್ನು ಈ ಊರಿನ ಕಾನ್ವೆಂಟ್‌ಗಳ ಗೇಟಿನೊಳಕ್ಕೆ ಕಾರಿನಲ್ಲೇ ಕರ್ಕೊಂಡು ಹೋಗಿ ಗುಟ್ಟಾಗಿ ಬಿಟ್ಟು ಬರ್ತಾರೆ. ಆದ್ರೆ, ಇದೇ ಕಾಲೇಜಿನಲ್ಲಿ ಕೋ–ಎಜುಕೇಶನ್‌ಮಾಡೋಣ ಅಂದ್ರೆ ಅದನ್ನು 'ಹರಾಮು' ಅಂತ ಹೇಳಿ ನಿರಾಕರಿಸುತ್ತಾರೆ. ಐ ಕುಡ್ ನಾಟ್ ಡು ಎನಿಥಿಂಗ್ ಎಕ್ಸೆಪ್ಟ್ ಪ್ರೇಯಿಂಗ್ ಫೈವ್ ಟೈಮ್ಸ್ ಎ ಡೆ."

ರಸ್ತೆಯಂಚಿನಲ್ಲಿ ಗಟ್ಟಿ ಸ್ವರದಲ್ಲಿ ಮಾತನಾಡುತ್ತಾ ಹೆಜ್ಜೆ ಹಾಕುತ್ತಿದ್ದ ಕಾಸಿಮ್ ಗಕ್ಕನೆ ನಿಂತ. "ಐ ಕ್ಯಾನ್ ಈಸಿಲಿ ಟೇಕ್ ಎ ರಿವೆಂಜ್, ಬಟ್ ಐ ಡೋಂಟ್ ಲೈಕ್ ಇಟ್. ನಮ್ಮ ಈಗಿನ ಪ್ರಸಿಡೆಂಟ್ ಕೂಡಾ ಅದನ್ನೆ ಹೇಳಿದರು. ದಿಸ್ ಈಸ್ ದ ಹೈ ಟಾಯಿಮ್ ಅಂತ. ನಿನ್ಗೆ ನೆನಪಿದೆಯಾ? ಅವತ್ತು ನನ್ಗೆ ಶಾಲಿನಿ ಬೇಕಾಗಿದ್ರೆ ನಾನು ಅವ್ರ ಜಾತಿಗೆ... ಹ್ಹ...ಹ್ಹಾ..., ದೆ ಮೀನ್, ನಾನು ಜನಿವಾರ ಹಾಕ್ಬೇಕೆಂದು ಹೇಳಿದ್ರು, ಬಟ್ ಐ ನೆವರ್ ಕ್ಯಾರ್ ವೇರಿಂಗ್ ಎ ಪೋರ್ ಆ್ಯನಾಸ್ ತ್ರೆಡ್, ಆದ್ರೆ ಅವ್ರ ಸಣ್ಣತನ! ಈಗ... ಎವೆರಿಥಿಂಗ್ ಹ್ಯಾಸ್ ಚೇಂಜ್ಡ್, ನಾನು ಹೂಂ ಅಂದ್ರೆ ಸಾಕು. ನನ್ನ ಶಾಲಿನಿ ನಾಳೆಯೇ ಸಲ್ಮಾ ಅಥವಾ ಸಲೀಮ... ಎಂಡ್ ಸೋ ಆನ್, ಎನಿಥಿಂಗ್ ವಿಚ್ ಐ ಲೈಕ್..."

ರೋಷನ್ ಆಲೀಗೆ ಬಾಯಿ ಕಟ್ಟಿತ್ತು. ಕಾಸಿಮ್ ಎಲ್ಲಿಂದಲೋ ಮಾತು ಆರಂಭಿಸಿ ಎಲ್ಲಿಗೋ ತಂದು ನಿಲ್ಲಿಸಿಬಿಡುತ್ತಿದ್ದ. ರಸ್ತೆಯಲ್ಲಿ ಓಡಿಯಾಡುತ್ತಿದ್ದ ಜನರು ಓರೆನೋಟ ಬೀರುವುದನ್ನು ಕಾಸಿಮ್ ಗಮನಿಸಿದ್ದಿರಬೇಕು. ನಿಧಾನವಾಗಿ ಹೆಜ್ಜೆ ಬದಲಿಸುತ್ತಾ ಸಣ್ಣಸ್ವರದಲ್ಲಿ ಹೇಳತೊಡಗಿದ. "ಕಳೆದ ವಾರ ಮೇನೇಜ್‌ಮೆಂಟಿನ ಮೀಟಿಂಗ್ ಕೂಡಾ ಆಯ್ತು. ನಾನು ಬೇಕಂತ್ಲೇ ತಪ್ಪಿಸ್ಕೊಂಡೆ. ಮುಖ್ಯ ಎಜೆ–ಂಡಾ ನಾನೇ..., ನನ್ನ ವಿರುದ್ಧ ಕೋರ್ಟ್ ಮಾರ್ಷಲ್. ಆದ್ರೆ ಈ ಸಂಸ್ಥೆಗೆ ನಾನು ಮಾತ್ರ ಬೇಕು; ನನ್ನ ಆಲೋಚನೆಗಳು ಬೇಡ. ಅವ್ರಿಗೆ ಗೊತ್ತಿದೆ, ನನ್ನನ್ನು ಹೊರಗೆ ಹಾಕಿದ್ರೆ ನಷ್ಟ ಅವ್ರಿಗೆ ಮಾತ್ರ ಅಂತ."

ರೊಷನ್ ಅಲೀಗೆ ಕಾಸಿಮನ ಮಾತಿನ ಧಾಟಿಯೇ ಅರ್ಥವಾಗುತ್ತಿರಲಿಲ್ಲ. ಏನನ್ನೋ ಹೇಳ ಹೊರಟು ಮತ್ತೇನನ್ನೋ ವಿವರಿಸುತ್ತಿರುವಂತೆ ಅನ್ನಿಸುತ್ತಿತ್ತು.

"ಸುಬ್ರಾಯ ಭಟ್ರು ಇನ್ನೂ ಬದುಕಿದ್ದಾರೆ" ಎಂದ ಕಾಸಿಮ್ ಒಗಟಿನಂತೆ.

"ಯಾಕೆ! ಸಾಯ್ಬೇಕಾಗಿತ್ತಾ?" ರೋಷನ್ ಅಲೀ ಖಾರವಾಗಿ ಪ್ರಶ್ನಿಸಿದ್ದ.

ಕಾಸಿಮ್ ಉದ್ವೇಗಗೊಳ್ಳಬಹುದೆಂಬ ರೋಷನ್ ಅಲೀಯ

ನಿರೀಕ್ಷೆ ಸುಳ್ಳಾಯಿತು. ಕಾಸಿಮ್ ಸಾವಕಾಶವಾಗಿ ಹೇಳಿದ, "ಅವ್ರು ಹೋಟೆಲು ಮುಚ್ಚಿದ್ದಾರೆ. ಊಟಕ್ಕೂ ತತ್ವಾರ. ಶಾಲಿನಿ ಕೆಲ್ಸಕ್ಕೆ ಹೋಗ್ದೆ ನಾಲ್ಕು ತಿಂಗ್ಳಾಯ್ತು."

"ಏನು?! ತಮಾಷೆ ಮಾಡುತ್ತಿದ್ದೀಯಾ?" ರೋಷನ್ ಅಲೀ ಗಂಭೀರವಾಗಿಯೇ ಪ್ರಶ್ನಿಸಿದ್ದ.

"ನೋ... ನೋ... ಐ ಮೀನ್, ವಾಟ್ ಐ ಸೇ." ಕಾಸಿಮ್ ಕಡ್ಡಿ ಮುರಿದಂತೆ ಹೇಳಿದ್ದ, "ನಾಲ್ಕೈದು ತಿಂಗ್ಳ ಹಿಂದೆ ದೋಸೆ ಭಟ್ರು ಕಾಲೇಜಿಗೆ ಬಂದಿದ್ರು."


"ಭಟ್ರು ಕಾಲೇಜಿಗೆ ಬಂದಿದ್ರು! ಯಾಕೆ?" ರೋಷನ್ ಅಲೀಗೆ ನಂಬಿಕೆಯಾಗಿದ್ದಿರಲಿಲ್ಲ.

"ಹೂಂ... ಬಂದಿದ್ರು, ಬಹಳ ಸೋತು ಹೋಗಿದ್ದಾರೆ, ಅವ್ರಿಗೆ ಅವತ್ತು ಗಾಳಿ ಹಾಕಿದ್ದವರು ಯಾರೂ ಈವತ್ತು ಶಾಲಿನಿಯನ್ನು ಮದುವೆಯಾಗಲು ತಯಾರಿಲ್ಲ. ಬ್ಯಾರಿಯೊಟ್ಟಿಗೆ ಚಕ್ಕಂದ ಆಡಿದವಳಲ್ಲವೆ? ಅಪರೂಪಕ್ಕೆ ಯಾರಾದ್ರೂ ಮನಸ್ಸು ಮಾಡಿದ್ರೂ ಶಾಲಿನಿ ಒಪ್ತಾ ಇಲ್ಲವಂತೆ. ಈಗ ಉಳಿದಿರುವುದುನಾನೊಬ್ಬ ಮಾತ್ರ."

"ನೀನು ಏನು ಅಂತ ಹೇಳಿದಿ?" ರೋಷನ್ ಅಲೀ ಕುತೂಹಲದಿಂದ ಪ್ರಶ್ನಿಸಿದ್ದ.

"ಸಾಧ್ಯವಿಲ್ಲ ಅಂದುಬಿಟ್ಟೆ."

"ಇಲ್ಲ... ನಿನ್ನಿಂದ ಆ ಮಾತು ಸಾಧ್ಯವಿಲ್ಲ."



"ನಿಜ. ಆದ್ರೆ ನಾನು ಆಗ ಹಾಗೆಯೇ ಹೇಳ್ಬೇಕಾಗಿ ಬಂದಿತ್ತು. ನನ್ನ ಆಗಿನ ಸ್ಥಿತಿಯಲ್ಲಿ ಶಾಲಿನಿಯನ್ನು ಮದುವೆಯಾಗಲು ಸಾಧ್ಯವಿದ್ದಿರಲಿಲ್ಲ. ನನಗೆ ಈ ಕಾಲೇಜಿನಲ್ಲಿ ಜಾಬ್ ಸೆಕ್ಯುರಿಟಿ ಇಲ್ಲ. ಯಾವಾಗ ಬೇಕಾದ್ರೂ ನನ್ನನ್ನು 'ನಾಳೆಯಿಂದ ಬರುವುದು ಬೇಡ' ಅಂತ ಹೇಳ್ಬಹುದು, ಶಾಲಿನಿಯೊಡನೆ ನಾನು ಫುಟ್‌ಪಾತಿನಲ್ಲಿಮಲಗಬೇಕಾ?"

ಕಾಸಿಮನ ಪ್ರಶ್ನೆಗೆ ರೋಷನ್ ಅಲೀ ಬಳಿ ಉತ್ತರವಿದ್ದಿರಲಿಲ್ಲ.

" ನಮ್ಮ ಮೇನೇಜ್‌ಮೆಂಟಿಗೆ ಎಲ್ಲ ಗೊತ್ತಾಗಿಬಿಟ್ಟಿದೆ. ಅವ್ರದ್ದು ನೇರ ಮಾತು, ಜಾತಿಗೆ ತೆಗೆದುಕೊ, ನಿಖಾ ಮಾಡಿಕೋ."

ರೋಷನ್ ಅಲೀ ತುಟಿ ಎರಡು ಮಾಡಲಿಲ್ಲ.

"ಜಾತಿ ಕಟ್ಟುಪಾಡುಗಳ ಬೇಲಿ ಹಾರಬಹುದೆಂದುಕೊಂಡಿದ್ದೆ ಒಮ್ಮೆ; ನನ್ನ ಸ್ನೇಹಿತರೇ ತಲೆ ರಿಪೇರಿ ಮಾಡಿದ್ರು, ನನ್ನದೇ ಜನರೊಳಗೆ ಬೆರೆತು ನನ್ನೊಂದಿಗೆ ನನ್ನವರನ್ನೂ ಬೆಳೆಸಬಹುದೆಂದುಕೊಂಡೆ. ಅದೂ ಸಾಧ್ಯವಾಗಲಿಲ್ಲ. ಶಾಲಿನಿಯನ್ನು ಸಲ್ಮಾ ಎಂದು ಕರೆದ–ರೆ ನಾನಿಲ್ಲಿಯೇ ಪ್ರಿನ್ಸಿಪಾಲ್ ಆಗಿ ಉಳಿಯಬಹುದು. ಆದ್ರೆ ನಾನು ಪ್ರೀತಿಸಿದ್ದು ಸಲ್ಮಾಳನ್ನಲ್ಲ; ನಾನು ಪ್ರೀತಿಸಿದ್ದು ಸುಬ್ರಾಯಭಟ್ಟರ ಜನಿವಾರವನ್ನೂ ಅಲ್ಲ. ಸಣ್ಣದಿರುವಾಗ ಓದಿದ್ದ ಕುರಾನು, ಹಿಂದೂಗಳನ್ನುಪ್ರೀತಿಸಬಾರದು ಅಂತ ಕಲಿಸ್ಲಿಲ್ಲ. ದೊಡ್ಡವನಾದ ಬಳಿಕ ಓದಿದ ಭಗವದ್ಗೀತೆ ಮುಸ್ಲಿಮರನ್ನುಕೊಲ್ಲು ಅಂತ ಹೇಳಲಿಲ್ಲ. ನವರಾತ್ರಿಯ ಹಬ್ಬದಲ್ಲಿ ದೇವಸ್ಥಾನದ ರಾಜಾಂಗಣದೊಳಗೆ ಭಾಷಣ ಮಾಡಿದ್ದು ಶಾಲಿನಿ ಸಿಕ್ತಾಳೆ ಅಂತ ಆಸೆಯಿಂದ್ಲೂ ಅಲ್ಲ. ನನಗಾವತ್ತು ಹಾಗನಿಸಿತ್ತು; ನಂತರ ಈವತ್ತು ಹೀಗೆ ಅನ್ನಿಸ್ತಾ ಉಂಟು. ಜನಿವಾರನನಗೆ ಹೇಸಿಗೆಯನ್ನುಸುವುದಾದರೆ ನನ್ನ ಹೆಂಡತಿಗೆ ಬುರ್ಖಾ ಕೂಡಾ ಅಸಹ್ಯವಾಗಬೇಕು. ನನ್ನ ಯೋಚ್ನೆ ಯಾರ್ಗೂ ಅರ್ಥ ಆಗ್ತಾ ಇಲ್ಲ."

"ನನಗರ್ಥವಾಗುತ್ತದೆ ಕಾಸಿಮ್." ಎಂದಿದ್ದ ರೋಷನ್ ಅಲೀ.

"ನಿನಗರ್ಥವಾಗುತ್ತದೇ!?" ಗಹಗಹಿಸಿ ನಕ್ಕಿದ್ದ ಕಾಸಿಮ್.

"ಅಂದ್ರೆ?"ರೋಷನ್ ಅಲೀಗೆ ಅವಮಾನವೇ ಆಗಿತ್ತು.

"ನಿನಗೊಬ್ಬಿಗೆ ಅರ್ಥವಾದ್ರೆ ಶಾಲಿನಿಯನ್ನು ಮದುವೆಯಾಗಲು ಆಗುವುದಿಲ್ಲ ಅಲೀ. ನನ್ನೊಬ್ಬನ ಧೈರ್ಯದಿಂದಲೂ ಅದು ಸಾಧ್ಯವಿಲ್ಲ. ನಾವಿಬ್ರೂ ಒಟ್ಟು ಸೇರಿ ಅಮರ ಪ್ರೇಮಿಗಳ ಹಾಗೆ ಒಂದೇ ಬಾವಿಗೆ ಹಾರಿದ್ರೆ ಯಾವುದನ್ನೂ ಸಾಧಿಸಿದಂತಾಗುವುದಿಲ್ಲ. ನಮ್ಗೆ ಎಲ್ಲರಂತೆ ಸಂಸಾರ ಮಾಡ್ಬೇಕು, ಶಾಲಿನಿಯ ಮೊಲೆ ಕುಡಿಯುವ ಮಗು ನನ್ನದೆಂಬ ಹೆಮ್ಮೆ ನನಗಾಗ್ಬೇಕು, ನಾನು ಶಾಲಿನಿಯನ್ನು ಶಾಲಿನಿಯಾಗಿಯೇ ಉಳಿಸಿ ಮದುವೆಯಾದ್ರೆ, ಈ ಕಾಲೇಜಿನಿಂದ ನನ್ಗೆ ಗೇಟ್‌ಪಾಸ್ ಕೊಡ್ತಾರೆ. ನಿನ್ಗೆ ಗೊತ್ತುಂಟು. ನನ್ಗೆ ನನ್ನವರು ಅಂತ ಇರುವುದು ನನ್ನ ಉಮ್ಮ ಮಾತ್ರ, ಅವಳು ಕೊಟ್ಟಿರುವ ಆಸ್ತಿಯೆಂದ್ರೆ ನಾನು ಕಲಿತ ನಾಲ್ಕಕ್ಷರಗಳು ಮಾತ್ರ. ನನ್ನಲ್ಲಿರುವ ಈ ನಾಲ್ಕಕ್ಷರಗಳನ್ನುಉಪಯೋಗಿಸಿ ನಾನು ಉಮ್ಮನಿಗೂ ಅನ್ನ ಹಾಕಬೇಕು, ಶಾಲಿನಿ ಬಂದ್ರೆ ಅವ್ಳ ಅಪ್ಪ ಕೂಡ ಬರ್ತಾರೆ. ಎಲ್ರಿಗೂ ಅನ್ನ ಹಾಕುವ ಜವಾಬ್ದಾರಿ ನನಗುಂಟು. ಇದನ್ನೆಲ್ಲ ಯೋಚನೆ ಮಾಡಿಯೇ ತೀರ್ಮಾನಿಸಿದ್ದು, ಶಾಲಿನಿಯನ್ನು ಮದ್ವೆ ಆಗುವುದು ಬೇಡಾ ಅಂತ,"

ರೋಷನ್ ಅಲೀ ಮಾತಾಡಲಿಲ್ಲ, ಏನುಅಂತ ಮಾತನಾಡುವುದು?

ಸ್ವಲ್ಪ ಹೊತ್ತು ಕಾಸಿಮನೂ ಮಾತನಾಡಲಿಲ್ಲ.

"ನಿನ್ನನ್ನು ಕಾಗದ ಹಾಕಿ ಬರಲಿಕ್ಕೆ ಹೇಳಿದ್ದು ಯಾಕೆ ಗೊತ್ತುಂಟಾ?" ಕಾಸಿಮನೇ ಆರಂಭಿಸಿದ್ದ; ಮಾತಿನ ಧಾಟಿಯೇ ಬದಲಾಗಿತ್ತು.

ರೋಷನ್ ಅಲೀ ಉತ್ತರಿಸಲಿಲ್ಲ.

"ಕಳೆದ ವಾರ ನಿನ್ನ ಅಬ್ಬ ಇಲ್ಲಿಗೆ ಬಂದಿದ್ರು, ದೋಸೆ ಭಟ್ರು ಕಳಿಸಿದ್ದು ಅವರನ್ನು,"

"ಅಬ್ಬ ಮಂಗಳೂರಿಗೆ ಬಂದಿದ್ರಾ!? ಇರ್ಲಿಕ್ಕಿಲ್ಲ. ಇಲ್ಲಿ ತನ್ಕಬಂದಿದ್ರೆ ಸುರತ್ಕಲ್ಲಿಗೆ ಬಂದು ನನ್ಗೆ ಸಿಕ್ಕದೆ ಹೋಗ್ತಿದ್ರಾ?" ರೋಷನ್ ಅಲೀ ಸವಾಲಿನಂತೆ ಪ್ರಶ್ನಿಸಿದ್ದ.

"ನೀನು ನಂಬದ ಮತ್ತೂ ಒಂದು ಸುದ್ದಿ ಇದೇ ಅಲೀ?"

ರೋಷನ್ ಅಲೀ ಅದ್ಯಾವ ಸುದ್ದಿ ಎಂದು ಕೇಳಲಿಲ್ಲ,

"ನಿನ್ನ ಅಬ್ಬನ ಒಟ್ಟಿಗೆ ಪುಟ್ಟ ಪಂಡಿತ್ರು ಕೂಡಾ ಇದ್ರು."

"ಅಂ! ಪುಟ್ಟ ಪಂಡಿತ್ರು ಕೂಡಾ ಇಲ್ಲಿಗೆ ಬಂದಿದ್ರೂ?!"ರೋಷನ್ ಅಲೀಗೆ ನಂಬಲೇ ಸಾಧ್ಯವಾಗಿದ್ದಿರಲಿಲ್ಲ.

"ಇನ್ನೂ ಕೇಳು. ಅವರು ಏನು ಹೇಳಿದ್ರುಗೊತ್ತುಂಟಾ? ಶಾಲಿನಿಯನ್ನು ಜಾತಿಗೆ ತೆಗೆದುಕೊಂಡು ಮದುವೆಯಾಗು ಅಂತ ಹೇಳಿದ್ರು"

"ಪುಟ್ಟ ಪಂಡಿತ್ರು ಹಾಗೆ ಹೇಳಿದ್ರಾ!? ಜಾತಿಗೆ ತೆಗೆದುಕೊಂಡು ಮದುವೆಯಾಗಲು ಪುಟ್ಟ ಪಂಡಿತ್ರು ಹೇಳಿದ್ರಾ?" ರೋಷನ್ ಅಲೀ ಅನುಮಾನ ವ್ಯಕ್ತಪಡಿಸಿದ್ದ.

"ಹೌದು. ಈಗ ಉಳಿದಿರುವದಾರಿ ಅದು ಮಾತ್ರ ಅಂತ ಹೇಳಿದ್ರು. ಅವ್ಳನ್ನು ಮದುವೆ ಯಾಗಲು ಬೇರೆ ಯಾರೂ ತಯಾರಿಲ್ಲ; ಇದ್ರೂ ಅವ್ಳು ತಯಾರಿಲ್ಲ. ಈಗ ನಾನು ಒಬ್ನೇ ಉಳಿದದ್ದಲ್ವ? ಅವ್ರು ಖಡಕ್ಕಾಗಿಯೇ ಹೇಳಿದ್ರು; ಜಾತಿ ಧರ್ಮಗಳಲ್ಲಿ ನಂಬಿಕೆಯಿಲ್ಲ ಅಂತ ಈಗ ಇರುವ ಕೆಲ್ಸವನ್ನೂ ಕಳ್ಕೊಂಡು, ಅವ್ಳನ್ನು ಕಟ್ಟಿಕೊಂಡು ನೀವೇನೋ ಇಬ್ರು ಊರು ಬಿಟ್ಟು ಓಡಿ ಹೋಗಿ ಎಲ್ಲಾದ್ರೂ ದೂರದಲ್ಲಿ ಏನಾದ್ರೂ ಮಾಡಿಕೊಂಡು ಬದುಕಲು ಸಾಧ್ಯವಿಲ್ಲ ಅಂತ ಅಲ್ಲ. ಬದುಕಬಹುದು. ಆದ್ರೆ ಅವಳ ತಂದೆ, ನಿನ್ನ ತಾಯಿ; ಅವರಿಬ್ರನ್ನು ಏನು ಮಾಡ್ತೀಯಾ? ಅಂತ ಪ್ರಶ್ನಿಸಿದ್ರು, ಅವ್ರು ಇನ್ನೂ ಒಂದು ಮಾತು ಹೇಳಿದ್ರು; ಮದುವೆ ಆದ ನಂತ್ರ ನಾನು ಮುತ್ತುಪ್ಪಾಡಿಗೆ ಮಾತ್ರ ಕಾಲು ಇಡಬಾರದಂತೆ."

"ನೀನೇನು ತೀರ್ಮಾನ ಮಾಡಿದ್ದಿ ಈಗಾ?" ರೋಷನ್ ಅಲೀ ಕುತೂಹಲದಿಂದ ಕೇಳಿದ.

"ನೀನೇನು ಹೇಳ್ತೀ?" ಕಾಸಿಮ್ ಮರು ಪ್ರಶ್ನೆ ಹಾಕಿದ್ದ.

"ಪ್ರೀತಿಸಿದವಳಿಗೆ ಮೋಸ ಮಾಡಬೇಡ. ನಾನು ಹೇಳುವುದು ಅಷ್ಟೆ." ರೋಷನ್ ಅಲೀ ಚುಟುಕಾಗಿ ಉತ್ತರಿಸಿದ್ದ.

* * * *

ಕೊನೆಯ ಸುತ್ತು
ಓಟ ಒಂದು
ಹತ್ತು
–2–

ದೆಹಲಿ ಕರ್ನಾಟಕ ಸಂಘದ ಸೆಕ್ರೆಟರಿ ಗೆಳೆಯ ಸರವು ಕೃಷ್ಣಭಟ್ಟರಿಂದ, ಮಮ್ಮದ್ ಕುಂಞಿಐದು ಪಾಸು ಗಿಟ್ಟಿಸಿಕೊಂಡಿದ್ದ. ಶಾಸ್ತ್ರೀಯ ಸಂಗೀತದ ವಿಷಯದಲ್ಲಿ ಮಮ್ಮದ್ ಕುಂಞಿಗೆ ಅಂತಹ ಆಸಕ್ತಿಯೇನೂ ಇದ್ದಿರಲಿಲ್ಲ. ಕನ್ನಡ ಭಾವಗೀತೆಗಳನ್ನಾದರೆ ಕೇಳುವುದುಂಟು. ಆದರೆ ಅವನಿಗಿದ್ದ ಆಸೆಯೆಂದರೆ ಪಂಡಿತ್ ರಾಜೀವ ತಾರಾನಾಥರನ್ನು ಕಂಡು ಮಾತನಾಡಿಸುವುದು, ಅಷ್ಟೆ.

ರೋಷನ್ ಅಲೀ ಮತ್ತು ಚಾಂದಜ್ಜನವರು ಸಂಜೆ ಸುಮಾರು ಐದಕ್ಕೆ ಮುನಾವರ್ ಖಾನರ ಕಾರಿನಲ್ಲೇ ಹೊರಟದ್ದರೆ, ಇವನ್ನು ಮಕ್ಕಳಿಬ್ಬರನ್ನು ಮನೆಯಲ್ಲೇ ಬಿಟ್ಟು, ಸ್ಕೂಟರಿನಲ್ಲಿ ಹೆಂಡತಿಯನ್ನು ಕರೆದುಕೊಂಡು ಮಧ್ಯಾಹ್ನ ಮೂರಕ್ಕೇ ಮನೆ ಬಿಟ್ಟಿದ್ದ. ಆರ್–ಕೇ ಪುರಮ್‌ನಲ್ಲಿರುವ ದೆಹಲಿ ಕರ್ನಾಟಕ ಸಂಘದ ಕಚೇರಿಯಿಂದ ಕೃಷ್ಣಭಟ್ಟರನ್ನು ಕರೆದುಕೊಂಡು ಹೋಗಿ, ಸಂಗೀತ ಕಛೇರಿಗೂ ಮೊದಲು ಸರೋದ್ ವಾದಕರ ಪರಿಚಯ ಮಾಡಿಕೊಳ್ಳುವ ಪ್ಲಾನು ಅವನದ್ದು. ಅವನ ಆಸೆಯೂ ಫಲಿಸುತ್ತು. ಯಾವುದೇ ಹಮ್ಮು ಬಿಮ್ಮುಗಳಿಲ್ಲದೆ ಮಾತನಾಡಿಸಿದ್ದ ರಾಜೀವ ತಾರಾನಾಥರು, ಹಿಂದೊಮ್ಮೆ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ 'ಸಮುದಾಯ'ದವರ 'ಕುರಿ' ನಾಟಕಕ್ಕಾಗಿ ಸಂಗೀತದ ತಾಲೀಮು ನಡೆಸುತ್ತಿದ್ದಾಗ ಭೇಟಿಯಾಗಿದ್ದುದನ್ನೂ ನೆನಪಿಸಿಕೊಂಡು ನಕ್ಕಾಗ ಮಮ್ಮದ್ ಕುಂಞಿಗೆ ಖುಷಿಯೋ ಖುಷಿ.

ಕಾರ್ಯಕ್ರಮದಂದು ದೆಹಲಿಯ ಕರ್ನಾಟಕ ಸಂಘದಲ್ಲಿ ಕಂಡಾಬಟ್ಟೆ ಜನ. ಕನ್ನಡಿಗರಿಗಿಂತಲೂ ಕನ್ನಡೇತರರೇ ಸಭಾಂಗಣವನ್ನು ಆಕ್ರಮಿಸಿಕೊಂಡುಬಿಟ್ಟಿದ್ದರು. ಸಂಗೀತ ಕಚೇರಿ ನಡೆಸಿ ಕೊಡುವವರ ಖ್ಯಾತಿ ಅಂಥದ್ದು. ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಕುಮ್ಹಾರ್ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಸಂಗೀತ ಮಾಂತ್ರಿಕನ ಪರಿಚಯವನ್ನು ಎಳೆಯೆಳೆಯಾಗಿ ಬಿಡಿಸಿ ವಿವರಿಸಿದ್ದರು.

"ತಮ್ಮನ್ನು ಯಾವತ್ತೂ ಸಂಗೀತದ ವಿದ್ಯಾರ್ಥಿಯೆಂದೇ ವಿನಯದಿಂದ ಬಿಂಬಿಸಿಕೊಳ್ಳುವ ಪಂಡಿತ್ ರಾಜೀವ್ ತಾರಾನಾಥ ಅವರು ತಮ್ಮ ವೃತ್ತಿ ಜೀವನವನ್ನು ಆರಂಭಿಸಿದ್ದು ಇಂಗ್ಲಿಷ್ ಪ್ರೊಫೆಸರ್ ಆಗಿ" ಎಂದು ಅವರು ಹೇಳಿದಾಗ ಕೇಳಿದವರೆಲ್ಲ ದಂಗಾಗಿ ಹೋಗಿದ್ದರು.

"ಸ್ವತಃ ಅಲೋಪತಿ ಡಾಕ್ಟರಾಗಿದ್ದ ಇವರ ತಂದೆ ಪಂಡಿತ ತಾರಾನಾಥರು ಇವರ ಸಂಗೀತದ ಮೊದಲ ಗುರು. ಆದರೆ ಅವರು ಮಗನಿಗೆ ತಬಲಾ ಕಲಿಸಿದ್ದು, ವೈದ್ಯಕೀಯ ವಿದ್ಯೆಗೆ ಪೂರಕವಾಗಲಿ ಎಂಬ ಕಾರಣಕ್ಕೆ. ತಬಲಾದ ವಿವಿಧ ಬೋಲ್‌ಗಳನ್ನು ಅರಿಯುವ ಬೆರಳುಗಳು ಮಾತ್ರ ರೋಗಿಯ ನಾಡಿಯನ್ನು ಹೆಚ್ಚು ನಿಖರವಾಗಿ ಗುರುತಿಸಬಲ್ಲುದು ಎಂಬುದು ಅವರ ವಾದವಾಗಿತ್ತಂತೆ. ಅವರ 'ತಾರಾನಾಥ ಆಶ್ರಮ'ಕ್ಕೆ ಒಂದು ದಿನ ಬಂದಿದ್ದ ವಿಧವೆಯೊಬ್ಬಳು ಪಂಡಿತರ ಕಾಲಿಗೆ ಬಿದ್ದು ತಾನು ಗರ್ಭಿಣಿಎಂದೂ, ಮಗು ಹುಟ್ಟಿದರೆ ಅದರ ಅಪ್ಪ ಯಾರೆಂದು ಹೇಳುವ ಧೈರ್ಯವಿಲ್ಲವೆಂದೂ, ತನಗೆ ಗರ್ಭಪಾತ ಮಾಡಿ ಸಹಾಯ ಮಾಡಬೇಕೆಂದೂ ಕಣ್ಣೀರು ಹಾಕಿ ಬೇಡಿದ್ದಳು.ಆದರೆ ಗರ್ಭಪಾತ ಮಾಡಲು ಸಿದ್ಧರಿಲ್ಲದ ಪಂಡಿತ ತಾರಾನಾಥರು, ಅವಳನ್ನು ಸಮಾಧಾನ ಪಡಿಸಲು ಸಾಕಷ್ಟು ಪ್ರಯತ್ನಿಸುತ್ತಾರೆ. ಆದರೆ ಯಾವುದಕ್ಕೂ ಒಪ್ಪದ ಆಕೆ ಹಠ ಹಿಡಿದಾಗ, 'ಯಾರಾದರೂ ಮಗುವಿನ ತಂದೆ ಯಾರೆಂದು ಕೇಳಿದರೆ ನನ್ನ ಹೆಸರು ಹೇಳು, ಹೆದರಬೇಡ' ಎಂದು ಹೇಳಿಬಿಡುತ್ತಾರೆ. ಅಪರಿಚಿತ ಹೆಣ್ಣಿಗೆ ಈ ಬಗೆಯ ಸಾಂತ್ವನ ನೀಡಿದ ಆ ಗಟ್ಟಿ ಮನಸ್ಸಿನ ತಂದೆಗೆ, ತಕ್ಕ ಮಗ ಈ ರಾಜೀವ ತಾರಾನಾಥರು" ಎಂದು ಹೇಳಿದಾಗ ಇಡೀ ಸಭಾಂಗಣವೇ ಚಪ್ಪಾಳೆ ತಟ್ಟಿ ಅಭಿನಂದಿಸಿತ್ತು.

"ಡಾಕ್ಟರ್ ರಾಜೀವ ತಾರಾನಾಥರು ಹೈದರಾಬಾದಿನ ಇಂಗ್ಲಿಷ್ ಹಾಗೂ ವಿದೇಶಿ ಭಾಷಾಧ್ಯಯನದಲ್ಲಿ ಅಸೋಸಿಯೇಟೆಡ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದಾಗ, ಭೇಟಿಗೆ ಬರುತ್ತಿದ್ದ ಸಿತಾರ್ ಮಾಂತ್ರಿಕ ಪಂಡಿತ್ ರವಿಶಂಕರ್ ಅವರ ಒತ್ತಾಯಕ್ಕೆ ಮಣಿದು, ಕೈ ತುಂಬ ಸಂಬಳ ಕೊಡುತ್ತಿದ್ದ ಉದ್ಯೋಗಕ್ಕೆ ರಾಜೀನಾಮೆ ಸಲ್ಲಿಸಿ, ಸಂಗೀತ ಸೌಂದರ್ಯದ ಆಂತರ್ಯವನ್ನರಿತ ಜಗದ್ವಿಖ್ಯಾತ ಸರೋದ್ ದಿಗ್ಗಜ ಉಸ್ತಾದ್ ಅಲೀ ಅಕ್ಬರ್ ಖಾನರ ಶಿಷ್ಯರಾಗಿ ಸಂಗೀತ ಸಾಧನೆ ಮಾಡಲು ಹೊರಡುತ್ತಾರೆ. ಅಮೇರಿಕಾದ ಸ್ಯಾನ್‌ಫ್ರಾನ್ಸಿಸ್ಕೋದ ಕಾಲೇಜೊಂದರಲ್ಲಿ ಸಂಗೀತ ಕಲಿಸುತ್ತಿದ್ದ ಗುರು ಉಸ್ತಾದ್ ಅಲೀ ಅಕ್ಬರ್ ಖಾನರನ್ನು ಹುಡುಕಿಕೊಂಡು ಅಲ್ಲಿಗೆ ಹೋಗಿದ್ದ ಶಿಷ್ಯ ರಾಜೀವ ತಾರಾನಾಥರನ್ನು ಕಂಡ ಕೂಡಲೇ ಗುರುಗಳು ಉದ್ಗರಿಸಿದ್ದು, 'ನೀನು ಇಲ್ಲಿಗೂ ಬಂದೆ–ಯಾ' ಅಂತ. ಮೊದಲೇ ಶಿಷ್ಯನಿಗೆ ಪ್ರಯಾಣದ ಆಯಾಸ, ಅದರ ಮೇಲೆ ಗುರುಗಳಿಂದ ಈ ರೀತಿಯ ಸ್ವಾಗತ. ಸುಸ್ತಾಗಿ ಕುಳಿತಿದ್ದ ಶಿಷ್ಯನನ್ನು ಕಂಡ ಗುರುಗಳಿಗೆ ಅಯ್ಯೋ ಅನ್ನಿಸಿದ್ದಿರಬೇಕು; ಒಳಗೆ ಹೋಗಿ ಹಾಸಿಗೆಯೊಂದನ್ನು ಸ್ವತಃ ಹೊತ್ತುಕೊಂಡು ಬಂದು ಹಜಾರದಲ್ಲೇ ಹರಡಿ, 'ಸುಮ್ಮನೆ ಮಲಗು' ಎಂದಿದ್ದರಂತೆ. ಶಿಷ್ಯನಿಗೆ ಬೇರೆ ದಾರಿ ಇರಲಿಲ್ಲ. ಪಕ್ಕದಲ್ಲೇ ಕುಳಿತ ಗುರುಗಳು ಸಿಗರೇಟು

ಸೇದುತ್ತಿದ್ದಂತೆ, ಹಾಸಿಗೆಯ ಮೇಲೆ ಬಿದ್ದುಕೊಂಡವನಿಗೆ ವಿಪರೀತ ನಿದ್ರೆ. ಸುಮಾರು ಐದಾರು ತಾಸುಗಳ ನಿದ್ರೆಯಿಂದ ಎಚ್ಚೆತ್ತ ಶಿಷ್ಯ ಕಣ್ಣು ಬಿಟ್ಟಾಗ, ಎದುರಿಗೆ ಗುರುಗಳು ಇನ್ನೂ ಸಿಗರೇಟು ಸೇದುತ್ತಾ ಕುಳಿತಿದ್ದರಂತೆ! ಪಕ್ಕದಲ್ಲಿ ಸೇದಿ ಎಸೆದ ಸಿಗರೇಟುಗಳ ರಾಶಿಯೇ ಬಿದ್ದಿತ್ತಂತೆ. ಗುರುಗಳ ಅವಸ್ಥೆ ಕಂಡ ಶಿಷ್ಯನಿಗೆ ಬೇಸರ, ನಾಚಿಕೆ ಎಲ್ಲ ಆಗಿತ್ತು. 'ಒಳಗೆ ಹೋಗಿ ನಿದ್ರೆ ಮಾಡಿರಿ'ಎಂದು ಶಿಷ್ಯ ಒತ್ತಾಯಿಸಿದಾಗ ಗುರುಗಳ ಪತ್ನಿ ಗೊಳ್ಳನೆ ನಕ್ಕಿದ್ದರಂತೆ. ಅಚ್ಚರಿಯಿಂದ ಕಾರಣ ವಿಚಾರಿಸಿದಾಗ ಅವರು ಹೇಳಿದ್ದರಂತೆ, "ಮಗೂ, ನಿನ್ನ ಭವಿಷ್ಯದ ಬಗ್ಗೆ ಯೋಚಿಸುತ್ತಾ ಹಲವು ರಾತ್ರಿಗಳನ್ನು ನಿದ್ರೆಯಿಲ್ಲದೆ ಕಳೆದಿದ್ದ ಇವರಿಗೆ, ನೀನೇ ಇಲ್ಲಿಗೆ ಬಂದುಬಿಟ್ಟರೆ ನಿದ್ರೆ ಹೇಗೆ ಬಂದಿತು? ಮೊದಲು ಅವರ ಹತ್ರ ನೀನು ಮಾತನಾಡು, ಅನಂತರವಷ್ಟೇ ಅವರು ನಿದ್ರೆ ಮಾಡಿಯಾರು."

ಸಹ ಕಲಾವಿದರ ಪರಿಚಯ ಕಾರ್ಯಕ್ರಮ ಮುಗಿದನಂತರ, 'ಗೊಂಯ್...' ಎಂದು ತಂತಿ ಮೀಟಿದ ಸ್ವರ ಕೇಳಿಸಿದ್ದೇತಡ, ಸಭಾಂಗಣದಲ್ಲೆಲ್ಲ ಮಿಂಚಿನ ಸಂಚಾರವಾಗಿತ್ತು. ಗುಸು ಗುಸು ಮಾತನಾಡುತ್ತಿದ್ದವರೆಲ್ಲ ಉಸಿರು ಬಿಗಿದು ನೇರವಾಗಿ ಕುಳಿತುಬಿಟ್ಟಿದ್ದರು. ತಮ್ಮ ಉಸಿರಾಟದ ಸದ್ದಿನಿಂದ ಸಂಗೀತಕ್ಕೆ ಎಲ್ಲಿ ಅಪಚಾರವಾದೀತೋ ಎಂಭ ಭಯ ಎಲ್ಲರಿಗೂ. ಕುರ್ಚಿಯಲ್ಲಿ ಹಿಂದೆ ಮುಂದೆ ಜರುಗಿದ-ರೆ ಅದರ ಸದ್ದಿನಿಂದ ರಸಭಂಗವಾದೀತೇನೋ ಎಂಬ ಅಳುಕು ಎಲ್ಲರಿಗೂ.

ಯಾವಾಗ ಸಂಗೀತ ಶುರುವಾಯಿತು, ಅವರು ಯಾವ ರಾಗ ನುಡಿಸುತ್ತಿದ್ದಾರೆ, ಅವರು ಯಾವಾಗ ರಾಗ ಬದಲಾಯಿಸುತ್ತಾರೆ ಎಂಬಿತ್ಯಾದಿಗಳ ಪರಿವೆಯೇ ಇಲ್ಲದೆ ಸುಮಾರು ಎರಡು ತಾಸಿನಷ್ಟು ಸಂಮೋಹನಗೊಂಡವರಂತೆ ಕುಳಿತಿದ್ದ ಜನರೆಲ್ಲ ಬೆಚ್ಚಿ ಬಿದ್ದು ಎದ್ದು ನಿಂತದ್ದು, 'ಟಣ್, ಟಣ್ಣಣ್, ಟಿಣ್' ಎಂಬ ಅಪರೂಪದ ಅಪಸ್ವರಕ್ಕೆ.

ಪಂಡಿತ ರಾಜೀವ ತಾರಾನಾಥರ ಕಛೇರಿಯಲ್ಲಿ ಅಪಸ್ವರ!

ಅವರ ಕೈಬೆರಳುಗಳ ಸ್ಪರ್ಷಕ್ಕೆ ಹೂವಿನಂತೆ ಅರಳುತ್ತಿದ್ದ ಸರೋದ್ ವಾದ್ಯದ ತಂತಿಗಳೆಲ್ಲ ತುಂಡು ತುಂಡಾಗಿ, ವೇದಿಕೆಯ ಮೇಲೆ ಬೀಳುತ್ತಿದ್ದ ಸ್ಪಾಟ್‌ಲೈಟುಗಳ ಬೆಳಕಿನಲ್ಲಿ ಕನ್ನಡಿ ಹಾವುಗಳಂತೆ ಹೊಳೆಯುತ್ತಿದ್ದವು.

ಅಷ್ಟಾಗುವಾಗ, ಸಭಾಂಗಣದ ಹಿಂದೆ ಇದ್ದ ಯಾವನೋ ಒಬ್ಬ ಪಿಸುಗುಟ್ಟಿದ್ದ, "ಬಾಬರಿ ಮಸೀದಿ ಬಿತ್ತಂತೇ!"

"ಹೌದಾ!"

"ಬಿತ್ತಾ!?"

"ನಿಜವಾಗಿಯೂ ಬಿತ್ತಾ!!?"

ಎಲ್ಲರ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಗಿತ್ತು.

ಅದುವರೆಗೆ ಸಭಾಂಗಣದ ಶ್ರೋತೃಗಳನ್ನೆಲ್ಲ ತಮ್ಮ ಪ್ರೀತಿಯ ತಂತಿಯಲ್ಲಿ ಬಂಧಿಸಿದ್ದ ಸರೋದ್ ಮಾಮತ್ರಿಕ ರಾಜೀವ ತಾರಾನಾಥರು, ತಲೆ ತಗ್ಗಿಸಿ, ಕಡಿದು ಹೋಗಿರುವ ತಂತಿಗಳನ್ನು ದಿಟ್ಟಿಸುತ್ತಾ ಕಣ್ಣೀರು ಸುರಿಸುತ್ತಿದ್ದರು; ಎಲ್ಲ ತಪ್ಪುಗಳಿಗೂ ತಾವೊಬ್ಬರೇ ಹೊಣೆಗಾರರೆಂಬಂತೆ.

****



'ಸ್ವಾತಂತ್ರ್ಯದ ಓಟ' ಕಾದಂಬರಿ ಬಿಡುಗಡೆಯ ಸಂದರ್ಭದಲ್ಲಿ

ನೈತಿಕ ಪೋಲಿಸ್‌ಗಿರಿ ಪ್ರಕರಣಗಳ ಹುನ್ನಾರವೇನು?



ವ್ಯಂಗ್ಯಚಿತ್ರ ಕೃಪೆ: ಯೂಲ್ ಕೆ ಅಜಾಜ್

ನವೀನ್ ಸೂರಿಂಜೆ
ಟಿವಿ ಪತ್ರಕರ್ತರು

ಅಂದು ಸಂಜೆಯಾಗಿತ್ತು. ಮಂಗಳೂರಿನ ಮೋರ್ಗನ್ ಗೇಟ್ ಬಳಿ ಇರುವ ಎಂಫಾಸಿಸ್ ಎಂಬ ಮಲ್ಟಿನ್ಯಾಶನಲ್ ಕಂಪನಿಯ ಉದ್ಯೋಗಿಗಳಿಬ್ಬರು ತಮ್ಮ ಕೆಲಸ ಮುಗಿಸಿ ಕಂಪನಿ ಗೇಟ್ ಗೆ ಅಟ್ಯಾಚ್ ಆಗಿರುವ ಕಟ್ಟೆಯ ಮೇಲೆ ಕುಳಿತುಕೊಂಡು ಮಾತನಾಡುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ಬಂದ ಹಿಂದೂ ಜಾಗರಣಾ ವೇದಿಕೆಯ ಸದಸ್ಯರು ಇಬ್ಬರ ಮೇಲೆ ಹಿಗ್ಗಾಮುಗ್ಗ ದಾಳಿ ನಡೆಸಿದ್ರು. ಕಾರಣ ಇಷ್ಟೆ. ಇಬ್ಬರ ಪೈಕಿ ಯುವಕ ಮುಸ್ಲಿಮನಾಗಿದ್ದರೆ, ಯುವತಿ ಹಿಂದೂ ಆಗಿದ್ದಳು. ದಾಳಿಯ ತೀವ್ರತೆ ಹೇಗಿತ್ತೆಂದರೆ ಯುವಕನ ಮುಖದಲ್ಲಿ ರಕ್ತ ಬಂದು ಮುಖಪರಿಚಯವೇ ಸಿಗದಂತಿತ್ತು. ದಾಳಿ ಮಾಡಿದ ಹಿಂದೂಜಾಗರಣಾ ವೇದಿಕೆಯ ಕಾರ್ಯಕರ್ತರು ನಂತರ ಸ್ಥಳದಿಂದ ಪರಾರಿಯಾದ್ರು ಎಂದುಕೊಂಡಿದ್ದರೆ ಅದು ತಪ್ಪು. ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಹಲ್ಲೆಗೆ ಒಳಗಾದ ಯುವಕ ಮತ್ತು ಯುವತಿಯನ್ನು ತಮ್ಮ ಕಾರಿನಲ್ಲಿ ಕೂರಿಸಿ ನೇರ ಪಾಂಡೇಶ್ವರ ಪೊಲೀಸ್ ಠಾಣೆಗೆ ಕರೆದೊಯ್ದು ಪೊಲೀಸರಿಗೆ ಒಪ್ಪಿಸಿದ್ರು. ಪೊಲೀಸ್ ಅಧಿಕಾರಿಗಳು ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರಿಗೆ ಟೀ ನೀಡಿ ಕಳುಹಿಸಿದ್ರೆ, ದಾಳಿಗೊಳಗಾದ ಯುವಕ ಮತ್ತು ಯುವತಿಯ ಮನೆಯವರನ್ನು ಕರೆಸಿ, ಅವರಿಂದ ಮುಚ್ಚಳಿಕೆ ಬರೆಸಿಕೊಂಡರು.


ಇದು ಮಂಗಳೂರಿನಲ್ಲಿ ನಡೆಯುವ ಸಹಜ ಘಟನೆ ಎಂಬಂತೆ ನಿತ್ಯ ವರದಿಯಾಗುವ ಘಟನೆಗಳು. ಮಾಧ್ಯಮಗಳಲ್ಲಿ ವರದಿಯಾಗದ ಹೊರತು ನೈತಿಕ ಪೊಲೀಸ್ ಗಿರಿ ಘಟನೆಗಳಲ್ಲಿ ಶೇಕಡಾ 90 ರಷ್ಟು ಘಟನೆಗಳನ್ನು ಪೊಲೀಸರು ಎಫ್ ಐಆರ್ ಕೂಡಾ ಮಾಡುವುದಿಲ್ಲ. ಹಲ್ಲೆಗೆ ಒಳಗಾದ ಯುವಕ ಯುವತಿಯನ್ನೇ ಹೆದರಿಸಿ, ಅವರ ಮರ್ಯಾದೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಆರೋಪಿಗಳನ್ನು ರಕ್ಷಿಸಲಾಗುತ್ತಿದೆ. ಈ ನೈತಿಕ ಪೊಲೀಸ್ ಗಿರಿಗೆ ಕೇವಲ ಧರ್ಮ, ಸಂಸ್ಕೃತಿ ರಕ್ಷಣೆಯ, ಕೋಮುವಾದದ ಅಜೆಂಡಾ ಮಾತ್ರ ಇರುವುದಲ್ಲ. ಬದಲಾಗಿ ಇದಕ್ಕೊಂದು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿವೆ.

ಮಂಗಳೂರಿನಲ್ಲಿ ನಡೆಯುವ ಸಹಜ ಘಟನೆ ಎಂಬಂತೆ ನಿತ್ಯ ವರದಿಯಾಗುವ ಘಟನೆಗಳು. ಮಾಧ್ಯಮಗಳಲ್ಲಿ ವರದಿಯಾಗದ ಹೊರತು ನೈತಿಕ ಪೋಲೀಸ್‌ಗಿರಿ ಘಟನೆಗಳಲ್ಲಿ ಶೇಕಡಾ ೯೦ ರಷ್ಟು ಘಟನೆಗಳನ್ನು ಪೋಲೀಸರು ಎಫ್‌ಐಆರ್ ಕೂಡಾ ಮಾಡುವುದಿಲ್ಲ. ಹಲ್ಲೆಗೆ ಒಳಗಾದ ಯುವಕ ಯುವತಿಯನ್ನೇ ಹೆದರಿಸಿ, ಅವರ ಮರ್ಯಾದೆಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಆರೋಪಿಗಳನ್ನು ರಕ್ಷಿಸಲಾಗುತ್ತಿದೆ. ಈ ನೈತಿಕ ಪೋಲೀಸ್ ಗಿರಿಗೆ ಕೇವಲ ಧರ್ಮ, ಸಂಸ್ಕೃತಿ ರಕ್ಷಣೆಯ, ಕೋಮುವಾದದ ಅಜೆಂಡಾ ಮಾತ್ರ ಇರುವುದಲ್ಲ. ಬದಲಾಗಿ ಇದಕ್ಕೊಂದು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿವೆ.

ಸಾಮಾಜಿಕ ಕಾರಣ

ಬಂಟರು ಮತ್ತು ಬ್ರಾಹ್ಮಣರ ಹಿಡಿತದಲ್ಲಿದ್ದ ಕರಾವಳಿಯಲ್ಲಿ ಉಳುವವನೇ ಹೊಲದೊಡೆಯ ಕಾನೂನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಯಾದ ನಂತರ ಹಿಂದುಳಿದ ವರ್ಗಗಳಾಗಿರುವ ಬಿಲ್ಲವರು ಮತ್ತು ಇನ್ನಿತರ ಜಾತಿಗಳು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಸದೃಡವಾಗಬೇಕಿತ್ತು. ಈ ಬಗ್ಗೆ ಯೋಚಿಸಿದ್ದ ಆರ್ ಎಸ್ ಎಸ್, ಪ್ರದೇಶವಾರು ದೇವಸ್ಥಾನಗಳನ್ನು ಕೇಂದ್ರೀಕರಿಸಿ ಭಜರಂಗದಳ, ಹಿಂದೂ ಜಾಗರಣ ವೇದಿಕೆಗಳನ್ನು ಸ್ಥಾಪನೆ ಮಾಡಿತ್ತು. ದೇವಸ್ಥಾನದ ಜೀರ್ಣೋದ್ದಾರ, ದೇವಸ್ಥಾನ ರಕ್ಷಣೆಗಾಗಿ ಬಿಲ್ಲವ ಸೇರಿದಂತೆ ಹಿಂದುಳಿದ ವರ್ಗಗಳನ್ನು ಕ್ರೋಡಿಕರಿಸಲಾಯ್ತು. ಅಲ್ಲಿಯವರೆಗೂ ಬಂಟರು ಮತ್ತು ಬ್ರಾಹ್ಮಣರ ಜೊತೆ ಸೇರಿಕೊಳ್ಳಲು ಅವಕಾಶವಿರದಿದ್ದ ಹಿಂದುಳಿದ ವರ್ಗಗಳ ಯುವಕರಿಗೆ ಹಿಂದೂ ನಾವೆಲ್ಲ ಒಂದು ಎಂಬ ಭಾವನೆ ಬರಲಾರಂಭಿಸಿತು. ಹಿಂದುಳಿದ ವರ್ಗಗಳ ಯುವಕರನ್ನು ಸಾಮಾಜಿಕವಾಗಿ ಸದೃಡರಾಗದಂತೆ ಮತ್ತು ತನ್ನ ಕಪಿಮುಷ್ಠಿಯಲ್ಲಿ ಇರಿಸಿಕೊಳ್ಳಲು ಬ್ರಾಹ್ಮಣ ಪ್ರೇರಿತ ಆರ್ ಎಸ್ ಎಸ್ ನ ಗುಪ್ತ ಅಜೆಂಡಾ ಸಕ್ಸೆಸ್ ಆಯ್ತು. ಈಗಲೂ ದಕ್ಷಿಣ ಕನ್ನಡದ ಪ್ರತೀ ದೇವಸ್ಥಾನಗಳ ಜಾತ್ರೆ, ಬ್ರಹ್ಮಕಲಶೋತ್ಸವ, ನಾಗಮಂಡಲ, ಜೀರ್ಣೋದ್ದಾರಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಬಿಲ್ಲವರು ಮತ್ತು ಹಿಂದುಳಿದ ವರ್ಗಗಳ ಯುವಕರು ಸ್ವಯಂ ಸೇವಕರಾಗಿರುತ್ತಾರೆ. ಬಂಟರು ದೇವಸ್ಥಾನದ ಮಂಡಳಿಯಲ್ಲಿ ಇರುತ್ತಾರೆ. ಬ್ರಾಹ್ಮಣರು ಅರ್ಚಕ ವರ್ಗವಾಗಿರುತ್ತದೆ. ಇದೇ ಸ್ವಯಂ ಸೇವಕ ವರ್ಗವನ್ನು ಹಿಂದೂ ಧರ್ಮದ ರಕ್ಷಣೆಗೆ ಭಜರಂಗದಳದ ಮೂಲಕ ನೇಮಿಸಲಾಗುತ್ತದೆ. ಧರ್ಮ ಸಂಸ್ಕೃತಿ ಹೆಸರಿನಲ್ಲಿ ಕಾರ್ಯಾಚರಣೆಗೆ ಇಳಿಯುವ ಹಿಂದುಳಿದ ವರ್ಗಗಳ ಯುವಕರು ಜೈಲು ಸೇರುತ್ತಾರೆ. ಕ್ರಿಮಿನಲ್ ಗಳಾಗುತ್ತಾರೆ. ಮಂಗಳೂರಿನಲ್ಲಿ ಕಳೆದ ಹದಿನೈದು, ಇಪ್ಪತ್ತು ವರ್ಷಗಳಲ್ಲಿ ಇಷ್ಟೊಂದು ಪ್ರಮಾಣದ ಕೋಮುಗಲಭೆಗಳು, ನೈತಿಕ ಪೊಲೀಸ್ ಗಿರಿಗಳು, ಧರ್ಮಕ್ಕಾಗಿ ಕಾದಾಟ, ಕೊಲೆಗಳು ನಡೆದಿದೆ. ನೀವು ನಂಬಲೇಬೇಕು. ಇಷ್ಟೂ ಘಟನೆಗಳಲ್ಲಿ ಒಬ್ಬನೇ ಒಬ್ಬ ಬ್ರಾಹ್ಮಣ ಬಂಧಿತನಾಗಿ ಜೈಲು ಸೇರಿಲ್ಲ. ಜೈಲು ಸೇರಿದವರೆಲ್ಲರೂ ಶೂದ್ರರು. ಅಂದರೆ ಹಿಂದುಳಿದ ವರ್ಗಗಳನ್ನು ಯಥಾಸ್ಥಿತಿಯಲ್ಲಿ ಇಡುವ, ಆ ಮೂಲಕ ಪುರೋಹಿತಶಾಹಿ ವರ್ಗ ತನ್ನನ್ನು ತಾನು ರಕ್ಷಿಸಿಕೊಳ್ಳಲು ಯತ್ನ ನಡೆಸುತ್ತಿದೆ ಎಂಬುದಂತೂ ಸ್ಪಷ್ಟ.

ಮಂಗಳೂರು ಹೊರವಲಯದ ಎಡಪದವು ಪದವಿಪೂರ್ವ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ಮತ್ತು ನಾಲ್ವರು ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದ ಅಂತರ್ ಕಾಲೇಜು ಕ್ರೀಡಾ ಕೂಟಕ್ಕೆ ಪ್ರಾಂಶುಪಾಲರು ಆಯ್ಕೆ ಮಾಡಿದ್ದರು. ಕಾಲೇಜಿನ ಕ್ರೀಡಾ ಉಪನ್ಯಾಸಕರ ಸೂಚನೆಯಂತೆ ಮಂಗಳೂರಿನಲ್ಲಿ ನಡೆಯುತ್ತಿದ್ದ





ಕ್ರೀಡಾ ಕೂಟಕ್ಕೆ ಎಂಟೂ ಜನ ವಿದ್ಯಾರ್ಥಿಗಳು ಬಸ್ಸಿನಲ್ಲಿ ಮಂಗಳೂರಿಗೆ ಬರುತ್ತಿದ್ದರು. ಬಸ್ಸು ವಾಮಂಜೂರು ದಾಟುತ್ತಿದ್ದಂತೆ ಬಸ್ಸನ್ನು ಹಿಂಬಾಲಿಸಿ ಬಂದ ಹತ್ತಾರು ಬೈಕ್ ಸವಾರರು ಬಸ್ಸನ್ನು ನಿಲ್ಲಿಸಿದ್ರು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಬಸ್ಸಿನಿಂದ ಇಳಿಸಿ ಹಲ್ಲೆ ಮಾಡಲಾಯ್ತು. ವಿದ್ಯಾರ್ಥಿಗಳ ಪೈಕಿ ಇಬ್ಬರು ಮುಸ್ಲಿಂ ವಿದ್ಯಾರ್ಥಿಗಳಿದ್ದುದು ಇದಕ್ಕೆ ಕಾರಣವಾಗಿತ್ತು. ಹಿಂದೂ ವಿದ್ಯಾರ್ಥಿನಿಯರ ಜೊತೆ ಮಜಾ ಉಡಾಯಿಸಲು ಹೋಗುತ್ತಿದ್ದ ಮುಸ್ಲಿಂ ವಿದ್ಯಾರ್ಥಿಗಳು ಎಂಬ ಕಾರಣಕ್ಕಾಗಿ ದಾಳಿ ನಡೆಸಲಾಯ್ತು ಎಂದು ಹಿಂದೂ ಸಂಘಟನೆಗಳು ಹೇಳಿಕೆ ಕೊಟ್ಟವು. ಮರುದಿನ ಹಲವು ಪತ್ರಿಕೆಗಳಲ್ಲೂ ಹಿಂದೂ ಸಂಘಟನೆಗಳ ಹೇಳಿಕೆ ಪ್ರಕಟವಾಯ್ತು. ಮರುದಿನ ಸ್ವತಃ ಕಾಲೇಜು ಪ್ರಾಂಶುಪಾಲರೇ ಸ್ಪಷ್ಟೀಕರಣ ನೀಡಿ ವಿದ್ಯಾರ್ಥಿಗಳನ್ನು ಕಾಲೇಜಿನ ವತಿಯಿಂದಲೇ ಕ್ರೀಡಾ ಕೂಟದಲ್ಲಿ ಭಾಗವಹಿಸಲು ಸೂಚಿಸಲಾಗಿತ್ತು. ತಪ್ಪು ಗ್ರಹಿಕೆಯಿಂದ ದಾಳಿಯಾಗಿ ವಿದ್ಯಾರ್ಥಿಗಳು ಕ್ರೀಡಾಕೂಟದ ಅವಕಾಶ ವಂಚಿತರಾಗಿದ್ದಾರೆ ಎಂದರು.

ಈ ಪ್ರಕರಣದ ಆಳಕ್ಕಿಳಿದಾಗ ಇದು ಹಿಂದು ಸಂಘಟನೆಗಳ ತಪ್ಪು ಗ್ರಹಿಕೆಯಿಂದ ಆಗಿರುವ ದಾಳಿಯಷ್ಟೇ ಅಲ್ಲ ಎಂಬುದು ಸ್ಪಷ್ಟವಾಯ್ತು. ಎಂಟು ಜನ ವಿದ್ಯಾರ್ಥಿಗಳ ಪೈಕಿ ನಾಲ್ವರು ವಿದ್ಯಾರ್ಥಿನಿಯರು. ನಾಲ್ವರು ವಿದ್ಯಾರ್ಥಿನಿಯರ ಪೈಕಿ ಒರ್ವ ವಿದ್ಯಾರ್ಥಿನಿ ದಲಿತ ಸಮುದಾಯಕ್ಕೆ ಸೇರಿದವಳಾಗಿದ್ದಳು. ದಲಿತ ಸಮುದಾಯದ ವಿದ್ಯಾರ್ಥಿನಿ ಮೇಲ್ವರ್ಗದವರೇ ಅತ್ಯಧಿಕ ಸಂಖ್ಯೆಯಲ್ಲಿರುವ ಗ್ರಾಮದಲ್ಲಿ ಹೆಚ್ಚು ಕ್ರೀಯಾಶೀಲವಾಗಿರೋದು ಉಳಿದ ಜಾತಿಗಳವರ ಅಸಹನೆಗೆ ಕಾರಣವಾಗಿತ್ತು. ಈ ಬಗ್ಗೆ ದಲಿತ ವಿದ್ಯಾರ್ಥಿನಿಯ ಪೋಷಕರಿಗೆ ಹಲವು ಬಾರಿ ಎಚ್ಚರಿಕೆಯನ್ನೂ ನೀಡಿದ್ದರು. ನಿಮ್ಮ ಹುಡುಗಿಯ ಹಾರಾಟ ಜಾಸ್ತಿಯಾಗುತ್ತಿದೆ ಎಂದು ಹೇಳಿದ್ದರು. ವಿದ್ಯಾರ್ಥಿನಿಯ ಕ್ರೀಯಾಶೀಲತೆಯೇ ಮೇಲ್ವರ್ಗಗಳಿಗೆ ಹಾರಾಟವಾಗಿ ಕಾಣುತ್ತಿತ್ತು. ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ತೆರಳುತ್ತಿದ್ದ ಪ್ರತಿಭಾವಂತ ವಿದ್ಯಾರ್ಥಿನಿ ಇದ್ದ ತಂಡದ ಮೇಲೆ ದಾಳಿ ನಡೆಸುವ ಮೂಲಕ ವಿದ್ಯಾರ್ಥಿನಿ ಎಲ್ಲಾ ಶಾಲಾ ಚಟುವಟಿಕೆಗಳಿಗೆ ಬ್ರೇಕ್ ಹಾಕುವಲ್ಲಿ ಭಜರಂಗದಳದ ಮೂಲಕ ಮೇಲ್ವರ್ಗಗಳು ಸಫಲವಾದ್ವು.

ಆರ್ಥಿಕ ಕಾರಣಗಳು

ಕೋಮುಗಲಭೆಗಳು ಮತ್ತು ನೈತಿಕ ಪೊಲೀಸ್ ಗಿರಿಯಲ್ಲಿ ಆರ್ಥಿಕ ಕಾರಣಗಳು ಪ್ರಮುಖ ಪಾತ್ರ ವಹಿಸುತ್ತವೆ. ಮಂಗಳೂರಿನ ಬೀಚ್ ನಲ್ಲಿ ಹಿಂದೂ ಮುಸ್ಲಿಂ ಯುವಕ ಯುವತಿ ಕೈ ಕೈ ಹಿಡಿದುಕೊಂಡು ವಿಹರಿಸುವಂತಿಲ್ಲ. ಹೊಟೇಲ್ ಗಳಲ್ಲಿ ಟೀ ಕುಡಿಯುವಂತಿಲ್ಲ. ಬೇರೆ ಬೇರೆ ಧರ್ಮದ ಯುವಕ ಯುವತಿ ಜತೆಯಾಗಿ ಐಸ್ ಕ್ರೀಂ ಪಾರ್ಲರ್ ಹೋಗುವಂತಿಲ್ಲ. ಅಷ್ಟೇಕೆ, ಬಸ್ಸಿನಲ್ಲಿ ಅಚಾನಕ್ ಆಗಿಯೂ ಅಕ್ಕಪಕ್ಕದ ಸೀಟಿನಲ್ಲಿ ಕೂರುವಂತಿಲ್ಲ. ಆದರೆ ಹಿಂದೂ ಮುಸ್ಲಿಂ ಯುವಕ ಯುವತಿ ಸಿಟಿ ಸೆಂಟರ್ ಮಾಲ್ ಗೆ ಹೋಗಬಹುದಿತ್ತು. ಕಾರಣ ಸಿಟಿ ಸೆಂಟರ್ ಮಾಲ್ ನ ಸೆಕ್ಯೂರಿಟಿ ಮತ್ತು ನಿರ್ವಹಣೆಯ ಗುತ್ತಿಗೆ ಭಜರಂಗದಳದ ನಾಯಕನದ್ದಾಗಿತ್ತು !

ಅಮ್ನೇಶಿಯಾ ಪಬ್ ನಲ್ಲಿ ಹಿಂದೂ ಯುವಕ ಯುವತಿಯರು ಜೊತೆಯಾಗಿ ಕುಡಿಯುತ್ತಿದ್ದಾರೆ ಎಂದು ಶ್ರೀರಾಮ ಸೇನೆ ದಾಳಿ ನಡೆಸಿದ್ದು ನಿಮಗೆ ನೆನಪಿರಬಹುದು. ಹಿಂದೂ ಸಂಸ್ಕೃತಿಗೆ ವಿರುದ್ಧವಾಗಿ ಹಿಂದೂ ಯುವತಿಯರು ಉಡುಗೆ ತೊಟ್ಟುಕೊಂಡು ಮುಸ್ಲಿಂ ಯುವಕರ ಜೊತೆ ಅಶ್ಲೀಲ ನೃತ್ಯ ಮಾಡುತ್ತಿದ್ದಾರೆ ಎಂಬುದು ಶ್ರೀರಾಮಸೇನೆಯ ಆರೋಪವಾಗಿತ್ತು. ಪಬ್ ನಲ್ಲಿದ್ದ ಯುವಕ ಯುವತಿಯರನ್ನು ಅಟ್ಟಾಡಿಸಿ ಹೊಡೆದ ದೃಶ್ಯ ರಾಷ್ಟ್ರೀಯ ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದ್ದಂತೆ ದಾಳಿಕೋರ ಶ್ರೀರಾಮಸೇನೆಯ ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಮಾತ್ರವಲ್ಲ, ಮಂಗಳೂರಿನಲ್ಲಿ ತಾಲೀಬಾನ್ ಕೃತ್ಯ ನಡೆಯುತ್ತಿದೆ ಎಂದು ಆಗಿನ ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯ ಹೇಳಿಕೆ ಬಾರೀ ಚರ್ಚೆಗೀಡು ಮಾಡಿತ್ತು. ಆದರೆ ಈ ದಾಳಿಯ ಹಿಂದಿನ ಅಸಲಿಯತ್ತು ಕೇವಲ ಹಿಂದೂ ಸಂಸ್ಕೃತಿಯ ರಕ್ಷಣೆ ಆಗಿರಲಿಲ್ಲ. ಅಮ್ನೇಶಿಯಾ ಪಬ್ ಎದುರು ಮತ್ತೊಂದು ಪಬ್ ಇದೆ. ಈ ಪಬ್ ನಲ್ಲೂ ಇದೇ ರೀತಿಯ ವೀಕೆಂಡ್ ಪಾರ್ಟಿಗಳು ನಡೆಯುತ್ತಿರುತ್ತದೆ. ಆ ಪಬ್ ನ ಬೌನ್ಸರ್ ಮತ್ತು ಸೆಕ್ಯೂರಿಟಿ ಗುತ್ತಿಗೆ ಶ್ರೀರಾಮಸೇನೆಯ ಜಿಲ್ಲಾ ಸಂಚಾಲಕ ಪ್ರಸಾದ್ ಅತ್ತಾವರನದ್ದು. ಅಮ್ನೇಶಿಯಾ ಪಬ್ ನಲ್ಲೂ ಪ್ರಸಾದ್ ಅತ್ತಾವರ ಸೆಕ್ಯೂರಿಟಿ ಗುತ್ತಿಗೆ ಕೇಳಿದ್ದ. ಗುತ್ತಿಗೆ ನೀಡುವುದಿಲ್ಲ ಎಂದು ಖಚಿತವಾದ ಮೇಲೆ ಮೊದಲೇ ಧರ್ಮ ರಕ್ಷಣೆಯ ಗುತ್ತಿಗೆ ಅಮಲೇರಿಸಿ ಸಿದ್ದಗೊಳಿಸಲಾಗಿದ್ದ ಯುವಕರನ್ನು ದಾಳಿಗೆ ಬಳಸಿ ಕಾರ್ಯಾಚರಣೆ ನಡೆಸಿದ್ದ.

ಹಿಂದೂ ಸಂಘಟನೆಗಳು ಮತ್ತು ಜನಸಂಘ ಮಂಗಳೂರಿನಲ್ಲಿ ಹುಟ್ಟಿಕೊಂಡು ಬೆಳೆದ ಇತಿಹಾಸವನ್ನು ಗಮನಿಸಿದ್ರೆ, ಅದರ ಹಿಂದೆ ಫಂಡಿಂಗ್ ಇದ್ದಿದ್ದು ವ್ಯಾಪಾರಿ ವರ್ಗವಾಗಿದ್ದ ಗೌಡ ಸಾರಸ್ವತ ಬ್ರಾಹ್ಮಣರದ್ದು. ಬಿಜೆಪಿಯನ್ನು ತೀರಾ ಇತ್ತೀಚ್ಚಿನವರೆಗೂ ಕೊಂಕಣಿಗಳ ಪಾರ್ಟಿ ಎಂದೇ ಕರೆಯುತ್ತಿದ್ದರು. ಅಂದರೆ ವ್ಯಾಪಾರಿ ವರ್ಗವಾಗಿರುವ ಮುಸ್ಲಿಮರು ಮತ್ತು ಗೌಡ ಸಾರಸ್ವತ ಬ್ರಾಹ್ಮಣರ ಮಧ್ಯೆ ಇದ್ದ ಲಾಭ ನಷ್ಟದ ವ್ಯಾಪಾರಿ ಸಂಘರ್ಷಕ್ಕಾಗಿ ಹಿಂದೂ ಸಂಘಟನೆಗಳನ್ನು ಪೋಷಿಸಲಾಯ್ತು ಎಂಬುದು ಕಂಡು ಬರುತ್ತದೆ.

ಸಾಂಸ್ಕೃತಿಕ ಕಾರಣಗಳು

ಕರಾವಳಿಯಲ್ಲಿ ನಡೆಯುವ ನೈತಿಕ ಪೊಲೀಸ್ ಗಿರಿ ಸಂಧರ್ಭದಲ್ಲಿ ಹುಡುಗ, ಹುಡುಗಿ ಮೇಲೆ ನಡೆಯುವ ದಾಳಿಗೆ ಯಾವ ರಾಜಕೀಯ ಅಜೆಂಡಾವೂ ಇಲ್ಲದ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದು ಜಿಲ್ಲೆಯ ಜನರ ಮನಸ್ಥಿತಿಯನ್ನು ಹೇಳುತ್ತದೆ. "ಮತ್ಯಾಕೆ ಬೇಕಿತ್ತು ಅವಳಿಗೆ ಮುಸ್ಲಿಂ ಯುವಕನ ಸಹವಾಸ ?" ಮತ್ಯಾಕೆ ಅವಳು ಅಂತಹ ತುಂಡು ತುಂಡು ಡ್ರೆಸ್ ಹಾಕಿಕೊಂಡು ಹೋಗಬೇಕಿತ್ತು ?" ಎಂದೇ ಜನರು ಪ್ರತಿಕ್ರಿಯಿಸುತ್ತಾರೆ. ಇದೇ ಕಾರಣಕ್ಕಾಗಿ ಇಲ್ಲಿ ಹಿಂದೂ ಯುವತಿಯರ ಸಂಸ್ಕೃತಿ ರಕ್ಷಣೆಯ ಬಾಷಣ ಮಾಡಿ ಶಾಸಕ, ಸಂಸದನಾಗಬಹುದು. ಇಂತಹ ಮನಸ್ಥಿತಿ ಜನರಲ್ಲಿ ಬೆಳೆಯಲು ಇಲ್ಲಿನ ಸಂಸ್ಕೃತಿಗಳೂ ಪ್ರಮುಖ ಕಾರಣವಾಗುತ್ತದೆ. ತನ್ನ ಧರ್ಮವೇ ಶ್ರೇಷ್ಠ,

ಧಾರ್ಮಿಕ ಕತೆಗಳಲ್ಲಿ ಬರುವ ನಡವಳಿಕೆಗಳೇ ನಮ್ಮ ಸಂಸ್ಕೃತಿ ಎಂದು ಜನ ಅಂದುಕೊಳ್ಳುವುದೇ ಧಾರ್ಮಿಕ ಮೂಲಭೂತವಾದ. ಯಕ್ಷಗಾನ ಎಂಬ ಯಶಸ್ವೀ ಮಾಧ್ಯಮವನ್ನು ಸಂಘಪರಿವಾರ ಹೈಜಾಕ್ ಮಾಡುವ ಮೂಲಕ ಇಂತಹ ಧಾರ್ಮಿಕ ಮೂಲಭೂತವಾದವನ್ನು ಅನಕ್ಷರಸ್ಥರಿಗೂ, ಗ್ರಾಮೀಣ ಜನರಿಗೂ ತುಂಬಲಾಗಿದೆ. ದೇವಸ್ಥಾನಗಳ ಸುಪರ್ಧಿಯಲ್ಲಿ ಬರುವ ಯಕ್ಷಗಾನವನ್ನು ಹರಕೆಯಾಗಿ ಆಡಿಸುವ ಸಂಪ್ರದಾಯವನ್ನು ಬಳಸಿ, ಯಕ್ಷಗಾನವನ್ನು ಧಾರ್ಮಿಕ ಕಾರ್ಯಕ್ರಮವನ್ನಾಗಿ ನಡೆಸಿ, ಅದಕ್ಕೆ ಇದ್ದ ಪಾವಿತ್ರ್ಯತೆಯ ದುರ್ಬಳಕೆ ಮಾಡಲಾಗಿದೆ. ಯಕ್ಷಗಾನದ ಮುನ್ನ ಕಲಾವಿಧರ ವೇಷ ಭೂಷಣಗಳಿಗೆ ನಡೆಯುವ ಚೌಕಿ ಪೂಜೆ ಅತ್ಯಂತ ಪವಿತ್ರ ಸ್ಥಾನದಲ್ಲಿದೆ. ಈ ರೀತಿ ಯಕ್ಷಗಾನಕ್ಕೊಂದು ಧಾರ್ಮಿಕ ಪಾವಿತ್ರ್ಯತೆ ನೀಡಿ, ಯಕ್ಷಗಾನದ ಮೂಲಕ ಹೇಳುವ ಕತೆ ಮತ್ತು ಅದಕ್ಕೆ ಪೂರಕವಾಗಿರುವ ಉಪನ್ಯಾಸಗಳ ಮೂಲಕ ಜನರ ಮನಸ್ಸಿನಲ್ಲಿ ಧಾರ್ಮಿಕ ಮೂಲಭೂತವಾದವನ್ನು ಗಟ್ಟಿಗೊಳಿಸಲು ದುರ್ಬಳಕೆ ಮಾಡಲಾಗಿದೆ. ರಾಮಾಯಣ ಮತ್ತು ಮಹಾಭಾರತದ ಕತೆಗಳು ಯಕ್ಷಗಾನದಲ್ಲಿ ಹೆಚ್ಚು ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಈ ಯಕ್ಷಗಾನ ಎಂಬುದು ಮಂಗಳೂರಿನಲ್ಲಿ ಎಷ್ಟೊಂದು ಪ್ರಬಲ ಮಾಧ್ಯಮವೆಂದರೆ, ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನದ ದಶಾವತಾರ ಯಕ್ಷಗಾನ ಮಂಡಳಿಯಲ್ಲಿ ಹರಕೆಯ ಯಕ್ಷಗಾನವಾಗಿ ಇವತ್ತು ನೀವು ನೊಂದಣಿ ಮಾಡಿಸಿದ್ರೆ ನಿಮ್ಮ ಸರದಿ ಬರುವುದು ನಾಲ್ಕು ವರ್ಷಗಳ ನಂತರ! ಕಟೀಲು ದಶಾವತಾರ ಯಕ್ಷಗಾನ ಮಂಡಳಿ ಎಂಬ ಹತ್ತು ತಂಡಗಳಿದ್ದಾಗ್ಯೂ ! ವೈದಿಕರ ಪ್ರಧಾನ ಸಂಸ್ಕೃತಿಯನ್ನು ಜನರ ಮೇಲೆ ಹೇರಲು ಯಕ್ಷಗಾನವನ್ನು ಪರಿಣಾಮಕಾರಿಯಾಗಿ ದುರ್ಬಳಕೆ ಮಾಡಲಾಗಿದೆ. ಇದೇ ರೀತಿ ಭೂತಾರಾಧನೆ ಮುಂತಾದ ಧಾರ್ಮಿಕ ನಂಬಿಕೆ–ಆಚರಣೆಗಳನ್ನೂ ಸಂಘ ಪರಿವಾರ ಹೈಜಾಕ್ ಮಾಡಿದೆ.

ದೂರದ ರಾಮಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿ ಅತ್ಯಂತ ಸೂಕ್ಷ್ಮ ಪ್ರದೇಶವಾಗಿ ಕರ್ನಾಟಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಗುರುತಿಸಿಕೊಳ್ಳಲು ಈ ಯಕ್ಷಗಾನಗಳೂ ಕಾರಣ. ರಾಮ ಕರಾವಳಿಗರ ದೇವರೇ ಅಲ್ಲದಿದ್ದರೂ ಯಕ್ಷಗಾನದ ಮೂಲಕ ರಾಮ ಮತ್ತಿತರ ವೈದಿಕರ ದೇವರನ್ನು ತುಳುವರ ದೇವರನ್ನಾಗಿಸಿದ್ದರು. ಕರಾವಳಿಗರ ಕಿರು ಸಂಸ್ಕೃತಿಯಾಗಿರುವ ಭೂತಾರಾಧನೆ, ನಾಗಾರಾಧನೆಯನ್ನೂ ಪ್ರಧಾನ ಸಂಸ್ಕೃತಿಗಳು ಹೈಜಾಕ್ ಮಾಡಿಕೊಂಡಿದೆ. ಈ ರೀತಿ ವೈದಿಕ ಧರ್ಮದ ಮೂಲಭೂತವಾದ ಜನರಲ್ಲಿ ಗಟ್ಟಿಗೊಳ್ಳುತ್ತಿದ್ದಂತೆ ಧರ್ಮ ರಕ್ಷಣೆಗೆ ಕಾಲಾಳುಗಳು ಸುಲಭವಾಗಿ ಸಿಕ್ಕಿ ಬಿಡುತ್ತಾರೆ.


ರಾಜಕೀಯ ಕಾರಣಗಳು

ಕರಾವಳಿಯಲ್ಲಿ ಅತ್ಯಂತ ಹೆಚ್ಚು ಮಾರಲ್ ಪೊಲೀಸಿಂಗ್ ಗಳು ನಡೆಯುವುದು ಕಾಂಗ್ರೆಸ್ ಆಡಳಿತವಿದ್ದಾಗಲೇ ಎಂಬುದು ಗಮನಾರ್ಹ. ಎಸ್ ಎಂ ಕೃಷ್ಣ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ರಮಾನಾಥ ರೈ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂಧರ್ಭದಲ್ಲಿ ಅತ್ಯಂತ ಹೆಚ್ಚು ನೈತಿಕ ಪೊಲೀಸ್ ಗಿರಿಗಳು ಮತ್ತು ಕೋಮುಗಲಭೆಗಳು ನಡೆದ್ವು. ಆರ್ ಎಸ್ ಎಸ್ ನ ಸಹ ಸಂಘಟನೆಗಳು ಈ ಕೃತ್ಯವನ್ನು ಮಾಡುವ ಮೂಲಕ ಬಿಜೆಪಿ ಗೆಲುವಿಗೆ ರಹದಾರಿಯನ್ನು ಮಾಡಿಕೊಡುತ್ತದೆ. ಕಾಂಗ್ರೆಸ್ ಆಡಳಿತದಲ್ಲಿ ಮುಸ್ಲೀಮರ ಓಲೈಕೆ ನಡೆಯುತ್ತದೆ, ಆ ಬಲದಿಂದಲೇ ಹಿಂದೂ ಯುವತಿಯರನ್ನು ಮುಸ್ಲಿಂ ಯುವಕರು ಪಟಾಯಿಸುತ್ತಾರೆ ಎಂಬುದು ಹಿಂದೂ ಸಂಘಟನೆಗಳ ಮಾಮೂಲಿ ಆರೋಪ. ಇಂತಹ ಆರೋಪ ಮಾಡುವ ಮೂಲಕ ನೈತಿಕ ಪೊಲೀಸ್ ಗಿರಿ ಮತ್ತು ಕೋಮುಗಲಭೆಗೊಂದು ಜನಸಾಮಾನ್ಯರಲ್ಲಿ ಸಮರ್ಥನೆಯ ಮನಸ್ಥಿತಿಯನ್ನು ತಂದುಕೊಂಡೇ ಬಿಜೆಪಿ ಕರಾವಳಿಯಲ್ಲಿ ಜಯಭೇರಿ ಬಾರಿಸಿತು ಎಂಬುದು ಗಮನಾರ್ಹ.

ಇನ್ನೂ ಒಂದು ಗಂಭೀರ ವಿಚಾರವನ್ನು ಪ್ರಸ್ತಾಪಿಸಲೇಬೇಕು. ಬಂಡವಾಳವಾದಕ್ಕೂ, ಕೋಮುವಾದಕ್ಕೂ ಸಂಬಂಧವಿದೆ. ಮಂಗಳೂರು ರಿಫೈನರಿ ಪೆಟ್ರೋಕೆಮಿಕಲ್ ಪ್ರೈವೇಟ್ ಲಿಮಿಟೆಡ್ (ಒಖಕಪ) ವಿಸ್ತರಣೆಗಾಗಿ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಲಾಯ್ತು. ಎಲ್ಲಾ ರೈತರು ಅಮಿಷಕ್ಕೊಳಗಾಗಿ ಭೂಮಿ ನೀಡಿದ್ರೆ ಗ್ರೆಗೋರಿ ಪತ್ರಾವೋ ಎಂಬ ದಿಟ್ಟ ರೈತ ಭೂಮಿ ನೀಡಲು ಒಪ್ಪದೆ ಕೋರ್ಟ್ ಮೆಟ್ಟಿಲೇರಿದ್ರು. ಕೊನೆಗೊಂದು ದಿನ ಕೋರ್ಟಿನ ಅಂತಿಮ ಆದೇಶಕ್ಕೂ ಕಾಯದೆ ರೈತ ಗ್ರೆಗೋರಿ ಪತ್ರಾವೋ ಮನೆ ಕೆಡವಿ, ಭೂಸ್ವಾಧೀನ ಮಾಡಲು ಎಸ್ ಇ ಝಡ್ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಬಂದರು. ಹಲವು ರೈತರು ಗ್ರೆಗೋರಿ ಪತ್ರಾವೋ ಪರ ಗುಂಪುಗೂಡಿದಾಗ ಎಸ್ ಇ ಝಡ್ ಕಂಪನಿ ಮೊರೆ ಹೋಗಿದ್ದು ಹಿಂದೂ ಜಾಗರಣಾ ವೇದಿಕೆಯನ್ನು. ಹಿಂದೂ ಜಾಗರಣಾ ವೇದಿಕೆಯ ಗೂಂಡಾ ಕಾರ್ಯಕರ್ತರ ಮೂಲಕ ಮನೆ ಖಾಲಿ ಮಾಡಿಸಲಾಯ್ತು.

ಮಂಗಳೂರು ವಿಶೇಷ ಆರ್ಥಿಕ ವಲಯದ ಮೊದಲನೇ ಹಂತಕ್ಕೆ 1800 ಎಕರೆ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸುವ ವೇಳೆ ಹಲವು ರೈತ ಕುಟುಂಬಗಳು ವಿರೋಧ ವ್ಯಕ್ತಪಡಿಸಿದ್ದವು. ಆಗ ರೈತರ ಮನೆ ಖಾಲಿ ಮಾಡಿಸಲು ಎಸ್ ಇ ಝಡ್ ಬಳಸಿಕೊಂಡಿದ್ದು ಮತ್ತದೇ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರನ್ನು. ಈ ಸಂಧರ್ಭದಲ್ಲಿ ರೈತರು, ತಮ್ಮ ಮನೆಗೆ ನುಗ್ಗಿದ ಗೂಂಡಾಗಳ ವಿರುದ್ಧ ಬಜಪೆ ಠಾಣೆಯಲ್ಲಿ ದೂರು ದಾಖಲಿಸಿದ್ದರು. ರೈತರು ಯಾರ ವಿರುದ್ಧ ದೂರು ದಾಖಲಿಸಿದ್ದರೋ ಅದೇ ಹಿಂದೂ ಜಾಗರಣಾ ವೇದಿಕೆಯ ಗೂಂಡಾಗಳು ಹೋಮ್ ಸ್ಟೇ ಮೇಲೆ ದಾಳಿ ನಡೆಸಿ ಯುವಕ ಯುವತಿಯರ ಜೊತೆ ಅಮಾನವೀಯವಾಗಿ ನಡೆದುಕೊಂಡಿದ್ದರು. ಇದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿ ಹಿಂದೂ ಜಾಗರಣಾ ವೇದಿಕೆಯ 42 ಕಾರ್ಯಕರ್ತರು ಜೈಲು ಸೇರಿದ್ದರು.

ಮಂಗಳೂರು ವಿಶೇಷ ಆರ್ಥಿಕ ವಲಯದ ಎರಡನೇ ಹಂತಕ್ಕಾಗಿ 2035 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಗೊಳಿಸಲು ನೊಟಿಫಿಕೇಷನ್ ಜಾರಿಯಾಗಿತ್ತು. ಕ್ರಿಶ್ಚಿಯನ್ನರೇ ಅಧಿಕ ಸಂಖ್ಯೆಯಲ್ಲಿರುವ ಬಜಪೆ, ಪೆರ್ಮುದೆ, ಕುತ್ತೆತ್ತೂರು ಗ್ರಾಮಗಳೂ ಸೇರಿದಂತೆ ಹಚ್ಚಹಸುರಿನ ಕೃಷಿ ಭೂಮಿಯನ್ನು ಕೈಗಾರಿಕೆಗಾಗಿ ಸರ್ವೆ ಮಾಡಿದ್ದರು. ರೈತರು ಕೃಷಿ ಭೂಮಿ ಸಂರಕ್ಷಣಾ ಸಮಿತಿ ರಚಿಸಿಕೊಂಡು ಹೋರಾಟಕ್ಕಿಳಿದಿದ್ದರು. 2035 ಎಕರೆ ಭೂಸ್ವಾಧೀನ ಸಾಧ್ಯವೇ ಇಲ್ಲ ಅನ್ನುವಷ್ಟರ ಮಟ್ಟಿಗೆ



ಹೋರಾಟ ಬಂದು ನಿಂತಿತ್ತು. ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ನಾಯಕರೇ ಹೋರಾಟದ ಜೀವಾಳವಾಗಿದ್ದರು. ಬಜಪೆ ಮತ್ತು ಪೆರ್ಮುದೆ ಚರ್ಚ್ ಗಳಲ್ಲೂ ಭೂಸ್ವಾಧೀನದ ವಿರುದ್ಧ ನಿಲುವು ತಳೆದಿದ್ದರು. ಹೋರಾಟ ತೀವ್ರ ಸ್ವರೂಪ ತೆರಳುವ ಸಂದರ್ಭದಲ್ಲೇ ಚರ್ಚ್ ಗಳ ಮೇಲೆ ಭಜರಂಗಿಗಳು ದಾಳಿ ನಡೆಸಿದ್ರು. ತೀರಾ ಗ್ರಾಮೀಣ ಪ್ರದೇಶವಾಗಿರುವ ಬಜಪೆ, ಪೆರ್ಮುದೆ ಚರ್ಚ್ ಗಳಲ್ಲೂ ಪೊಲೀಸರು ಲಾಠಿ ಚಾರ್ಜ್ ನಡೆಸಿದ್ರು. ಚರ್ಚ್ ದಾಳಿ ನಡೆಸಿದ ಬೆರಳೆಣಿಕೆಯ ಭಜರಂಗಿಗಳನ್ನು ಬಂಧಿಸಿದ್ರೆ, ಕಾನೂನು ಪಾಲನೆ ಅಡ್ಡಿಪಡಿಸಿದ್ರು ಎಂದು ಪ್ರತಿಭಟನಾ ನಿರತ ಕ್ರಿಶ್ಚಿಯನ್ನರನ್ನು ನೂರಾರು ಸಂಖ್ಯೆಯಲ್ಲಿ ಬಂಧಿಸಿದ್ರು. ಬಂಧಿತರ ಪಟ್ಟಿಯನ್ನು ನೋಡಿದ್ರೆ ಎಸ್ ಇಝಡ್ ವಿರುದ್ಧ ಹೋರಾಟ ನಡೆಸುತ್ತಿದ್ದ ಕ್ರಿಶ್ಚಿಯನ್ ಸಮುದಾಯದ ಹೋರಾಟಗಾರರೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಕ್ರಿಶ್ಚಿಯನ್ ನಾಯಕರ ಬಂಧನದಿಂದಾಗಿ ನಾಲ್ಕೈದು ತಿಂಗಳು ಎಸ್ ಇಝಡ್ ಹೋರಾಟ ಸ್ಥಗಿತಗೊಂಡಿತು. ನಂತರ 2035 ಎಕರೆ ಭೂಸ್ವಾಧೀನತೆಯಿಂದ ಸರಕಾರ ಕೈಬಿಡುವವರೆಗೂ ಹೋರಾಟ ಯಶಸ್ವಿಯಾಗಿ ನಡೆಯಿತು ಎಂಬುದು ಬೇರೆ ವಿಚಾರ. ಚರ್ಚ್ ದಾಳಿ ಎಂಬುದು ಕೇವಲ ಮತಾಂತರದ ಕಾರಣ ನೀಡಿ ಭಜರಂಗದಳ ನಡೆಸಿತು ಎಂದು ಹೇಳಲಾಗ್ತಿದೆಯಾದ್ರೂ ಜಿಲ್ಲಾಡಳಿತ, ಭಜರಂಗದಳ ಮತ್ತು ಕಂಪನಿ ಸೇರಿಕೊಂಡು ಲಕ್ಷ ಕೋಟಿ ಹೂಡಿಕೆಯ ಎಸ್ ಇ ಝಡ್ ವಿರುದ್ಧದ ಹೋರಾಟವನ್ನು ಮುರಿಯಲು ಚರ್ಚ್ ದಾಳಿಯನ್ನು ರೂಪಿಸಿತ್ತೇ ಎಂಬ ಅನುಮಾನಗಳು ಪದೇ ಪದೇ ಕಾಡುತ್ತದೆ.

ಒಟ್ಟಾರೆ, ಧರ್ಮ ರಕ್ಷಣೆ, ಸಂಸ್ಕೃತಿ ರಕ್ಷಣೆಯ ನೆಪದಲ್ಲಿ ದಾಳಿ ನಡೆಸುವ ಹಿಂದೂ ಸಂಘಟನೆಗಳು ಜಿಲ್ಲೆಯ ಆರ್ಥಿಕ ಸಾಮಾಜಿಕ ರಾಜಕೀಯ ಸ್ಥಿತಿಗತಿಗಳ ಮೇಲೆ ನೇರ ಪರಿಣಾಮ ಬೀರುತ್ತಿವೆ. ತಮ್ಮ ಹಿಡನ್ ಅಜೆಂಡಾಕ್ಕಾಗಿ ಆರ್ ಎಸ್ ಎಸ್ ಎಂಬ ರಾಜಕೀಯ ಪ್ರೇರಿತ ಸಂಘಟನೆ ಕೋಮುವಾದಿ ಯುವಕರನ್ನು ಸಂಘಟಿಸಿದ್ರೆ, ರಿಯಲ್ ಎಸ್ಟೇಟ್ ಮಾಫಿಯಾ ಮತ್ತು ಬಂಡವಾಳಶಾಹಿಗಳು ಅದನ್ನು ಪೋಷಿಸುತ್ತಾರೆ. ಇದು ಸಮಾಜದ ಮೇಲೆ ಬೀರುವ ಪರಿಣಾಮವೊಂದೆಡೆಯಾದ್ರೆ ಸ್ವತಃ ದಾಳಿಕೋರರೂ ಇದರ ನೇರ ಸಂತ್ರಸ್ತರಾಗಿದ್ದಾರೆ. ದಾಳಿ ನಡೆಸಿ ಜೈಲು ಸೇರುವ ಅಷ್ಟೂ ಯುವಕರೂ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದು, ಕೆಲವರ ಮನೆಯಲ್ಲಿ ಈಗಲೂ ವಿದ್ಯುತ್ ಸಂಪರ್ಕವೂ ಇಲ್ಲದ ಸ್ಥಿತಿಯಲ್ಲಿದೆ. ಪ್ರಚೋದನಾಕಾರಿ ಭಾಷಣ ಮಾಡಿ ಹಿಂದುಳಿದ ವರ್ಗಗಳ ಯುವಕರನ್ನು ಧರ್ಮದ ಅಮಲೇರಿಸುವ ಬಂಟರು ಮತ್ತು ಬ್ರಾಹ್ಮಣರು ಅಧಿಕಾರ ಪಡೆಯುತ್ತಲೇ ಇದ್ದಾರೆ.

ಯುದ್ಧ


ನೀವೇನೇ ಹೇಳಿ
ಯುದ್ಧ – ಶತೃತ್ವದ ಕುರಿತು
ನನಗಷ್ಟು ಮೋಹವಿಲ್ಲ ..
ಯುದ್ಧವನ್ನೇ ಶಪಿಸುವವಳ
ದೇಶದ್ರೋಹಿ ಅನ್ನುವುದಾದರೇ
ನನ್ನ ಅಭ್ಯಂತರವೂ ಇಲ್ಲ...
ಅಲ್ಲಿ ಗಡಿಯಲ್ಲೊಬ್ಬ
ಗೆಳೆಯನಿದ್ದಾನೆ
ಕೂಡು ಕುಟುಂಬದ ಹಸಿವ ತಣಿಸಲು
ಹಸಿ ಬದುಕನ್ನೆ ಬಲಿಗೊಟ್ಟು
ಬೆನ್ನಿಗೆ ಬಂದೂಕು ಕಟ್ಟಿಕೊಂಡು
ಮಳೆ–ಚಳಿ–ಗಾಳಿಯಲ್ಲಿ
ಸಣ್ಣಗೆ ಉರಿಯುತ್ತಾನೆ
ಯುದ್ಧವೆಂದರೆ ಅವನ ನೆನಪು ಆತಂಕ
ಏನೋ ಭಯ..
ಸಣ್ಣ ತಂಗಿ ಓದುತ್ತಿದ್ದಾಳಂತೆ
ಅಮ್ಮಾ ನಿತ್ಯ ದಾರಿಕಾಯುತ್ತಾಳೆನ್ನುವುದೇ
ಅವನ ನೋವು ..
ನೀವೇನೇ ಹೇಳಿ
ದಿನದ ಅನ್ನಕ್ಕಾಗಿ
ಪರಿತಪಿಸುವ ನನ್ನ ಕೇರಿಯ
ಅದೆಷ್ಟೋ ಮಂದಿಗೆ
ಈ ಗಡಿಗಳ ಕುರಿತು
ಏನೊಂದೂ ತಿಳಿದಿಲ್ಲ..
ಮೊನ್ನೆಯಷ್ಟೇ ಸತ್ತ ಯೋಧನ ಪತ್ನಿ
ಪರಿತಪಿಸಿದ್ದು
ಮತ್ತಾವ ಹೆಣ್ಣಿಗೂ
ಈ ನೋವು ಬೇಡವೆಂದಷ್ಟೇ
ಬಹುಶಃ ...
ಯುದ್ಧೋನ್ಮಾದದಲ್ಲಿ ಅಬ್ಬರಿಸುವ
ಯಾರ ಮನೆಯ ಮಗನೂ ಗಡಿಯಲಿಲ್ಲ...
ಅಲ್ಲಿ ಸತ್ತವನ
ಇಲ್ಲಿ ಸತ್ತವನ
ಇನ್ನೆಲ್ಲೋ ಸತ್ತವನ
ಮಡದಿಯರ ಒಡೆದ ಕೈಬಳೆಗಳ
ಸದ್ದ ಸುಖಿಸುವ ಸಂಕುಚಿತನೊಬ್ಬನ
ನೀಚ ಹಾಡಿಗೆ
ಉಘೋ ಎಂದ
ಹೆಣ್ತನ ಸತ್ತವರ
ಕುರಿತು ಕನಿಕರ ಪಡಬೇಕೆ
ಇಲ್ಲ ಇನ್ನಷ್ಟು ..
ಯುದ್ಧ–ಯುದ್ಧವೆಂದಷ್ಟೇ
ಹಪಹಪಿಸಬೇಕೆ ತಿಳಿದಿಲ್ಲ ...
ಯಾರದೋ ಸಾವು
ಹಬ್ಬವಾದ ದಿನಗಳಲ್ಲಿ
ಸತ್ತ ಅವರ ಅಂತಃಕರಣದ ಕುರಿತು ,
ಯೋಚಿಸುತ್ತೇನೆ ...
ಯಾವ ಯುದ್ಧದಲ್ಲೂ
ಉಳ್ಳವರ ಮನೆಯ ಬಲಿತ ಹೆಣಗಳು ಬಿದ್ದಿಲ್ಲ
ರಕ್ತಮೋಹಿ ನಾಯಕರೂ ಸತ್ತಿಲ್ಲ
ಯುದ್ಧ ವೆಂದರೇ ...
ತಿಂದು ತೇಗುವವರ
ಸಂತೋಷಕ್ಕಾಗಿ ನಡೆವ
ಬಡವರ ಮಕ್ಕಳ ಸಾವಿನ ವೈಭವವಷ್ಟೇ ...

~ ಮಂಜುಳ ಹುಲಿಕುಂಟೆ



ಸೌಹಾರ್ದ ಕರ್ನಾಟಕ 60

ಕರಾವಳಿಯ ಗೋ-ರಾಜಕೀಯದ ಸುತ್ತಮುತ್ತ



ಕರಾವಳಿ ಕರ್ನಾಟಕದ ಗೋ ಹಿಂಸಾಚಾರ ಇಂದು ನಿನ್ನೆಯದಲ್ಲ. ಸುಮಾರು ಹತ್ತು ವರ್ಷಗಳ ಹಿಂದೆ ನಡೆದ ಆದಿ ಉಡುಪಿ ಬೆತ್ತಲೆ ಪ್ರಕರಣದ ಬಳಿಕ ಗೋ-ಹಿಂಸಾಚಾರಕ್ಕೆ ರಾಷ್ಟ್ರೀಯವಾದ ಮತ್ತು ಸಂಸ್ಕೃತಿ ರಕ್ಷಣೆಯ ಖದರು ಬಂದು ಬಿಟ್ಟಿದೆ. ಗೋ- ಹಿಂಸಾಚಾರದಲ್ಲಿ ತೊಡಗುವವರೆಲ್ಲಾ ಹೀರೋಗಳಾಗಿ ಬಿಟ್ಟಿದ್ದಾರೆ. ಇತ್ತೀಚಿನ ವರ್ಷಗಳಲ್ಲಂತೂ ದನದ ಮಾಂಸ ತಿನ್ನುವವರೆಲ್ಲಾ ರಾಕ್ಷಸರು ಎಂಬಂತೆ ಬಿಂಬಿಸುವ ವ್ಯವಸ್ಥಿತ ಷಡ್ಯಂತ್ರ ಪ್ರಾರಂಭವಾಗಿಬಿಟ್ಟಿದೆ. ಬೇಸರದ ಸಂಗತಿಯೇನೆಂದರೆ ಇಲ್ಲಿನ ಬಹುಸಂಖ್ಯಾತ ಜನವರ್ಗ ಇದನ್ನು ಒಪ್ಪಿಕೊಂಡು ಬಿಟ್ಟಿದೆ. ಈ ವರ್ಗಕ್ಕೆ ಇದು ಜನರ ಆಹಾರದ ಹಕ್ಕಿನ ಮೇಲೆ ಎಸಗಲಾಗುತ್ತಿರುವ ದಾಳಿಯೆಂಬ ವಾಸ್ತವ ಅರ್ಥವಾಗುತ್ತಲೇ ಇಲ್ಲ.

ಇಸ್ಮತ್ ಫಜೀರ್, ಲೇಖಕರು, ಚಿಂತಕರು

ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಗೋ-ಹಿಂಸಾಚಾರದ ರಾಜಧಾನಿ ಎಂದರೆ ತಪ್ಪಾಗದು. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಗೋ-ಹಿಂಸಾಚಾರ ನಡೆಯುತ್ತಿಲ್ಲವಾದರೂ ಅದನ್ನು ದೇಶದ ಮೂಲೆ ಮೂಲೆಗೆ ವಿಧವಿಧ ರೂಪದಲ್ಲಿ ಪ್ರದರ್ಶಿಸಿ ಪರಿಚಯಿಸಿದ ಕುಕೀರ್ತಿಯಂತೂ ಇಲ್ಲಿಗೇ ಸಲ್ಲಬೇಕು. ಮೊಟ್ಟಮೊದಲು ಅದನ್ನೊಂದು ಪೂರ್ಣಕಾಲಿಕ ವೃತ್ತಿಯಾಗಿಸಿ ತೊಡಗಿಸಿಕೊಂಡವರೂ ಇಲ್ಲಿನದೇ ಹಿಂದೂತ್ವವಾದಿ ಗೂಂಡಾಗಳು. ಇಲ್ಲಿ ಅದೆಷ್ಟು ಸಹಜ ಮತ್ತು ಸಾಮಾನ್ಯವಾಗಿ ಬಿಟ್ಟಿದೆಯೆಂದರೆ ಕಾನೂನು ಪಾಲಕರೇ ಅದೊಂದು ಸುಕಾರ್ಯ ಎಂದು ಪರಿಗಣಿಸಿದಂತಿದೆ. ಇಲ್ಲಿ ನಡೆಯುವ ಬಹುತೇಕ ಗೋ ಹಿಂಸಾಚಾರ ಪ್ರಕರಣಗಳಲ್ಲಿ ಹಿಂಸಾಚಾರವೆಸಗಿದವರ ಮೇಲೆ ಕೇಸು ದಾಖಲಾಗುವುದೇ ಇಲ್ಲ. ಒಂದು ವೇಳೆ ಗೋ ಸಾಗಾಟಗಾರರನ್ನು ಮಾರಣಾಂತಿಕವಾಗಿ ಹಲ್ಲೆ ನಡೆಸಿ ಅವರನ್ನು ಶಾಶ್ವತ ಅಂಗವಿಕಲರನ್ನಾಗಿ ಮಾಡಿದರೂ ಹೆಚ್ಚೆಂದರೆ ತಪ್ಪಿತಸ್ಥರ ಮೇಲೆ ಚಿಕ್ಕ ಪುಟ್ಟ ಪೆಟ್ಟಿ ಕೇಸ್‌ಗಳು ದಾಖಲಾಗುತ್ತವೆ. ಒಟ್ಟಿನಲ್ಲಿ ಪೋಲೀಸ್ ಇಲಾಖೆ ಗೋ-ಭಯೋತ್ಪಾದಕರನ್ನು ಸಮಾಜದ ಹಿತ ರಕ್ಷಕರೆಂಬಂತೆ ರಕ್ಷಿಸುತ್ತಿದೆ. ಅನೇಕ ಸಂದರ್ಭಗಳಲ್ಲಿ ಪೋಲೀಸ್ ಇಲಾಖೆಯೇ ಹಿಂದೂತ್ವ ಗೂಂಡಾಗಳ ಕೆಲಸವನ್ನು ಮಾಡುತ್ತವೆ. ಹಿಂದೂತ್ವವಾದಿ ಗೂಂಡಾ ಪಡೆಗಳು ಹೇಗೆ ದನ ಸಾಗಾಟಗಾರರನ್ನು ಹೊಡೆದು ಬಡಿದು ಚಿತ್ರಹಿಂಸೆ ನೀಡಿ ಅವರಲ್ಲಿರುವ ನಗ-ನಗದು, ಮೊಬೈಲ್, ವಾಚು ಮುಂತಾದ ಬೆಲೆಬಾಳುವ ವಸ್ತುಗಳನ್ನು ದೋಚುತ್ತದೆಯೋ ಹಾಗೆಯೇ ಪೋಲೀಸರೂ ದೋಚುತ್ತಾರೆ.

ಗೋ ಹಿಂಸಾಚಾರದ ಇತಿಹಾಸ

ಕರಾವಳಿ ಕರ್ನಾಟಕದ ಗೋ ಹಿಂಸಾಚಾರ ಇಂದು ನಿನ್ನೆಯದಲ್ಲ. ಅದಕ್ಕೆ ಸುಮಾರು ಹದಿನೈದಿಪ್ಪತ್ತು ವರ್ಷಗಳ ಇತಿಹಾಸವಿದೆ. ಸುಮಾರು ಹತ್ತು ವರ್ಷಗಳ ಹಿಂದೆ ನಡೆದ ಆದಿ ಉಡುಪಿ ಬೆತ್ತಲೆ ಪ್ರಕರಣದ ಬಳಿಕ ಗೋ-ಹಿಂಸಾಚಾರಕ್ಕೆ ರಾಷ್ಟ್ರೀಯವಾದ ಮತ್ತು ಸಂಸ್ಕೃತಿ ರಕ್ಷಣೆಯ ಖದರು ಬಂದು ಬಿಟ್ಟಿದೆ. ಗೋ- ಹಿಂಸಾಚಾರದಲ್ಲಿ ತೊಡಗುವವರೆಲ್ಲಾ ಹೀರೋಗಳಾಗಿಬಿಟ್ಟಿದ್ದಾರೆ. ಇತ್ತೀಚಿನ ವರ್ಷಗಳಲ್ಲಂತೂ ದನದ ಮಾಂಸ ತಿನ್ನುವವರೆಲ್ಲಾ ರಾಕ್ಷಸರು ಎಂಬಂತೆ ಬಿಂಬಿಸುವ ವ್ಯವಸ್ಥಿತ ಷಡ್ಯಂತ್ರ ಪ್ರಾರಂಭವಾಗಿಬಿಟ್ಟಿದೆ. ಬೇಸರದ ಸಂಗತಿಯೇನೆಂದರೆ ಇಲ್ಲಿನ ಬಹುಸಂಖ್ಯಾತ ಜನವರ್ಗ ಇದನ್ನು ಒಪ್ಪಿಕೊಂಡು ಬಿಟ್ಟಿದೆ. ಈ ವರ್ಗಕ್ಕೆ ಇದು ಜನರ ಆಹಾರದ ಹಕ್ಕಿನ ಮೇಲೆ ಎಸಗಲಾಗುತ್ತಿರುವ ದಾಳಿಯೆಂಬ ವಾಸ್ತವ ಅರ್ಥವಾಗುತ್ತಲೇ ಇಲ್ಲ.

ಸಾಮಾನ್ಯವಾಗಿ ಗೋ-ಹಿಂಸಾಚಾರಕ್ಕೆ ಬಳಕೆಯಾಗುವ ಕಾಲಾಳುಗಳೆಲ್ಲರೂ ಶೂದ್ರ ಮತ್ತು ದಲಿತ ವರ್ಗದವರು. ಯಾವತ್ತೂ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಒಂದುಗೂಡಲಾಗದಂತಹ ಕೆಳಜಾತಿ ಮತ್ತು ಮೇಲ್ಜಾತಿ ಈ ವಿಚಾರದಲ್ಲಿ ಮುಸ್ಲಿಮರನ್ನು ತಮ್ಮ ಸಮಾನ ಶತ್ರು ಎಂದು ಪರಿಗಣಿಸಿಬಿಟ್ಟಿದೆ. ಗೋ- ಹಿಂಸಾಚಾರದಲ್ಲಿ ತೊಡಗುವ ದಲಿತ-ಶೂದ್ರ ವರ್ಗದ ಯುವಕರನ್ನು ಪೇಜಾವರ ಸ್ವಾಮಿಗಳು ಧರ್ಮ ರಕ್ಷಕರೆಂದು ಪ್ರಶಂಸಿಸಿ ಅವರಿಗೆ ಉಡುಪಿ ಅಷ್ಟಮಠದ ರಾಜಾಂಗಣದಲ್ಲಿ ಸನ್ಮಾನ ಏರ್ಪಡಿಸುತ್ತಾರೆ. ಸನ್ಮಾನ ಮುಗಿಸಿ ಮಠದಲ್ಲಿ ಊಟಕ್ಕೆ ಕೂರುವಾಗ ಅದೇ ಸನ್ಮಾನಿತರನ್ನು ಪ್ರತ್ಯೇಕ ಪಂಕ್ತಿಯಲ್ಲಿ ಕೂರಿಸಲಾಗುತ್ತದೆ. ಇಷ್ಟಾದರೂ ದಲಿತ-ಶೂದ್ರ ವರ್ಗಕ್ಕೆ ಮೇಲ್ಜಾತಿ ಮಂದಿಗಳು ತಮ್ಮನ್ನು ಬಲಿಪಶು ಮಾಡುತ್ತಾರೆ ಎಂಬ ಸತ್ಯ ಅರ್ಥವಾಗುವುದೇ ಇಲ್ಲ. ಅವರು ಅಷ್ಟರ ಮಟ್ಟಿಗೆ ಗುಲಾಮಿ ಮನಸ್ಥಿತಿಗೆ ಒಗ್ಗಿಬಿಟ್ಟಿದ್ದಾರೆ.

ರೈತರ ಗೋಳು:

ಇವತ್ತು ಗೋರಕ್ಷಣೆಯ ಮಾತನಾಡುವವರು ಯಾರೂ ಕೂಡ ದನಗಳನ್ನು ಸಾಕಿದವರಲ್ಲ. ಅದನ್ನು ಸಾಕುವವರ ಕಷ್ಟ ಅವರಿಗೆ ಕಿಂಚಿತ್ತೂ ಅರ್ಥವಾಗುವುದಿಲ್ಲ. ಕರಾವಳಿ ಕರ್ನಾಟಕದಲ್ಲಿ ಆಹಾರದ ಕೃಷಿ ಹತ್ತು ಹಲವು ಕಾರಣಗಳಿಂದಾಗಿ ವಿನಾಶದಂಚಿಗೆ ತಲಪಿದೆ. ಅದಾಗ್ಯೂ ಹಳ್ಳಿಗಳಲ್ಲಿ ಅಲ್ಪಸ್ವಲ್ಪ ಕೃಷಿ ಮಾಡುವವರೂ ಇದ್ದಾರೆ.

ಕೇವಲ ಗದ್ದೆ ಉಳುವ ಒಂದೇ ಕಾರಣಕ್ಕಾಗಿ ಟ್ರ್ಯಾಕ್ಟರ್‌ಗಳನ್ನೋ, ಟಿಲ್ಲರ್‌ಗಳನ್ನೋ ಬಳಸುವುದು ಪ್ರಾಯೋಗಿಕವಾಗಿ ನಷ್ಟದ ಬಾಬ್ತು. ಎಷ್ಟೇ ಕಷ್ಟವಾದರೂ ಅದಕ್ಕಿಂತ ಎತ್ತುಗಳನ್ನೋ, ಎಮ್ಮೆಗಳನ್ನೋ ಸಾಕುವುದು ಸ್ವಲ್ಪ ಮಟ್ಟಿಗೆ ಲಾಭದಾಯಕ. ಯಾಕೆಂದರೆ ಅವುಗಳು ಬಹುಪಯೋಗಿಗಳು. ಕೇವಲ ಹಾಲು ನೀಡುತ್ತದೆ ಎಂಬ ಕಾರಣಕ್ಕಾಗಿ ಈ ಕಾಲದಲ್ಲಿ ಯಾರೂ ಜಾನುವಾರುಗಳನ್ನು ಸಾಕಲಾರರು. ಹೈನುಗಾರಿಕೆ, ಗೊಬ್ಬರ ಮತ್ತು ಉಳುಮೆಯೆಂಬ ಮೂರು ಕಾರಣಗಳಿಗಾಗಿ ಮಾತ್ರ ಜಾನುವಾರುಗಳನ್ನು ರೈತರು ಸಾಕುತ್ತಾರೆ. ಇಂತಹವರು ಕಾಲ ಕಾಲಕ್ಕೆ ತಮ್ಮ ಜಾನುವಾರುಗಳನ್ನು ಕಸಾಯಿಗಳಿಗೆ ಮಾರಲೇಬೇಕಾಗುತ್ತದೆ.

ಇಂದು ಒಂದು ಜೋಡಿ ಎತ್ತು / ಎಮ್ಮೆಯ ಬೆಲೆ ಕನಿಷ್ಟವೆಂದರೂ ಒಂದು ಲಕ್ಷ ರೂಪಾಯಿಯಿದೆ. ಮುದಿಯಾದ, ಕೆಲಸ ಮಾಡಲು ಸಾಧ್ಯವಾಗದ ಜಾನುವಾರುಗಳನ್ನು ಕೇವಲ ಧಾರ್ಮಿಕ ಕಾರಣಕ್ಕಾಗಿ ಯಾರೂ ಸಾಕುವುದಿಲ್ಲ. ಅದೊಂದು ಹುಂಬತನವೇ ಹೊರತು ಪ್ರಾಯೋಗಿಕವಾಗಿ ಆಗುವ ಹೋಗುವ ಕೆಲಸವಲ್ಲ. ರೈತನೊಬ್ಬ ಸಾಕುವ ಜಾನುವಾರು ಮುದಿಯಾಗುತ್ತದೆ. ಅವು ಕೆಲಸಕ್ಕೆ ಬರುವಂತಹ ಸ್ಥಿತಿಯಲ್ಲಿರುವುದಿಲ್ಲ. ಅದನ್ನು ಮಾರದಿದ್ದರೆ ಆ ರೈತ ತನ್ನ ಉಪಯೋಗಕ್ಕೆ ಇನ್ನೊಂದು ಜೋಡಿಯನ್ನು ಖರೀದಿಸಲು ಸಾಧ್ಯವಿಲ್ಲ. ಒಂದು ವೇಳೆ ಅದು ಮುದಿಯಾಗಿಯೋ, ರೋಗಪೀಡಿತವಾಗಿಯೋ ಸತ್ತರೆ ಇನ್ನೊಂದು ಜೋಡಿ ಜಾನುವಾರುಗಳನ್ನು ಖರೀದಿಸಲು ಲಕ್ಷಾಂತರ ರೂಪಾಯಿ ದುಡ್ಡಿಗೆ ಎಲ್ಲಿಗೆ ಹೋಗಬೇಕು? ಆ ದುಡ್ಡನ್ನು ಗೋ-ರಕ್ಷಕರು ನೀಡುತ್ತಾರೆಯೇ? ಕೆಲಸಕ್ಕೆ ಬಾರದ ಜಾನುವಾರನ್ನು ಸಾಕಲು ಬೇಕಾಗುವ ದುಡ್ಡನ್ನು ಗೋ ರಕ್ಷಕರು ನೀಡುತ್ತಾರೆಯೇ? ಬೇಡ ಬಿಡಿ ಗೋ- ಪ್ರೇಮಿಗಳು ರೈತರಿಂದ ಅಂತಹ ಜಾನುವಾರುಗಳನ್ನು ಸೂಕ್ತ ಬೆಲೆಕೊಟ್ಟು ಖರೀದಿಸುತ್ತಾರಾ? ಇಂತಹ ಸಂದರ್ಭಗಳಲ್ಲಿ ರೈತನಿಗೆ ಉಪಕಾರಕ್ಕೆ ಸಿಗುವವರು ಕಸಾಯಿಗಳೇ ಹೊರತು ಗೋ-ರಕ್ಷಕರಲ್ಲ. ಸ್ವಘೋಷಿತ ಗೋ-ಪ್ರೇಮಿಗಳೆಲ್ಲಾ ಆಗಾಗ ಕೇಳುವ ಒಂದು ಪ್ರಶ್ನೆಯನ್ನು ನೀವು ಗಮನಿಸಿರಬಹುದು. "ನಿಮ್ಮ ತಾಯಂದಿರಿಗೆ ವಯಸ್ಸಾದರೆ ನೀವು ಮಾರಿ ಬಿಡ್ತೀರಾ"? ಇವು ಭಾವನಾತ್ಮಕವಾಗಿ ರೈತರನ್ನು ಶೋಷಿಸುವ ಪ್ರಶ್ನೆಯೇ ಹೊರತು ಪ್ರಾಕ್ಟಿಕಲ್ ವಿಚಾರಗಳಲ್ಲ.

ಲಾಭದಾಯಕ ಗೋಶಾಲೆಗಳು...

ಗೋ-ಶಾಲೆಗಳೆಂದರೆ ಅದನ್ನು ನಡೆಸುವವರ ಪಾಲಿಗೆ ಅತ್ಯಂತ ಲಾಭದಾಯಕ ವ್ಯಾಪಾರ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಗೋ ಶಾಲೆಗಳಿಗೆ ಬರುವ ಜಾನುವಾರುಗಳಲ್ಲಿ 98% ಜಾನುವಾರು ಸಾಗಾಟಗಾರರಿಂದ ದರೋಡೆ ಮಾಡಿದ ಜಾನುವಾರುಗಳೇ ಇರುವುದು. ನನ್ನ ಊರಿನಲ್ಲೊಂದು ಗೋ-ಶಾಲೆಯಿದೆ. ಅಲ್ಲಿ ಮುಸ್ಲಿಮ್ ಮತ್ತು ಎಡಪಂಥೀಯ ಎಂಬ ಎರಡು ಕಾರಣಗಳಿಗೆ ನನಗೆ ಪ್ರವೇಶ ನಿಷಿದ್ಧ. ಆದರೆ ಅಲ್ಲಿಗೆ ಹೋಗಿ ಅಲ್ಲಿನ ಜಾನುವಾರುಗಳನ್ನು ನೋಡಿ ಬಂದ ನನ್ನ ಅನೇಕ ಗೆಳೆಯರಿದ್ದಾರೆ. ಅಲ್ಲಿ ಸಾಕಲಾಗುವ ಜಾನುವಾರುಗಳಿಗೆ ದಿನಕ್ಕೆ ಕಾಲು (೪) ಸೂಡಿ ಒಣ ಹುಲ್ಲು ಹಾಕಿದರೆ ಅದೇ ದೊಡ್ಡದು, ಅವುಗಳಿಗೆ ಬರೀ ತಣ್ಣೀರಿನ ಹೊರತಾಗಿ ಬೇರೇನನ್ನೂ ನೀಡುವುದಿಲ್ಲ ಎಂಬುವುದನ್ನು ಅಲ್ಲಿನ ಜಾನುವಾರುಗಳ ಸ್ಥಿತಿ ನೋಡಿದರೆ ತಿಳಿಯುತ್ತದೆ ಎಂದು ಜಾನುವಾರು ಸಾಕಿ ಅನುಭವವಿರುವ ಗೆಳೆಯರು ಹೇಳುತ್ತಾರೆ. ಇನ್ನು ಅವುಗಳಿಗೆ ಚಿಕಿತ್ಸೆ ಇತ್ಯಾದಿಗಳೆಲ್ಲಾ ದೂರದ ಮಾತು.

ಆ ಬಡಪಾಯಿ ಜಾನುವಾರುಗಳ ಹಾಲು ಕರೆದು ಮಾರುತ್ತಾರೆ. ಅವುಗಳ ಸೆಗಣಿಗಳನ್ನು ಬುಟ್ಟಿಗೆ ಇಷ್ಟೆಂದು ದರ ನಿಗದಿಪಡಿಸಿ ಮಾರುತ್ತಾರೆ. ಅಲ್ಲಿನ ಜಾನುವಾರುಗಳನ್ನು ಕಾಲಕಾಲಕ್ಕೆ ಸ್ವ-ಘೋಷಿತ ಗೋ-ಪ್ರೇಮಿಗಳೇ ಕಸಾಯಿಗಳಿಗೆ ಮಾರುತ್ತಾರೆ. ಬೇರೆ ಯಾವುದೇ ದಂಧೆಗಾದರೂ ಬಂಡವಾಳ ಹೂಡಬೇಕು. ಗೋ-ಶಾಲೆಗಳು ಬಂಡವಾಳವಿಲ್ಲದೇ ನಡೆಸಲು ಸಾಧ್ಯವಿರುವ ದಂಧೆ.

ಸಾಗಾಟಗಾರರಿಂದ ದರೋಡೆ ಮಾಡಿ ತಂದ ದನಗಳಿಂದ ಹಾಲು, ಗೊಬ್ಬರವೂ ಸಿಗುತ್ತದೆ. ಜೊತೆ ಜೊತೆಗೆ ಕಸಾಯಿಗಳಿಂದ ಸಾವಿರಾರು ರೂಪಾಯಿಯ ಲಾಭವೂ ಸಿಗುತ್ತದೆ. ಮನೆಯಲ್ಲಿ ದನ ಸಾಕುವವ ಅದನ್ನು ಖರೀದಿಸಲು ದುಡ್ಡು ಹಾಕಿರುತ್ತಾನೆ. ಇವರಿಗೆ ಪುಗಸಟ್ಟೆ ಸಿಗುತ್ತವೆ. ಅದೂ ಕೂಡಾ ದಲಿತ-ಶೂದ್ರರ ಭಕ್ತಿಯ ಫಲವಾಗಿ ಹೊಡೆದು-ಬಡಿದು ಗಲಾಟೆ ಮಾಡಿ ತರಲಾಗುವ ಜಾನುವಾರುಗಳು. ಇಲ್ಲಿಯೂ ಒಂದರ್ಥದಲ್ಲಿ ಶ್ರಮಜೀವಿಗಳ ಶೋಷಣೆ! ಹೊಡೆದು-ಬಡಿದು ಅಪಾಯವನ್ನೆದುರಿಸಿ ಜಾನುವಾರುಗಳನ್ನು ಹಿಡಿದು ತರುವವರು ದಲಿತ-ಶೂದ್ರರು. ನಯಾಪೈಸೆಯ ಶ್ರಮವಿಲ್ಲದೇ ಕಸಾಯಿಗಳಿಗೆ ಮಾರಿ ಲಾಭ ಜೇಬಿಗಿಳಿಸುವವರು ಸ್ವ ಘೋಷಿತ ಉಚ್ಛ ಕುಲದವರು.

ಗೋ-ಶಾಲೆಗಳಿಂದ ಜಾನುವಾರು ಖರೀದಿಸುವುದು ಕಸಾಯಿಗಳಿಗೆ ಅತ್ಯಂತ ಸುರಕ್ಷಿತ. ಯಾಕೆಂದರೆ ಅದನ್ನು ಸಂಬಂಧಪಟ್ಟವರ ಉಸ್ತುವಾರಿಯಲ್ಲೇ ಕಸಾಯಿಗಳಿಗೆ ತಲುಪಿಸಲಾಗುತ್ತದೆ. ಅದೂ ಗೋ-ಶಾಲೆಗಳ ವಾಹನಗಳಲ್ಲೇ ಕಸಾಯಿಗಳ ಸ್ಥಳಕ್ಕೆ ತಲುಪುತ್ತವೆ. ಲೂಟ್ ಮಾರ್ - ಕೇಸು - ಹೊಡೆತ - ಬಡಿತಗಳ ಭಯವಿಲ್ಲ. ಇಷ್ಟು ಮಾತ್ರವಲ್ಲದೇ ಕಸಾಯಿಗಳಿಗೆ ಗೋ-ಶಾಲೆಗಳ ಜಾನುವಾರುಗಳು ಕಡಿಮೆ ಕ್ರಯಕ್ಕೆ ಸಿಗುತ್ತವೆ. ಯಾಕೆಂದರೆ ಗೋ-ಶಾಲೆ ನಡೆಸುವವರಿಗೆ ಪುಗಸಟ್ಟೆ ಸಿಗುವುದರಿಂದ ಕ್ರಯದ ಬಗ್ಗೆ ದೊಡ್ಡ ಚೌಕಾಶಿಯೇನೂ ಇರುವುದಿಲ್ಲ. ಗೋ-ಶಾಲೆಗಳಿಂದ ಜಾನುವಾರುಗಳು ಎಲ್ಲಾ ಕಸಾಯಿಗಳಿಗೆ ಸಿಗುವುದಿಲ್ಲ. ಅವರೊಂದಿಗೆ ಒಪ್ಪಂದ ಮಾಡಿಕೊಂಡ ನಿರ್ದಿಷ್ಟ ಕಸಾಯಿಗಳಿಗೆ ಮಾತ್ರ.

ಗೋ ಹಿಂಸಾಚಾರ ಮತ್ತು ಹಿಂದೂಗಳು:

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೋ ಹಿಂಸಾಚಾರಕ್ಕೆ ಬಲಿಯಾದವರು ಕೇವಲ ಮುಸ್ಲಿಮರು ಮಾತ್ರವಲ್ಲ, ಕುಂದಾಪುರದ ಪಾಟಾಳಿ ಕೃಷ್ಣಯ್ಯರಿಂದ ಹಿಡಿದು ಕೆಂಜೂರಿನ ಪ್ರವೀಣ್ ಪೂಜಾರಿಯವರೆಗೆ ಅನೇಕ ಹಿಂದೂಗಳು ಗೋ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ಶಾಶ್ವತ ಅಂಗವಿಕಲರಾಗಿದ್ದಾರೆ. ಗೋ-ಹಿಂಸಾಚಾರಗಳಲ್ಲಿ ಅತೀ ಹೆಚ್ಚು ಭಾಗಿಯಾಗುವವರು ಶೂದ್ರ ವರ್ಗದ ಬಿಲ್ಲವ ಯುವಕರು ಎಂಬುದು ವಿಷಾದದ ಸಂಗತಿ. ಬಿಲ್ಲವ ಸಮುದಾಯದ ಸಾವಿರಾರು ಯುವಕರನ್ನು ಕ್ರಿಮಿನಲ್‌ಗಳನ್ನಾಗಿ ಮಾಡಿದ ಸಂಘ ಪರಿವಾರದ ವಿರುದ್ಧ ಆ ಸಮುದಾಯದಿಂದ ಬಂದ ಪ್ರತಿರೋಧ ತೀರಾ ಇಲ್ಲ ಎನ್ನುವಷ್ಟು ವಿರಳ. ಪ್ರವೀಣ್ ಪೂಜಾರಿಯ ಪ್ರಕರಣವನ್ನೇ ತೆಗೆದುಕೊಳ್ಳಿ. ಆತ ಹಿಂದೂತ್ವ



ಗೋ ರಾಜಕೀಯಕ್ಕೆ ಬಲಿಯಾದ ಪ್ರವೀಣ್ ಪೂಜಾರಿ

ರಾಜಕಾರಣಕ್ಕೆ ಮಣ್ಣು ಹೊತ್ತವನು. ಹೊಟ್ಟೆಪಾಡಿಗಾಗಿ ಜಾನುವಾರು ವ್ಯಾಪಾರ ಮಾಡುತ್ತಿದ್ದವನು. ಯಾವ್ಯಾವುದೋ ಕ್ರಿಮಿನಲ್‌ಗಳ ಕೊಲೆಗೆ ಪ್ರತೀಕಾರವಾಗಿ ಊರಿಗಿಡೀ ಬೆಂಕಿ ಹಚ್ಚುವ ಮಂದಿಗಳು ಪ್ರವೀಣ್ ಪೂಜಾರಿಯ ಹತ್ಯೆಯ ಬಗ್ಗೆ ತುಟಿ ಬಿಚ್ಚಲಿಲ್ಲ. ಆ ಸಂದರ್ಭ ಇವರು ಗಂಟಲಿಗೆ ಕಡುಬು ತುರುಕಲಾಗಿತ್ತೇನೋ...?

ಸಂಘ ಪರಿವಾರದ ಮಂದಿಯ ವಿಚಾರ ಬದಿಗಿರಲಿ. ಬಿಲ್ಲವ ಸಮುದಾಯವನ್ನು ಗುತ್ತಿಗೆಗೆ ಪಡೆದಂತಾಡುವ, ತನ್ನನ್ನು ತಾನು ಅಭಿನವ ನಾರಾಯಣ ಗುರು ಎನ್ನುವ ಪರಮ ಮೌಢ್ಯಾರಾಧಕ, ಕಾಂಗ್ರೆಸ್‌ನ ಹಿರಿಯ ಮುಖಂಡ ಜನಾರ್ಧನ ಪೂಜಾರಿ, ಪೊಳಲಿ ಅನಂತು, ಕ್ಯಾಂಡಲ್ ಸಂತುವಿನಂತಹ ಬಿಲ್ಲವ ಸಮುದಾಯದ, ಸಂಘ ಪರಿವಾರದ ಗೂಂಡಾಗಳು ತಮ್ಮ ಗೂಂಡಾಗಿರಿಯ ಪ್ರತೀಕಾರಾರ್ಥವಾಗಿ ಸತ್ತಾಗ ಅವರ ಮನೆಗೆ ತೆರಳಿ ಸಾಂತ್ವನ ಹೇಳುತ್ತಿದ್ದರು. ಅವರು ಮಾಡಿದ ಘನಂದಾರಿ ಕಾರ್ಯಗಳಿಗಾಗಿ ಲಕ್ಷಾಂತರ ರೂಪಾಯಿ ಪರಿಹಾರ ನೀಡುತ್ತಿದ್ದರು. ಆದರೆ ಹೊಟ್ಟೆಪಾಡಿಗಾಗಿ ಜಾನುವಾರು ವ್ಯಾಪಾರ ಮಾಡುತ್ತಿದ್ದ ಕ್ರಿಮಿನಲ್ ಇತಿಹಾಸವಿರದ ಪ್ರವೀಣ್ ಪೂಜಾರಿ ಸಂಘ ಪರಿವಾರದ ಗೋ-ಹಿಂಸಾಚಾರಕ್ಕೆ ಬಲಿಯಾದಾಗ ಪರಿಹಾರ, ಸಾಂತ್ವನ ಬಿಡಿ, ತುಟಿಪಿಟಿಕ್ಕೆನ್ನಲೂ ಇಲ್ಲ. ತನ್ನದೇ ಪಕ್ಷದ ಮುಖ್ಯಮಂತ್ರಿಯನ್ನು ಬೈಯಲು ವಾರಕ್ಕೆ ಮೂರು ಪತ್ರಿಕಾಗೋಷ್ಠಿ ಕರೆಯುತ್ತಿದ್ದ ಪೂಜಾರಿಯ ಬಾಯಿಗೆ ಬಹುಶಃ ಸೆಗಣಿ ತುರುಕಲಾಗಿತ್ತೇನೋ?

ಒಟ್ಟಿನಲ್ಲಿ ಗೋ-ಹಿಂಸಾಚಾರವೆನ್ನುವುದು ಕೇವಲ ಮುಸ್ಲಿಮರ ವಿರುದ್ಧದ ಯುದ್ಧವಲ್ಲ. ಅದು ಇಲ್ಲಿನ ರೈತಾಪಿ ವರ್ಗದ, ಶೂದ್ರ ದಲಿತರ ವಿರುದ್ಧದ ಯುದ್ಧವೂ ಹೌದು ಎಂಬ ಸತ್ಯ ದಲಿತ-ಶೂದ್ರ ವರ್ಗಕ್ಕೆ ಯಾವಾಗ ಅರ್ಥವಾಗುತ್ತದೋ..... ಏನೋ.....?

ಗೋ ಹತ್ಯೆ ನಿಷೇಧ ಸಾಧ್ಯವೇ?

ನಮಗೆಲ್ಲಾ ತಿಳಿದಿರುವಂತೆ ಜಗತ್ತಿನಲ್ಲೇ ಅತೀ ಹೆಚ್ಚು ಗೋ ಮಾಂಸ ರಫ್ತು ಮಾಡುವ ದೇಶ ನಮ್ಮ ಭಾರತ. ವಿಪರ್ಯಾಸವೇನೆಂದರೆ ಗೋ-ಭಕ್ತಿಯೆಂಬುವುದು, ಗೋವನ್ನು ದೈವ ಸ್ವರೂಪಿಯೆನ್ನುವುದು, ಮೂವತ್ತಮೂರು ಕೋಟಿ ದೇವತೆಗಳ ಆವಾಸ ಸ್ಥಾನವೆನ್ನುವುದು ನಮ್ಮ ದೇಶದಲ್ಲಿ ಮಾತ್ರ. ಅದಾಗ್ಯೂ ಅತೀ ಹೆಚ್ಚು ಗೋ ಮಾಂಸ ರಫ್ತು ಮಾಡುವುದೂ ನಮ್ಮ ದೇಶ. ಭಾರತದ ಆರ್ಥಿಕತೆಗೆ ಬಹುದೊಡ್ಡ ಲಾಭ ತರುವ ದಂಧೆಗಳಲ್ಲಿ ಗೋ ಮಾಂಸ ರಫ್ತು ಪ್ರಮುಖವಾದುದು. ಅರೇಬಿಯನ್ ದೇಶಗಳಲ್ಲಿ ಮಾರುಕಟ್ಟೆ ಹಿಡಿಯಲು ಇಸ್ಲಾಮಿಕ್ ಹೆಸರುಗಳನ್ನಿಟ್ಟುಕೊಂಡು ದನದ ಮಾಂಸ ರಫ್ತು ಮಾಡುವ ವಂಚಕ ಉದ್ಯಮಿಗಳು ಮುಸ್ಲಿಮರಲ್ಲ. ಗೋ-ಮಾಂಸ ರಫ್ತು ಉದ್ಯಮದಲ್ಲಿ ತೊಡಗಿಸಿಕೊಂಡ ದೊಡ್ಡ ದೊಡ್ಡ ಕುಳಗಳಲ್ಲಿ ಬಹುತೇಕರು ಸಸ್ಯಾಹಾರಿ ಬ್ರಾಹ್ಮಣ ಮತ್ತು ಜೈನರು. ಇಂದು ಗೋ-ಹಿಂಸಾಚಾರದಲ್ಲಿ ತೊಡಗಿರುವವರೆಲ್ಲರೂ ಮಾಂಸಾಹಾರಿ ದಲಿತ-ಶೂದ್ರರು. ಇಷ್ಟೆಲ್ಲಾ ಗಲಾಟೆ ಮಾಡುವ ಇವರಿಗ್ಯಾಕೆ ವಾಸ್ತವ ಅರ್ಥವಾಗುತ್ತಿಲ್ಲ? ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವುದು ಪೂರ್ಣ ಬಹುಮತವಿರುವ ಇವರದ್ದೇ ಸರಕಾರ. ಅದಾಗ್ಯೂ ಇವರ್ಯಾಕೆ ಗೋ-ಹತ್ಯೆಗೆ ಸಂಪೂರ್ಣ ನಿಷೇಧವೇರುವುದಿಲ್ಲ.....? ಎಲ್ಲಿಯವರೆಗೆ ಗೋ-ಹತ್ಯೆ ಎಂಬ ವಿವಾದಾತ್ಮಕ ವಿಷಯ ಚಾಲನೆಯಲ್ಲಿರುತ್ತದೋ ಅಲ್ಲಿಯವರೆಗೆ ಬಿ.ಜೆ.ಪಿ.ಗೆ ರಾಜಕೀಯ ಲಾಭವಿರುತ್ತದೆ. ಇವರು ಯಾವ ಕಾಲಕ್ಕೂ ಸಂಪೂರ್ಣ ಗೋ ಹತ್ಯೆ ನಿಷೇಧ ಮಾಡುವುದೇ ಇಲ್ಲ. ಆದರೆ ನಾಳೆ ಬಿ.ಜೆ.ಪಿ.ಯೇತರ ಸರಕಾರ ಬಂದು ಇವರು ವಿರೋಧ ಪಕ್ಷದಲ್ಲಿ ಕೂತಾಗ ಮತ್ತೆ ಗೋ ಹತ್ಯೆ ನಿಷೇಧಕ್ಕೆ ಗಲಾಟೆಯೆಬ್ಬಿಸುತ್ತಾರೆ.

ಬೆಂಕಿಯನ್ನು ಹಚ್ಚಿದವರು ಪ್ರೀತಿಯನ್ನು ಬಿತ್ತುವವರು



ಅವರು ಬೆಂಕಿಯನ್ನು ಹಚ್ಚಿದವರು
ಬೆಂಕಿಯನ್ನೇ ಹಚ್ಚುತ್ತಾರೆ
ನಾವು ಪ್ರೀತಿಯನ್ನು ಹಚ್ಚುವವರು
ಪ್ರೀತಿಯನ್ನೇ ಹಚ್ಚುತ್ತೇವೆ

ಅವರು ಹೊಡೆದು ವಿಕೃತ ಆಚರಣೆ ಮಾಡಿದವರು
ಹೊಡೆಯುವುದೇ ಅವರ (ಅ)ಧರ್ಮ
ನಾವು ಕಟ್ಟಿ ಆಸರೆ ಕೊಡುವವರು
ಕಟ್ಟುವುದೇ ನಮ್ಮ ಧರ್ಮ

ಅವರು ಕೋಮುದಳ್ಳುರಿಗೆ ತಳ್ಳಿದವರು
ಕೋಮುದಳ್ಳುರಿಗೇ ತಳ್ಳುತ್ತಾರೆ
ನಾವು ಮಾನವೀಯತೆಯನ್ನು ಮೆರೆಯುವವರು
ಮಾನವೀಯತೆಯನ್ನೇ ಮೆರೆಯುತ್ತೇವೆ

ಅವರು ಜಾತೀಯತೆಯನ್ನು ಬಿತ್ತಿದವರು
ಜಾತಿಯನ್ನೇ ಬಿತ್ತುತ್ತಾರೆ
ನಾವು ಪ್ರೀತಿಯನ್ನು ಬಿತ್ತುವವರು
ಪ್ರೀತಿಯನ್ನೇ ಬಿತ್ತುತ್ತೇವೆ

ಅವರು ದ್ವೇಷವನ್ನು ಹರಡಿದವರು
ದ್ವೇಷವನ್ನೇ ಹರಡುತ್ತಾರೆ
ನಾವು ಸ್ನೇಹವನ್ನು ಹರಡುವವರು
ಸ್ನೇಹವನ್ನೇ ಹರಡುತ್ತೇವೆ

ಅವರು ಹಸಿವನ್ನೇ ಹಂಚಿ ಮೇದವರು
ಹಸಿವನ್ನೇ ಹಂಚಿ ಮೇಯುತ್ತಾರೆ
ನಾವು ಹಸಿವಲ್ಲೂ ಹಂಚಿ ತಿನ್ನುವವರು
ಹಂಚೇ ತಿನ್ನುತ್ತೇವೆ

ಅವರು ಧರ್ಮದ ಹೆಸರಲ್ಲಿ
ತುಳಿದು ಬದುಕಿದವರು
ತುಳಿದೇ ಬದುಕುತ್ತಾರೆ
ನಾವು ತುಳಿದವರನ್ನು ಮೇಲೆತ್ತುತ್ತಾ ಬದುಕುವವರು
ತುಳಿದವರನ್ನು ಮೇಲೆತ್ತಿಯೇ ಬದುಕುತ್ತೇವೆ

– ಪ್ರದೀಪ್ ಕುಮಾರ್ಎಂ.ಜಿ.



ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆಯಲ್ಲಿ ನಾರಾಯಣ ಗುರು ಪಂಥ ಮಹತ್ವದ ಸ್ಥಾನ ಪಡೆದಿದೆ. 'ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು' ಎಂಬ ಉಚ್ಛ ಮಾನವತಾವಾದದ ಭೋದನೆ ಮೂಲಕ ಜಾತಿ ಅಸಮಾನತೆ, ಶೋಷಣೆ, ಶಿಕ್ಷಣದ ದೇವಾಲಯ ಪ್ರವೇಶಕ್ಕೆ ನಿರಾಕರಣೆ ಮುಂತಾದ ತಾರತಮ್ಯಗಳ ವಿರುದ್ಧ ಸುಧಾರಣಾ ಚಳುವಳಿ ಹೂಡಿದ್ದ ನಾರಾಯಣ ಗುರು ಅವರು ಕರಾವಳಿ ಕರ್ನಾಟಕದಲ್ಲಿ ಬೀರಿದ ಪರಿಣಾಮದ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಡಾ. ಜ್ಯೋತಿ ಚೆಳ್ಯಾರು ಅವರು ಮಾಡುತ್ತಾರೆ. ನಾರಾಯಣ ಗುರು ಅವರ ಸುಧಾರಣಾ ಚಳುವಳಿ ಒಂದು ಪಂಥ ಆದ ಬಗೆಯನ್ನು ನಿರೂಪಿಸುತ್ತಾರೆ. ಕೇರಳದಲ್ಲಿ ನಾರಾಯಣ ಗುರು ಅವರ ಸುಧಾರಣಾ ಚಳುವಳಿ ಎಡಪಂಥೀಯ ಚಳುವಳಿಗೆ ನೆಲಹದ ಮಾಡಿದ ಹಾಗೆ ಕರಾವಳಿ ಕರ್ನಾಟಕದಲ್ಲಿ ಯಾಕೆ ಆಗಲಿಲ್ಲ ಎಂಬ ಬಗ್ಗೆ ನೇರವಾಗಿ ಇಲ್ಲಿ ಪ್ರಸ್ತಾಪವಿಲ್ಲದಿದ್ದರೂ, ಅದಕ್ಕೆ ಬೇಕಾದ ಕೆಲವು ಹೊಳಹುಗಳು ಇವೆ. ಕರಾವಳಿ ಕರ್ನಾಟಕದಲ್ಲೂ ಎಡಪಂಥ ಬಿಲ್ಲವ ಸಮುದಾಯದಲ್ಲಿ ಬಲವಾದ ನೆಲೆ ಹೊಂದಿತ್ತು ಇಲ್ಲಿ ನೆನಪಿಸಿಕೊಳ್ಳಬಹುದು.

ಕರಾವಳಿ ಕರ್ನಾಟಕದಲ್ಲಿ ನಾರಾಯಣ ಗುರು ಪಂಥ

ಜ್ಯೋತಿ ಚೇಳ್ಯಾರು
ಅಧ್ಯಾಪಕರು, ಮಂಗಳೂರು

ಕೇರಳದಲ್ಲಿ ಜನಿಸಿದ ನಾರಾಯಣ ಗುರುಗಳು ಆಧ್ಯಾತ್ಮ ಪರಂಪರೆಯ ದಾರ್ಶನಿಕರಲ್ಲಿ ಒಬ್ಬರೆನಿಸಿದ್ದಾರೆ. ಚಿಂತಕ, ದಾರ್ಶನಿಕರಲ್ಲಿ ಒಬ್ಬರೆನಿಸಿದ್ದಾರೆ. ಚಿಂತಕ, ದಾರ್ಶನಿಕ, ಅಪ್ಪಟ ಮಾನವತಾವಾದಿ, ಸಮಾಜ ಸುಧಾರಕ, ವೈಚಾರಿಕ ಚಿಂತನೆಯಿಂದ ಸಮನ್ವಯ ಧಾರ್ಮಿಕ ಪರಂಪರೆಯನ್ನು ಮುನ್ನಡೆಸಿದವರು. ಮುಕ್ತ ವಾತಾವರಣದಲ್ಲಿ ಮನುಷ್ಯ ಸಮಾಜದ ಶ್ರೇಯಸ್ಸನ್ನಷ್ಟೇ ತಮ್ಮ ಬದುಕಿನ ಗುರಿಯಾಗಿರಿಸಿಕೊಂಡು ಬಾಳಿದವರು. ಜಾತಿಯ ಅಸಮಾನತೆ, ಅಸ್ಪೃಶ್ಯತೆ, ಮತ ಧರ್ಮಗಳ ಕಂದಾಚಾರಗಳನ್ನು ಪ್ರಶ್ನಿಸುತ್ತಲೇ ಅದನ್ನು ಮೀರುವ ಅಖಂಡ ಮಾನವೀಯ ಕಾಳಜಿಯನ್ನು ಹೊಂದಿದ್ದರು. "ಧಾರ್ಮಿಕ ಸಿದ್ಧಾಂತಗಳು ವಾದಿಸಲಿಕ್ಕೂ ಅಲ್ಲ ವಾದಿಸಿ ಜಯಿಸಲಿಕ್ಕೂ ಅಲ್ಲ. ಅದು ಸರ್ವರ ಸಮನ್ವಯ ಜೀವನಕ್ಕೆ ಜೀವಾಳವಾಗಬೇಕು" ಎಂದು ಸಾರಿದ ಗುರು ತಾನು ಕಂಡುಕೊಂಡ ಸತ್ಯವನ್ನು ಆಚರಿಸಿ ತೋರಿದವರು. "ಮನುಷ್ಯನನ್ನು ಒಳ್ಳೆಯ ಮನುಷ್ಯನನ್ನಾಗಿ ಮಾಡುವುದೇ ಎಲ್ಲಾ ಧರ್ಮಗಳ ಉದ್ದೇಶಗಳು; ಮತ ಯವುದಾದರೇನು ಮನುಷ್ಯ ಒಳ್ಳೆಯವನಾದರೆ ಸಾಕು" ಎನ್ನುವ ಸರಳ ಸಂದೇಶವೇ ನಾರಾಯಣ ಗುರುಗಳನ್ನು ವಿಶ್ವಾತ್ಮಕತೆಗೆ ಒಯ್ಯುತದೆ.

ಬಿಲ್ಲವರ ಸಬಲೀಕರಣ

ಹತ್ತೊಂಬತ್ತನೆಯ ಶತಮಾನದ ಕಾಲಕ್ಕೆ ಜಾತಿಯ ಸಮಾನತೆ, ಸ್ತ್ರೀ ಗೌರವ, ಶಿಕ್ಷಣದ ಎಚ್ಚರ, ಸಂಘಟನೆಯ ಶಕ್ತಿ ಮತ್ತು ಸ್ವಂತಿಕೆಯ ಆಯಾಮವಾಗಿ ಶಿವಗಿರಿಯಲ್ಲಿ ಶಿವದೇವಸ್ಥಾನ ಸ್ಥಾಪನೆ ಮಾಡಿದರು. ಕೇರಳದಲ್ಲಿ ಮಾತ್ರವಲ್ಲದೆ ಕರಾವಳಿ ಕರ್ನಾಟಕದಲ್ಲೂ ಅದರ ಪ್ರಭಾವವನ್ನು ಬಹಳ ಗಾಢವಾಗಿ ಬೀರಿದ ಹಿರಿಮೆ ಅವರದು. ಬಹಳ ಮುಖ್ಯವಾಗಿ ಸಂಘಟನೆಯ ಶಕ್ತಿಯನ್ನು ಜನರಿಗೆ ಮನದಟ್ಟು ಮಾಡಿಕೊಟ್ಟು, ಸಂಘಟಿತರಾಗಿ ಬಲಯುತರಾಗಿ ಎಂದರು. ಪರಿಣಾಮ ನಾರಾಯಣ ಗುರುಗಳ ಹೆಸರಿನಲ್ಲಿ ಹಳ್ಳಿ ಹಳ್ಳಿಗಳಲ್ಲೂ ಬಿಲ್ಲವ ಸಂಘಗಳು ಸ್ಥಾಪನೆಗೊಂಡವು. ನಾವೆಲ್ಲರೂ ಒಂದೇ ಜಾತಿ ಒಂದೇ ಮತ ಎಂದು ಗುರುಗಳು ಸಾರಿದರೂ, ಬಿಲ್ಲವ ಸಮುದಾಯ ಸಂಘಟನೆಯ ಮೂಲಕ ತಮ್ಮನ್ನು ತಾವು ಸಶಕ್ತಿಗೊಳಿಸುವುದರಲ್ಲಿ ಯಶಸ್ವಿಯಾಯಿತು. ಕರಾವಳಿಯಲ್ಲಿ ಜಾತಿ ಸಂಘಗಳ ಹುಟ್ಟಿಗೆ ಕಾರಣರಾಗಿ ಮಾದರಿ ಸಾಮುದಾಯಿಕ ಸಂಘಟನೆಯನ್ನು ಹೊಂದಿ, ಏಕತೆ ಮತ್ತು ಒಗ್ಗಟ್ಟನ್ನು ಪ್ರದರ್ಶಿಸಲು ಸಾಧ್ಯವಾಯಿತು. ಉಪಜಾತಿಗಳನ್ನು ತಮ್ಮ ತೆಕ್ಕೆಯೊಳಗೆ ಸೇರಿಕೊಂಡು, ಮಲೆಯಾಳಿ ಬಿಲ್ಲವರು, ಈಳವರು, ಈಡಿಗರನ್ನು ಸಮಗ್ರವಾಗಿ ಗ್ರಹಿಸಿ; ಒಗ್ಗೂಡಿಸಿಕೊಂಡು ಸಂಘಶಕ್ತಿಯ ಮಹತ್ವವನ್ನು ಅರ್ಥೈಸಿಕೊಂಡರು. ಎಲ್ಲ ಜಾತಿ ಸಮುದಾಯಗಳನ್ನು ಮೀರಿ ಎಲ್ಲರಿಗೂ ಗುರುವಿನ ಸ್ಥಾನದಲ್ಲಿ ನಿಂತು ಸಮಗ್ರತೆಯ ತಾತ್ವಿಕತೆಯನ್ನು ಕಟ್ಟಿಕೊಟ್ಟ ನಾರಾಯಣ ಗುರುಗಳನ್ನು ಬಿಲ್ಲವರ ಸಮುದಾಯಕ್ಕೆ ಸೀಮಿತಗೊಳಿಸಿದ್ದು ವಿಪರ್ಯಾಸ ಮತ್ತು ವೈರುಧ್ಯವೂ ಆಗಿದೆ.

ವರ್ತಮಾನದಲ್ಲಿ ತಾವೆಲ್ಲರೂ ಒಂದು ಎಂದು ಸಾರುವಾಗಲೂ ಹಳದಿ ಪತಾಕೆ, ಹಳದಿ ಶಾಲುಗಳಿಂದ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದಾರೆ. ಹಳದಿ ವರ್ಣಕ್ಕೆ ಅದರದ್ದೇ ಆದ ತಾತ್ವಿಕತೆ ಇದ್ದರೂ ಒಳಗೊಳ್ಳುವ ಪರಿಭಾಷೆಗಳಲ್ಲಿ ಮಿತಿಗಳನ್ನು ಕಾಣಬಹುದು. ಸಂಘಟನೆಯ ಅವಶ್ಯಕತೆ ಮತ್ತು ಅನಿವಾರ್ಯತೆಯನ್ನು ಮನಗಂಡಿದ್ದ ಗುರುಗಳ ಅನುಯಾಯಿಗಳು ವ್ಯವಸ್ಥೆಯ ವಿರುದ್ಧದ ಗಟ್ಟಿದನಿಯಾಗಿ ಒಟ್ಟು ಸೇರಲು ವೇದಿಕೆಯಾಗಿರಿಸಿಕೊಂಡರು. ಜಾತಿಯ ಕಾರಣಕ್ಕಾಗಿ ಆಚರಿಸುತ್ತಿದ್ದ ಅಸ್ಪೃಶ್ಯತೆ, ಹುಸಿಧಾರ್ಮಿಕತೆಯ ಬಣ್ಣ ಬಯಲುಗೊಳಿಸಿ ರಾಜಕೀಯವಾಗಿಯೂ ಗಟ್ಟಿಗೊಳ್ಳಲು ಕಾರಣವಾಯಿತು. ಕರಾವಳಿಯಲ್ಲಿ ಬಿಲ್ಲವ ಸಮುದಾಯದ ಸಂಘಟನಾ ಬದ್ಧತೆ ಮತ್ತು ಚಾಕಚಕ್ಯತೆ ರಾಜಕೀಯ ಶಕ್ತಿಯಾಗಿಯೂ ತಮ್ಮನ್ನು ತಾವು ಧ್ರುವೀಕರಿಸಿಕೊಂಡರು. ರಾಜಕೀಯ ಮುಖಂಡರಾಗಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವವರು.

ಸಂಘಟನೆಯ ಬದ್ಧತೆಯನ್ನು ಅರ್ಥೈಸಿಕೊಂಡ ಬಿಲ್ಲವ ಸಂಘಗಳು ಒಂದು ಗೂಡುತ್ತಲೇ ಶಕ್ತಿವಂತರಾದುದು ಇತಿಹಾಸದೊಂದಿಗೆ ವರ್ತಮಾನದ ಸತ್ಯವೂ ಹೌದು. ಸಂಘಟನಾ ಚಾತುರ್ಯ ಮತ್ತು ಶಕ್ತಿಯನ್ನು ಅರಗಿಸಿಕೊಂಡರೂ ಅದು ದಿಕ್ಕು ತಪ್ಪದಂತೆ ಮುನ್ನಡೆಸುವ ಅವಶ್ಯಕತೆಯೂ ಇದೆ. ತಮ್ಮ ಸಮುದಾಯದ ಮೂಲ ಬೇರುಗಳನ್ನು ಅರಸುತ್ತಲೇ ಮೇಲ್ವರ್ಗ ಮೇಲ್ಜಾತಿಯ ಅನುಸರಣೆಗಿಂತ ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳುವ ಎಚ್ಚರವೂ ಇದೆ. ಈ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥೈಸಿಕೊಂಡು ರಾಜಕೀಯ ಶಕ್ತಿಯಾಗಿಯೂ ಮುನ್ನಡೆಯಬೇಕಾದ ಅವಶ್ಯಕತೆಯಿದೆ.

ಶಿಕ್ಷಣದಿಂದ ಪುನರುತ್ಥಾನ

ನಿರಂತರ ಬದಲಾಗುತ್ತಿರುವ ಪರಿಸರ ಹಾಗೂ ಪರಿಸ್ಥಿತಿಗೆ ಸಮಾಜ ತನ್ನನ್ನು ಒಡ್ಡಿಕೊಂಡು, ತಿದ್ದಿಕೊಂಡು, ಪ್ರಗತಿಪರ. ಉನ್ನತಿ ಸಾಧಿಸಲು ಆಧುನಿಕ ಶಿಕ್ಷಣದ ಅಗತ್ಯವಿದೆ. ವ್ಯಕ್ತಿ, ಕುಟುಂಬ, ಸಮಾಜದ ಬೆಳವಣಿಗೆಯ ತಳಹದಿಯೇ ಶಿಕ್ಷಣ–ಶಿಕ್ಷಣದಿಂದ ಹಿಂದುಳಿದ ವರ್ಗಗಳು, ಅಸ್ಪೃಶ್ಯರು, ದಲಿತರು ವಂಚಿತರಾದುದೇ ಅವರ ಹೀನ ದುಸ್ಥಿತಿಗೆ ಕಾರಣ. ಇಂತಹ ದುಃಸ್ಥಿತಿಯಿಂದ ಈ ಸಮುದಾಯಗಳ ಪುನರುತ್ಥಾನವಾಗಬೇಕು. ಅದು ಸಾಧ್ಯವಾಗಲು ಪ್ರತಿಪುರುಷ ಮತ್ತು ಸ್ತ್ರೀಗೂ ಸಮಾನ ಶಿಕ್ಷಣದ ಅಗತ್ಯ ಮಾತ್ರವಲ್ಲ. ಅನಿವಾರ್ಯ ಎನ್ನುವುದು ಗುರು ಸಿದ್ಧಾಂತ.

ಪರಿಣಾಮ ಮೇಲ್ವರ್ಗ, ಮೇಲ್ಜಾತಿಯವರೇ ಇರುವ ಶಾಲೆಗಳಲ್ಲಿ ಕೆಳವರ್ಗದಲ್ಲಿ ಪ್ರವೇಶ ನಿರಾಕರಣೆಯಾದಾಗ ದಲಿತರು, ಸ್ತ್ರೀಯರು, ಮುಸ್ಲಿಮರು ಎಲ್ಲರನ್ನು ಒಳಗೊಳ್ಳುವ ರೀತಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಇಂದಿಗೂ ಕರಾವಳಿಯಲ್ಲಿ ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸದೆ ಅತಿಕಡಿಮೆ ವೆಚ್ಚದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಬಿಲ್ಲವರು ಮುನ್ನಡೆಸುತ್ತಿದ್ದಾರೆ. ನಾರಾಯಣ ಗುರುಗಳ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಈ ಶಿಕ್ಷಣ ಸಂಸ್ಥೆಗಳು ವೃತ್ತಿಶಿಕ್ಷಣ, ವಸತಿ ರಹಿತವಾದ ಶಿಕ್ಷಣದೊಂದಿಗೆ ಕೆಳಸಮುದಾಯದವರಿಗೆ ವೃತಿಕೌಶಲ್ಯವಿರುವ್ತ ಉದ್ಯೋಗಗಳಲ್ಲಿ ಅವಕಾಶ ದೊರಕಿಸಿಕೊಳ್ಳುವುದು ಸಾಧ್ಯವಾಯಿತು. ಬಡವರ ಮಕ್ಕಳು ಶಿಕ್ಷಣದ ಎಚ್ಚರದೊಂದಿಗೆ ತಮ್ಮ ಮಕ್ಕಳು ಇಂಗ್ಲಿಷ್ ಕಲಿಯುವುದಕ್ಕೂ ಅವಕಾಶ ಒದಗಿಸಿತು. "ಶಿಕ್ಷಣದಿಂದ ಬಲಯುತಾಗಿ ಸಂಘಟನೆಯಿಂದ ಶಕ್ತಿವಂತರಾಗಿ" ಎನ್ನುವ ಎಚ್ಚರವನ್ನು ಕರಾವಳಿಯಲ್ಲಿ 20ನೇ ಶತಮಾನದ ಆರಂಭದಿಂದಲೇ ಪಡೆದದ್ದು ಗುರುಪಂಥದ ಪ್ರಭಾವದಿಂದ ಎನ್ನಲು ಅಡ್ಡಿಯಿಲ್ಲ. ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ಕೊಟ್ಟು ಔದ್ಯೋಗಿಕ ಕ್ರಾಂತಿಯಿಂದ ಸಾಮಾಜಿಕ ಪರಿವರ್ತನೆ ಮತ್ತು ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದು ಮನಗಂಡು ಸಾಂಪ್ರದಾಯಿಕ ಶಿಕ್ಷಣದೊಂದಿಗೆ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಲಾಯಿತು. ಕೇವಲ ಅಕ್ಷರದ ಪರಿಚಯ ಮಾತ್ರವಲ್ಲ ಸ್ತ್ರೀಶಿಕ್ಷಣದ, ವಯಸ್ಕರ ಶಿಕ್ಷಣದ ಅವಶ್ಯಕತೆ, ರಾತ್ರಿ ಶಾಲೆಗಳನ್ನು ತೆರೆಯುವ ಪ್ರಯತ್ನಕ್ಕೆ ಒತ್ತು ಸಿಕ್ಕಿತು. ಸರಕಾರಿ ಉದ್ಯೋಗಕ್ಕೆ ಸೇರಬೇಕಾದರೆ ಇಂಗ್ಲೀಷ್ ಶಿಕ್ಷಣದ ಅವಶ್ಯಕತೆಯನ್ನು ಬಹಳ ಒತ್ತು ಕೊಟ್ಟು ಗಮನಿಸುತ್ತಾರೆ.



ಚಳುವಳಿ ಪಂಥವಾಗಿ ಸಾಗಿದಾಗ

"ಅವರ್ಣರಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದವರು ಕಡಿಮೆ. ಕೆಲವು ವರ್ಷಗಳಿಂದೀಚೆಗೆ ವಿದ್ಯಾಭ್ಯಾಸಕ್ಕಾಗಿ ಜನರಲ್ಲಿ ಅತುರತೆ ಉಂಟಾಗಿರುವುದೇನೋ ನಿಜ. ಯಾವುದೇ ಜಾತಿಯ ಅಭಿವೃದ್ಧಿಗೂ ವಿದ್ಯಾಭ್ಯಾಸವೇ ಕಾರಣವಾಗಿರುವುದರಿಂದ ಅದರ ಪ್ರಚಾರವನ್ನು ಮಾಡಬೇಕು. ಪ್ರೌಢ ವಿದ್ಯಾಭ್ಯಾಸವನ್ನು ಪಡೆಯಲಿಕ್ಕೆ ಎಲ್ಲರಿಗೂ ಧನ ಸಹಾಯವಿಲ್ಲ. ಸಾಧಾರಣವಾಗಿ ಐಶ್ವರ್ಯವಂತರೆಲ್ಲಾ, ವಿದ್ಯಾಕಾಂಕ್ಷಿ, ಬಡ ವಿದ್ಯಾರ್ಥಿಗಳು ಹೊರಗಿನ ಪಟ್ಟಣಗಳಲ್ಲಿ ಹೋಗಿ ಅಧ್ಯಯನ ಮಾಡುವಂತೆ ಧನಸಹಾಯ ಮಾಡಬೇಕು. ಹೀಗೆ ಮಾಡುವುದರಿಂದ ಸಮಾಜಕ್ಕೆ ಹಿತವಾಗುವುದು. ಇಂಗ್ಲಿಷ್ ಭಾಷೆ ಈಗ ಬಹಳ ಮುಖ್ಯವಾಗಿರುವುದರಿಂದ ಅದರ ಕಡೆಗೆ ನಾವು ಗಮನ ಕೊಡಬೇಕು. ಗಂಡಸರು ಮಾತ್ರವಲ್ಲ, ಹೆಂಗಸರೂ ವಿದ್ಯಾಭ್ಯಾಸವನ್ನು ಮಾಡಬೇಕು. ಇಂತಹ ವಿಷಯಗಳಲ್ಲಿ ಅವರು ಹಿಂದುಳಿಯ ಬಾರದು" ಎನ್ನುವುದು ನಾರಾಯಣ ಗುರುಗಳ ವಿಚಾರವಾಗಿತ್ತು.

ಕರಾವಳಿಯಲ್ಲಿ ಮಿಶನರಿಗಳು ಆರಂಭಿಸಿದ ಶಾಲೆಗಳಲ್ಲಿ ಮೂರ್ತೆದಾರರ ಮಕ್ಕಳನ್ನು ಸೇರಿಸಿದಾಗ ಬ್ರಾಹ್ಮಣರು ಮತ್ತು ಕೊಂಕಣಿಗರು ತಮ್ಮ ಮಕ್ಕಳನ್ನು ಶಾಲೆ ಬಿಡಿಸಿದ ಘಟನೆಗಳು 1851ರ ಬಾಸೆಲ್ ಮಿಶನ್ ವರದಿಗಳಲ್ಲಿ ದಾಖಲಾಗಿವೆ. 1880 ರಲ್ಲಿ ಬಂಟ್ವಾಳ ತಾಲೂಕು ಪೂಂಜಾ ಗ್ರಾಮದ ಪೆರಿಯಾಲಡ್ಕದಲ್ಲಿ ದಲ್ಕಜೆಗುತ್ತು ಮನೆತನದ ದಿ. ರಾಮಣ್ಣ ಪೂಜಾರಿ ಎಂಬುವರು. ಶಿಕ್ಷಕ ತರಬೇತಿ ಪಡೆದು ಸ್ವಂತ ಕಟ್ಟಡದಲ್ಲಿ ಶಾಲೆ ಆರಂಭಿಸಿದರು. ಮುಂದೆ ಹತ್ತಿಪ್ಪತ್ತು ವರ್ಷಗಳ ನಂತರ ಸರ್ಕಾರಿ ಶಾಲೆಯಾಗಿ ಪರಿವರ್ತನೆ ಹೊಂದಿತು. ಕ್ರಿ.ಶ. 1930 ರಲ್ಲಿ ಮಂಗಳೂರು ತಾಲೂಕಿನ ಸುರತ್ಕಲ್ ಗ್ರಾಮದ ಮುಕ್ಕದಲ್ಲಿ ದಿ. ವೀರಪ್ಪ ಪೂಜಾರಿಯವರು ಸ್ಥಾಪಿಸಿದ ಧೂಮಾವತಿ ಹಿ. ಪ್ರಾ. ಶಾಲೆ ಪ್ರಾರಂಭಿಸಿದರು. ಮುಂದೆ ಕರಾವಳಿಯ ಉದ್ದಗಲಕ್ಕೂ ಸುಮಾರು ಹನ್ನೆರಡು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಕೇವಲ ಪ್ರಾಥಮಿಕ ಶಿಕ್ಷಣವಲ್ಲ, ವೃತ್ತಿ ಶಿಕ್ಷಣ ಔದ್ಯೋಗಿಕ ಶಿಕ್ಷಣಕ್ಕೂ ಒತ್ತನ್ನು ನೀಡಿದರು. ಇಂದಿಗೂ ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳನ್ನು ಕಟ್ಟಿ ಶಿಕ್ಷಣದ ದಂಧೆಯನ್ನು ನಡೆಸುತ್ತಿರುವ ಶೈಕ್ಷಣಿಕ ಸಂಸ್ಥೆಗಳಿಗಿಂತ ಭಿನ್ನವಾಗಿ ಬಿಲ್ಲವರ ಶಿಕ್ಷಣ ಸಂಸ್ಥೆಗಳಿವೆ. ಒಂದು ಚಳುವಳಿ ಪಂಥವಾಗಿ ಸಾಗಿದ ಬಿಲ್ಲವರ ಈ ಎಚ್ಚರದ ನಡೆಯನ್ನು ಗಮನಿಸಬೇಕು.

ದೇವಾಲಯ–ಹಿಂದೆ ಸರಿದ ಗುರುವಾಣಿ

ನಾರಾಯಣ ಗುರುಗಳು ಲೋಕಾನುಭವಗಳನ್ನು ಮತ್ತು ತಪಸ್ಸಿನ ಅತೀಂದ್ರಿಯ ಶಕ್ತಿಯನ್ನು ಮೇಳೈಸಿಕೊಂಡು ಶೋಷಿತರ ಉದ್ಧಾರಕ್ಕಾಗಿ ಅರವಿಪ್ಪುರದಲ್ಲಿ ದೇವಾಲಯ ನಿರ್ಮಾಣಕ್ಕೆ ಸಿದ್ಧರಾದರು. ದೇವಸ್ಥಾನಗಳನ್ನು ಮಾಧ್ಯಮವಾಗಿಸಿಕೊಂಡು ರೋಗಗ್ರಸ್ತ ಸಮಾಜದ ಸ್ವಚ್ಛತೆಗೆ ಯೋಜನೆಯನ್ನು ರೂಪಿಸಿದರು. 1886 ರ ಸುಮಾರಿನಲ್ಲಿ ನಾರಾಯಣ ಗುರುಗಳು ಅರುವಿಪ್ಪುರಕ್ಕೆ ಬಂದರು.

1888 ರ ಮಹಾಶಿವರಾತ್ರಿಯಂದು ಅರವಿಪ್ಪುರದಲ್ಲಿ ಶಿವಲಿಂಗ ಪ್ರತಿಷ್ಠೆ ಮಾಡಿದರು. 'ಮೂರ್ತಿಗೊಂದು ಆಲಯ'ವೆಂದಿದ್ದುದು 'ಆಲಯಕ್ಕೊಂದು ಮೂರ್ತಿ'ಯಾಗಿ ಪರಿವರ್ತನೆ ಹೊಂದಿದ ಕಾಲಕ್ಕಾಗುವಾಗ ತಂತ್ರ, ಮಂತ್ರ, ಮೂಹೂರ್ತ, ವಾಸ್ತು ಪ್ರತಿಷ್ಠಾ ಶಾಸ್ತ್ರಗಳನ್ನೆಲ್ಲ ಮೀರಿದರು. ಬಹಳ ದಿಟ್ಟವಾಗಿ 'ನಾನು ಪ್ರತಿಷ್ಠಾಪಿಸಿದ್ದು ಶೂದ್ರ ಶಿವ' ಎಂದರು. ಮೇಲ್ವರ್ಗದವರ ವಿರೋಧಗಳ ಮಧ್ಯೆ ಕೆಳವರ್ಗದ ದಲಿತರು, ಬಿಲ್ಲವರು ಉಳಿದ ಜಾತಿವರ್ಯರಿಗೂ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕೊಟ್ಟು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿದರು.

"ಕಾಲೋಚಿತವಲ್ಲದ ಯುಕ್ತಿಪೂರ್ಣವಲ್ಲದ ಮಾನವ ಅಭ್ಯುದಯಕ್ಕೆ ಅನುಕೂಲವಲ್ಲದ ಡಂಬಾಚಾರ, ಅಂಧವಿಶ್ವಾಸಗಳನ್ನು ಜನ ಕೈ ಬಿಡಬೇಕು. ಸಮಾಜೋನ್ನತಿಗೆ ಆತ್ಮೋನ್ನತಿಗೆ ನೆರವಾಗಬಲ್ಲ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಹಳೆಯದೆಂದ ಮಾತ್ರಕ್ಕೆ ಎಲ್ಲವನ್ನೂ ಕೈ ಬಿಡಬೇಕೆಂದಿಲ್ಲ. ಸವಕಲೆನಿಸಿದ ಪದ್ಧತಿಗಳನ್ನು ಮಾತ್ರ ಬಿಟ್ಟು ಅವುಗಳ ಸ್ಥಾನದಲ್ಲಿ ಉತ್ತಮ ಆದರ್ಶಗಳನ್ನು ತುಂಬಬೇಕು. ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಸಮಾಜವನ್ನು ಬೆಳಕಿನತ್ತ ಯಶಸ್ಸಿನತ್ತ ಒಯ್ಯಬೇಕು" ಎನ್ನುವುದು ಗುರುವಿನ ಪುನರುತ್ಥಾನದ ತಳಹದಿಯಾಗಿತ್ತು. ಮಂಗಳೂರಿನ ಕುದುರೋಳಿಯಲ್ಲಿ ಸ್ಥಾಪಿಸಿದ ಶ್ರೀ ಗೋಕರ್ಣನಾಥೇಶ್ವರ ದೇವಾಲಯಕ್ಕೂ ಅದೇ ಉದ್ದೇಶವಿತ್ತು. ದಲಿತ ಹೆಣ್ಣು ಮಕ್ಕಳನ್ನು ಅರ್ಚನೆಗೆ ನೇಮಿಸಿದ ಹಿರಿಮೆ ಈ ದೇವಳಕ್ಕೆ ಸಲ್ಲುತದೆ. ವಿಧವಾ ಸ್ತ್ರೀಯರನ್ನು ಮೊದಲ ಬಾರಿಗೆ ಪೂಜೆಗೆ ನಿಯಮಿಸುವ ಧೈರ್ಯವನ್ನು ಆ ದೇವಾಲಯದ ಆಡಳಿತ ಮಂಡಳಿ ಪ್ರಕಟಿಸಿತ್ತು. ಅರ್ಚಕರಾಗಿ ನೇಮಕಗೊಂಡು ಹೆಣ್ಣು ಮಕ್ಕಳು ಮಾತ್ರ ಆ ಸ್ಥೈರ್ಯವನ್ನು ಮುಂದುವರಿಸದೆ ಹೋದುದು ವಿಷಾದ. ಇನ್ನೊಂದೆಡೆ ಎಲ್ಲ ದೇವರುಗಳ ಮೂರ್ತಿಗಳನ್ನು ದೇವಾಲಯ ಪ್ರಾಂಗಣದಲ್ಲಿ ಸ್ಥಾಪಿಸಿ, ಅದ್ದೂರಿಯ ಮಂಗಳೂರು ದಸರಾವನ್ನು ನಡೆಸುತ್ತಾ ಬರಲಾಗುತ್ತಿದೆ. ಸಾಂಸ್ಕೃತಿಕವಾಗಿ ಕರಾವಳಿಯ ಬಹುಮುಖ್ಯ ಕೊಡುಗೆಯನ್ನು ಉತ್ಸವ ಮೆರವಣಿಗೆಗಳಲ್ಲಿ ಕಳೆದುಹೋಗಿ ತಾತ್ವಿಕತೆ ಮೂಲೆ ಸೇರುತ್ತದೆ. ದೇವಸ್ಥಾನದಲ್ಲಿ ದೇವರ ಪ್ರತಿಮೆಯನ್ನು ಪ್ರತಿಷ್ಠಾಪಿಸುವುದಕ್ಕಿಂತ, ಕನ್ನಡಿಯನ್ನು ಇಟ್ಟು ನಿಮ್ಮನ್ನು ನೀವು ನೋಡಿಕೊಳ್ಳಿ ಎನ್ನುವ ಗುರುವಾಣಿಯೂ ಹಿನ್ನೆಲೆಗೆ ಸೇರಿದೆ.

ಹುಸಿ ಧಾರ್ಮಿಕತೆ ವಿರೋಧಿಸಿದ ಗುರುವಿಗೇ ಗುಡಿ

ವರ್ಷಕ್ಕೊಂದಾವರ್ತಿ ಆಚರಿಸಲ್ಪಡುವ ಗುರುಜಯಂತಿ ಮತ್ತು ಗುರುಪೂಜೆ ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತದೆ. ಪ್ರತಿಯೊಂದು ಗುರುಮಂದಿರದಲ್ಲೂ ವಾರದ ಭಜನೆಯನ್ನು ಮಾಡುತ್ತ ನಾರಾಯಣ ಗುರುತಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಗುರುವನ್ನು ಗುಡಿಯ ಒಳಗೆ ಇರಿಸಲಾಗಿದೆ. ಒಂದರ್ಥದಲ್ಲಿ ಹುಸಿಧಾರ್ಮಿಕತೆಯನ್ನು ವಿರೋಧಿಸಿದ ಗುರುವಿನ ಹೆಸರಲ್ಲಿಯೂ ಅದೇ ರೀತಿಯ ನಡವಳಿಕೆ ಗೋಚರಿಸುತ್ತದೆ. ಇಂದು ನಮಗೆ ಬೇಕಾಗಿರುವುದು ಭಜಿಸುವ ಬಾಯಿಗಳಿಗಿಂತ ಯೋಚಿಸುವ ತಲೆಗಳು. ಕರಾವಳಿಯಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಕೋಮುವಾದಿ ಚಟುವಟಿಕೆಗಳಿಗೆ ಗುರುಗಳ ಜೀವನ ಕ್ರಮದ ಮೌಲ್ಯ ಗಳಲ್ಲೇ ಉತ್ತರವಿತ್ತು. ಈಳವರು ಬಿಲ್ಲವರು ಬೇರೆ ಧರ್ಮಗಳಿಗೆ ಮತಾಂತರಗೊಳ್ಳುವುದನ್ನು ಅವರು ವಿರೋಧಿಸಲಿಲ್ಲ. ಅಲ್ಲದೆ ತಮ್ಮ ಬಳಿಗೆ ಬರುವ ಶಿಷ್ಯರಲ್ಲಿಯೂ ಜಾತಿ, ಧರ್ಮಗಳನ್ನು ಅರಸಲಿಲ್ಲ. ಮುಸ್ಲಿಮರು ಕ್ರೈಸ್ತ ಅನುಯಾಯಿಗಳೂ ಗುರುಗಳ ಶಿಷ್ಯರಾಗಿದ್ದರು. ವರ್ತಮಾನದಲ್ಲಿ ಕೋಮುವಾದಿ ಚಟುವಟಿಕೆಗಳಿಗೆ ಬಿಲ್ಲವ ಯುವ ಸಮುದಾಯವೇ ದಾಳಗಳಾಗಿ ಬಳಸಲ್ಪಡುತ್ತಿದ್ದರೂ, ಅವರನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿಯೂ ಸಮುದಾಯದ ಮುಖಂಡರಿಲ್ಲ. ಎಲ್ಲ ಸಮುದಾಯದ ಜನರನ್ನು ಒಳಗೊಳ್ಳುವ ಮೂಲಕ 'ಎಲ್ಲರೂ ಒಂದೇ ಜಾತಿ ಒಂದೇ ಮತ' ಎಂದು ಸಾರುವುದಕ್ಕಲ್ಲ ಬಾಳುವುದಕ್ಕೆ ಸಾಧ್ಯವಾಗಬೇಕಾಗಿದೆ.

ಅವರು ದೇವಸ್ಥಾನಗಳಿಗಿಂತ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ದೇವಸ್ಥಾನಗಳನ್ನೇ ಮಾಧ್ಯಮಗಳಾಗಿ ಮಾಡಿಕೊಂಡು ಶಾಲೆಗಳನ್ನು ತೆರೆಯಲು ಆಜ್ಞೆ ಮತ್ತು ಅನುವು ಮಾಡುತ್ತಿದ್ದರು. ಗುರುಗಳ ದೇವಸ್ಥಾನಗಳ ಪ್ರಮುಖ ಉದ್ದೇಶಗಳು ಶಿಕ್ಷಣ, ಸಮಾಜೋತ್ಥಾನ, ಸಾಮಾಜಿಕ ಸಮಾನತೆಗಳನ್ನು ಸಾಧಿಸುವುದೇ ಆಗಿತ್ತು. ದೇವಸ್ಥಾನ ಕಟ್ಟಿದಾಗ ಅದರ ಮುಖಾಂತರ ಶಾಲೆಯನ್ನು ತೆರೆಯಲು ಅದಕ್ಕೆ ಅನುಕೂಲ ಕಲ್ಪಿಸಿಕೊಳ್ಳಲು ಸುಲಭವಾಗುತ್ತಿತ್ತು. ಅವರು ಸ್ಥಾಪಿಸಿದ ಬಹುತೇಕ ದೇವಸ್ಥಾನಗಳು ಆಧುನಿಕ ಶಿಕ್ಷಣದ ವ್ಯವಸ್ಥೆಗಳುಳ್ಳ ಶಾಲೆಗಳನ್ನು ಹೊಂದಿರುವುದನ್ನು ಗಮನಿಸಿದಾಗ ಶಿಕ್ಷಣದ ಬಗೆಗೆ ಅವರ ನಿಲುವು, ಒಲವು ಸ್ಪಷ್ಟವಾಗುವುದು.

'ದೇವಸ್ಥಾನಗಳನ್ನು ಕಟ್ಟುವುದನ್ನು ಇನ್ನು ಸಾಕು ಮಾಡಿರಿ. ಬದಲಾಗಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿಕೊಳ್ಳಿರಿ. ದೇವಸ್ಥಾನಕ್ಕೆ ಪೂಜೆಗಾಗಿ ಭಕ್ತಿಯಿಂದ ಹೂ ಹಣ್ಣುಗಳನ್ನು ಕೊಂಡೊಯ್ಯುವಂತೆ ನಿಮ್ಮ ಮಕ್ಕಳನ್ನು ಶ್ರದ್ಧಾಭಕ್ತಿಯಿಂದ ಶಾಲೆಯೊಳಗೆ ಕರೆದೊಯ್ಯಿರಿ. ಸಂಘಟಿತರಾಗಿ ಶಕ್ತಿಯನ್ನು ಪಡೆದು ಆ ಶಕ್ತಿಯಿಂದಲೇ ಭವಿಷ್ಯದ ಜನಾಂಗಕ್ಕೆ ವಿದ್ಯೆಯನ್ನು ಕೊಟ್ಟು ಸ್ವತಂತ್ರಗೊಳಿಸಿರಿ" ಎಂದು ಗುರುಗಳ ಸಮಾಜಕ್ಕೆ ಕರೆ ಕೊಟ್ಟರು. ಸಮಾಜ ಮುಖಿಯಾದ ಅವರ ಚಟುವಟಿಕೆಗಳು ಸಮುದಾಯದ ಕುರಿತಾದ ತಿಳುವಳಿಕೆಯನ್ನು ನೀಡುವುದರೊಂದಿಗೆ ಅರಿವಿನ ವಿಸ್ತಾರವನ್ನು ಹೆಚ್ಚಿಸಿತು. ಹೆಣ್ಣಿನ ವ್ಯಕ್ತಿತ್ವದ ಅರಳುವಿಕೆಯೇ ಆರೋಗ್ಯ ಪೂರ್ಣ ಸಮಾಜಕ್ಕೆ ಬುನಾದಿ ಎಂದು ಮನಗಂಡಿದ್ದರು. ಅವಿಭಕ್ತ ಪಿತೃಪ್ರಧಾನ ಕುಟುಂಬಗಳಲ್ಲಿ ಹೆಂಗಸರು ಮತ್ತು ಮಕ್ಕಳು ಶೋಷಿತರಾಗುತ್ತಾರೆ. ವಿಭಕ್ತ ಕುಟುಂಬಗಳ ತಂದೆ ತಾಯಿಗಳು ತಮ್ಮ ಮಕ್ಕಳ ಕಡೆಗೆ ಗಮನ ಕೇಂದ್ರೀಕರಿಸಿ ಅವರ ಶ್ರೇಯಸ್ಸಿಗಾಗಿ ಶ್ರಮಿಸಬೇಕು ಎಂಬುದು ಅವರ ನಿಲುವಾಗಿತ್ತು. ಕುಲಕಸುಬಾದ ಮೂರ್ತೆಗಾರಿಕೆಯನ್ನು ಮುಂದುವರಿಸಿ ಮದಿರೆಯ ದಾಸರಾಗುವುದಕ್ಕಿಂತ ಕೃಷಿ, ನೇಕಾರಿಕೆಯಂತಹ ವೃತ್ತಿಗಳನ್ನು ಆಯ್ದುಕೊಳ್ಳಿ ಎಂದು ಕರೆ ನೀಡಿದರು. ಮದ್ಯಪಾನ ನಿಷೇಧದ ಬಗ್ಗೆ ಒತ್ತಾಸೆಯಿಟ್ಟು ಸಮಾಜದಲ್ಲಿದ್ದ ಕಂದಾಚಾರಗಳನ್ನು ನಿರ್ಮೂಲನೆಗೊಳಿಸಬೇಕಾದ ವೈಚಾರಿಕ ಚಿಂತನೆಯ ನಡೆಗೆ ಮುನ್ನುಡಿಯಾದರು.

ನಾರಾಯಣ ಗುರು ಪಂಥ ಇಂದು

ಸಂಘಟನೆಯ ಶಕ್ತಿಯ ಮೂಲಕ ರಾಜಕೀಯವಾಗಿ ಗುರುತಿಸಿಕೊಳ್ಳುವುದು ಬಿಲ್ಲವರಿಗೆ ಸಾಧ್ಯವಾಯಿತು. ಅವರಿಗೆ ಮಾದರಿಗಳು ಪ್ರತಿಸ್ಪರ್ಧಿಗಳು ಎಂದು ಪರಿಭಾವಿಸಿದ್ದು ಮೇಲ್ಜಾತಿಯ ಬಂಟರೇ ಹೊರತು ತಮ್ಮ ಒಡನಾಡಿಗಳಾಗಿದ್ದ ಉಳಿದ ಸಮುದಾಯಗಳ ಬಗೆಗೆ ಗಮನ ಹರಿಸಲಿಲ್ಲ. ದಲಿತರ ಬಗೆಗೆ ಕಾಳಜಿಗಳು ಅರ್ಚಕರ ನೇಮಕವನ್ನು ಬಿಟ್ಟು ಉಳಿದ ಸ್ವರೂಪದಲ್ಲಿ ಕಾರ್ಯರೂಪಕ್ಕೆ ಬರಲಿಲ್ಲ. ಯಾವ ಹುಸಿಧಾರ್ಮಿಕತೆಯನ್ನು ಗುರುಗಳು ನಿರಾಕರಿಸಿದ್ದರೋ ಇಂದು ಅದು ಕಣ್ಣಿಗೆ ಢಾಳಾಗಿ ಕಾಣಿಸುತ್ತದೆ. ಸಂಘಟನೆಯಲ್ಲಿ ಗುರುತಿಸಿಕೊಂಡವರು ಹೇಳುವಂತೆ, ಗುರುಜಯಂತಿಗೆ ಬರುವಷ್ಟು ಜನ ಮತ್ತು ಆದಾಯ ಬೇರೆ ಯಾವ ಕಾರ್ಯಕ್ರಮದಲ್ಲೂ ಇರುವುದಿಲ್ಲ ಹಾಗಾಗಿ ವರ್ಷಂ ಪ್ರತಿ ಗುರುಜಯಂತಿಯನ್ನು ನಾವೆಲ್ಲರೂ ಅದ್ದೂರಿಯಾಗಿ ಆಚರಿಸುತ್ತೇವೆ. ಒಳ್ಳೆಯ ಹಣ ಸಂಗ್ರಹಣೆಯೂ ಆಗುತ್ತದೆ. ಆದರೆ ವಿದ್ಯಾರ್ಥಿ ವೇತನಕ್ಕೆ ಆಹ್ವಾನವಿತ್ತರೆ. ವಿದ್ಯಾರ್ಥಿವೇತನ ಇರುವವರು

ಮಾತ್ರ ಬರುತ್ತಾರೆ ಎನ್ನುತ್ತಾರೆ. ಹಳ್ಳಿ ಹಳ್ಳಿಗಳಲ್ಲೂ ಲಕ್ಷಾಂತರ ರೂಪಾಯಿಗಳ ಖರ್ಚು ವೆಚ್ಚದಲ್ಲಿ ಕಟ್ಟಿದ ಗುರುಮಂದಿರಗಳಿವೆ. ಸಾಮುದಾಯಿಕ ಚಿಂತನೆಯೊಂದಿಗೆ ಸಂಘಟನಾತ್ಮಕವಾಗಿಯೂ ಒಗ್ಗೂಡಲು ಸಾಧ್ಯವಾಗಿದೆ.

ಹಾಗಿದ್ದೂ ಅದಕ್ಕಿರುವ ಮಿತಿಗಳನ್ನು ಗಮನಿಸಲೇಬೇಕು. ವರ್ತಮಾನದ ಬಿಕ್ಕಟ್ಟುಗಳಿಗೆ ಗುರುವಿನ ಸಂದೇಶ ಮತ್ತು ನಡೆಯಲ್ಲಿ ಸ್ಪಷ್ಟ ಉತ್ತರಗಳಿದ್ದರೂ, ಇಂದಿಗೂ ಬಿಲ್ಲವ ಯುವಕರು ಕೋಮುವಾದಿ ಹಿಂಸೆಗಳಿಗೆ ಬಲಿಪಶುಗಳಾಗುತ್ತಿರುವುದು ಜವಾಬ್ದಾರಿಯುತ ದೂರದರ್ಶಿತ್ವದ ನಾಯಕತ್ವದ ಕೊರತೆಯೂ ಎದ್ದು ಕಾಣುತ್ತದೆ. ನಾರಾಯಣ ಗುರು ಪಂಥದ ಪ್ರಭಾವಕ್ಕೆ ತೆರೆದುಕೊಂಡ ಸಮುದಾಯ ಬಹಳಷ್ಟು ಮುನ್ನಡೆಯನ್ನು ಸಾಧಿಸಿದರೂ ಸಹಜವಾದ ಹಲವು ಏಳು ಬೀಳುಗಳು ಇವೆ. ಭಾರತ ಸ್ವತಂತ್ರಗೊಳ್ಳುವ, ಸಂವಿಧಾನ ರಚನೆಯಾಗುವ ಪೂರ್ವದಲ್ಲಿಯೇ ಕಳೆದ ಹತ್ತೊಂಬತ್ತನೆಯ ಶತಮಾನದಲ್ಲಿ ಇಂತಹ ಉದಾರವಾದಿ ಸಮಾಜ ಸುಧಾರಣಾ ಚಿಂತನೆ ಸಮುದಾಯದ ಮುನ್ನಡೆಗೆ ಕಾರಣ ಎನ್ನುವುದರಲ್ಲಿ ಎರಡು ಮಾತಿಲ್ಲ. ಶಿಕ್ಷಣದ ಬೆಳಕು, ಆರ್ಥಿಕದ ಪ್ರಬಲತೆ, ಸಂಘಟನೆಯ ಶಕ್ತಿ ಸಾಂಸ್ಕೃತಿಕ ಪ್ರಜ್ಞಾಯುಕ್ತ ನಡವಳಿ ವ್ಯಕ್ತಿಗಳನ್ನು, ಸಮುದಾಯಗಳನ್ನು ಪ್ರಬಲರನ್ನಾಗಿ ಮತ್ತು ಸುರಕ್ಷಿತರನ್ನಾಗಿ ಮಾಡಬಲ್ಲದು. ವ್ಯಕ್ತಿ ವಿಕಾಸ ಆಗದೆ ಸಮಾಜ ಸುಧಾರಣೆ ಆಗದು. ಶಾರೀರಿಕ ಮತ್ತು ಮಾನಸಿಕ ಸದಾಚಾರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕವಾಗಿ ಸುಧೃಡವಾಗಿದ್ದರೆ ಮಾತ್ರ ಮನುಷ್ಯರು ಸರಿಯಾಗಿ ಯೋಚಿಸಿ ವರ್ತಿಸುತ್ತಾರೆ ಹಾಗೂ ಉತ್ತಮ ಜೀವನ ನಡೆಸಲು ಸಶಕ್ತನಾಗುತ್ತಾನೆ. ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಸಾಗಿದ ಈ ಚಿಂತನೆ ಆರೋಗ್ಯ ಪೂರ್ಣ ಸಮಾಜ ನಿರ್ಮಾಣಕ್ಕೆ ತಳಹದಿಯಾಗಿದೆ.

ಅಪ್ಪ ಮತ್ತು ವಾಸು

ಮಾಂಸದ ಗಟ್ಟಿ ಎಲುಬುಗಳ
ತುಂಡರಿಸುವ ಸದ್ದು
ಪಕ್ಕದ ವಾಸುವಿನ ಕಿವಿಯ ತಾಕಿ
ಆತ ಇತ್ತ ತಿರುಗಿದರೆ
ಅಪ್ಪನಿಗೊಂಥರಾ ಮುಜುಗರ!
ತಕ್ಷಣ ವಾಸುವಿನ ಮಂದಹಾಸ
"ಕಡಿ ಕಡಿ ಬ್ಯಾರಿ...
ನಿನ್ನ ಮುಂದೆ ನಾನು ಕುಡಿಯುವುದಿಲ್ಲವಾ?
ಪಕ್ಕದ ಮಸೀದಿಯಿಂದ ಬಾಂಗ್
ಮೊಳಗುವ ಹೊತ್ತು
ಊಳಿಡುವ ಸಾಕು ನಾಯಿಗೆ
ವಾಸು ಹೊಡೆದದ್ದೆಷ್ಟು?
"ಬಿಡಿ ಪೂಜಾರ್ಲೆ ಇರಲಿ ಪಾಪ"
ಅಪ್ಪನ ಕರುಣೆ ಕಂಡು
ವಾಸು ಮರುಗಿದ್ದೆಷ್ಟು?
ಮಸೀದಿಯ ಗಮ್ಮತ್ತಿನ ದಿನ ವಾಸು
"ನನ್ನ ಹೆಸರು ಕೂಗಲು
ಹೇಳಿ ಎಂದು ಐದೋ ಹತ್ತೋ
ಕೈಗಿಟ್ಟರೆ ಅಪ್ಪನಿಗೇನೋ ಖುಷಿ
ಕೊನೆಯ ಪ್ರಾರ್ಥನೆಗೂ ಮುನ್ನ
ಮೈಕಿನಲಿ ಮೊಳಗುವ ಹೆಸರ
ಕೇಳಿಸಿಕೊಳ್ಳುವ ವಾಸು
ಸಂಭ್ರಮಿಸಿತ್ತಾನೆ ತನ್ನ ಕೋಡುಗಳ
ತನ್ನವಳಿಗೆ ತೋರಿಸಿ!
ಮನೆ ಮುಂದಿನ ತೋಡಿಗೆ ಜಾರಿದ ಎತ್ತನ್ನು
ವಾಸುವಿನ ಸಹಾಯದಿಂದ ಎತ್ತುವಾಗ
ಅವನ ಪಂಚೆಯ ವಂಚಿಸಿ ಜಾರಿದ
ಎಣ್ಣೆ ಬಾಟಲಿಯ ಅಪ್ಪನೇ ಎತ್ತಿ ಕೊಟ್ಟಿದ್ದ
ಆತ ಮಾಂಸ ತಿನ್ನುವುದಿಲ್ಲ
ಅಪ್ಪನಿಗೆ ಕುಡಿತ ಹರಾಮು!
ಬೆಸುಗೆಗೆ, ಸ್ನೇಹಕ್ಕೆ ಆತ್ಮೀಯತೆಗೆ
ಇದಾವುದೂ ಕುಂದು ತರಲಿಲ್ಲ
ಧರ್ಮವಂತೂ ಅಡ್ಡ ಬರಲೇ ಇಲ್ಲ
ವಾಸುವಿಗೆ ನಾಲ್ಕು ಮಕ್ಕಳು
ಅಪ್ಪನಿಗೋ ಏಳು
ನಾವು ಸದಾ ಮುಂಗುಸಿ ಹಾವು;
ಇಂಡಿಯಾ- ಪಾಕಿಸ್ತಾನ!!
ಶಾಲಾ ದಿನಗಳಲ್ಲೇ "ಹಿಂದು ಮುಸಲ್ಮಾನ ಅಂತ
ಕಬಡ್ಡಿ ಕ್ರಿಕೆಟ್ಟು ಆಡಿ ಅಪ್ಪಂದಿರ ರೋಷ
ಏಟಿಗೆ ಶರಣಾಗುತ್ತಿದ್ದವರು ನಾವು;
ಮೊನ್ನೆ ಹರಕು ಚಪ್ಪಲಿಯ ಕಂಡು
ಐನೂರರ ನೋಟೊಂದ ಅಪ್ಪನ ಕೈಗಿಟ್ಟೆ
ಅಪ್ಪನ ಮುಖ ಚಂದಿರನಂತೆ ಬೆಳಗಿತು;
ಸಂಜೆ ನೋಡಿದರೆ ಅಪ್ಪ ಕಮ್ಮಿ ಬೆಲೆಯ
ಹೊಸ ಚಪ್ಪಲಿ ಕಾಲಿಗೇರಿಸಿಕೊಂಡು ಬಂದಿದ್ದ;
ಇರಿಸು ಮುರಿಸಾಗಿ ಗದರಿದರೆ
ಅಪ್ಪ ಕ್ಷೀಣ ಧ್ವನಿಯಲ್ಲಿ "ವಾಸೂ" ಅಂದ...
ಕುಡಿದೂ ಕುಡಿದೂ ಲಿವರ್ ಹೋಗಿದೆ
ಹೊಟ್ಟೆ ಉಬ್ಬರವಾಗಿದೆ
ಇವತ್ತೋ ನಾಳೆಯೋ!?
ಐನೂರರಲ್ಲಿ ಚಪ್ಪಲಿ ಮಿಕ್ಕಿದ್ದರಲ್ಲಿ
"ಎಪ್ಲ್"-"ಮುಸಿಂಬಿ" ಕೊಂಡು
ಅವನ ಕೈಗಿಟ್ಟು ಬಂದೆ ಅಂದರು- ಮುಗ್ಧ
ವಿದ್ಯಾರ್ಥಿಯಂತೆ
ನನಗಾಗ ಖಚಿತವಾಯಿತು;
"ನಾವು ಚಪ್ಪಲಿಗಿಂತಲೂ ಕಡೆ!
ಹೌದು ಅಪ್ಪನ ಹರಕು ಚಪ್ಪಲಿಗಿಂತಲೂ ಕಡೆ!"

– ಯಂಶ ಬೆಂಗಿಲ



ಕೊರಗಜ್ಜ, ಕೋಡ್ದಬ್ಬುಗಳು ದಲಿತರ ಕುಲ ದೈವಗಳಾದರೂ ಎಲ್ಲಾ ಜಾತಿಯವರು ನಂಬುತ್ತಾರೆ. ಮುಖ್ಯವಾಗಿ ಈ ದೈವಗಳಿಗೆ ವಿಶೇಷ ಶಕ್ತಿ ಇದೆ ಎನ್ನುವುದು ನಂಬಿಕೆ. ಬೆಳೆ, ಪಶು, ಮನೆ ಮಕ್ಕಳ ರಕ್ಷಣೆಯ ಕುರಿತಂತೆ ಎಲ್ಲಾ ಜಾತಿಯವರು ಈ ದೈವಗಳ ಮೊರೆ ಹೋಗುತ್ತಾರೆ. ಈ ದೈವಗಳಲ್ಲಿ ವಿಶೇಷ ಮಾಂತ್ರಿಕ ಶಕ್ತಿ ಸಾಹಸ ಇದೆ ಎನ್ನುವ ನಂಬಿಕೆ ಇದೆ. ಕೊರಗರಲ್ಲೂ ಅನಿಷ್ಠವನ್ನು ನಿವಾರಿಸುವ ಶಕ್ತಿಯಿದೆ ಎಂದು ಭಾವಿಸಲಾಗಿದೆ. ಇಂಥ ಹಲವಾರು ಆಚರಣೆಗಳು ಇವೆ. ಬಹುಶ: ಇದು ಅಸ್ಪೃಶ್ಯತೆ ಮತ್ತು ಪ್ರತ್ಯೇಕತೆಯ ನೋವಿನ ಮತ್ತು ಕ್ರೋಧದ ಉಪಶಮನದ ದಾರಿಯೇ? ಯಾಕೆಂದರೆ ಪ್ರತಿರೋಧ ತೋರಿಸುವ ಇತರ ದೈವಗಳ ಆಚರಣೆಗಳು ಕೂಡಾ ಪ್ರತಿರೋಧವನ್ನು ಉಪಶಮನ ಮಾಡುವ ದಾರಿಯಂತೆ ಕಂಡುಬರುತ್ತದೆ. ಮಾತ್ರವಲ್ಲದೇ ಭೂತಾರಾಧನೆ ಜಾತಿಯನ್ನು ವೃತ್ತಿ ಮೂಲಕ ಉಳಿಸುವ ಮತ್ತು ಜಾತಿಯ ಪ್ರತ್ಯೇಕತೆಯನ್ನು ವೃತ್ತಿ ಪ್ರಾತಿನಿಧ್ಯದ ಮೂಲಕ ಒಳಗೊಳ್ಳುವ ವಿಧಾನದಂತೆ ಕಂಡುಬರುತ್ತದೆ.

ಕೊರಗರ ಕುಲದೈವ ಕೊರಗಜ್ಜ: ಬಿಡುಗಡೆಯ ಬಿಕ್ಕಟ್ಟಿನ ಕಥನ

ವಾಸುದೇವ ಬೆಳ್ಳೆ, ಅಧ್ಯಾಪಕರು, ಮಂಗಳೂರು

ಭಾರತದ ಜಾತಿ ಮತ್ತು ಅಸ್ಪೃಶ್ಯತೆಯ ಸಾಮಾಜಿಕ ವ್ಯವಸ್ಥೆಯಿಂದ ಶೋಷಿತ ಸಮುದಾಯಗಳಿಗೆ ಬಿಡುಗಡೆಗೊಳ್ಳಲು ಆಧುನಿಕ ಕಾಲಘಟ್ಟದಲ್ಲಿ ಸಾಮಾಜಿಕ ನ್ಯಾಯದ ಕಿರು ದಾರಿಯೊಂದು ಸಿಕ್ಕಿತು. ಅದು ವಸಾಹತುಶಾಹಿ ಮೂಲಕ ನಮ್ಮಲ್ಲಿಗೆ ಬಂದ ಪಶ್ಚಿಮ ಪ್ರಣೀತ ಚಿಂತನೆಗಳಿಂದ ರೂಪುಗೊಂಡದ್ದಾದರೂ ಒಂದು ರೀತಿಯ ಸಾಮಾಜಿಕ ಚಲನೆಗೆ ಕಾರಣವಾಯಿತು. ಬಂಡವಾಳಶಾಹಿ ವ್ಯವಸ್ಥೆಯ ಉತ್ಪನ್ನವಾಗಿರುವ ಆಧುನಿಕ ರಾಷ್ಟ್ರೀಯತೆ ಭಾರತದಲ್ಲಿ ಉಳ್ಳವರ ಹಿತಾಸಕ್ತಿಗಳಿಗನುಗುಣವಾಗಿ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಫುಲೆ, ಪೆರಿಯಾರ್, ಅಂಬೇಡ್ಕರ್, ಲೋಹಿಯಾ ಮುಂತಾದವರ ಹಾಗೂ ಮಾರ್ಕ್ಸ್‌ವಾದಿ ಚಿಂತನೆಯಲ್ಲಿ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಚಿಂತನೆಗಳು ವಿಸ್ತಾರಗೊಂಡವು. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ದುಸ್ಥಿತಿಯಲ್ಲಿರುವ ವಂಚಿತ ಜಾತಿಗಳು ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಚೌಕಟ್ಟಿನಲ್ಲಿ ನ್ಯಾಯ ಕೇಳುವ ಜಿಜ್ಞಾಸೆಯನ್ನು ರೂಪಿಸಿದವು. ಜಾತಿಯ ಬಿಗುತನದ ಕಠಿಣ ವ್ಯವಸ್ಥೆಯಾಗಿರುವ ಭಾರತದಲ್ಲಿ ಸಾಮಾಜಿಕ ನ್ಯಾಯದ ಪ್ರತಿಪಾದನೆ ಮತ್ತು ಜಾರಿ ಅಷ್ಟು ಸುಲಭದ್ದಲ್ಲ. ಪ್ರಮುಖವಾಗಿ ಪಾರಂಪರಿಕವಾಗಿ ಜಾತಿ ವ್ಯವಸ್ಥೆಯ ಸುಖ ಸೌಲಭ್ಯ ಅಧಿಕಾರವನ್ನು ಅನುಭವಿಸಿಕೊಂಡು ಬಂದ ಮೇಲ್ಜಾತಿಗಳು ಇದಕ್ಕೆ ವಿರೋಧವಾಗಿದ್ದವು ಮತ್ತು ಶೋಷಕ ಹಾಗೂ ಶೋಷಿತ ಜಾತಿಗಳ ಮಧ್ಯೆ ಇರುವ ಶ್ರೇಣೀಕರಣದ ನಡುವೆ ಪ್ರತಿಯೊಂದು ಜಾತಿಯ ಬಿಡುಗಡೆಯ ಸಂಘರ್ಷದ ಜಿಜ್ಞಾಸೆ ನಡೆಸಬೇಕಾಗಿರುವುದು ಸಾಮಾಜಿಕ ನ್ಯಾಯದ ಜಾರಿಯಲ್ಲಿರುವ ತೊ ಡಕು. ಹಾಗಾಗಿ ಕೆಲವೊಮ್ಮೆ ಸಾಮಾಜಿಕ ನ್ಯಾಯದ ಪರಿಭಾಷೆ ಶೋಷಿತ ಜಾತಿಗಳ ಸಾಮೂಹಿಕ ನೆಲೆಯಲ್ಲಿ ಕೆಲವೊಮ್ಮೆ ಏಕ ನೆಲೆಯಲ್ಲಿ ನಡೆಯುವುದು.

ಆಧುನಿಕ ಕಾಲಘಟ್ಟದ ಕೆಳ ಜಾತಿಗಳ ಹೋರಾಟಗಳನ್ನು ಈ ನೆಲೆಯಲ್ಲಿ ವಿವರಿಸಿಕೊಳ್ಳಬೇಕು. ಇಲ್ಲಿ ಹಸಿವು, ಬಡತನ, ಜಾತಿಯತೆಯನ್ನು ವಿರೋಧಿಸಲು ಜಾತಿಯನ್ನು ಪ್ರಶ್ನೆ ಮಾಡುವುದನ್ನು ಕಾಣಬಹುದು. ಆ ಮೂಲಕ ತನ್ನ ಹಿಂದುಳಿದಿರುವಿಕೆಗೆ ಜಾತಿ ಕಾರಣವಾಗಿರುವುದನ್ನು ಗುರುತಿಸುತ್ತಾ, ನಮಗೆ ನ್ಯಾಯ ಕೊಡಬೇಕೆಂಬ ವಾದ ಹುಟ್ಟಿಕೊಳ್ಳುತ್ತಾ ಹೋಗುತ್ತದೆ. ಸಾಮಾಜಿಕ ನ್ಯಾಯ ಪ್ರಶ್ನೆಯನ್ನು ಮುಂದಿಡಲು ಸಂಘಟನೆ, ಸಂಘರ್ಷಕ್ಕೆ ಸಾಮಾಜಿಕ ಅವಕಾಶ, ದಲಿತ ಜಾತಿಗಳೊಡನೆ ಸಾಮೂಹಿಕ ಒಂದಾಗುವಿಕೆ ಬೇಕಾಗುತ್ತದೆ. ಸಾಮಾಜಿಕವಾಗಿ ಊರಿನಿಂದ ಸಂಪೂರ್ಣ ಹೊರಗಿದ್ದು ಊರಿನ ಯಾವುದೇ ಅವಕಾಶಗಳ ಕುರಿತು ಹಕ್ಕು ಸ್ಥಾಪನೆ ಮಾಡುವ ಅವಕಾಶ ಇಲ್ಲದಿದ್ದಾಗ ಹೋರಾಟವೂ ಸುಲಭಸಾಧ್ಯವಲ್ಲ. ಆಧುನಿಕ ಪೂರ್ವ ಮತ್ತು ಆಧುನಿಕ ಕಾಲದಲ್ಲಿ ಈ ಅವಕಾಶಗಳು ಯಾವ ಜಾತಿಗಳಿಗೆ ಎಟಕುವುದಿಲ್ಲವೋ ಅವರಿಗೆ ಸಾಮಾಜಿಕ ನ್ಯಾಯ ಎನ್ನುವ ಆಧುನಿಕ ಕನಸು ಸಾಧ್ಯವಾಗುವುದಿಲ್ಲ. ಅಥವಾ ನ್ಯಾಯ ಪಡೆಯುವುದು ವಿಳಂಬವಾಗುತ್ತದೆ. ಕೊರಗರನ್ನು ಮತ್ತು ಕೊರಗಜ್ಜನನ್ನು ಈ ರೀತಿಯಲ್ಲಿ ವಿವರಿಸಬಹುದು.

ಕೊರಗ ಮತ್ತು ಕೊರಗಜ್ಜ

ತುಳುನಾಡಿನ ಕೊರಗರ ಕುರಿತು ದೊರಕುವ ಐತಿಹ್ಯ, ಪುರಾಣಗಳು ಅವರು ಈ ನಾಡಿನ ಮೂಲನಿವಾಸಿಗಳೆಂದೂ, ಅವರಿಂದ ಈ ನಾಡು ಸೃಷ್ಟಿಯಾಯಿತೆಂದು, ಅವರು ಈ ನಾಡನ್ನು ಆಳುತ್ತಿದ್ದರೆನ್ನುವ ಸಂಗತಿಗಳನ್ನು ಹೇಳುತ್ತವೆ. ಸೃಷ್ಟಿ ಪುರಾಣವೊಂದು ಡೋಲಿನಲ್ಲಿ ಕುಳಿತು ನೀರಿನಲ್ಲಿ ತೇಲಿ ಬಂದ ಕೊರಗ ಅಣ್ಣ ತಂಗಿಯರಿಂದ ಭೂಮಿ ಮತ್ತು ಮನುಷ್ಯ ಸೃಷ್ಟಿಯಾದ ಕಥೆಯನ್ನು ಹೇಳುತ್ತದೆ. ಕೊರಗರ ರಾಜ ಹುಬಾಶಿಕನೆಂಬವನು ಈ ನಾಡನ್ನು ಆಳುತ್ತಿದ್ದನೆಂದೂ, ಅವನ ಬಲಿಷ್ಠ ರಾಜನಾಗಿದ್ದನೆಂದೂ, ಅವನ ಶಕ್ತಿ ಸಾಮರ್ಥ್ಯದ ಬಗ್ಗೆ ಅಸೂಯೆ ತಾಳಿದ ರಾಜರು ಅವನನ್ನು ಮೋಸದಿಂದ ಕೊಂದರೆಂದು ಇನ್ನೊಂದು ಕಥೆ ಹೇಳುತ್ತದೆ. ಈ ಕಥೆಗಳು ಸಮುದ್ರ ಮತ್ತು ಘಟ್ಟ ಪ್ರದೇಶಗಳ ನಡುವಿನ ಈಗಿನ ತುಳುನಾಡಿನ ಗುಡ್ಡಕಾಡು ಪ್ರದೇಶದ ಮೂಲನಿವಾಸಿ ಆದಿವಾಸಿಗಳೆಂದೂ, ಹಿಂದೆ ಇವರೇ ಇಲ್ಲಿ ವಾಸವಾಗಿದ್ದು ತಮ್ಮ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದರೆಂದು ಯೋಚಿಸಲು ಸಾಧ್ಯವಿದೆ.

ಆದರೆ ನಾಲ್ಕುನೂರು ಐನೂರು ವರ್ಷಗಳಷ್ಟು ಪ್ರಾಚೀನವೆಂದು ಹೇಳಲಾಗುವ ಭೂತಾರಾಧನೆ ಪರಂಪರೆಯ ಕೊರಗಜ್ಜನ ಕಥೆ ಕೊರಗರ ದುಸ್ಥಿಯ ಹಾಗೂ ಮಾಂತ್ರಿಕತೆಯ ಚಿತ್ರಣವನ್ನು ಮುಂದಿಡುತ್ತದೆ. ಕೊರಗಜ್ಜನ ಪಾಡ್ದನ ಹೇಳುವ ಕಥನವನ್ನು ಗಮನಿಸಿದರೆ ತುಳುನಾಡಿನ ಭೂತಾರಾಧನೆಯ ಜಾತಿ ಸ್ವರೂಪ ತಿಳಿದು ಬರುತ್ತದೆ. ತುಳುನಾಡಿನ ಬೇರೆ ಬೇರೆ ಕಡೆಗಳಲ್ಲಿ ಸಿಗುವ ಕೊರಗಜ್ಜನ ಪಾಡ್ದನದ ಕಥೆಗಳಲ್ಲಿ ಬರುವ ಊರಿನ ಹೆಸರುಗಳು, ವ್ಯಕ್ತಿಗಳ ಹೆಸರುಗಳು, ದೈವಗಳ ಹೆಸರುಗಳಲ್ಲಿ ವ್ಯತ್ಯಾಸವಿದ್ದು, ಸಾರಾಂಶದಲ್ಲಿ ಸಾಮ್ಯತೆಯಿದೆ. ಮಂಗಳೂರು, ಬಂಟ್ವಾಳ ಪ್ರದೇಶದಲ್ಲಿ ಪ್ರಚಲಿತವಿರುವ ಕೊರಗಜ್ಜನ ಪಾಡ್ದನದ ಕಥೆಯನ್ನು ಸಂಕ್ಷಿಪ್ತವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಕೊರಗಜ್ಜನ ಪಾಡ್ದನದ ಕಥೆ

ಈ ಪಾಡ್ದನದ ಪ್ರಕಾರ ಕೊರಗತನಿಯನ ತಾಯಿ ಕೊರಪೊಲು ಮೈರೆ, ತಂದೆ ಕುರುವನ ಓಡಿ. ಅವನು ಹುಟ್ಟುವ ಗಳಿಗೆ ಲಕ್ಷಣದಿಂದ ತಾಯಿ ತಂದೆಯನ್ನು ಕಳೆದುಕೊಂಡು ಕುಟುಂಬ ನಾಶವಾಗುತ್ತದೆ. ಎಲ್ಲರನ್ನು ಕಳೆದುಕೊಂಡು ಅನಾಥನಾದ ಬಾಲಕ ಕೊರಗತನಿಯ ತನ್ನ ಕೊಪ್ಪಕ್ಕೆ ಮುಳ್ಳಿನ ಕಟ್ಟದ ಬೇಲಿ ಇಟ್ಟು ಮನೆ ಬಿಟ್ಟು ದೇಶಾಂತರ ಹೊರಟು ಹೋಗುತ್ತಾನೆ. ದಾರಿ ಮಧ್ಯೆ ಮರಳಿನ ಪಸರಂಗಿನ ಆಟ ಆಡುತ್ತಾನೆ. ದಿಕ್ಕು ದೆಸೆಯಿಲ್ಲದೇ ನಡೆದುಹೋಗುತ್ತಿರಬೇಕಾದರೆ ದಾರಿಯಲ್ಲಿ ಒಮ್ಮೆ ನಗುತ್ತಾನೆ, ಇನ್ನೊಮ್ಮೆ ಅಳುತ್ತಾನೆ. ಇವನನ್ನು ನೋಡಿದವರು ಈ ಹುಡುಗನಿಗೆ ಹುಚ್ಚು ಇರಬೇಕು ಎಂದು ಆಡಿಕೊಳ್ಳುತ್ತಾರೆ. ಆ ದಾರಿಯಲ್ಲಿ ಕಳ್ಳು ಮಾರಾಟಕ್ಕೆ ಹೋದ ಬೀರದ ಬೈದೆದಿ ಹಾಗೂ ಅವಳ ತಮ್ಮ ಚೆನ್ನಯ ಎದುರಾಗುತ್ತಾರೆ. ಅವರು ಇವನನ್ನು ಮಾತನಾಡಿಸುತ್ತಾರೆ. ಅವನ ತಂದೆ ತಾಯಿ ಕುಲದ ಬಗ್ಗೆ ವಿಚಾರಿಸುತ್ತಾರೆ. ಆಗ ಅವನು ತನ್ನ ತಾಯಿ ತಂದೆ ಮತ್ತು ಅವನ ಬನ್ನಾಯ ಬಳಿಯ ಬಗ್ಗೆ ಹೇಳಿ, ಮನೆಯಲ್ಲಿ ಆದ ಅವಘಡಗಳನ್ನು ತಿಳಿಸಿ ದು:ಖಿಸುತ್ತಾನೆ. ಈತನ ಬಗ್ಗೆ ಮರುಕಗೊಂಡ ಬೀರದ ಬೈದೆದಿ ತನ್ನ ಮಕ್ಕಳೊಂದಿಗೆ ಆಟವಾಡಲು, ಕಾಗೆ ಓಡಿಸಲು ಆಗಬಹುದೆಂದು ಕೊರಗತನಿಯನನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾಳೆ. ಮೈಯಲ್ಲಿ ಬಟ್ಟೆ ಇಲ್ಲದ ಕೊರಗನಿಗೆ ಕಳ್ಳಿನ ಗಡಿಗೆಯನ್ನು ಹೊರಲು ತಲೆಗೆ ಇಟ್ಟುಕೊಂಡಿದ್ದ ಬಟ್ಟೆಯನ್ನು ಹರಿದು ಕೊಡುತ್ತಾಳೆ. ಮನೆಗೆ ಕರೆದುಕೊಂಡು ಹೋದ ಬೀರದ ಕೋಲುಗಳಿಂದ ಒಂದು ಕೊಟ್ಟಿಗೆಯನ್ನು ಕಟ್ಟಿಕೊಡುತ್ತಾಳೆ. ಗಂಜಿನೀರು, ಅನ್ನ ಆಹಾರ ನೀಡಿ ಸಾಕುತ್ತಾಳೆ. ಹೀಗೆ ಕೊರಗತನಿಯ ಬೆಳೆದು ಯುವಕನಾಗುತ್ತಾನೆ.

ಬೀರದ ಕಳ್ಳು ಮಾರಾಟಕ್ಕೆ ಹೋಗುವಾಗ ಕೊರಗತನಿಯ ದೊಡ್ಡ ದೊಡ್ಡ ಗಡಿಗೆಯ ಕಳ್ಳನ್ನು ಹೊತ್ತು ಸಹಾಯ ಮಾಡುತ್ತಾನೆ. ಮಾತ್ರವಲ್ಲ ತನ್ನ ಕುಲದ ಕೆಲಸ ಮಾಡಲು ತೊಡಗುತ್ತಾನೆ. ಬಿದಿರು, ಬೀಳಲು ಕಡಿದು ವಿವಿಧ ಬುಟ್ಟಿಗಳನ್ನು ತಯಾರಿಸಿ ಊರಜನರಿಗೆ ಮಾರಲು ಹೋಗುತ್ತಾನೆ. ಒಂದು ದಿನ ಕದಿರೆಯ ಜಾತ್ರೆಗೆ ತೆಂಗಿನ ಸಿರಿ, ಬಾಳೆ ದಿಂಡಿನ ಹೊರೆ ಕಾಣಿಕೆ ಹೊರಲು



ಆಳುಗಳು ಬಾರದಿದ್ದಾಗ ಬೀರದ ಕೊರಗತನಿಯನನ್ನು ಕೇಳುತ್ತಾಳೆ. ಆಗ ಅವನು ಎಲ್ಲಾ ಆಳುಗಳು ಹೊರುವ ಹೊರೆಯನ್ನು ನಾನು ಒಬ್ಬನೇ ಹೊರುತ್ತೇನೆ. ಆದರೆ ಆ ಎಲ್ಲ ಏಳು ಜನರ ಊಟವನ್ನು ನನಗೆ ಕೊಡಿ, ಏಳು ಜನರ ಕಳ್ಳು ನನಗೆ ಕೊಡಿ ಎನ್ನುತ್ತಾನೆ. ಹಾಗೆ ಉಂಡ ಅವನು ಏಳು ಜನರ ಹೊರೆಯನ್ನು ಕದಿರೆಗೆ ಒಬ್ಬನೇ ಹೊತ್ತುಕೊಂಡು ಹೋಗುತ್ತಾನೆ.

ಮಾಯವಾದ ಕೊರಗತನಿಯ

ಒಮ್ಮೆ ಪಂಜಂತ್ತಾಯ, ತೊಡಕುಕ್ಕಿನಾರ್, ಜಾರಂದಾಯ ದೈವದ ಮಾಡದ ಗುಡಿಯ ಮೇಲೆ ಬಾಗಿದ ಮರದಲ್ಲಿದ್ದ ಕೈಪುರದ ಹುಳಿಯನ್ನು ನೋಡಿ ಅದನ್ನು ಕೊಯ್ಯಲು ಗುಡಿಯ ಮಾಡಿನ ಮೇಲೆ ಹತ್ತುತ್ತಾನೆ. ಅಮ್ಮ ಬೀರದ ಮನೆಯಲ್ಲಿ ಉಪ್ಪಿನಕಾಯಿ ಮುಗಿದಿದೆ, ಅದಕ್ಕಾಗಿ ಹುಳಿ ಬೇಕು ಎಂದು ಹೇಳಿರುವುದು ಹುಳಿ ನೋಡಿ ನೆನಪಿಸಿಕೊಂಡ ಅವನು ಗುಡಿಯ ಮಾಡಿಗೆ ಹತ್ತಿ ಕೊಯ್ಯುತ್ತಾನೆ. ಮಾಡಿನ ಮೇಲೆ ಹತ್ತಿದ ಅವನು ಗುಡಿಯ ಮೇಲಿರುವ ಕಳಶಕ್ಕೆ ಕಾಲಿಟ್ಟು ಹುಳಿ ಕೊಯ್ಯುತ್ತಾನೆ. ಆಗ ತೊಡಕುಕ್ಕಿನಾರ್, ಪಂಜಂತ್ತಾಯ ದೈವಗಳು ಅವನ್ನು ಮಾಯಕ ಮಾಡುತ್ತವೆ. ಕಣ್ಮರೆಯಾದ ಕೊರಗತನಿಯನನ್ನು ಅಮ್ಮ ಬೀರದ ಓಗೊಟ್ಟು ಕರೆಯುತ್ತಾಳೆ. ಚೆನ್ನಯ ಕರೆಯುತ್ತಾನೆ. ಆ ಕರೆಗೆ ಓಗೊಂಡ ಕೊರಗತನಿಯ ನನ್ನನ್ನು ತೊಡಕುಕ್ಕಿನಾರ್ ಪಂಜಂದಾಯ ದೈವಗಳು ಮಾಯ ಮಾಡಿದ್ದಾರೆ. ಈವರೆಗೆ ಜೋಗದಲ್ಲಿದ್ದ ನಾನು ಇನ್ನು ಮಾಯದಲ್ಲಿರುತ್ತೇನೆ. ನಿಮ್ಮನ್ನು ಕಾಯುತ್ತೇನೆ. ನಿಮ್ಮ ಬೆಳೆ, ಪಶುಗಳನ್ನು ಕಾಯುತ್ತೇನೆ ಎನ್ನುತ್ತಾನೆ. ಜೋಗ ಬಿಟ್ಟು ಮಾಯಕದ ದೈವವಾದ ಅವನು ಕುತ್ತಾರ್ ಪದವಿಗೆ ಬರುವಾಗ ದೊಡ್ಡ ದೊಡ್ಡ ದೈವಗಳು ಅವನನ್ನು ಅಡ್ಡಗಟ್ಟುತ್ತವೆ. ಹಂಗಿಸುತ್ತವೆ. ಆಗ ಅವನು ಅಲ್ಲಿಯೇ ಸತ್ತು ಬಿದ್ದಿರುವ ದನದ ಕಾಲನ್ನು ಬಗೆದು ತೆಗೆದು ಅದನ್ನು ಬೀಸಿ ಬೀಸಿ ದೈವಗಳನ್ನು ಓಡಿಸುತ್ತಾನೆ. ಹೀಗೆ ದೈವ ಕೊರಗತನಿಯದ ಪ್ರಸರಣ ಮತ್ತು ಸಾಹಸಗಳು ಪಾಡ್ದನದಲ್ಲಿ ಮುಂದುವರಿಯುತ್ತವೆ.

ಇನ್ನೊಂದು ಪಾಡ್ದನಗಳಲ್ಲಿ ಕದ್ರಿಯ ಗೋಪುರದ ಮಾಡಿಗೆ ಬಾಗಿದ ಮಾದಳದ ಹಣ್ಣು ಕೊಯ್ಯುವಾಗ, ಮತ್ತೊಂದು ಪಾಡ್ದನದಲ್ಲಿ ಮಾವಿನ ಹಣ್ಣು ಕೊಯ್ಯುವಾಗ ಮಾಯವಾದ ಎನ್ನುವ ವಿವರಗಳು ಸಿಗುತ್ತವೆ.

ಒಟ್ಟಾರೆ ಈ ಕಥನವು ಕೊರಗಜ್ಜನ ದಾರುಣ ಬಡತನ ಮತ್ತು ಹಸಿವನ್ನು ಮುಂದಿಡುತ್ತದೆ. ಅನಾಥತೆಯನ್ನು ಎತ್ತಿ ತೋರಿಸುತ್ತದೆ. ಮನೆ, ಭೂಮಿ, ಬದುಕು, ಬಟ್ಟೆ ಬರೆ ಇಲ್ಲದಿರುವುದನ್ನು ಸ್ಪಷ್ಟಪಡಿಸುತ್ತದೆ. ಜಾತಿ ಮತ್ತು ಮೈಲಿಗೆಯಿಂದ ಉಂಟಾದ ದುಸ್ಥಿತಿಯನ್ನು ಸಾದರಪಡಿಸುತ್ತದೆ. ಅವನ ದುರಂತಮಯ ಅಂತ್ಯವನ್ನು ಮನಮುಟ್ಟುವಂತೆ ಹೇಳುತ್ತದೆ. ಈ ನಡುವೆ ಅವನ ಗಟ್ಟಿಗತನ, ಕಾಯಕ ಸಾಮರ್ಥ್ಯ ಮತ್ತು ಕಸುಬಿನ ಕೌಶಲ್ಯ, ಮುಗ್ಧತೆ, ಪ್ರಾಮಾಣಿಕತನ, ಮಾಂತ್ರಿಕ ಶಕ್ತಿಯನ್ನು ಮುಂದಿಡುತ್ತದೆ. ಇಲ್ಲಿ ಕೊರಪಲು ಮೈರೆನ ಮಗನನ್ನು ಬೀರದಿ ಬೈದೆದಿ ಹೆಂಗಸು ಸಾಕುವ ವಿಚಾರವು ಈ ಸಮುದಾಯಗಳ ಒಡನಾಟವನ್ನು, ಅವರ ಬಳಿ ಒಂದೇ ಆಗಿರುವುದು ಆ ಸಮುದಾಯಗಳ ಮೂಲದಲ್ಲಿ ಒಂದೇ ಆಗಿದ್ದು ನಂತರ ಕಾಲಸಂದರ್ಭಗಳಲ್ಲಿ ಒಡೆದು ದೂರವಾಗಿರುವನ್ನು ಹೇಳುವಂತಿದೆ.

ಮೂಲತಃ ಪ್ರಕೃತಿ ಮತ್ತು ಪೂರ್ವಜರ ಆರಾಧಕರಾದ ತುಳುವರಲ್ಲಿ ಅದರ ನೆಲೆಗಟ್ಟಿನಲ್ಲಿ ಭೂತ ದೈವ ಕಲ್ಪನೆ ಬೆಳೆದು ಬಂದಿದೆ. ಈ ದೈವಕಲ್ಪನೆ ಎಲ್ಲಾ ಜಾತಿಗಳಿಗೂ ಒಂದೇ ಆದರೂ ಜಾತಿಗೆ ಅನುಗುಣವಾಗಿ ಭಿನ್ನ ಭಿನ್ನ ದೈವಗಳಿವೆ. ಹಾಗೆನೇ ಆಡಳಿತ ಅಧಿಕಾರದ ಹಂತಗಳಿಗೆ ಸಂಬಂಧಿಸಿದಂತೆ ಸೀಮೆ, ಗ್ರಾಮ ಮತ್ತು ಕುಟುಂಬ ದೈವಗಳಿವೆ. ಅಂದರೆ ದೈವಿಕ ಪರಂಪರೆಯೊಂದನ್ನು ಜಾತೀಯತೆಯ ಮತ್ತು ಅಧಿಕಾರ ಶ್ರೇಣೀಕರಣದ ಚೌಕಟ್ಟಿನಲ್ಲಿ ಬೆಸೆಯಲಾಗಿದೆ. ಅರಸು ಮತ್ತು ಸೀಮೆಯ ರಾಜಂದೈವಗಳ ನೇಮ ಕೋಲ ಜಾತ್ರೆಯ ವೈಭವ, ಊರನ್ನು ಒಳಗೊಳ್ಳುವ ರೀತಿ, ಜಾತಿಗನುಸಾರವಾಗಿ ಶ್ರಮಗಳ ಹಂಚಿಕೆ, ನ್ಯಾಯ ಪದ್ಧತಿ ಇವುಗಳಲ್ಲಿ ಕಂಡುಬರುವ ಮೇಲ್ಜಾತಿಗಳ ಪ್ರಭಾವ ಮತ್ತು ಲಕ್ಷಣಗಳು ಹಾಗೂ ಕೆಳಜಾತಿಗಳ ಕೋಲಗಳಲ್ಲಿ ಕಂಡುಬರುವುದಿಲ್ಲ. ಈ ಕೋಲಗಳಲ್ಲಿ ಜಾತಿಯಿಂದಾಗುವ ಸರಳತೆ, ಸಾಮಾನ್ಯತೆ, ಸಂಕ್ಷಿಪ್ತತೆ, ಕುಂದುಕೊರತೆಗಳು ಕಂಡುಬರುತ್ತವೆ. ಜಾತಿಯತೆಯು ಸಮಾಜದಲ್ಲಿ ಉಂಟುಮಾಡಿದ ಯಾಜಮಾನಿಕೆ, ಆಡಳಿತದ ಅಧಿಕಾರ, ತರತಮ, ಮೈಲಿಗೆ, ಭೂಮಿ ಮತ್ತು ಸಂಪತ್ತು ಹೊಂದುವ ಅವಕಾಶ, ದೌರ್ಜನ್ಯ, ಬಡತನ, ಹಸಿವು ಈ ಎಲ್ಲಾ ವಿಚಾರಗಳು ಪಾಡ್ದನದ ಕಥೆಗಳಲ್ಲಿ ಕಂಡುಬರುತ್ತದೆ ಹಾಗೂ ಆಚರಣೆಯ ಸಂದರ್ಭದಲ್ಲಿ ಗೋಚರವಾಗುತ್ತದೆ. ಭೂಮಿ, ಅಧಿಕಾರ, ಆಹಾರ ಹೊಂದಿರದೇ ಅದಕ್ಕಾಗಿ ಹೋರಾಡಿ ಗತಿಸಿದವರ ದೈವಿಕ



ಕಥಗಳನ್ನು ಗಮನಿಸಬಹುದು.

ಪೂರ್ವಜ ಕೊರಗತನಿಯನ ಆರಾಧನೆ

ಭೂಮಿ, ಅಧಿಕಾರ ಮತ್ತು ಸಂಪತ್ತು ಇಲ್ಲದಿದ್ದರೂ ಇಲ್ಲಿನ ಕೆಳ ಶೂದ್ರ ಜಾತಿಗಳು ಇತರ ಜಾತಿಗಳೊಂದಿಗೆ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳನ್ನು ಹೊಂದಿದ್ದಾರೆ. ಆದರೆ ಕೊರಗರಿಗೆ ಆ ಸಾಮಾಜಿಕ ಆರ್ಥಿಕ ಅವಕಾಶ ಇಲ್ಲ. ಒಂದು ವಾದದ ಪ್ರಕಾರ ಬಲಿಷ್ಠ ಮೂಲನಿವಾಸಿಗಳಾಗಿದ್ದ ಕೊರಗರು ವಲಸಿಗರ ದೌರ್ಜನ್ಯಗಳಿಂದ, ಆ ದೌರ್ಜನ್ಯಗಳಿಗೆ ಅವರು ತೋರಿದ ಪ್ರತಿರೋಧದಿಂದ ನಿಕೃಷ್ಟ ಸ್ಥಿತಿಗೆ ಬರಬೇಕಾಯಿತು. ಕಾಲಾಂತರದಲ್ಲಿ ನಿರ್ಮಾಣವಾದ ನಾಡಿನಿಂದ ಅವರನ್ನು ಕಾಡಿಗೆ ಓಡಿಸಲಾಯಿತು ಅಥವಾ ಕೊಪ್ಪಗಳಲ್ಲಿ ಬದುಕುವಂತೆ ಮಾಡಲಾಯಿತು. ಕೊರಗರಿಗೆ ಹೇರಲ್ಪಟ್ಟ ಅಮಾನವೀಯ ಅಸ್ಪೃಶ್ಯತೆ ಅವರನ್ನು ತುಳುನಾಡಿನ ಎಲ್ಲಾ ಜನಾಂದವರಿಂದಲೂ ಪ್ರತ್ಯೇಕ, ದೂರ ಇರುವಂತೆ ಮಾಡಿತು. ಮೈಲಿಗೆಯಿಂದ ಹೊಲ ಹಟ್ಟಿಗಳ ಕೆಲವು ಸೀಮಿತ ಬಿಟ್ಟಿ ಚಾಕರಿಗಳಿಗೆ ಬಳಸಲ್ಪಟ್ಟ ಕೊರಗರಿಗೆ ಹಣ, ಗೌರವ ತರುವ ಮತ್ತು ಜನರೊಂದಿಗೆ ಒಡನಾಡುವ ಯಾವ ಕೆಲಸಗಳ ಅವಕಾಶವೂ ಈ ನಾಡು ನೀಡಲಿಲ್ಲ.

ಈ ಬಗೆಯ ದಾರುಣ ಸ್ಥಿತಿಯ ಚಿತ್ರಣವೇ ಕೊರಗತನಿಯ ಪಾಡ್ದನದ ಕಥನವಾಗಿದೆ. ತುಳುನಾಡಿನ ರಾಜಂದೈವಗಳಿಗೆ ನಡೆಯುವ ಅಬ್ಬರದ ನೇಮ ಕೋಲ ಜಾತ್ರೆಗಳು ಕೊರಗಜ್ಜನಿಗೆ ಇಲ್ಲ. ಮೊಗಮೂರ್ತಿಗಳು, ದೊಡ್ಡ ಸಾನ ಮಾಡಗಳು ಇಲ್ಲ. ಆಭರಣಗಳೂ ಇಲ್ಲ. ವಿಶೇಷ ಹರಕೆಗಳು ಇಲ್ಲ. ರಾಜಂದೈವಗಳಂತೆ ಕೋಲ ರಾತ್ರಿಯಿಡೀ ನಡೆಯದೇ ಬೇಗನೇ ಮುಗಿಯುತ್ತದೆ. ಕೊರಗಜ್ಜನ ವೇಷಭೂಷಣವು ಬಡತನವನ್ನು ಪ್ರತಿನಿಧಿಸುತ್ತದೆ. ಮೈಮೇಲೆ ಅಂಗಿ ಕರ್ಪಸ ಇಲ್ಲ. ಸೊಂಟಕ್ಕೆ ತೆಂಗಿನ ಸಿರಿ, ತಲೆಗೆ ಹಾಳೆಯ ಮುಟ್ಟಾಲೆ ಮಾತ್ರ ಇರುತ್ತದೆ. ಹಿಂದೆ ಭೂತ ಕಟ್ಟುವವರು ಮುಖಕ್ಕೆ ಬರೀ ಮಸಿ ಕಪ್ಪು ಬಣ್ಣ ಬಳಿದುಕೊಳ್ಳುತ್ತಿದ್ದರು. ಈಗ ಕಪ್ಪಿನ ಮೇಲೆ ಬಿಳಿ ಬಣ್ಣ ಉಪಯೋಗಿಸುತ್ತಾರೆ. ಕೈಯಲ್ಲಿ ಆಯುಧ ಮತ್ತು ಗಂಟೆ ಇರುವುದಿಲ್ಲ. ಕೊರಗಜ್ಜನ ಆಯುಧ ಬೆತ್ತ. ನೇಮ ಜಾತ್ರೆಗಳಲ್ಲಿ ಕೊಡ್ದಬ್ಬುವಿನಂತಹ ದಲಿತ ವರ್ಗದ ದೈವ ರಾಜಂದೈವಗಳನ್ನು ಭೇಟಿ ಮಾಡುವಂತೆ ಕೊರಗಜ್ಜನಿಗೆ ಭೇಟಿ ಮಾಡುವ ಪದ್ಧತಿ ಇಲ್ಲ.

ಕೊರಗರ ಇಂದಿನ ಸ್ಥಿತಿ

ತುಳುನಾಡಿನ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅತ್ಯಂತ ಕಟ್ಟಕಡೆಯಲ್ಲಿರುವ ತೀರಾ ಹಿಂದುಳಿವರು ಈ ಜಾತಿಗೆ ಇತರರೊಂದಿಗೆ ಬೆರೆಯುವ ಅವಕಾಶ ಇಲ್ಲದರಿಂದ ಶಿಕ್ಷಣಕ್ಕೂ ತೆರೆದುಕೊಳ್ಳಲು ಸಾಧ್ಯವಾಗಲಿಲ್ಲ. ಸಾಮಾಜಿಕ ನ್ಯಾಯದ ಅವಕಾಶವನ್ನು ತಮ್ಮದ್ದನ್ನಾಗಿಸಿಕೊಳ್ಳಲು, ಮುಂದುವರಿಯಲು ಸಾಮಾಜಿಕ ಪ್ರತ್ಯೇಕತೆಯ ವಿಧಿನಿಷೇಧವೇ ಮುಖ್ಯ ತೊಡಕಾಗಿದೆ. ಹಾಗಾಗಿ ಇಷ್ಟು ವರ್ಷಗಳಾದರೂ ಕೊರಗರಲ್ಲಿ ಶಿಕ್ಷಣವಂತರ ಪ್ರಮಾಣ ಕಡಿಮೆ. ಇವತ್ತಿಗೂ ಬಹುತೇಕ ಕೊರಗ ವಿದ್ಯಾರ್ಥಿಗಳು ಪ್ರಾಥಮಿಕ ಹಂತದಲ್ಲಿಯೇ ಶಾಲೆ ತ್ಯಜಿಸುತ್ತಾರೆ. ಶಾಲೆಗಳಲ್ಲಿ ಅಸ್ಪೃಶ್ಯತೆಯ ಆಚರಣೆ ಇರುವುದು ಇದಕ್ಕೆ ಒಂದು ಕಾರಣ ಇರಬಹುದು. ಎಲ್ಲರಿಗೂ ತಿಳಿದಿರುವಂತೆ ಅವರಲ್ಲಿ ಬಹುತೇಕ ನಗರಗಳಲ್ಲಿ ನೈರ್ಮಲ್ಯದ ಕೆಲಸಗಳನ್ನು ಮಾಡುತ್ತಾರೆ. ಇನ್ನಿತರ ವ್ಯವಹಾರ, ಕಾರ್ಖಾನೆಗಳಲ್ಲಿ ಕೆಲಸ ಪಡೆಯಲು ಅಸ್ಪೃಶ್ಯತೆಯ ತೊಡಕಿದೆ. ಉನ್ನತ ಶಿಕ್ಷಣ ಮತ್ತು ಉನ್ನತ ಉದ್ಯೋಗವಂತರು ಅತ್ಯಂತ ಕಡಿಮೆ. ನಗರಗಳಲ್ಲಿ ಅವರ ಚಲನೆ ನಿಧಾನವಾಗಿ ಕಾಣುತ್ತಿವೆಯಾದರೂ ಹಳ್ಳಿಗಳಲ್ಲಿ ಸ್ಥಿತಿ ಹೆಚ್ಚು ಕಡಿಮೆ ಹಾಗೇ ಇದೆ. ಅಂದರೆ ಜಾತಿ ಮೈಲಿಗೆಯ ಕಾರಣದಿಂದ, ಉದ್ಯೋಗ, ಹಣ ಇಲ್ಲದಿರುವ ಆರ್ಥಿಕ ಕಾರಣದಿಂದ, ವಿಧಿನಿಷೇಧ ಮತ್ತು ಪ್ರತ್ಯೇಕತೆಯ ಕಾರಣದಿಂದ ಆಧುನಿಕ ಕಾಲದ ಸಾಮಾಜಿಕ ನ್ಯಾಯ ಅವಕಾಶದಡಿಯಲ್ಲಿ ಸಂಘಟಿತರಾಗಲು, ಶಿಕ್ಷಣವಂತರಾಗಲೂ, ಅರಿವನ್ನು ಹೊಂದಲೂ, ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಆಗಲಿಲ್ಲ.

ಕಠಿಣವಾದ ಅಸ್ಪೃಶ್ಯತೆಯ ಕಾರಣದಿಂದ ಸಾಮಾಜಿಕ ಚಟುವಟಿಕೆಗಳಿಂದ ದೂರವುಳಿದ ಈ ಸಮುದಾಯ ಯಾವುದೇ ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮತ್ತು ಒಳಗೊಳ್ಳಲು ಸಾಧ್ಯವಾಗದೇ ಕಡುಬಡತನದ, ಬೇಡಿ ಎಂಜಲು ತಿನ್ನುವ ಸ್ಥಿಗೆ ಬರಬೇಕಾಯಿತು. ಹಾಗಾಗಿ ಕೃಷಿ, ಭೂಮಿ, ಆಸ್ತಿ, ಗೌರವ, ಅಧಿಕಾರ ಇವು ಯಾವುದರಲ್ಲೂ ಸ್ಪರ್ಧೆ ಹೂಡುವ ಮತ್ತು ಸಂಘರ್ಷ ಮಾಡುವ ಸಾಮಾಜಿಕ ಅವಕಾಶ ತುಳುನಾಡು ನೀಡಲಿಲ್ಲ. ಈ ಬಗೆಯಲ್ಲಿ ದೂರ ನೂಕಲ್ಪಟ್ಟ, ವಂಚಿತರಲ್ಲಿ ವಂಚಿತರಾದ ಈ ಜನಾಂಗ ಪ್ರತ್ಯೇಕವಾಗಿಯೇ ಉಳಿಯುವಂತಾಯಿತು. ಸಾಮಾಜಿಕವಾಗಿ ಬಡತನದಿಂದ, ಹಸಿವಿನಿಂದ, ತಿಳುವಳಿಕೆಯ ಕೊರತೆಯಿಂದ ರೋಗರುಜಿನಗಳ ಸಾಯುವಿಕೆಯಿಂದ ಅವರ ಜನಸಂಖ್ಯೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಮುಖವಾಗಿದೆ. ಇನ್ನೂ ಕೂಡಾ ತೀರಾ ಪ್ರಾಚೀನ ಹಿಂದುಳಿದ ದುಸ್ಥಿತಿಯ ಹಳೆಯ ರೀತಿಯ ಬದುಕನ್ನು ಬದುಕುತಿದ್ದಾರೆ. ಅವರಲ್ಲಿ ಆವರಿಸಿಕೊಂಡಿರುವ ಮೌಢ್ಯಗಳೇ ಅವರ ರೋಗರುಜಿನ ಮತ್ತು ಸಾವಿಗೆ ಕಾರಣ ಎಂದು ಹೇಳಲಾಗುತ್ತಿದೆ.

ಕೊರಗಜ್ಜ, ಕೋಡ್ದಬ್ಬುಗಳು ದಲಿತರ ಕುಲ ದೈವಗಳಾದರೂ ಎಲ್ಲಾ ಜಾತಿಯವರು ನಂಬುತ್ತಾರೆ. ಮುಖ್ಯವಾಗಿ ಈ ದೈವಗಳಿಗೆ ವಿಶೇಷ ಶಕ್ತಿ ಇದೆ ಎನ್ನುವುದು ನಂಬಿಕೆ. ಬೆಳೆ, ಪಶು, ಮನೆ ಮಕ್ಕಳ ರಕ್ಷಣೆಯ ಕುರಿತಂತೆ ಎಲ್ಲಾ ಜಾತಿಯವರು ಈ ದೈವಗಳ ಮೊರೆ ಹೋಗುತ್ತಾರೆ. ಕಂಬಳಕ್ಕೆ ಕೋಣಗಳನ್ನು ಕರೆದುಕೊಂಡು ಹೋಗುವಾಗ, ಕೋಣಗಳಿಗೆ ದೃಷ್ಟಿ ಬೀಳದಿರಲಿ ಎಂದು ಹಾಗೂ ಸ್ಪರ್ಧೆಯಲ್ಲಿ ಗೆಲ್ಲಲಿ ಎಂದು ಕೊರಗಜ್ಜನಿಗೆ ಕೈಮುಗಿಯುತ್ತಾರೆ. ಈ ದೈವಗಳಲ್ಲಿ ವಿಶೇಷ ಮಾಂತ್ರಿಕ ಶಕ್ತಿ ಸಾಹಸ ಇದೆ ಎನ್ನುವ ನಂಬಿಕೆ ಇದೆ. ಕೊರಗರಲ್ಲೂ ಅನಿಷ್ಟವನ್ನು ನಿವಾರಿಸುವ ಶಕ್ತಿಯಿದೆ ಎಂದು ಭಾವಿಸಲಾಗಿದೆ. ಇಂಥ ಹಲವಾರು ಆಚರಣೆಗಳು ಇವೆ. ಬಹುಶ:

ಇದು ಅಸ್ಪೃಶ್ಯತೆ ಮತ್ತು ಪ್ರತ್ಯೇಕತೆಯ ನೋವಿನ ಮತ್ತು ಕ್ರೋಧದ ಉಪಶಮನದ ದಾರಿಯೇ? ಯಾಕೆಂದರೆ ಪ್ರತಿರೋಧ ತೋರಿಸುವ ಇತರ ದೈವಗಳ ಆಚರಣೆಗಳು ಕೂಡಾ ಪ್ರತಿರೋಧವನ್ನು ಉಪಶಮನ ಮಾಡುವ ದಾರಿಯಂತೆ ಕಂಡುಬರುತ್ತದೆ. ಮಾತ್ರವಲ್ಲದೇ ಭೂತಾರಾಧನೆ ಜಾತಿಯನ್ನು ವೃತ್ತಿ ಮೂಲಕ ಉಳಿಸುವ ಮತ್ತು ಜಾತಿಯ ಪ್ರತ್ಯೇಕತೆಯನ್ನು ವೃತ್ತಿ ಪ್ರಾತಿನಿಧ್ಯದ ಮೂಲಕ ಒಳಗೊಳ್ಳುವ ವಿಧಾನದಂತೆ ಕಂಡುಬರುತ್ತದೆ.

ಕೊರಗಜ್ಜನ ಕೇಸರೀಕರಣ

ಈ ನಡುವೆ ತುಳುನಾಡಿನ ಭೂತಾರಾಧನೆಯನ್ನು ಹಿಂದುತ್ವೀಕರಿಸುವ ಹುನ್ನಾರದಲ್ಲಿ ಕೊರಗಜ್ಜನೂ ಒಳಗಾಗುತ್ತಿರುವುದು ಕೊರಗರ ಬಿಕ್ಕಟನ್ನು ಇನ್ನೂ ಜಟಿಲಗೊಳಿಸುವ ಸಂಗತಿಯಾಗಿದೆ. ಹಿಂದೆ ಕಾಸರಕ, ಮಾವು, ಹಲಸಿನ ಮರದಡಿಯಲ್ಲಿ ಕಲ್ಲು ಹಾಕಿ ನಂಬುತ್ತಿದ್ದ ಪದ್ಧತಿಯಲ್ಲಿ ಈಗ ಬದಲಾವಣೆಯಾಗುತ್ತಿದೆ. ಈಗ ಮಾರ್ಗದ ಬದಿಯಲ್ಲಿ, ವಿಶಾಲವಾದ ರಸ್ತೆಗಳ ಬದಿಯಲ್ಲಿ, ಪೇಟೆಗಳಲ್ಲಿ ಕೊರಗಜ್ಜ ಕಟ್ಟೆಗಳು ನಿರ್ಮಾಣವಾಗುತ್ತಿವೆ. ಅದರಲ್ಲಿ ಹಿಂದುತ್ವ ಸಂಕೇತಗಳು, ಕೇಸರಿ ಬಾವುಟಗಳು ಕಾಣಿಸಿಕೊಳ್ಳತೊಡಗಿದೆ. ಇದು ಕೊರಗಜ್ಜನ ಜನಾಂಗದ ಮೇಲಿನ ಪ್ರೀತಿಯಿಂದ ನಡೆಯುತ್ತಿರುವ ಬೆಳವಣಿಗೆಯಲ್ಲ. ರಾಜಕೀಯ ಉದ್ದೇಶದಿಂದ ಕೊರಗಜ್ಜ ಕಟ್ಟೆಗಳು ಅಭಿವೃದ್ಧಿಗೊಳ್ಳುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಇಲ್ಲಿನ ಬಹುತೇಕ ಎಲ್ಲಾ ದೈವಗಳು ಬ್ರಾಹ್ಮಣೀಕರಣಕ್ಕೆ ಒಳಗಾಗುತ್ತಿವೆ. ಜನಪದ ಮೌಖಿಕ ಪರಂಪರೆಯದ್ದಲ್ಲದ ಹಲವಾರು ಕಟ್ಟುಪಾಡುಗಳನ್ನು, ವ್ರತಾಚರಣೆಗಳನ್ನು ಭೂತಾರಾಧನೆಯ ಒಳಗೆ ತರಲಾಗುತ್ತಿದೆ. ಭೂತಗಳನ್ನು ಸಸ್ಯಾಹಾರಿಗಳನ್ನಾಗಿಸುವ ಮಾತುಗಳು ಹಿಂದುತ್ವವಾದಿಗಳಿಂದ ಕೇಳಿಬರುತ್ತಿದೆ. ಅಲ್ಪಸಂಖ್ಯಾತ ಸಮುದಾಯಗಳೊಂದಿಗೆ ಎಂದು ಪ್ರತ್ಯೇಕತೆಯನ್ನು ಬೆಳೆಸಿಕೊಂಡು ಬರದ ದೈವರಾಧಕರನ್ನು, ಅಲ್ಪಸಂಖ್ಯಾತರು ನಮ್ಮ ವೈರಿಗಳು, ಹಿಂದುಗಳಾಗಿರುವ ನಾವೆಲ್ಲಾ ಅವರೆದುರಿಗೆ ಒಂದಾಗಬೇಕೆನ್ನುವ ವಾದ ಬೆಳೆಯುತ್ತಿದೆ.

ತುಳುನಾಡಿನ ಸಾಮಾಜಿಕ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಜಾತ್ಯಾತೀತವಾದ ಮತ್ತು ಸಮಾನತೆ ಸಾಮಾಜಿಕ ನ್ಯಾಯದ ಚಿಂತನೆಯಲ್ಲಿಯೇ ಕೊರಗರಿಗೆ ಬಿಡುಗಡೆಗೊಳ್ಳುವ ದಾರಿಗಳು ಲಭಿಸದಿರುವಾಗ, ಹಿಂದುತ್ವದ ದಾರಿಯಲ್ಲಿ ಹೇಗೆ ಸಾ ಧ್ಯ? ಮುಖ್ಯವಾಗಿ ಕೊರಗಜ್ಜನ ಕಥೆ ಮತ್ತು ಕೊರಗರ ಸ್ಥಿತಿಯನ್ನು ಜಾತಿ ವಿರೋಧಿ ನಿಲುವಿನಲ್ಲಿ ವಿವರಿಸಿಕೊಳ್ಳಬೇಕು. ಯಾಕೆಂದರೆ, ಅವರು ಜಾತಿ ಮತ್ತು ಅಸ್ಪೃಶ್ಯತೆಯಿಂದ ನೊಂದವರು. ಹಿಂದುತ್ವಕ್ಕೆ ಶೋಷಿತರ ಶೋಷಣೆಯನ್ನು ವಿವರಿಸುವ ಯಾವ ಸಿದ್ಧಾಂತವೂ ಇಲ್ಲ. ಇದು ಕೊರಗರಿಗೆ ಎದುರಾಗಿರುವ ಇನ್ನೊಂದು ಮುಖ್ಯ ಬಿಕ್ಕಟ್ಟು. ಮೂಲತ: ಕೊರಗತನಿಯ ಹಿಂದುತ್ವದ ಧಾರೆಯಲ್ಲಿ ಬರುವ ದೈವವೂ ಅಲ್ಲ ಮಾತ್ರವಲ್ಲದೇ ಕೊರಗರು ತಮ್ಮ ಜಾತಿಯ ವಿಧಿ ನಿಷೇಧ, ಸಾಮಾಜಿಕ ಪ್ರತ್ಯೇಕತೆಯನ್ನು ಬಿಡಿಸಿಕೊಳ್ಳುವ ದಾರಿಯನ್ನು ಸ್ಪಷ್ಟವಾಗಿ ವಿವರಿಸಿಕೊಳ್ಳಬೇಕಾಗಿದೆ.

ತುಳುನಾಡಿನಲ್ಲಿರುವ ದಲಿತ ವರ್ಗದ ಜಾತಿಗಳಲ್ಲಿ ಸಾಮಾಜಿಕ ಪರಿವರ್ತನೆಯ ಒಂದು ಸಣ್ಣ ಬದಲಾವಣೆ ಕಂಡು ಬರತೊಡಗಿ ಅವರ ಅಸ್ಮಿತೆಗಳು ಗೋಚರಗೊಳ್ಳತೊಡಗಿದಂತೆ ಹಿಂದುತ್ವ ರಾಜಕಾರಣ ಈ ವರ್ಗದ ಬಿಡುಗಡೆಯ ದಿಕ್ಕುದೆಸೆಗಳನ್ನು ಮಸುಕುಗೊಳಿಸಲು ಹೊಂಚುಹಾಕಿದೆ. ಮುಗ್ಧ ಜನರು ಇದಕ್ಕೆ ಬಲಿಯಾಗುತ್ತಿದ್ದಾರೆ.

ಹಾಗಾದರೆ, ಕೊರಗರಿಗೆ ಆಧುನಿಕ ಪ್ರತಿನಿಧೀಕರಣ ಸಾಧ್ಯವಿಲ್ಲದ ಈ ಸಂಗತಿಯನ್ನು ಹೇಗೆ ವಿವರಿಸುವುದು? ಇದು ಅವರ ಸಾಮರ್ಥ್ಯದ ಇತಿಮಿತಿಯೇ? ಸಮಾಜದ ಕಟ್ಟುಪಾಡಿನ ಪರಿಣಾಮವೇ? ಅಥವಾ ಆಧುನಿಕ ರಾಜಕೀಯ ಚಿಂತನೆಗಳ ಮತ್ತು ರಾಷ್ಟ್ರಪ್ರಭುತ್ವದ ಇತಿಮಿತಿಯೇ?



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮದ್



...ಶಕ್ತಿ ವಿಶೇಷಾಂಕ "ಸೌಹಾರ್ದ ಕರ್ನಾಟಕ 60" ...
... ಸುರೇಂದ್ರ ರಾವ್ ಅವರಿಂದ

ಹಲವು ಹೊಸ ವಿಶೇಷಗಳ

ನಾಲ್ಕನೇ ವರ್ಷಕ್ಕೆ ಕಾಲಿಟ್ಟ ಜನಶಕ್ತಿ ಉತ್ಸವ ಈ ಬಾರಿ ಇನ್ನೊಂದು ಹೊಸದನ್ನು ಸಾಧಿಸಿತು. ರಾಜಧಾನಿ ಬೆಂಗಳೂರು ಬಿಟ್ಟು ಕರಾವಳಿಯ ಕೇಂದ್ರ ಮಂಗಳೂರಿನಲ್ಲಿ ನಡೆಯಿತು. ಈ ಬಾರಿಯ ಜನಶಕ್ತಿ ಉತ್ಸವದಲ್ಲಿ ವಾರ್ಷಿಕ ವಿಶೇಷಾಂಕ 'ಸೌಹಾರ್ದ ಕರ್ನಾಟಕ 60' ಬಿಡುಗಡೆ ಅಲ್ಲದೆ, "ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆ–ತೊಡಕುಗಳು, ಪರಿಹಾರಗಳು" ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ಹಾಗೂ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕ ಹಾಗೂ ರೈತ–ಕಾರ್ಮಿಕರ ಧೀಮಂತ ನಾಯಕರ ಬಗೆಗೆ ಬರೆದ 'ಎ ಕೃಷ್ಣ ಶೆಟ್ಟಿ – ಜನಮನ ಗೆದ್ದ ನಾಯಕ" ಪುಸ್ತಕ ಬಿಡುಗಡೆಗಳೂ ಇದ್ದವು.

ನಾಲ್ಕನೇ ವರ್ಷಕ್ಕೆ ಕಾಲಿಟ್ಟ ಜನಶಕ್ತಿ ಉತ್ಸವ ಈ ಬಾರಿ ಇನ್ನೊಂದು ಹೊಸದನ್ನು ಸಾಧಿಸಿತು. ರಾಜಧಾನಿ ಬೆಂಗಳೂರು ಬಿಟ್ಟು ಕರಾವಳಿಯ ಕೇಂದ್ರ ಮಂಗಳೂರಿನಲ್ಲಿ ನಡೆಯಿತು. ಈ ಬಾರಿಯ ಜನಶಕ್ತಿ ಉತ್ಸವದಲ್ಲಿ ವಾರ್ಷಿಕ ವಿಶೇಷಾಂಕ 'ಸೌಹಾರ್ದ ಕರ್ನಾಟಕ 60' ಬಿಡುಗಡೆ ಅಲ್ಲದೆ, "ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆ–ತೊಡಕುಗಳು, ಪರಿಹಾರಗಳು" ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ಹಾಗೂ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕ ಹಾಗೂ ರೈತ–ಕಾರ್ಮಿಕರ ಧೀಮಂತ ನಾಯಕರ ಬಗೆಗೆ ಬರೆದ 'ಎ ಕೃಷ್ಣ ಶೆಟ್ಟಿ–ಜನಮನ ಗೆದ್ದ ನಾಯಕ" ಪುಸ್ತಕ ಬಿಡುಗಡೆಗಳೂ ಇದ್ದವು. ವಿಶೇಷಾಂಕದ ಮತ್ತು ವಿಚಾರ ಸಂಕಿರಣದ ವಿಷಯ ಹಾಗೂ ಬಿಡುಗಡೆಯಾಗಲಿದ್ದ ಪುಸ್ತಕ ಕರಾವಳಿಗೆ ವಿಶೇಷ ಮಹತ್ವದ್ದಾದ್ದರಿಂದ ಹೀಗೆ ಮಾಡಲಾಗಿತ್ತು. ಇದರ ಜತೆಗೆ ಜನಶಕ್ತಿ ಉತ್ಸವವನ್ನು ಆಗಾಗ ವಿವಿಧ ಜಿಲ್ಲಾ ಕೇಂದ್ರಗಳಿಗೆ ಒಯ್ಯುವ ಉದ್ದೇಶವೂ ಇದರ ಹಿಂದೆ ಇದೆ. ಉತ್ಸವ ನಡೆದ ಕರ್ನಾಟಕ ಬ್ಯಾಂಕ್ ನೌಕರರ ಸಂಘದ ಸಭಾಂಗಣ ಕಿಕ್ಕಿರಿದು ತುಂಬಿದ್ದು, ಮುಗಿಯುವುದು 2 ಗಂಟೆಯಾದರೂ ಜನ ಕದುಲಲಿಲ್ಲ ಎನ್ನುವುದು ವಿಶೇಷವಾಗಿತ್ತು. ಮಾತ್ರವಲ್ಲ, ಉತ್ಸವಕ್ಕೆ ತೆಗೆದುಕೊಂಡು ಹೋಗಿದ್ದ 100 ಜನಶಕ್ತಿ ವಿಶೇಷಾಂಕದ ಪ್ರತಿಗಳು ಮತ್ತು 750 'ಎ ಕೃಷ್ಣ ಶೆಟ್ಟಿ' ಪುಸ್ತಕಗಳು ಬಿಸಿ ದೋಸೆಯಂತೆ ಮಾರಾಟವಾಗಿ 'ಬರಿ ಕೈ'ನಲ್ಲಿ ವಾಪಸು ಬರಬೇಕಾದ ಅಪರೂಪದ ಅನುಭವ ಜನಶಕ್ತಿ ತಂಡದ್ದಾಗಿತ್ತು!

ವಿಶೇಷಾಂಕ, ಪುಸ್ತಕ ಬಿಡುಗಡೆ

ಜನಶಕ್ತಿ ಉತ್ಸವ ಎಸ್.ಎಫ್.ಐ. ತಂಡದ ವಿಕಾಸ್, ಮಾಧುರಿ, ಮಯೂರಿ ಪ್ರಸ್ತುತ ಪಡಿಸಿದ 'ಅಲ್ಲಿ ರಾಮನಿದ್ದಾನೆ' ಹಾಡಿನೊಂದಿಗೆ ಆರಂಭವಾಯಿತು. ಆ ಮೇಲೂ ಈ ತಂಡ ಹಾಡುಗಳ ಮೂಲಕ ಉತ್ಸವದ ಹೆಸರನ್ನು ಸಾರ್ಥಕಗೊಳಿಸಿದರು. ಸಮುದಾಯ ಕರ್ನಾಟಕದ ಉಪಾಧ್ಯಕ್ಷ ಹಾಗೂ ಜಿಲ್ಲೆಯ ಸಾಹಿತ್ಯಕ–ಸಾಂಸ್ಕೃತಿಕ ಚಳುವಳಿಯಲ್ಲಿ ಚಿರಪರಿಚಿತರಾದ ವಾಸುದೇವ ಉಚ್ಚಿಲ್ ಎಲ್ಲರನ್ನೂ





ಗೌರವ ಪ್ರತಿ ಲೇಖಕಿ ಜ್ಯೋತಿ ಚೆಳ್ಯಾರು ಅವರಿಗೆ



'ಎ ಕೃಷ್ಣ ಶೆಟ್ಟಿ' ಪುಸ್ತಕದ ಗೌರವ ಪ್ರತಿ ಮಗಳು ಗಿರಿಜಾತೆ ಭಂಡಾರಿ ಅವರಿಗೆ





ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿದರು. ಇದಕ್ಕಿಂತ ಮೊದಲು ಉತ್ತರ ಕನ್ನಡ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್ ಅತಿಥಿಗಳನ್ನು ವೇದಿಕೆಗೆ ಬರಮಾಡಿಕೊಂಡು ನಿರೂಪಣೆ ಆರಂಭಿಸಿದ್ದರು. ಅವರೂ ಇಡೀ ಉತ್ಸವದ ನಿರೂಪಣೆಯನ್ನು ಆಸಕಿಕರವಾಗಿ ಮಾಡಿದರು. ಆ ಮೇಲೆ ಪ್ರಸಿದ್ಧ ಇತಿಹಾಸಜ್ಞ ಮತ್ತು ಚಿಂತಕ ಪ್ರೊ. ಬಿ. ಸುರೇಂದ್ರ ರಾವ್ ಜನಶಕ್ತಿಯ ವಿಶೇಷಾಂಕ 'ಸೌಹಾರ್ದ ಕರ್ನಾಟಕ 60ನ್ನು ಬಿಡುಗಡೆ ಮಾಡಿದರು. ವಿಶೇಷಾಂಕದ ಗೌರವ ಪ್ರತಿಯನ್ನು ಉಪಸ್ಥಿತರಿದ್ದ ವಿಶೇಷಾಂಕದ ಇಬ್ಬರು ಲೇಖಕರಾದ ಡಾ. ರಾಜೇಂದ್ರ ಉಡುಪ ಮತ್ತು ಜ್ಯೋತಿ ಚೆಳ್ಯಾರು ಅವರುಗಳಿಗೆ ಪ್ರೊ. ಬಿ. ಸುರೇಂದ್ರ ರಾವ್ ಕೊಟ್ಟರು. ಆ ನಂತರ ಬಹು ನಿರೀಕ್ಷಿತ 'ಎ ಕೃಷ್ಣ ಶೆಟ್ಟಿ – ಜನಮನ ಗೆದ್ದ ನಾಯಕ" ಪುಸ್ತಕ ಬಿಡುಗಡೆಯನ್ನು ಹಂಪಿ ವಿ.ವಿ.ದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಹಾಗೂ ಚಿಂತಕ ಪ್ರೊ. ಚಂದ್ರ ಪೂಜಾರಿಯವರು ನೆರವೇರಿಸಿದರು. ಉಪಸ್ಥಿತರಿದ್ದ ಕಾ. ಕೃಷ್ಣ ಶೆಟ್ಟಿಯವರ ಹಿರಿಯ ಮಗಳು ಗಿರಿಜಾತೆ ಭಂಡಾರಿ, ಮಗ ಸುಬ್ಬಯ್ಯ ಶೆಟ್ಟಿ ಮತ್ತು ಕಿರಿಯ ಮಗಳು ಶೋಭಾ ಪ್ರಮೋದ ರೈ ಅವರಿಗೆ ಪ್ರೊ. ಚಂದ್ರ ಪೂಜಾರಿಯವರು ಪುಸ್ತಕದ ಗೌರವ ಪ್ರತಿಗಳನ್ನು ನೀಡಿ ಗೌರವಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಕಾ. ಕೃಷ್ಣ ಶೆಟ್ಟಿಯವರ ಸಂಗಾತಿಯಾಗಿದ್ದು ಉತ್ಸವಕ್ಕೆ ಬಂದಿದ್ದ ಹಿರಿಯ ಗಾಂಧಿವಾದಿ ನಾಮದೇವ ಶೆಣೈ ಅವರಿಗೂ ಗೌರವ ಪ್ರತಿ ನೀಡಿ ಗೌರವಿಸಲಾಯಿತು. ಕಾ. ಎ. ಕೃಷ್ಣ ಶೆಟ್ಟಿಯವರ ಕುಟುಂಬದವರು ಮತ್ತು ಅಭಿಮಾನಿಗಳು ದೊಡ್ಡ ಸಂಖ್ಯೆಯಲ್ಲಿ ಉತ್ಸವದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಕಾ. ಎ. ಕೃಷ್ಣ ಶೆಟ್ಟಿಯವರ ಕುಟುಂಬದವರ ಪರವಾಗಿ ಅವರ ತಮ್ಮನ ಮಗ ಪ್ರದೀಪ್ ಶೆಟ್ಟಿ ಅವರು ಮಾತನಾಡಿ ತಮ್ಮ ನೆನಪುಗಳನ್ನು ಹಂಚಿಕೊಂಡರು.

ಜನಶಕ್ತಿಯ ಕಾರ್ಯನಿರತ ಸಂಪಾದಕ ವಸಂತರಾಜ ಎನ್.ಕೆ. ಜನಶಕ್ತಿ ಪತ್ರಿಕೆ, ಈ ವರ್ಷದ ವಿಶೇಷಾಂಕದ, ವಿಚಾರ ಸಂಕಿರಣದ ಹಾಗೂ ಬಿಡುಗಡೆಯಾಗಲಿದ್ದ ಪುಸ್ತಕದ ಬಗ್ಗೆ ಪ್ರಾಸ್ತಾವಿಕವಾಗಿ ಮಾಡಿದರು. ವಿಶೇಷಾಂಕದಲ್ಲಿ ಏನಿದೆ ಎಂಬುದರ ಬಗ್ಗೆ ವಿವರಿಸಿದರು.

'ಜಾತಿ-ಧರ್ಮ ಆಧಾರಿತ "ಐಡೆಂಟಿಟಿ ಪಾಲಿಟಿಕ್ಸ್' ಕಾರಣ'

"ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆ–ತೊಡಕುಗಳು, ಪರಿಹಾರಗಳು" ವಿಚಾರ ಸಂಕಿರಣವನ್ನು ಪ್ರೊ. ಬಿ. ಸುರೇಂದ್ರ ರಾವ್ ತಮ್ಮ ಆಶಯ ಭಾಷಣದೊಂದಿಗೆ ಆರಂಭಿಸಿದರು. ರಾಜಕೀಯ ಅಧಿಕಾರ ಪಡೆಯಲು ಧರ್ಮವನ್ನು ಬಂಡವಾಳವಾಗಿ ಬಳಸಿಕೊಳ್ಳುತ್ತಿರುವುದು ಕೋಮುವಾದ ಬೆಳೆಯಲು ಒಂದು ಪ್ರಮುಖ ಕಾರಣವಾಗಿದೆ ಎಂಬುದು ಅವರ ಭಾಷಣದ ಸಾರವಾಗಿತ್ತು. ತಮ್ಮ ಮತ್ತು ಇತರರ ಜಾತಿ–ಧರ್ಮಗಳ ಮೇಲು–ಕೀಳುಗಳ ಆಧಾರದ ಮೇಲೆ ಇತರರ ಬಗ್ಗೆ ಖಾಸಗಿಯಾಗಿ ಸಹ ತಿರಸ್ಕಾರ, ಅಗೌರವ ತೋರುವುದನ್ನು ಕೋಮುವಾದ ಎಂದು ಅವರು ಅರ್ಥೈಸಿದರು. ರಾಜಕೀಯಕ್ಕೆ ಬಳಸಿಕೊಳ್ಳುವುದು 'ಹಾರ್ಡ್' ಕೋಮುವಾದವಾದರೆ, ಈ ರೀತಿಯ ಧೋರಣೆ ಹೊಂದಿರುವುದು 'ಸಾಫ್ಟ್' ಕೋಮುವಾದ ಎಂದರು. ಇದು ಕರಾವಳಿಯಲ್ಲಿ ವ್ಯಾಪಕವಾಗಿದೆ ಎಂದ ಅವರು, ಇದರಿಂದಾಗಿ 'ಹಾರ್ಡ್' ಕೋಮುವಾದ ಸಮ್ಮತವಾಗಿಬಿಟ್ಟಿದೆ ಎಂದರು. ಹಲವರು ಹೇಳುವಂತೆ ಧಾರ್ಮಿಕತೆಯ, ದೇವರ ಭಯದ ಅಭಾವದಿಂದ ಕೋಮುವಾದಿ ಹಿಂಸಾಚಾರ ಹರಡಿಲ್ಲ. ಅಥವಾ 'ಧಾರ್ಮಿಕತೆ' ಹೆಚ್ಚಾಗಿರುವುದರಿಂದಲೂ ಕೋಮುವಾದ ಉಲ್ಬಣಗೊಂಡಿಲ್ಲ. ಇಲ್ಲಿ ಇವರು ಕೆಲವು ಧಾರ್ಮಿಕ ಆಚರಣೆಗಳನ್ನೇ 'ಧಾರ್ಮಿಕತೆ' ಎಂದು ತಿಳಿಯುವ ತಪ್ಪು ಮಾಡುತ್ತಾರೆ. ಕೋಮುವಾದ ಕರಾವಳಿಯಲ್ಲಿ ಭೀಕರವಾಗಿ ಬೆಳೆಯುವುದಕ್ಕೆ ವಿಶೇಷಾಂಕದ ವಿವಿಧ ಲೇಖನಗಳಲ್ಲಿ ಗುರುತಿಸುವ ಕಾರಣಗಳನ್ನು ಒಪ್ಪಿಕೊಳ್ಳುತ್ತಲೇ, ಜಾತಿ ಮತ್ತು ಧರ್ಮಗಳ ಮೇಲೆ ಆಧಾರಿತ "ಐಡೆಂಟಿಟಿ ಪಾಲಿಟಿಕ್ಸ್" ಪ್ರಮುಖ ಕಾರಣ. ಬಿಜೆಪಿ ಮಾತ್ರವಲ್ಲ, ಇತರ ಹಲವು ಪ್ರಮುಖ ಪಕ್ಷಗಳು ಸಹ ಇಂತಹ "ಐಡೆಂಟಿಟಿ ಪಾಲಿಟಿಕ್ಸ್" ಅಂಗೀಕರಿಸಿವೆ. ಇದಕ್ಕೆ ಪ್ರತಿಯಾದ ಬದಲಿ ಪಾಲಿಟಿಕ್ಸ್ ಮಾಡುವುದು ಇದಕ್ಕೆ ಪರಿಹಾರವಾದೀತು ಎಂದು ಸುರೇಂದ್ರ ರಾವ್ ತಿಳಿಸಿದರು.

ಆ ಮೇಲೆ ವಿಷಯ ಮಂಡನೆ ಮಾಡಿದ ಪ್ರೊ. ಚಂದ್ರ ಪೂಜಾರಿ ಅವರು ಕೋಮುವಾದಕ್ಕೆ ಭಿನ್ನವಾದ ನಿರ್ವಚನೆ ಕೊಡುವುದರ ಮೂಲಕ ವಿಚಾರ ಸಂಕಿರಣಕ್ಕೆ ಒಂದು ಸಂವಾದದ ಸ್ವರೂಪ ಬಂತು. ವ್ಯಾಪಕವಾಗಿರುವ ಹಾಗೂ ಸುರೇಂದ್ರ ರಾವ್ ಅವರು 'ಸಾಫ್ಟ್' ಕೋಮುವಾದ ಎಂದು ಕರೆದಿದ್ದು ಕೋಮುವಾದ ಅಲ್ಲ ಎಂದರು. ಒಂದು ಸಮುದಾಯ (ಜಾತಿ ಅಥವಾ ಮತ-ಧರ್ಮ)ದ ಜನ ಇನ್ನೊಂದು ಸಮುದಾಯದ ಜತೆ ಪೈಪೋಟಿಯಲ್ಲಿ ತನ್ನ ಸಮುದಾಯದ ಜನತೆಯ ಉನ್ನತಿಗೆ ಜಾತಿ ಸಂಘಟನೆ, ಶಾಲಾ–ಕಾಲೇಜುಗಳು, ಬ್ಯಾಂಕ್ ಮತ್ತಿತರ ಸಾಮಾಜಿಕ–ಆರ್ಥಿಕ

ಲೇಖಕರ ಮಾತು
ಕೆ.ಆರ್.ಶ್ರೀಯಾನ್
ಅವರಿಂದ

"ಕರಾವಳಿ ಕರ್ನಾಟಕದ ಸೌಹಾರ್ದ ಪರಂಪರೆ – ತೊಡಕುಗಳು, ಪರಿಹಾರಗಳು" ವಿಚಾರ ಸಂಕಿರಣ

ಆಶಯ ಭಾಷಣ
ಪ್ರೊ. ಬಿ. ಸುರೇಂದ್ರ ರಾವ್

ವಿಷಯ ಮಂಡನೆ
ಪ್ರೊ. ಚಂದ್ರ ಪೂಜಾರಿ

ವಿಷಯ ಮಂಡನೆ
ಜಿ.ಎನ್. ನಾಗರಾಜ್

ಸಂಘಟನೆಗಳನ್ನು ಕಟ್ಟಿಕೊಳ್ಳುವುದು ಕೋಮುವಾದ ಅಲ್ಲ. ಅಲ್ಲಿ ಸ್ಪರ್ಧೆ ಇದ್ದರೂ ಇನ್ನೊಂದು ಸಮುದಾಯವನ್ನು ಕೆಳಗೆ ತಳ್ಳುವ ಅದರ ಜತೆಗೆ ಘರ್ಷಣೆಗೆ ಇಳಿಯುವ ಉದ್ದೇಶ ಇಲ್ಲ. ಅದನ್ನು ಸಕಾರಾತ್ಮಕ ಕೋಮುವಾದ ಎಂದೂ ಕರೆಯಬಹುದು. ಒಂದು ಸಮುದಾಯ(ಜಾತಿ ಅಥವಾ ಮತ–ಧರ್ಮ)ದ ಜನಕ್ಕೆ ಇನ್ನೊಂದು ಸಮುದಾಯದ ಬಗ್ಗೆ ಇರಬಹುದಾದ ಪೂರ್ವಗ್ರಹ, ಮಾಡಬಹುದಾದ ತಿರಸ್ಕಾರ, ಅಗೌರವ, ಲೇವಡಿ ಖಾಸಗಿಯಾಗಿ ಇರುವವವರೆಗೆ ಅದು ಸಮಾಜಕ್ಕೆ ಏನೂ ಹಾನಿ ಮಾಡುವುದಿಲ್ಲ ಎಂದು ಪ್ರೊ. ಪೂಜಾರಿ ಅವರು ವಾದಿಸಿದರು. ಆದರೆ ಇನ್ನೊಂದು ಸಮುದಾಯದ ಜನರನ್ನು ಕೆಳಗೆ ತಳ್ಳಲು, ಅವರ ವಿರುದ್ಧ ಸಾರ್ವಜನಿಕವಾಗಿ ದ್ವೇಷಪೂರಿತ ಪ್ರಚಾರ, ವಿನಾಶಕಾರಿ ಹಿಂಸಾತ್ಮಕ ಸಂಘರ್ಷಕ್ಕೆ ಇಳಿಯುವುದು, ಈ 'ಅನ್ಯ'ರ ವಿರುದ್ಧವಾಗಿ 'ಸ್ವ' ಸಮುದಾಯವನ್ನು ಕಟ್ಟಿಕೊಳ್ಳುವುದು ನಕಾರಾತ್ಮಕ ಕೋಮುವಾದ. ಬಿಜೆಪಿ ಮತ್ತು ಸಂಘ ಪರಿವಾರ ನಡೆಸುತ್ತಿರುವುದು 'ಅನ್ಯ' (ಮುಸ್ಲಿಮ) ರ ವಿರುದ್ಧ ಸಂಘರ್ಷದಲ್ಲಿ 'ಹಿಂದೂ' ಎಂಬ ಇಲ್ಲದ 'ಸ್ವ'(ಅಸ್ಮಿತೆ–ಐಡೆಂಟಿಟಿ) ಕಟ್ಟಿಕೊಳ್ಳುವುದು ಅಪಾಯಕಾರಿ ಕೋಮುವಾದ ಎಂದು ಬಲವಾಗಿ ವಾದಿಸಿದರು. ಇದಲ್ಲದೆ ಒಟ್ಟಾರೆಯಾಗಿ ಸಮುದಾಯವನ್ನು ಇನ್ನೊಂದು ಸಮುದಾಯದ ವಿರುದ್ಧ ಯಾವ ರೀತಿಯ ಸಮಾಜ ಕಟ್ಟಲು ಸಂಘಟಿಸಲಾಗುತ್ತಿದೆ ಎಂಬುದೂ ಮುಖ್ಯ. ಸಮಾನತೆ, ಶೋಷಣೆ ಇಲ್ಲದ ಸಮೃದ್ಧಿಯ ಸಮಾಜ ಕಟ್ಟುವ ಉದ್ದೇಶದಿಂದ ಇನ್ನೊಂದು (ಶ್ರೇಣೀಕೃತ ಸಮಾಜದಲ್ಲಿ ಮೇಲಿರುವ) ಸಮುದಾಯದ ವಿರುದ್ಧ ಸಂಘಟನೆ ಮಾಡಿದರೆ ಅದನ್ನು ಕೋಮುವಾದ ಎಂದು ಹೇಳಲಾಗದು. ಈ ಮಾನದಂಡ ಬಳಸಿದರೂ ಬಿಜೆಪಿಯದ್ದು ಕೋಮುವಾದವೇ. ಸಮಾನತೆ, ಶೋಷಣೆ ಇಲ್ಲದ ಸಮೃದ್ಧಿಯ ಸಮಾಜ ಕಟ್ಟುವ ಉದ್ದೇಶ ಅದಕ್ಕಿಲ್ಲ. ಬದಲಾಗಿ ಈಗಾಗಲೇ ಇರುವ ವಿಷಮತೆಯನ್ನು ಇನ್ನೂ ಹೆಚ್ಚಿಸುವ ನೀತಿಗಳನ್ನೇ ಪಾಲಿಸುತ್ತಿದೆ. ಈಗಾಗಲೇ ಕೇವಲ ಮೇಲಿನ ಶೇ.5 ಜನ ದೇಶದ ಬಹುಪಾಲು ಆಸ್ತಿ, ಆದಾಯ ಹೊಂದಿರುವ ಅಭಿವೃದ್ಧಿ ಫಲವುಣ್ಣುವ ಪಿರಮಿಡ್ ತರಹದ ವಿಷಮ ವ್ಯವಸ್ಥೆಯನ್ನು ರಕ್ಷಿಸಲು ಮುಂದಾಗಿದೆ. ಈ ಪಿರಮಿಡ್ ನ ಮೇಲಿನ ಎರಡು ಹಂತಗಳಲ್ಲಿ ಮೇಲು/ಮಧ್ಯಮ ಜಾತಿಯವರು ಬಹುಸಂಖ್ಯಾತರಾಗಿದ್ದರೆ, ಕೆಳ ಹಂತದಲ್ಲಿ ದಲಿತರು, ಮುಸ್ಲಿಮರು, ಕೆಳಜಾತಿಯವರು ಬಹುಸಂಖ್ಯಾತರಾಗಿದ್ದಾರೆ. ಇದನ್ನು ಬದಲಾಯಿಸುವ ರಾಜಕೀಯ ಬೇಕಾಗಿದೆ ಎಂದು ಪ್ರೊ. ಚಂದ್ರ ಪೂಜಾರಿ ಅವರು ಹೇಳಿದರು. ಕರಾವಳಿಯಲ್ಲೇ ಏಕೆ ಕೋಮುವಾದೀಕರಣ ತೀವ್ರ ಸ್ವರೂಪ ಪಡೆಯಿತು ಎಂಬುದರ ಬಗ್ಗೆ ವಿಶೇಷಾಂಕದ ತಮ್ಮ ಲೇಖನದಲ್ಲಿ ಬರೆದಿರುವುದರಿಂದ ಆ ಬಗ್ಗೆ ಇಲ್ಲಿ ಹೆಚ್ಚು ಪ್ರಸ್ತಾಪಿಸಲು ಹೋಗುವುದಿಲ್ಲ ಎಂದೂ ಅವರು ಹೇಳಿದ್ದರು. ಸ್ಥೂಲವಾಗಿ ಹೇಳುವುದಾದರೆ ಕೆಳಜಾತಿಗಳವರಿಗೆ ಸಾಮಾಜಿಕ–ಸಾಂಸ್ಕೃತಿಕ ಸ್ವಂತಿಕೆ ಹಾಗೂ ಸ್ಥಾನಮಾನ ಕೊಡುವ ತೋರಿಕೆಯೊಂದಿಗೆ ಅವರಿಗೆ ಸಾಂತ್ವನ ಕೊಟ್ಟು ಅವರ ನಿಜವಾದ ಆರ್ಥಿಕ ಹಿತಾಸಕ್ತಿಗಳನ್ನು ಬಲಿ ಕೊಡಲಾಗಿದೆ ಎಂದರು.

ವಿಷಯ ಮಂಡನೆ ಮಾಡಿ ಮಾತನಾಡಿದ ಜನಶಕ್ತಿ ಸಂಪಾದಕ ಮಂಡಳಿಯ ಜಿ.ಎನ್. ನಾಗರಾಜ್ ಕೋಮುವಾದಕ್ಕೆ ಇನ್ನೊಂದು ಭಿನ್ನ ನಿರ್ವಚನೆ ಕೊಡುವುದರ ಮೂಲಕ ಸಂವಾದವನ್ನು ಇನ್ನಷ್ಟು ಮುಂದಕ್ಕೆ ಒಯ್ದರು. ಕೋಮುವಾದ ಇಂಗ್ಲೀಷಿನ 'ಕಮ್ಯುನಸಲಿಸಂ'ಗೆ ಸಂವಾದಿಯಾಗಿ ಬಂದು ಅದು ಧರ್ಮ ಆಧಾರಿತ 'ಸ್ವ' ಮತ್ತು 'ಅನ್ಯ'ವನ್ನು


ಅಧ್ಯಕ್ಷರ ನುಡಿ –
ವಿ.ಜೆ.ಕೆ. ನಾಯರ್

ಪುಸ್ತಕ ಪರಿಚಯ–
ವಸಂತ ಆಚಾರಿ


ಸ್ವಾಗತ ಮಾಡಿದ
ವಾಸುದೇವ ಉಚ್ಚಿಲ್

ನಿರೂಪಣೆ ಮಾಡಿದ
ಯಮುನಾ ಗಾಂವ್ಕರ್

ವಂದನಾರ್ಪಣೆ –
ಸುನೀಲ್‌ಕುಮಾರ್ ಬಜಾಲ್










'ಅಲ್ಲಿ ರಾಮನಿದ್ದಾನೆ', 'ಕಟ್ಟತ್ತೇವ ನಾವು' – ಎಸ್.ಎಫ್.ಐ. ತಂಡದ ವಿಕಾಸ್, ಮಾಧುರಿ, ಮಯೂರಿ ಅವರಿಂದ ಹಾಡುಗಳು




ಪ್ರಸ್ತಾವನೆ ಎನ್.ಕೆ.ವಸಂತರಾಜ ಮಾತನಾಡಿದರು.

ಸೃಷ್ಟಿಸಿ ಸಂಘರ್ಷಕ್ಕೆ ಇಳಿಯುವಂತಹುದು. 'ಕಮ್ಯುನಸಲಿಸಂ' 'ಕಮ್ಯುನಿಟಿ' (ಸಮುದಾಯ)ಯಿಂದ ಬಂದಿದ್ದರೂ, ಹಾಗೂ 'ಕಮ್ಯುನಿಟಿ'ಗೆ ಜಾತಿ–ಧರ್ಮ ಗಳನ್ನು ಒಳಗೊಂಡ ವಿಶಾಲ ಅರ್ಥವಿದ್ದರೂ, ಜಾತಿ ಆಧಾರಿತವಾಗಿ 'ಸ್ವ' ಮತ್ತು 'ಅನ್ಯ'ವನ್ನು ಸೃಷ್ಟಿಸಿ ಪೈಪೋಟಿ–ಸಂಘರ್ಷಕ್ಕೆ ಇಳಿಯುವಂತಹ ದೋರಣೆಯನ್ನು 'ಜಾತಿವಾದ' ಎಂದು ಕರೆಯಲಾಗುತ್ತದೆ. 'ಸಕಾರಾತ್ಮಕ ಕೋಮುವಾದ' ಎಂದು ಪ್ರೊ. ಪೂಜಾರಿ ಅವರು ಕರೆದದ್ದು ಒಂದು ಬಗೆಯ ಜಾತಿವಾದವನ್ನು. ಆದರೆ 'ಸಕಾರಾತ್ಮಕ ಕೋಮುವಾದ' ಎಂಬುದಿಲ್ಲ ಎಂದು ವಾದಿಸಿದರು. ದೇಶ, ರಾಜ್ಯ ಅಥವಾ ಕರಾವಳಿ ಪ್ರದೇಶದಲ್ಲಿ ಜಾತಿವಾದವಾಗಲಿ ಕೋಮುವಾದವಾಗಲಿ ತಾವು ಹೇಳುವ ಸಮುದಾಯದೊಳಗೂ ಎಂದೂ ಸಮಾನತೆಯ ಉದ್ದೇಶ (ಹಾಗೆ ಹೇಳಿಕೊಂಡರೂ) ಹೊಂದಿರಲಿಲ್ಲ. ಇಂತಹ ಪ್ರತಿ ಸಮುದಾಯ (ಜಾತಿ, ಮತ)ದೊಳಗೂ ಪ್ರೊ. ಪೂಜಾರಿ ಅವರು ಹೇಳಿದ ಪಿರಮಿಡ್ ಇದೆ. ಈ ಪಿರಮಿಡಿನ ಮೇಲ್ ತುದಿಯವರು ಸಮಾಜದ ಇತರ ಸಮುದಾಯಗಳ ಜತೆ ಪೈಪೋಟಿಯಲ್ಲಿ ತಮ್ಮ ಸಮುದಾಯವನ್ನು ಅಣಿ ನೆರೆಸಲಷ್ಟೇ ಇದನ್ನು ಬಳಸಿಕೊಂಡರು. ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು ಜಾತಿವಾದವನ್ನೂ, ಕೋಮುವಾದವನ್ನೂ ಸಮಾನತೆ, ಶೋಷಣೆ–ರಹಿತ ಸಮೃದ್ಧ ಸಮಾಜ ವ್ಯವಸ್ಥೆಗೆ ಹಂಬಲಿಸುವ ಎಲ್ಲಾ ಸಮುದಾಯಗಳ ಜನರನ್ನು ವಿಭಜಿಸಲು ಮತ್ತು ಇಂತಹ ಪಿರಮಿಡ್ ವ್ಯವಸ್ಥೆ ಉಳಿಸಿ ಬೆಳೆಸಲು ಬಳಸಿಕೊಂಡಿದ್ದಾರೆ. ಕರಾವಳಿಯಲ್ಲಿ ಕೋಮುವಾದ ಇಷ್ಟು ಗಂಭೀರ ಸ್ವರೂಪ ಪಡೆದ ಕಾರಣಗಳ ಬಗ್ಗೆ ಆಳವಾದ ಅಧ್ಯಯನ ಬೇಕಾಗಿದೆ. ಮುಂಬಯಿ–ಕೊಲ್ಲಿಯೊಂದಿಗೆ ಘನಿಷ್ಟ ಸಂಬಂಧ, ತೀವ್ರ ಭೂಸುಧಾರಣೆಗಳ ನಿರ್ದಿಷ್ಟ ಪರಿಣಾಮಗಳು, ವಿವಿಧ ಧರ್ಮಗಳ ಜನಗಳ ನಡುವೆ ಸಾಮಾಜಿಕ–ಆರ್ಥಿಕ ಪರಿಸ್ಥಿತಿಯಲ್ಲಿ ತೀವ್ರ ವ್ಯತ್ಯಾಸಗಳು, ಕೋಮುವಾದಿ ಶಕ್ತಿಗಳ ಪಾರಂಪರಿಕ ಬಲ, ಸಾಂಸ್ಕೃತಿಕ–ಧಾರ್ಮಿಕ ಹಿನ್ನೆಲೆ ಮುಂತಾದ ಕರಾವಳಿಯ ವಿಶಿಷ್ಟ ಸ್ವರೂಪಗಳ ಪರಿಣಾಮಗಳನ್ನು ಅಧ್ಯಯನ ಮಾಡಬೇಕು ಎಂದು ಜಿ.ಎನ್. ನಾಗರಾಜ್ ಕರೆ ಕೊಟ್ಟರು.


ಧೀಮಂತ ನಾಯಕನ ಹೋರಾಟದ ಕಥನ

'ಎ ಕೃಷ್ಣ ಶೆಟ್ಟಿ – ಜನಮನ ಗೆದ್ದ ನಾಯಕ" ಪುಸ್ತಕದ ಪ್ರಮುಖ ರೋಚಕ ಭಾಗಗಳನ್ನು ಉದಾಹರಿಸುತ್ತಾ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಪುಸ್ತಕದ ಪರಿಚಯವನ್ನು ಮನಮುಟ್ಟುವಂತೆ ಮಾಡಿದರು. ಹಿರಿಯ ಕಮ್ಯುನಿಸ್ಟ್ ನಾಯಕ ಮತ್ತು ಕಾ. ಎ ಕೃಷ್ಣ ಶೆಟ್ಟಿ ಅವರ ಹೋರಾಟದ ಸಂಗಾತಿ ಕಾ. ಕೆ.ಆರ್.ಶ್ರೀಯಾನ್ ಎ ಕೃಷ್ಣ ಶೆಟ್ಟಿಯವರ ನೆನಪನ್ನು ಹೃದಯಸ್ಪರ್ಶಿಯಾಗಿ ಮಾಡಿದರು. ಆ ಧೀಮಂತ ನಾಯಕನ ದೀರ್ಘ ಹೋರಾಟದ ಕಥನವನ್ನು ಅವರನ್ನು ಕಂಡು ಕೇಳರಿಯದವರಿಗೂ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದರು. ಇವರಿಬ್ಬರ ಮಾತುಗಳಿಂದ ಸ್ಫೂರ್ತಿ ಪಡೆದೋ ಏನೋ ಹಿಂದೆ ಹೇಳಿದಂತೆ ತೆಗೆದುಕೊಂಡು ಹೋಗಿದ್ದ ಪುಸ್ತಕದ 750 ಪ್ರತಿಗಳೂ ಬಿಸಿ ದೋಸೆಯಂತೆ ಖರ್ಚಾಗಿ ಹೋದವು. ಅವರು ಉತ್ಸವದಲ್ಲಿ ಹೇಳಿದ ಮಾತುಗಳಲ್ಲಿ ಹೆಚ್ಚಿನವು ಅವರು ಪುಸ್ತಕ ಬಿಡುಗಡೆಗೆ ಪೂರ್ವಭಾವಿಯಾಗಿ ಅಂದಿನ ಎ ಕೃಷ್ಣ ಶೆಟ್ಟಿ ಅವರ ಬಗ್ಗೆ ಕರಾವಳಿ ದೈನಿಕಗಳಿಗೆ ಬರೆದಿದ್ದ ಲೇಖನದಲ್ಲಿ ದಾಖಲಾಗಿವೆ. ಆ ಲೇಖನವನ್ನು ಇಡಿಯಾಗಿ ಈ ಸಂಚಿಕೆಯಲ್ಲಿ ಪ್ರಕಟ ಮಾಡುತ್ತಿದ್ದೇವೆ.

ಉತ್ಸವಕ್ಕೆ ಕಿಕ್ಕಿರಿದು ನೆರೆದಿದ್ದ ಸಭಿಕರು



ಸಭಿಕರಲ್ಲಿ ಎ ಕೃಷ್ಣ ಶೆಟ್ಟಿ ಅವರ ಹಿರಿಯ ಮಗಳು ಗಿರಿಜಾತೆ ಭಂಡಾರಿ ಹಾಗೂ ಕಿರಿಯ ಮಗಳು ಶೋಭಾ ಪ್ರಮೋ






ಜನಶಕ್ತಿ ಸಂಪಾದಕ ಮಂಡಳಿಯ ಸದಸ್ಯ ವಿ.ಜೆ.ಕೆ. ನಾಯರ್ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ಎ.ಕೃಷ್ಣ ಶೆಟ್ಟಿ ಅವರ ಬಗ್ಗೆ ಸಂಶೋಧನೆ ಆಧಾರಿತವಾದ ಇನ್ನಷ್ಟು ವಿವರವಾದ ಜೀವನ ಚರಿತ್ರೆ ಬರೆಯುವ ಕೆಲಸವನ್ನು ವಿ.ವಿ.ಗಳು ಕೈಗೆತ್ತಿಕೊಳ್ಳಬೇಕು ಎಂದು ಒತ್ತಾಯಿಸಿದರು. ಅದೇ ರೀತಿ ಇದೇ ಪ್ರದೇಶದ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರೂ ನಾಯಕರೂ ಆದ ಎಸ್.ವಿ.ಘಾಟೆ, ಎನ್.ಎಲ್. ಉಪಾಧ್ಯಾಯ, ಎಂ.ಎಚ್. ಕೃಷ್ಣಪ್ಪ ಮುಂತಾದವರ ಬಗೆಗೂ ಗಂಭೀರ ಅಧ್ಯಯನಗಳು ಬೇಕಾಗಿವೆ ಎಂದರು. ಜನರ ಮಧ್ಯೆ ಸಂಸದಿಯೇತರ ಕೆಲಸದಲ್ಲಿ ಜನರ ಜತೆಗೆ ಸತತವಾಗಿ ಸಾಮಾಜಿಕವಾಗಿ ತೊಡಗಿರುವುದು ಕೋಮುವಾದಿಗಳಿಗೂ ಕಮ್ಯುನಿಸ್ಟರಿಗೂ ಸಮಾನವಾಗಿ ಇರುವ ಅಂಶ. ಕೋಮುವಾದಿಗಳು ಈ ಕೆಲಸವನ್ನು ಮಾಡಿದಷ್ಟು ಗಂಭೀರತೆಯಿಂದ ಕಮ್ಯುನಿಸ್ಟರು ಮಾಡದಿರುವುದೇ ಕೋಮುವಾದದ ಭೀಕರ ಬೆಳವಣಿಗೆಗೆ ಕಾರಣ. ಪ್ರಮುಖ ವ್ಯತ್ಯಾಸಗಳೂ ಇವೆ. ಚರಿತ್ರೆಯಲ್ಲಿನ ಹಾಗೂ ಇಂದಿನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯ ಸತ್ಯವನ್ನು ಜನತೆಗೆ ತಿಳಿಸುವುದು ಕಮ್ಯುನಿಸ್ಟರ ಕೆಲಸ. ಸತ್ಯವನ್ನು ಮುಚ್ಚಿಡುವ, ಸುಳ್ಳುಗಳನ್ನು ಹರಡುವ ಕೋಮುವಾದವನ್ನು ಈ ರೀತಿಯಾಗಿ ಮಾತ್ರ ಎದುರಿಸಲು ಸಾಧ್ಯ. ಇದನ್ನು ಮಾಡಬೇಕಾಗಿದೆ ಎಂದು ಕರೆ ನೀಡಿದರು. ಸ್ವಾತಂತ್ರ್ಯ ಹೋರಾಟದ ಹುತಾತ್ಮರ ಬಗೆಗೆ ಐ.ಸಿ.ಎಚ್.ಆರ್. ಪುಸ್ತಕವೊಂದನ್ನು ಸರಕಾರ ತಡೆ ಹಿಡಿದದ್ದನ್ನು ಸತ್ಯವನ್ನು ಮುಚ್ಚಿಡುವುದಕ್ಕೆ ಉದಾಹರಣೆಯಾಗಿ ಕೊಟ್ಟರು.

ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸದಸ್ಯ ಸುನೀಲ್ ಕುಮಾರ್ ಬಜಾಲ್ ವಂದನಾರ್ಪಣೆ ಮಾಡಿದರು.

ಎ ಕೃಷ್ಣ ಶೆಟ್ಟಿ ಅವರ ಮಗ ಸುಬ್ಬಯ್ಯ ಶೆಟ್ಟಿ






ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷದಿಂದ ಪ್ರಥಮ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದ ಎ.ಕೃಷ್ಣ ಶೆಟ್ಟಿಯವರು ನಿಧನರಾಗಿ 44 ವರ್ಷಗಳು ಕಳೆದಿವೆ. ಜನಪ್ರೀತಿ ಗಳಿಸಿದ್ದ ಅವರು ಇಂದಿಗೂ ಹಿರಿಯ ತಲೆಮಾರಿನವರ ನೆನಪಿನಲ್ಲಿ ಚಿರಸ್ಥಾಯಿಯಾಗಿದ್ದಾರೆ. ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಶೋಷಿತ ಬಡ ಜನರಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಕೃಷ್ಣ ಶೆಟ್ಟರ ಕುರಿತು ಹಿರಿಯ ಕಮ್ಯೂನಿಸ್ಟ್ ನಾಯಕರಾದ ಕೆ.ಆರ್. ಶ್ರೀಯಾನ್‌ಅವರು "ಎ.ಕೃಷ್ಣ ಶೆಟ್ಟಿ-ಜನಮನ ಗೆದ್ದ ನಾಯಕ" ಎಂಬ ಪುಸ್ತಕವನ್ನು ಬರೆದಿದ್ದಾರೆ. ಜನವರಿ 8 ರಂದು ಜನಶಕ್ತಿ ಉತ್ಸವದಲ್ಲಿ ಈ ಪುಸ್ತಕ ಬಿಡುಗಡೆಯಾಗಿದೆ. ಈ ಸಂದರ್ಭದಲ್ಲಿ ಅವರ ವಿಶೇಷ ಲೇಖನ.

ಮರೆಯಲಾರದ ಜನನಾಯಕ
ಕಾ. ಎ.ಕೃಷ್ಣ ಶೆಟ್ಟಿ

– ಕೆ.ಆರ್.ಶ್ರೀಯಾನ್

1948–51ರ ಅವಧಿಯಲ್ಲಿ ಸ್ವತಂತ್ರ ಭಾರತ ದೇಶದಲ್ಲೂ ಭಾರತ ಕಮ್ಯೂನಿಸ್ಟ್ ಪಕ್ಷದ ಮೇಲೆ ನಿಷೇಧ ಹೇರಲಾಗಿತ್ತು. ಇದರಿಂದಾಗಿ ಪಕ್ಷದ ಮುಖಂಡರು ತಲೆಮರೆಸಿಕೊಂಡು ಪೋಲೀಸರ ಬಂಧನ ತಪ್ಪಿಸಿಕೊಳ್ಳಲು ಓಡಾಡುತ್ತಿದ್ದರು. ಕಾಂಗ್ರೆಸ್ ಪಕ್ಷ, ಬಳಿಕ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ, ಆ ಬಳಿಕ ಕಮ್ಯೂನಿಸ್ಟ್ ಪಕ್ಷದ ವಿಚಾರಗಳಿಂದ ಆಕರ್ಷಿತರಾಗಿ ಭಾರತ ಕಮ್ಯೂನಿಸ್ಟ್ ಪಕ್ಷದ ಮುಖಂಡರಾಗಿ ದಕ್ಷಿಣ ಕನ್ನಡದಲ್ಲಿ ಸಕ್ರಿಯರಾಗಿದ್ದ ಅಡ್ಕಗುತ್ತು ಕೃಷ್ಣ ಶೆಟ್ಟರು ಇನ್ನಿತರ ಕಮ್ಯೂನಿಸ್ಟರಂತೆ ಬಹಿರಂಗ ಚಟುವಟಿಕೆ ಮಾಡಲಾರದ ಸಂದರ್ಭ ಅದಾಗಿತ್ತು. ಕೇರಳದ ಎ.ಕೆ. ಗೋಪಾಲನ್ ರಾಷ್ಟ್ರಮಟ್ಟದ ಖ್ಯಾತಿಯ ಮುಖಂಡರು. ಪೋಲೀಸರು ಅವರ ಬೆನ್ನು ಹತ್ತಿದ್ದರು. ಒಂದು ರಾತ್ರಿ ಎ.ಕೆ.ಜಿ.ರೈಲಿನಲ್ಲಿ ಬಂದು ಉಳ್ಳಾಲದಲ್ಲಿ ಇಳಿದು ಕಗ್ಗತ್ತಲಲ್ಲಿ ನಡೆದಾಡುತ್ತಾ ರೈಲ್ವೇ ಹಳಿ ಕಾಯುವ ಕಾವಲುಗಾರನನ್ನು ಮೆಲ್ಲನೆ ಸಂಪರ್ಕಿಸಿ, "ನಿನಗೆ ಕೃಷ್ಣ ಶೆಟ್ಟರು ಗೊತ್ತೋ?" "ಗೊತ್ತಿದ್ದರೆ ಅವರಲ್ಲಿಗೆ ಕರೆದುಕೊಂಡು ಹೋಗುವೆಯಾ?" ಎಂದು ಕೇಳಿಕೊಂಡರು. ಅಪರಾತ್ರಿಯಲ್ಲಿ ರೈಲ್ವೇ ಕಾವಲುಗಾರ ಕರಕೊಂಡು


"ಎ ಕೃಷ್ಣ ಶೆಟ್ಟಿ" ಪುಸ್ತಕ ಬಿಡುಗಡೆ ಪ್ರೊ. ಚಂದ್ರ ಪೂಜಾರಿ ಅವರಿಂದ




ಬಂದ ವ್ಯಕ್ತಿ ತಮ್ಮ ಪಕ್ಷದ ಗಣ್ಯ ನಾಯಕರು, ಪೋಲೀಸರ ಬೇಟೆಗೆ ಸಿಗಬಾರದವರು ಎಂದು ತಿಳಿದುಕೊಂಡ ಕೃಷ್ಣ ಶೆಟ್ಟರು ಎ.ಕೆ.ಗೋಪಾಲನ್ ಅವರನ್ನು ಹಲವಾರು ದಿನಗಳ ಕಾಲ ಮನೆಯೊಂದರಲ್ಲಿ ಇರಿಸಿ, ಪೋಲೀಸರಿಗೆ ಅವರ ಪತ್ತೆ ಸಿಗದಂತೆ ಮಾಡಿದರು. ಎ.ಕೃಷ್ಣ ಶೆಟ್ಟಿಯವರ ಧೈರ್ಯ ಸಾಹಸಗಳು ಇನ್ನೂ ಹಲವು ಸಂದರ್ಭಗಳಲ್ಲಿ ವ್ಯಕ್ತವಾದುದು ಜನಜನಿತವಾಗಿತ್ತು.

ಕೋಟೆಕಾರಿನ ಅಡ್ಕಗುತ್ತಿನ ಶ್ರೀಮಂತ ಭೂಮಾಲಕ ಕುಟುಂಬದ ಏಳು ಮಂದಿ ಮಕ್ಕಳಲ್ಲಿ ಕೃಷ್ಣ ಶೆಟ್ಟಿಯವರೇ ಹಿರಿಯರು. ತಂದೆ ಸುಬ್ರಹ್ಮಣ್ಯ ಶೆಟ್ಟಿ, ತಾಯಿ ದ್ಯಾಕೆ ಹೆಂಗ್ಸು. ಹುಟ್ಟಿದ್ದು 1910ರಲ್ಲಿ. ಕೋಟೆಕಾರಿನಲ್ಲಿ ಪ್ರಾಥಮಿಕ, ಮಂಗಳೂರಿನ ಸೈಂಟ್ ಅಲೋಶಿಯಸ್ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ ಪೂರೈಸಿದ ತರುಣ ಕೃಷ್ಣ ಶೆಟ್ಟರಿಗೆ ದೇಶದ ಸ್ವಾತಂತ್ರ್ಯ ಹೋರಾಟ ಆಕರ್ಷಣೆಯಾಯಿತು. ಕಾಂಗ್ರೆಸ್ ಪಕ್ಷದ ಕಾರ್ಯಕರ್ತನಾದರು. ಮಂಗಳೂರಿನ ಬಂಟ್ಸ್ ಹಾಸ್ಟೆಲ್ ಬಳಿ ತ್ರಿವರ್ಣ ಧ್ವಜ ಹಾರಿಸಿದಾಗ, ಪೋಲೀಸರ ಲಾಠೀ ಚಾರ್ಜ್ ನಡೆದು, ತನ್ನ ಮೈ ಮೇಲೆ ರಕ್ತ ಹರಿಯುತ್ತಿದ್ದರೂ, ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದು ಮೊದಲ ಸಾಹಸ ಮೆರೆದರು. ಮೊದಲ ಬಾರಿಗೆ ಸೆರೆಮನೆ ವಾಸವನ್ನೂ ಅನುಭವಿಸಿದರು.


ತಂದೆ ಮತ್ತು ತಾಯಿ ಇಬ್ಬರ ಕಡೆಯಿಂದಲೂ ದೊಡ್ಡ ಭೂಹಿಡುವಳಿ ಇದ್ದುದರಿಂದ ಕೃಷ್ಣ ಶೆಟ್ಟರಿಗೆ ಜೀವನಕ್ಕೆ ಕೊರತೆ ಇರಲಿಲ್ಲ. ಬ್ರಿಟಿಷರ ಆಳ್ವಿಕೆಯಲ್ಲಿ ಇಂಥ ಅನೇಕ ಭೂಮಾಲಕ ಕುಟುಂಬದಿಂದ ಬಂದವರು ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದುದನ್ನು ನಾವು ನೋಡುತ್ತೇವೆ. ಅವರು ಅಂದಿನ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರಾಗುತ್ತಿದ್ದರು. ಭೂಮಾಲಕರ ಕೆಳಗೆ ರೈತರು, ಕೃಷಿ ಕೂಲಿಕಾರರು, ದಲಿತರು ಆರ್ಥಿಕ ಸಾಮಾಜಿಕ ಶೋಷಣೆಗೆ ಒಳಗಾಗುತ್ತಿದ್ದುದನ್ನು ಗುರುತಿಸಿದ ಕಾಂಗ್ರೆಸಿಗರು ಕಡಿಮೆ. ಕೃಷ್ಣ ಶೆಟ್ಟರು ಕಮ್ಯೂನಿಸ್ಟ್ ನಾಯಕರ ಸಂಪರ್ಕದಿಂದ ಈ ಅರಿವನ್ನು ಪಡೆದರು ಮತ್ತು ಶೋಷಿತರ ಪರವಾಗಿ ದುಡಿಯುವ ಸಂಕಲ್ಪ ಕೈಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಜೈಲುವಾಸ ಅನುಭವಿಸಿದ ಸಂದರ್ಭದಲ್ಲಿ ಎಡವಿಚಾರದ ಸಹಕೈದಿಗಳ ಪ್ರಭಾವಕ್ಕೊಳಗಾಗಿ ಕಾಂಗ್ರೆಸ್ಸಿನಿಂದ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಕಡೆಗೂ, ಆ ಬಳಿಕ ಕಮ್ಯೂನಿಸ್ಟ್ ಪಕ್ಷದ ಕಡೆಗೂ ಕೃಷ್ಣ ಶೆಟ್ಟರ ಹೋರಾಟದ ದಾರಿ ಸಾಗಿ ಬಂತು.

1935ರ ಸುಮಾರಿಗೇನೇ ದಕ್ಷಿಣ ಕನ್ನಡದಲ್ಲಿ ಕಾರ್ಮಿಕರ ಸಂಘಟನೆ ಮತ್ತು ಚಳುವಳಿ ಶುರುವಾಗಿತ್ತು. 1936 ರಲ್ಲಿ ನೇಯ್ಗೆ ಕಾರ್ಮಿಕರ ದೀರ್ಘ ಮುಷ್ಕರ ನಡೆದಾಗ ಕಾರ್ಮಿಕರ ನಾಯಕರಾಗಿದ್ದ ಸಿಂಪ್ಸನ್ ಸೋನ್ಸರನ್ನು ಭೆಟ್ಟಿಯಾಗಿ, ಆ

ಸಭಿಕರೊಂದಿಗೆ ಎ ಕೃಷ್ಣ ಶೆಟ್ಟಿ ಕುಟುಂಬದ ಸದಸ್ಯರು



ಗೌರವ ಪ್ರತಿ ಮಗ ಸುಬ್ಬಯ್ಯ ಶೆಟ್ಟಿ, ಮಗಳು ಶೋಭಾ ಪ್ರಮೋದ ರೈ ಅವರಿಗೆ



ಹೋರಾಟದಲ್ಲಿ ಸಹಭಾಗಿತ್ವ ವಹಿಸುವುದರೊಂದಿಗೆ ಕೃಷ್ಣ ಶೆಟ್ಟರು ಕಮ್ಯೂನಿಸ್ಟ್ ಚಳುವಳಿಯಲ್ಲಿ ತೊಡಗಿಕೊಂಡರು. 1944 ರಲ್ಲಿ ಹಂಚಿನ ಕೈಗಾರಿಕೆಗಳಲ್ಲಿಯೂ ಕಾರ್ಮಿಕರ ಸಂಘಟನೆ ಆರಂಭವಾಯಿತು; ಕಾರ್ಮಿಕರು ಕೃಷ್ಣ ಶೆಟ್ಟರನ್ನೇ ತಮ್ಮ ಅಧ್ಯಕ್ಷನಾಗಿ ಆಯ್ಕೆ ಮಾಡಿಕೊಂಡರು. ಎಲ್ಲ ಕಾರ್ಮಿಕರನ್ನು ವೈಯುಕ್ತಿಕವಾಗಿ ಕರೆದು ಮಾತನಾಡುವ ಗುಣದಿಂದಲೂ ತಮ್ಮ ದೊಡ್ಡ ಧ್ವನಿಯಿಂದಲೂ ಕಾರ್ಮಿಕರಿಗೆ ಅವರು ಪ್ರಿಯರಾಗಿದ್ದರು. ಈ ಗುಣವೇ ಅವರನ್ನು ಹಲವು ಕಾರ್ಮಿಕ ಸಂಘಟನೆ ಹಾಗೂ ರೈತ ಸಂಘಟನೆಗಳಿಗೆ ನಾಯಕರಾಗುವಂತೆ ಆಹ್ವಾನಿಸಿತು. 1945 ರಲ್ಲಿ ಕೆಲವು ಬೇಡಿಕೆಗಳನ್ನಿಟ್ಟು ಹಂಚಿನ ಕಾರ್ಮಿಕರು ನಡೆಸಿದ 3 ತಿಂಗಳ ಮುಷ್ಕರವು ಕೃಷ್ಣ ಶೆಟ್ಟರ ನಾಯಕತ್ವದಲ್ಲಿ ನಡೆದ ಪ್ರಥಮ ಮುಷ್ಕರವಾಗಿತ್ತು. ಬಿ.ವಿ.ಕಕ್ಕಿಲ್ಲಾಯ, ಸಿಂಪ್ಸನ್ ಸೋನ್ಸ್ ಈ ಹೋರಾಟದ ಪ್ರಮುಖ ಸಂಗಾತಿಗಳಾಗಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದಿತು. 1948 ರಿಂದ 1951ರ ವರೆಗೆ ಕಮ್ಯೂನಿಸ್ಟ್ ಪಕ್ಷಕ್ಕೆ ಭಾರತ ಸರಕಾರವು ನಿಷೇಧ ಹೇರಿತು. ತೆಲಂಗಾಣ ರೈತರು ನಿಜಾಮನ ವಿರುದ್ಧ ದಂಗೆ ಎದ್ದು, ನೂರಾರು ಗ್ರಾಮಗಳಲ್ಲಿ ತಮ್ಮದೇ ಆಡಳಿತವನ್ನು ಸ್ಥಾಪಿಸಿದ್ದರು. ಇದನ್ನು ನೆಹರೂ ಸರಕಾರ ಬಗ್ಗುಬಡಿದುದಲ್ಲದೆ, ಅದಕ್ಕೆ ನೇತೃತ್ವ ನೀಡಿದ್ದ ಕಮ್ಯೂನಿಸ್ಟ್ ಪಕ್ಷಕ್ಕೂ ಸ್ವತಂತ್ರ ಭಾರತದಲ್ಲಿ ನಿಷೇಧ ಹೇರಿತು. ಅಂಥ ಒಂದು ಸಂದರ್ಭದಲ್ಲಿ ಎ.ಕೆ. ಗೋಪಾಲನ್ ತಲೆಮರೆಸಿ ಕಾರ್ಯನಿರ್ವಹಿಸಲು ಕೃಷ್ಣ ಶೆಟ್ಟರ ಆಶ್ರಯ ಪಡೆದುದನ್ನು ಆಗಲೇ ಹೇಳಲಾಗಿದೆ. ಮುಂದೆ ಕೃಷ್ಣ ಶೇಟ್ಟರನ್ನೂ, ಬಿ.ವಿ.ಕಕ್ಕಿಲ್ಲಾಯರನ್ನೂ ಸರಕಾರ ಬಂಧಿಸಿ ಜೈಲಲ್ಲಿರಿಸಿತು. 1951ರಲ್ಲಷ್ಟೇ ಅವರ ಬಿಡುಗಡೆಯಾದುದು.

ತೆಲಂಗಾಣ ರೈತರ ಹೋರಾಟದ ಗೆಲುವು ಮತ್ತು ಸೋಲಿನಿಂದಲೂ, ರಾಷ್ಟ್ರಾದ್ಯಂತ ರೈತ ವಕ್ಕಲುಗಳು, ಸಣ್ಣ ರೈತರು ತಮ್ಮನ್ನು ಶೋಷಿಸುತ್ತಿದ್ದ ಭೂಮಾಲಕತ್ವದ ಎದುರಾಗಿ ಹೋರಾಟ ನಡೆಸುವ ಚಳುವಳಿಗಳನ್ನು ತೀವ್ರಗೊಳಿಸಿದವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಮಾರ್ಗದರ್ಶನದಲ್ಲಿ ರೈತರನ್ನು ಸಂಘಟಿಸುವ ಕೆಲಸ ಪ್ರಾರಂಭಿಸಲಾಯಿತು. ಕೃಷ್ಣ ಶೆಟ್ಟರು, ಬಿ.ವಿ.ಕಕ್ಕಿಲ್ಲಾಯರು, ಎಂ.ಎಚ್.ಕೃಷ್ಣಪ್ಪನವರು ರೈತರನ್ನು ಸಂಘಟಿಸುವಲ್ಲಿ ಮುಖ್ಯ ಪಾತ್ರವಹಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಕ್ಕಲೆಬ್ಬಿಸುವುದಕ್ಕಿದಿರಾಗಿ ಮತ್ತು ವಿಪರೀತ ಗೇಣಿ ವಸೂಲಿ ಮಾಡುವುದಕ್ಕಿದಿರಾಗಿ ಹೋರಾಟಗಳು ಪ್ರಾರಂಭವಾದವು. ಭೂಮಾಲಕ ಕುಟುಂಬದಿಂದ ಬಂದು ರೈತ ವಕ್ಕಲುಗಳ ಪರವಾಗಿ ಹೋರಾಟ ಮಾಡುತ್ತಿದ್ದ ಕೃಷ್ಣಶೆಟ್ಟರ ಬಗ್ಗೆ ರೈತರಿಗೆ ಅಕ್ಕರೆ ಉಂಟಾದುದು ಇದಕ್ಕಾಗಿ.



ಈ ಮಧ್ಯೆ 1954 ರಲ್ಲಿ ಹಂಚಿನ ಕಾರ್ಮಿಕರು ನಡೆಸುತ್ತಿದ್ದ ಮುಷ್ಕರವನ್ನು ಮುರಿಯಲು ಕಾರ್ಖಾನೆ ಮಾಲಿಕರು ಕಳುಹಿಸಿದ್ದ ಗೂಂಡಾ ಒಬ್ಬನ ಕೊಲೆಯಾಯಿತು. ಇದನ್ನೇ ನೆವ ಮಾಡಿ ಪೋಲೀಸರು ಕಾರ್ಮಿಕರ ಬರ್ಬರ ದಮನ ನಡೆಸಿದರು ಮಾತ್ರವಲ್ಲ, ಕಾರ್ಮಿಕ ಮುಖಂಡರನ್ನು ಬಂಧಿಸಿ ಕೊಲೆ ಕೇಸು ಹಾಕಿದರು. ಇತರ ನಾಯಕರೊಂದಿಗೆ ಕೃಷ್ಣ ಶೆಟ್ಟರೂ ಬಂಧಿತರಾದರು. ಮ್ಯಾಜಿಸ್ಟ್ರೇಟ್ ಕೋರ್ಟಿನ ವಿಚಾರಣೆ ಬಳಿಕ ಅವರ ಬಿಡುಗಡೆಯಾಯಿತು.

ಬಂಟ್ವಾಳ, ಮಂಗಳೂರು ತಾಲೂಕುಗಳಲ್ಲಿ ಆರಂಭವಾದ ರೈತ ಚಳುವಳಿಗಳು ಇಡೀ ದಕ್ಷಿಣ ಕನ್ನಡ ಜಿಲ್ಲೆಗೆ ವ್ಯಾಪಿಸಿತು.

ಪುಸ್ತಕದ ಪ್ರಕಾಶಕರ ಮಾತುಗಳಿಂದ

ದುಡಿಯುವ ಜನಗಳು ಶೋಷಣೆಯ ವಿರುದ್ಧ, ವಿಮೋಚನೆಯ ಹೋರಾಟದ ಹಾದಿಯಲ್ಲಿ ತಮ್ಮ ನಾಯಕರನ್ನು, ಕಾರ್ಯಕರ್ತರನ್ನು ರೂಪಿಸಿಕೊಳ್ಳುತ್ತಾರೆ. ಇವರು ತಮ್ಮ ಸಂಪೂರ್ಣ ಜೀವನವನ್ನೇ ದುಡಿಯುವ ಜನರ ಆಂದೋಲನವನ್ನು ಕಟ್ಟಿ ಬೆಳೆಸಲು ಮೀಸಲಿಟ್ಟವರು, ತಮ್ಮ ಬದುಕಿನ ಕೊನೆಯ ವರೆಗೂ ಈ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಕರ್ನಾಟಕದ ದುಡಿಯುವ ಜನರ ಚರಿತ್ರೆಯೂ ಇದಕ್ಕಿಂತ ಭಿನ್ನವಾಗಿಲ್ಲ. ರಾಜ್ಯದ ವಿವಿಧ ಪ್ರದೇಶಗಳಲ್ಲಿ ವಿಭಿನ್ನ ಹಿನ್ನೆಲೆಗಳಲ್ಲಿ ದುಡಿಯುವ ಜನಗಳ ಚಳುವಳಿಗಳು ಮೂಡಿಬಂದವು, ಅವು ವಿವಿಧ ನಾಯಕರನ್ನು ರೂಪಿಸಿದವು. ಇವರಲ್ಲಿ ಹೆಚ್ಚಿನವರು ಪ್ರಚಾರ ಬಯಸಲಿಲ್ಲ, ಇವರು ಕಟ್ಟಿಬೆಳೆಸಿದ ಎಡ–ಪ್ರಗತಿಪರ ಸಂಘಟನೆಗಳು, ಪಕ್ಷಗಳೂ ಕೂಡ ವೈಯಕ್ತಿಕ ಪಾತ್ರಕ್ಕಿಂತ ದುಡಿಯುವ ಜನರ ಸಾಮೂಹಿಕ ಪಾತ್ರಕ್ಕೆ ಹೆಚ್ಚಿನ ಒತ್ತು ಕೊಟ್ಟವು. 'ಮುಖ್ಯಧಾರೆ'ಯೆನಿಸುವ ಚರಿತ್ರೆಯ ಗಮನವಂತೂ ಆಳುವವರ ಹಿತಗಳಿಗೆ ಅನುಗುಣವಾಗಿ ಈ ಕಡೆಗೆ ಹೊರಳಲೇ ಇಲ್ಲ. ಆದ್ದರಿಂದ ಇವರೆಲ್ಲ ಅಜ್ಞಾತರಾಗಿಯೇ ಉಳಿದಿದ್ದಾರೆ. ಆದರೆ ತಮ್ಮ, ಆಮೂಲಕ ಇಡೀ ಸಮಾಜದ ವಿಮೋಚನೆಯನ್ನು ಬಯಸುವ ವರ್ಗಪ್ರಜ್ಞೆಯಿರುವ ದುಡಿಮೆಗಾರರು ತಮ್ಮ ಆಂದೋಲನದ ಚರಿತ್ರೆಯ ಬಗ್ಗೆ ನಿರ್ಲಕ್ಷದಿಂದಿರಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಇಂತಹ ಮುಖಂಡರುಗಳ ಬಗ್ಗೆ ಮಾಹಿತಿಗಳನ್ನು ದಾಖಲಿಸುವ ಪ್ರಯತ್ನ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಮೊದಲ ಪ್ರಯತ್ನವಾಗಿ ಈ ಕಿರುಹೊತ್ತಿಗೆ ಪ್ರಕಟವಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ದುಡಿಯುವ ಜನಗಳ ಶೋಷಣೆಯ ವಿರುದ್ಧ ಚಳುವಳಿ ಈ ಹೋರಾಟದ ಅಭಿನ್ನ ಭಾಗವೆಂದು ಕಂಡುಕೊಂಡು ಕಾರ್ಮಿಕರ ಮತ್ತು ರೈತರ ಚಳುವಳಿಗಳನ್ನು ಕಟ್ಟಿದ ಹರಿಕಾರರಲ್ಲಿ ಎ.ಕೃಷ್ಣ ಶೆಟ್ಟಿಯವರು ಒಬ್ಬರು. ಅವರಿಂದ ಪ್ರೇರಿತರಾಗಿ ದುಡಿಯುವ ಜನರ ಆಂದೋಲನದಲ್ಲಿ ಭಾಗವಹಿಸಿ ಸ್ವತಃ ಒಬ್ಬ ಪ್ರಮುಖ ದುಡಿಯುವ ಜನಗಳ ಹಿರಿಯ ನಾಯಕರಾಗಿರುವ ಕೆ.ಆರ್.ಶ್ರೀಯಾನ್ ಈ ಕಿರುಹೊತ್ತಿಗೆಯನ್ನು ರಚಿಸಿ ಕೊಟ್ಟಿದ್ದಾರೆ.

ಕೃಷ್ಣ ಶೆಟ್ಟರೂ ಸಂಘಟನೆಗಾಗಿ ಊರೂರು ಸುತ್ತಿದರು. 1954ರಲ್ಲಿ ಮಂಗಳೂರಿನಲ್ಲಿ ಜಿಲ್ಲೆಯ ರೈತರ ಮೊದಲ ಸಮ್ಮೇಳನ ನಡೆದು ಕೃಷ್ಣ ಶೆಟ್ಟರನ್ನು ಅಧ್ಯಕ್ಷರಾಗಿಯೂ ಎಂ.ಎಚ್.ಕೃಷ್ಣಪ್ಪನವರನ್ನು ಕಾರ್ಯದರ್ಶಿಗಳಾಗಿಯೂ ಆಯ್ಕೆ ಮಾಡಿತು.

ಒಂದೆಡೆ ರೈತರ ಸಂಘಟನೆ ವಿಸ್ತಾರಗೊಳ್ಳುತ್ತಿದ್ದರೆ, ಭೂಮಾಲಕರು ಅದನ್ನು ಬಗ್ಗುಬಡಿಯಲು "ಭೂಸೇನೆ"ಯನ್ನು ಕಟ್ಟಿ ಗೂಂಡಾಗಳಿಂದ ಬಲವಂತವಾಗಿ ರೈತರ ಬೆಳೆಯನ್ನು ಕಟಾವು ಮಾಡಿ ಒಯ್ಯುತ್ತಿದ್ದರು. ರೈತರನ್ನು ವಕ್ಕಲೆಬ್ಬಿಸುತ್ತಿದ್ದುದು ಮುಂದುವರಿದಿತ್ತು. 1954 ರಲ್ಲಿ ರೈತ ಸಂಘದ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಮುಲ್ಕಿ ಚೆನ್ನನವರನ್ನು ವಕ್ಕಲೆಬ್ಬಿಸಿದ್ದು, ಪ್ರಮುಖ ರೈತ ಹೋರಾಟಕ್ಕೆ ದಾರಿ ಮಾಡಿಕೊಟ್ಟಿತು. ಮಂಗಳೂರು ತಾಲೂಕಿನಿಂದ ರೈತರು ಹೋಗಿ ಮುಲ್ಕಿಯ ಚೆನ್ನ ಅವರ ಮನೆಯ ಮುಂದೆ ಸತ್ಯಾಗ್ರಹ ಪ್ರಾರಂಭ ಮಾಡಿದರು. ಕೆಲವು ದಿನಗಳಲ್ಲಿ ಕೃಷ್ಣ ಶೆಟ್ಟರು ಸ್ಥಳಕ್ಕೆ ತಲುಪಿದ್ದೇ ಹೋರಾಟಕ್ಕೆ ಭೀಮಬಲ ಬಂತು. ಪೋಲೀಸರು ಲಾಠೀಚಾರ್ಜ್ ಮಾಡಿ ರೈತರನ್ನು ಚದುರಿಸಿದರು. ಕೃಷ್ಣ ಶೆಟ್ಟರನ್ನು ಬಂಧಿಸಿದರು. 'ಮುಲ್ಕಿ ಸತ್ಯಾಗ್ರಹ' ವೆಂದು ಹೆಸರಾದ ಈ ಹೋರಾಟ ಯಶಸ್ವಿಯಾಗದಿದ್ದರೂ, ಜಿಲ್ಲಾದ್ಯಂತ ರೈತ ಹೋರಾಟದ ಅಲೆಗಳನ್ನು ಎಬ್ಬಿಸಿತು. ಜಿಲ್ಲೆಯ ರೈತ ಹೋರಾಟ ಬೇರೆ ಜಿಲ್ಲೆಯ ರೈತರಿಗೂ ಸ್ಫೂರ್ತಿ ನೀಡಿತು. 1956 ರಲ್ಲಿ ಕರ್ನಾಟಕ (ಮೈಸೂರು)ರಾಜ್ಯ ಆದ ಬಳಿಕ, 1957ರಲ್ಲಿ ಕೃಷ್ಣ ಶೆಟ್ಟರ ಸಂಚಾಲಕತ್ವದಲ್ಲಿ ಬೆಂಗಳೂರಿನಲ್ಲಿ ರಾಜ್ಯ ರೈತ ಸಮ್ಮೇಳನ ನಡೆಸಲಾಯಿತು. 1961ರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ಎರಡನೇ ರಾಜ್ಯ ರೈತ ಸಮ್ಮೇಳನದಲ್ಲಿ ಕೃಷ್ಣ ಶೆಟ್ಟರು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿ ರೈತ ಚಳುವಳಿಗೆ ರಾಜ್ಯ ಮಟ್ಟದಲ್ಲಿ ಮಾರ್ಗದರ್ಶನ ಕೊಡಲಾರಂಭಿಸಿದರು.

ಗೋವಾ ವಿಮೋಚನಾ ಹೋರಾಟದಲ್ಲಿ ಕಮ್ಯೂನಿಸ್ಟರ ಸಮರಧೀರ ಹೋರಾಟ ಹಲವರಿಗೆ ತಿಳಿದಿರಬಹುದು. ಗೋವಾ ಪ್ರವೇಶಿಸುವ ಮಂಗಳೂರಿನ ಸತ್ಯಾಗ್ರಹಿಗಳ ಮೊದಲ ತಂಡಕ್ಕೆ ಕೃಷ್ಣ ಶೆಟ್ಟರು ನಾಯಕರಾಗಿದ್ದರು. ಗಡಿದಾಟುವ ಸಂದರ್ಭದಲ್ಲಿ ಬಂಗಾಳದ ಥೋರಾಟ್ ಎಂಬ ಕಮ್ಯೂನಿಸ್ಟ್ ನಾಯಕರು ಪೋರ್ಚ್‌ಗೀಸರ ಗುಂಡಿಗೆ ಬಲಿಯಾದರು. ಆ ತಂಡದ ಉಪನಾಯಕರಾಗಿದ್ದ ಕೃಷ್ಣ ಶೆಟ್ಟರು ಹೆಚ್ಚು ಪ್ರಾಣಾಪಾಯವನ್ನು ತಪ್ಪಿಸಬೇಕೆಂದು ಜಾಣತನದಿಂದ ತಮ್ಮ ಇಡೀ ತಂಡವನ್ನು ಜಾಗ್ರತೆ ಹಿನ್ನಡೆಸಿದರು. ಅಲ್ಪಸ್ವಲ್ಪ ಗಾಯಗಳೊಂದಿಗೆ ಹೋರಾಟಗಾರರು ಬದುಕಿ ಉಳಿದರು.

1962 ರಲ್ಲಿ ಭಾರತ–ಚೀನಾ ಗಡಿ ಘರ್ಷಣೆ ಆದಾಗ, ಭಾರತ ಸರಕಾರವು ಕಮ್ಯೂನಿಸ್ಟರನ್ನು ಸಂದೇಹಿಸಿ, ಅನೇಕ ಕಮ್ಯೂನಿಸ್ಟ್ ಮುಖಂಡರನ್ನು ಬಂಧನದಲ್ಲಿ ಇರಿಸಿತಷ್ಟೇ. ಹಾಗೆ ಬಂಧಿತ ಕಮ್ಯೂನಿಸ್ಟರಲ್ಲಿ ಕೃಷ್ಣ ಶೆಟ್ಟರೂ ಒಬ್ಬರಾಗಿದ್ದರು. ಬಿಡುಗಡೆಯಾದ ಮೇಲೆ ಅವರು ತಮ್ಮ ರೈತ ಕಾರ್ಮಿಕ ಪರವಾದ ಕಾರ್ಯಕ್ರಮಗಳನ್ನು ಮುಂದುವರಿಸಿದರು. 1966 ರಲ್ಲಿ ಮಂಗಳೂರಿನಿಂದ ಕಾಲ್ನಡಿಗೆ ಹೊರಟಿದ್ದ ರೈತ ಜಾಥಾದೊಂದಿಗೆ ಬೆಂಗಳೂರಿಗೆ ರಾಜ್ಯದ ಸಾವಿರಾರು ರೈತರೂ, ಕಾರ್ಮಿಕರೂ ಒಗ್ಗೂಡಿದ ಸಭೆಯಲ್ಲಿ ರಾಜ್ಯ ಸರಕಾರವು ಭೂಸುಧಾರಣಾ ಶಾಸನಗಳನ್ನು ಜಾರಿಗೊಳಿಸುವಂತೆ ಆಗ್ರಹಿಸಲಾಯಿತು. ಕೃಷ್ಣ ಶೆಟ್ಟರೂ, ಎಂ.ಎಚ್.ಕೃಷ್ಣಪ್ಪನವರೂ, ರಾಷ್ಟ್ರೀಯ ಮುಖಂಡರಾದ ಪಿ.ರಾಮಮೂರ್ತಿಯವರೂ ಈ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಇಂಥ ಹಲವು ಹೋರಾಟಗಳನ್ನು ಕೃಷ್ಣ ಶೆಟ್ಟಿ ಮತ್ತು ಎಂ.ಎಚ್. ಕೃಷ್ಣಪ್ಪನವರ ನೇತೃತ್ವದಲ್ಲಿ ನಡೆಸಲಾಯಿತು. 1974 ರಲ್ಲಿ ರಾಜ್ಯವು ಕರ್ನಾಟಕ ಭೂಸುಧಾರಣಾ ಕಾಯಿದೆಯನ್ನು ಅಂಗೀಕರಿಸಿತು. ಆದರೆ ಆ ವೇಳೆಗೆ ಕೃಷ್ಣ ಶೆಟ್ಟರು ಬದುಕಿರಲಿಲ್ಲ.

1962 ರಲ್ಲಿ ಮಂಗಳೂರು–2 (ಉಳ್ಳಾಲ) ವಿಧಾನಸಭಾ ಕ್ಷೇತ್ರದಿಂದ ಭಾರತ ಕಮ್ಯೂನಿಸ್ಟ್ ಪಕ್ಷದ ಶಾಸಕರಾಗಿ ಆಯ್ಕೆಯಾದರು. ಅದಕ್ಕೂ ಹಿಂದೆ ಕೋಟೆಕಾರು ಪಂಚಾಯತು ಅಧ್ಯಕ್ಷರಾಗಿ, ತಾಲೂಕು ಬೋರ್ಡು ಸದಸ್ಯರಾಗಿ ಚುನಾವಣೆಯಲ್ಲಿ ಆಯ್ಕೆಯಾಗಿ ಜನಸೇವೆ ಮಾಡಿದ ಅನುಭವ ಅವರಿಗಿತ್ತು. ಅವರು ಶಾಸಕರಾಗಿದ್ದ ಅವಧಿಯಲ್ಲಿ ಕಮ್ಯೂನಿಸ್ಟ್ ಪಕ್ಷ ವಿಭಾಗವಾದಾಗ, ಕೃಷ್ಣ ಶೆಟ್ಟರು ಸಿಪಿಐ(ಎಂ) ಜೊತೆ ಗುರುತಿಸಿಕೊಂಡರು. ಕಮ್ಯೂನಿಸ್ಟ್ ಚಿಂತನೆಗಳಿಗನುಗುಣವಾಗಿ ರೈತರ ಭೂಮಿ ಹಕ್ಕಿಗಾಗಿ ಶಾಸನ ಸಭೆಯಲ್ಲಿ ಧ್ವನಿಯೆತ್ತಿದರು. ರೈತ ಸಂಘದ ಮೂಲಕ ಶಾಸನ ಸಭೆಯ ಹೊರಗೂ "ಉಳುವವನೆ ಹೊಲದೊಡೆಯನಾಗಬೇಕು" ಎಂಬ ಘೋಷವಾಕ್ಯ ಮುಂದುವರಿಸಿದರು.

1972 ಜುಲಾಯಿ 23 ರಂದು ನಿಧನರಾದಾಗ ಕೃಷ್ಣ ಶೆಟ್ಟರಿಗೆ 62 ವರ್ಷ. ಕಾರ್ಮಿಕರು, ರೈತರ ಹೋರಾಟದಲ್ಲೇ ಮುಳುಗಿ ಹೋಗಿದ್ದ ಕೃಷ್ಣ ಶೆಟ್ಟರಿಗೆ ತಮ್ಮ ಕುಟುಂಬದ ಬಗ್ಗೆಯೂ ಕಾಳಜಿ ಕಡಿಮೆ ಇರಲಿಲ್ಲ. ಹೆಂಡತಿ ಲಲಿತಾ ಶೆಟ್ಟಿ ಮತ್ತು ನಾಲ್ವರು ಮಕ್ಕಳಿಗೆ ಕೊರತೆ ಇರದಂಥ ಅನುಕೂಲಗಳನ್ನು ಕಲ್ಪಿಸಿದ್ದರು. ಒಬ್ಬ ಗಂಡು ಮಗ, ಮೂವರು ಹೆಣ್ಣು ಮಕ್ಕಳು ಉತ್ತಮ ವಿದ್ಯಾಭ್ಯಾಸ ಪಡೆದರು. ತಾನು ಭಾಗವಹಿಸುತ್ತಿರುವ ಹೋರಾಟಗಳ ಬಿಸಿ ಕುಟುಂಬಕ್ಕೆ ತಟ್ಟದಂತೆ ನೋಡಿಕೊಂಡರು. ತಾನು ಸ್ವೇಚ್ಛೆಯಿಂದ ಆವಾಹಿಸಿಕೊಂಡ ಕಷ್ಟಕೋಟಲೆಗಳನ್ನು ಕುಟುಂಬವೂ ಅನುಭವಿಸಲಿ ಎಂದು ಹೇರಲಿಲ್ಲ. ಅವರ ಕೊನೆಯ ಅನಾರೋಗ್ಯದ ದಿನಗಳಲ್ಲಿ ಕುಟುಂಬದವರು ಅವರನ್ನು ಚೆನ್ನಾಗಿ ಆರೈಕೆ ಮಾಡಿದರು.

ಶ್ರೀಮಂತಿಕೆಯಲ್ಲಿ ಹುಟ್ಟಿ, ಅದರ ಸವಲತ್ತುಗಳನ್ನು ಕೈಚೆಲ್ಲಿ ಬಡವರ ಜೊತೆ ಕೆಲಸ ಮಾಡಿದ ನಾಯಕರನ್ನು ನಾವು ಇಂದಿನ ದಿನಗಳಲ್ಲಿ ಕಾಣಲಾರೆವು. ಆದರ್ಶದ ಮ್ಯೂಸಿಯಮ್‌ನಲ್ಲಿ ಕಾಣುವ ಪ್ರತಿಮೆಯ ಮಾದರಿಗಳು ಅವು. ಉದ್ದೇಶದ ಸಾಧನೆಗಾಗಿ ಹಟಮಾರಿತನ, ಧೈರ್ಯ, ಸಾಹಸ, ಕೆಚ್ಚು ಅದರೊಂದಿಗೆ ಸ್ನೇಹಶೀಲತೆ, ಅನುಕಂಪ, ಕೊನೆಗೆ ಎರಡು ಪ್ರೀತಿಯ ಮಾತು–ಇವತ್ತು ಎಷ್ಟು ಮಂದಿ ನಾಯಕರಲ್ಲಿದೆ?

JANASHAKTHI KANNADA VARA PATHRIKE January 9-22, 2017 Price Rs. 20
RNI NO. KARKAN/2006/17926 Posted on every Saturd
"REGISTERED" Postal Reg. No. RNP/KA/BGS/2078/2016-18 Posted at Bangalore PSO, BG-560026
Licensed to Post Without Prepayment License No. WPP-2
Date of Publication :12 January 2017

JANASHAKTHI KANNADA VARA PATRIKE : Printed, Publshed by G.V. SRIRAMAREDDY
EMS Bhavan, No. 37/A, 8th Cross, Mahalakshmi Layout, BANGALORE-560086 Karnataka
on behalf of Communist Party of India(Marxist) and Printed at Kriya Prakashana,
No. 12, 18th Cross, Sampangirama Nagar, Bangalore-560 027 Editor : G.V.SRIRAMAREDDY